"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

4ನೇ ಫೆಬ್ರವರಿ 2021
ಗುರುವಾರ

## ವಿಷಯಾನುಕ್ರಮಣಿಕೆ

1. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**466– ಬೆಂಗಳೂರಿನಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆ ಕುರಿತು**
– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**458– ರೈತರ ಕೃಷಿ ಭೂಮಿಗೆ ಕೊಳವೆ ಬಾವಿಯಿಂದ ನೀರು ಹರಿಸುವ ಸಂಬಂಧ ವಿದ್ಯುತ್ ಸಂಪರ್ಕ (ಟಿ.ಸಿ.) ನೀಡುವ ಕುರಿತು.**
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**433– ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತ್ಯಾಜ್ಯದ ರಾಶಿಯನ್ನು ತೆರವುಗೊಳಿಸುವ ಕುರಿತು**
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**396– ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ಕುರಿತು**
– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ರಮೇಶ್ ಲ.ಜಾರಕಿಹೊಳಿ(ಜಲಸಂಪನ್ಮೂಲ ಸಚಿವರು)

**482–** ಮಂಡ್ಯ ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ಹೊಸದಾಗಿ ಕೈಗೊಂಡ ಕಾಮಗಾರಿಗಳ ಬಗ್ಗೆ
– ಶ್ರೀ ಮರಿತಿಬ್ಬೇಗೌಡ
– ಶ್ರೀ ರಮೇಶ್ ಲ.ಜಾರಕಿಹೊಳಿ(ಜಲಸಂಪನ್ಮೂಲ ಸಚಿವರು)

**420– ರಾಜ್ಯದ ವಿವಿಧ ನಿಗಮಗಳಿಂದ 2019–20, 2020–21ನೇ ಸಾಲಿನಲ್ಲಿ S.C.P. ಮತ್ತು T.S.P. ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ**
- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು) (ಶ್ರೀ ಆರ್.ಪ್ರಸನ್ನಕುಮಾರ್‌ರವರ ಪರವಾಗಿ)
– ಶ್ರೀ ರಮೇಶ್ ಲ.ಜಾರಕಿಹೊಳಿ(ಜಲಸಂಪನ್ಮೂಲ ಸಚಿವರು)

**450– B.M.R.C.L. ನಲ್ಲಿ ಗುತ್ತಿಗೆ ನೌಕರರ ನೇಮಕಾತಿ ಬಗ್ಗೆ**
– ಶ್ರೀ ಕಾಂತರಾಜ್(ಬಿ.**ಎಂ.ಎಲ್.**)
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**453– ಎತ್ತಿನಹೊಳೆ ಯೋಜನೆ ಅನುಷ್ಠಾನದ ಬಗ್ಗೆ**
– **ಡಾ.ವೈ.ಎ.ನಾರಾಯಣಸ್ವಾಮಿ**
– ಶ್ರೀ ರಮೇಶ್ ಲ.ಜಾರಕಿಹೊಳಿ(ಜಲಸಂಪನ್ಮೂಲ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**475– ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಗಲಭೆ ಪ್ರಕರಣಗಳ ಬಗ್ಗೆ**
– ಶ್ರೀ ಸಿ.ಎಂ.ಇಬ್ರಾಹಿಂ
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**390– ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರದಿಂದ ವಸತಿ ಸಮುಚ್ಛಯಗಳ ಕುರಿತು**
– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು) (ಶ್ರೀ ಪ್ರಕಾಶ್ ಕೆ.ರಾಥೋಡ್‌ರವರ ಪರವಾಗಿ)
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

**440– ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯಿಂದ ವಿದ್ಯುತ್ ಖರೀದಿ ಕುರಿತು**
– **ಶ್ರೀ ಪಿ.ಆರ್.ರಮೇಶ್**
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)

423– ಚಿಕ್ಕಬಳ್ಳಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಬಗ್ಗೆ
– **ಶ್ರೀ** ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು, ಜಲಸಂಪನ್ಮೂಲ ಸಚಿವರ ಪರವಾಗಿ)

**025–ನಿರ್ಭಯ ಯೋಜನೆಯಡಿ ಕೇಂದ್ರದಿಂದ ಪಡೆದಿರುವ ಅನುದಾನ**
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

2. **ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**(ಅ) ಸರ್ಕಾರದ ಕಣ್ಗಾವಲಿನಲ್ಲಿ ಖಾಸಗಿ ದೇವಸ್ಥಾನಗಳು ಕುರಿತು**
– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು ಹಾಗೂ ಮುಜರಾಯಿ ಸಚಿವರು)

**(ಆ) ಲೈಬ್ರರಿ ಪುಸ್ತಕ ಮಾಫಿಯಾ ಕುರಿತು**
– **ಶ್ರೀ ಎನ್.ರವಿಕುಮಾರ್**
– **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**

**(ಇ) ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯ ಸಮಸ್ಯೆ ಬಗ್ಗೆ**
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಈ) ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳಿಗೆ ಸಂಬಳ ನೀಡದೇ ಶೋಷಣೆ ಮಾಡುತ್ತಿರುವ ಕುರಿತು.**
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಉ) ಕನ್ನಡ ವಿಶ್ವವಿದ್ಯಾಲಯದಲ್ಲಿ ಕ್ರೋಢಿಕೃತ/ತಾತ್ಕಾಲಿಕ ವೇತನದ ಆಧಾರದಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ವೇತನದ ಬಗ್ಗೆ.**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಊ) ಪಂಚಮಸಾಲಿ ಸಮುದಾಯವನ್ನು 2ಎ ಗೆ ಮತ್ತು ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.**

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**(ಅರ್ಧಗಂಟೆ ಕಾಲಾವಧಿ ಚರ್ಚೆಗೆ ಕೋರಿದರು)**

**(ಋ) ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಪರ ನಿರ್ದೇಶಕರ ಕಛೇರಿ ವಿಜಯಪುರದಲ್ಲಿ ಎರಡು ವರ್ಷಗಳಿಂದ ಪ್ರಾರಂಭ ಆಗದಿರುವ ಬಗ್ಗೆ.**

- ಶ್ರೀ ಅರುಣ ಶಹಾಪೂರ
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**3. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**4. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕ, 2020**

- ಡಾ|| ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಆ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020**

- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರು)
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಇ) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020**

- ಡಾ|| ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು, ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಅಲ್ಲಂ ವೀರಭದ್ರಪ್ಪ
- ಶ್ರೀ ನಸೀರ್ ಅಹಮದ್
- ಶ್ರೀ ಮರಿತಿಬ್ಬೇಗೌಡ
- ಶ್ರೀ ಆರ್.ಬಿ.ತಿಮ್ಮಾಪೂರ್
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಪಿ.ಆರ್.ರಮೇಶ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**5. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಗ್ರಾಮವೊಂದರ ಕ್ರಷರ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವ ಘಟನೆಯ ಕುರಿತು.**

- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಆರ್.ಬಿ.ತಿಮ್ಮಾಪೂರ್
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಡಾ॥ ತೇಜಸ್ವಿನಿಗೌಡ
- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಆಯನೂರು ಮಂಜುನಾಥ್
- ಶ್ರೀ ಮರಿತಿಬ್ಬೇಗೌಡ

**6. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ಕೋಲಾರ ಜಿಲ್ಲೆಯ ಕೆ.ಜಿ.ಎಫ್. ನಗರ ಸಭೆಯ ವ್ಯಾಪ್ತಿಯಲ್ಲಿ ಸುಮಾರು 30-40 ವರ್ಷಗಳಿಂದ ಮಳಿಗೆಗಳನ್ನು ನಿರ್ಮಾಣ ಮಾಡಿ ವ್ಯಾಪಾರ ಮಾಡಿಕೊಂಡು ಬಂದಿರುವ ವ್ಯಾಪಾರಸ್ಥರಿಗೆ ಖಾಯಂ ಆಗಿ ಮಳಿಗೆಗಳನ್ನು ಹಂಚಿಕೆ ಮಾಡುವ ಕುರಿತು.**

- ಶ್ರೀ ನಸೀರ್ ಅಹಮದ್
- ಶ್ರೀ ಎನ್.ನಾಗರಾಜು(ಎಂಟಿಬಿ) (ಪೌರಾಡಳಿತ ಮತ್ತು ಸಕ್ಕರೆ ಸಚಿವರು)

**7. ಸಭಾಪತಿ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿರವರಿಂದ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಪ್ರಕಟಣೆ**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

140/4-2-2021/11-30 bkp-ak

**ಕರ್ನಾಟಕ ವಿಧಾನ ಪರಿಷತ್ತು**
**ಗುರುವಾರ, 4ನೇ ಫೆಬ್ರವರಿ 2021**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ ಪ್ರತಾಪ ಚಂದ್ರಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

# (1) ಪ್ರಶ್ನೋತ್ತರಗಳು

## (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

## ಪ್ರಶ್ನೆ ಸಂಖ್ಯೆ 466
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಬಸವರಾಜ ಬೊಮ್ಮಾಯಿ: (ಗೃಹ, ಕಾನೂನು ಮತ್ತು ಸಂಸದೀಯ ಸಚಿವರು):–**ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಪರವಾಗಿ ಶ್ರೀಮತಿ ಭಾರತಿಶೆಟ್ಟಿ ರವರ 466ರ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಜಲಮಂಡಳಿಯ ಕೆಲಸ ಏನೆಂದರೆ ಶುದ್ಧ ನೀರು ಕೊಡಬೇಕು ಹಾಗೂ ಆಮೇಲೆ ತ್ಯಾಜ್ಯ ನೀರನ್ನು ಸ್ವಚ್ಛಗೊಳಿಸಿ ನದಿ ಕೆರೆಗಳಿಗೆ ಬಿಡುವಂತಹದ್ದು ಆಗಬೇಕು. ಆದರೆ, ಇಲ್ಲಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಆದೇಶದ ಗಂಭೀರತೆಯನ್ನು ಪರಿಗಣಿಸಿ ಚಾಲನೆಯಲ್ಲಿರುವ ಕಾಮಗಾರಿಗಳು, ಮತ್ತೆ ಅವುಗಳನ್ನು ಪೂರ್ಣಗೊಳಿಸುವುದು ಹಾಗೂ ಯಾವಾಗ ಪೂರ್ಣಗೊಳ್ಳುತ್ತದೆ ಎನ್ನುವಂತಹ ಉಲ್ಲೇಖವನ್ನು ಕೊಟ್ಟಿದ್ದಾರೆ. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಬೆಳ್ಳಂದೂರು ಕೆರೆಯಲ್ಲಿನ ನೀರಿನ ನೊರೆಯೆಲ್ಲಾ ಬಂದು ರಸ್ತೆಗಳಿಗೆ ಹೋಗಿ ಆ ಇಡೀ ರಸ್ತೆಯನ್ನು ಬ್ಲಾಕ್ ಮಾಡಿ ನಂತರ ಅಲ್ಲಿ ಮೊದಲೇ ಐಟಿ/ಬಿಟಿಯವರೆಲ್ಲಾ ಓಡಾಡುವಂತಹ ರಸ್ತೆ ಅದಾಗಿದ್ದು ಅದು ರಾಷ್ಟ್ರೀಯ ಮಟ್ಟದ ಸುದ್ದಿಯಾಯಿತು ಮತ್ತೆ ನ್ಯಾಯಾಲಯ ಕೂಡ ಈ ವಿಷಯಕ್ಕೆ ಸಂಬಂಧಪಟ್ಟಂತೆ ಛೀಮಾರಿ ಹಾಕಿತ್ತು. ಇವರನ್ನು ಏಕೆ ಜೈಲಿನಲ್ಲಿ ಕೂರಿಸಬಾರದು ಎನ್ನುವಂತಹ ಒಂದು ಉಲ್ಲೇಖವನ್ನು ಕೂಡ ಆ ಸಂದರ್ಭದಲ್ಲಿ ಮಾಡಿರುವುದನ್ನು ನಾವು ನೋಡಿದ್ದೇವೆ. ಆದರೆ, ನನ್ನ ವಿನಂತಿ ಏನೆಂದರೆ, ಪ್ರಪಂಚದಲ್ಲಿಯೇ ವೇಗವಾಗಿ ಬೆಳೆಯುತ್ತಿರುವಂತಹ ನಗರವೆಂದರೆ ಬೆಂಗಳೂರು, ಮತ್ತೆ ಇದನ್ನು ಹೈಟೆಕ್ ನಗರವೆಂದೂ ಸಹಿತ ನಾವು ಕರೆಯುತ್ತೇವೆ. ಇವತ್ತು ಜಾಗತಿಕ ಹಾಗೂ ತಾಂತ್ರಿಕ ಮತ್ತು ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ವೇಗವಾಗಿ ಬೆಳೆಯುತ್ತಿದೆ. ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹಿತ ಸಂಬಂಧಪಟ್ಟ ತಜ್ಞರು ಕೆಲಸ ಮಾಡಿದರೆ ಮಾತ್ರ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಇಲ್ಲಿ ಅವರು ಉಲ್ಲೇಖ ಮಾಡಿದ್ದಾರೆ. ಇವತ್ತು ಏನಾಗಿದೆ ಎಂದರೆ ನಾನು ಪ್ರಶ್ನೆ ಕೇಳಿದ್ದೆ, ಈಗ ಬೆಂಗಳೂರು ನೀರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಮುಖ್ಯ ಅಭಿಯಂತರರ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ನೇಮಕಾತಿಯ ಬಡ್ತಿಯ ತಿದ್ದುಪಡಿಯ ಬಗ್ಗೆ ಇವರು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಅಲ್ಲಿ ಸಿವಿಲ್ ಇಂಜಿನಿಯರ್‌ಗಳು ಮಾಡುವಂತಹ ಕೆಲಸವನ್ನು ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರ್‌ಗಳೆಲ್ಲಾ ಮಾಡುತ್ತಾರೆ. ಆದ್ದರಿಂದ ಈ ಬಗ್ಗೆ ನನ್ನ ವಿನಂತಿ ಏನೆಂದರೆ, ಓಬಿರಾಯನ ಕಾನೂನಿದೆ, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಬದಲಾವಣೆಯನ್ನು ಮಾಡಬೇಕು. ಏಕೆಂದರೆ, ಹಲ್ಲು ನೋವು ಬಂದರೆ ಹಲ್ಲಿನ ಡಾಕ್ಟರ್ ಬಳಿ ಹೋಗಬೇಕು, ಬೇರೆ ಡಾಕ್ಟರ್ ಬಳಿ ಹೋಗುವುದಕ್ಕೆ ಆಗುವುದಿಲ್ಲ. ಈ ಎಲ್ಲಾ ಅವ್ಯವಸ್ಥೆಗೆ ಅಲ್ಲಿರತಕ್ಕಂತಹ ಸಿವಿಲ್ ಇಂಜಿನಿಯರ್‌ಗಳನ್ನು ಕೊರತೆ ಏನಿದೆ, ಏಕೆಂದರೆ ಸಿವಿಲ್ ಇಂಜಿನಿಯರ್‌ಗಳು ಮಾಡಬೇಕಾದಂತಹ ಕೆಲಸವನ್ನು ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರ್‌ಗಳು ಮಾಡಿದ ಕಾರಣ ಇವತ್ತು ಅಲ್ಲಿ ಕೆಲಸ ಸಮರ್ಪಕವಾಗಿ ನಡೆಯುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ನನ್ನ ವಿನಂತಿ ಏನೆಂದರೆ, ಈ ಜಲಮಂಡಳಿಯ ನೇಮಕಾತಿ ಪ್ರಕ್ರಿಯೆಯಲ್ಲಿ ನಿಯಮಾವಳಿಗಳನ್ನು ಬದಲಾವಣೆ ಮಾಡಿ ಸಿವಿಲ್ ಇಂಜಿನಿಯರ್‌ಗಳನ್ನೇ ನೇಮಕಾತಿ ಮಾಡಿಕೊಂಡರೆ ಖಂಡಿತವಾಗಿ ಅದು ವ್ಯವಸ್ಥಿತವಾಗಿ ಆಗುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಆ ಕೆಲಸವನ್ನು ಸರ್ಕಾರ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳೇ ಈಗ ಸದನದಲ್ಲಿ ಇದ್ದರೆ ಚೆನ್ನಾಗಿತ್ತು. ಈಗ ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ. ಆದರೂ ಕೂಡ ಇದನ್ನು ಒತ್ತಾಯ ಮಾಡಬೇಕು ಹಾಗೂ ಖಂಡಿತ ನನಗೆ ಇದರಲ್ಲಿ C & R Rules ನಲ್ಲಿ ಬದಲಾವಣೆ ಮಾಡಿ ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ್ ಬೊಮ್ಮಾಯಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಸಭಾಪತಿಗಳೇ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೆಂಗಳೂರಿನ ಅಭಿವೃದ್ಧಿಗೆ ಅತ್ಯಂತ ಪ್ರಮುಖವಾಗಿರುವಂತಹ ಒಂದು ಸಂಸ್ಥೆಯಾಗಿದೆ. ನೀರು ಸರಬರಾಜು ಯೋಜನೆ ಮತ್ತು ತ್ಯಾಜ್ಯ ವಸ್ತುಗಳನ್ನೊಳಗೊಂಡಂತಹ ನೀರನ್ನು ಶುದ್ಧೀಕರಣ ಮಾಡುವಂತಹ ಅಂದರೆ ಒಳಚರಂಡಿ ನೀರನ್ನು ಶುದ್ಧೀಕರಣ ಮಾಡುವಂತಹ ಒಂದು ಘಟಕಗಳನ್ನು ನಿರ್ವಹಣೆ ಮಾಡುತ್ತದೆ. ಈ ಯೋಜನೆಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡಗಳ ಆಧಾರದ ಮೇಲೆ ಇದು ಮಾಡುತ್ತಿದೆ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಗಂಭೀರವಾಗಿ 3-4 ಬಾರಿಗೆ ಇದರ ಒಂದು ಕೆಲಸದ ಬಗ್ಗೆ ಅಸಮಧಾನ ಮತ್ತು ನಿರ್ದೇಶನ ಕೊಟ್ಟಿರುವಂತಹದ್ದು ಸತ್ಯವಾಗಿದೆ. ಅದರ ಪ್ರಕಾರ ಈಗಾಗಲೇ 5 ಸಣ್ಣ ಪ್ರಮಾಣದ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ನಾವು ಪೂರ್ಣಗೊಳಿಸಿ ಈಗಾಗಲೇ ಕಾರ್ಯಾಚರಣೆ ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಗರಂ, ಹುಳಿಮಾವು, ಚಿಕ್ಕಬೇಗೂರು ಈ ರೀತಿ ಇವೆ. ಅದೂ ಅಲ್ಲದೇ ಕೋರಮಂಗಲ ಕ್ರೀಡಾ ಸಂಕೀರ್ಣದ ಬಳಿ 210 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಕೊಳಚೆ ನೀರಿನ ರೇಚಕ ಯಂತ್ರದ ಸ್ಥಾವರವನ್ನೂ ಸಹಿತ ಸ್ಥಾಪನೆ ಮಾಡಿದ್ದೇವೆ. ಚಲ್ಲಘಟ್ಟ ಕಣಿವೆಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣೆ ಘಟಕದವರೆಗೂ ಸಹ ನಾವು ಮಾಡಿದ್ದೇವೆ. ಈಗ ಅದನ್ನು ಮಾರ್ಚ್ ತಿಂಗಳೊಳಗೆ ಪೂರ್ಣಗೊಳಿಸಿ ಅದನ್ನೂ ಚಾಲನೆಗೊಳಿಸುತ್ತೇವೆ. ಅದೇ ರೀತಿ ವೃಷಭಾವತಿ ಮುಖ್ಯ ಕಣಿವೆಯ ಪ್ರದೇಶಗಳಲ್ಲಿ ಪರಿಸರ ಕ್ರಿಯಾ ಯೋಜನೆಯ 90 ಕಿಮೀ ಉದ್ದದ ಕೊಳವೆ ಮಾರ್ಗಗಳನ್ನು ಅಳವಡಿಸುವ ಕೆಲಸವನ್ನು ಸಹ ಪೂರ್ಣಗೊಳಿಸುವ ಹಂತಕ್ಕೆ ತಲುಪಿದ್ದೇವೆ. ಅದೇ ರೀತಿ ಮೆಗಾಸಿಟಿ ರಿವಾಲ್ವಿಂಗ್ ನಿಧಿಯಡಿಯಲ್ಲಿ ಒಟ್ಟು 440 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ 4 ಹೊಸ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕಗಳ ಕಾಮಗಾರಿಗಳನ್ನು ಇವತ್ತು ನಾವು ಪೂರ್ಣಗೊಳಿಸಿ ಇದನ್ನೂ ಕೂಡ ಇದೇ ವರ್ಷದ ಮಾರ್ಚ್ ತಿಂಗಳಿನಲ್ಲಿ ಕಾರ್ಯಚಾಲನೆ ಮಾಡುತ್ತಿದ್ದೇವೆ. ಮಾನ್ಯ ಸಭಾಪತಿಗಳೇ, ಇನ್ನುಳಿದ ಎಲ್ಲಾ ಕೆಲಸಗಳು ಕೂಡ ಬೇರೆ ಬೇರೆ ಹಂತದಲ್ಲಿ ಅಂದರೆ ಹೆಬ್ಬಾಳದಲ್ಲಿ, ಕೋರಮಂಗಲದಲ್ಲಿ ಹೀಗೆ ಎಲ್ಲಾ ಕಡೆಗಳಲ್ಲಿ ಕೆಲಸವನ್ನು ಈಗ ಜಲಮಂಡಳಿ ಚುರುಕಾಗಿ ಕೆಲಸ ಮಾಡುತ್ತಿದೆ. ಇನ್ನೂ ಅವರು ಇಂಜಿನಿಯರ್‌ಗಳ ವೃಂದದ ಬಗ್ಗೆ ಮಾತನಾಡಿದ್ದಾರೆ. ತಮ್ಮ ಮಾಹಿತಿಗೆ ಹಾಗೂ ಸದನದ ಮಾಹಿತಿಗೆ ಕೊಡುತ್ತೇನೆ. ಹಿರಿಯ ಅಭಿಯಂತರರಲ್ಲಿ ಸಿವಿಲ್ ಇಂಜಿನಿಯರ್‌ಗಳು 40% ಇದ್ದಾರೆ, ಎಲೆಕ್ಟ್ರಿಕಲ್ ಇಂಜಿನಿಯರ್‌ಗಳು 40% ಇದ್ದಾರೆ, ಮೆಕಾನಿಕಲ್ ಇಂಜಿನಿಯರ್‌ಗಳು 20% ಇದ್ದಾರೆ. ಅದೇ ರೀತಿ ಸಹಾಯಕ ಅಭಿಯಂತರರುಗಳ ವೃಂದದಲ್ಲಿ ಸಿವಿಲ್ ಇಂಜಿನಿಯರ್‌ಗಳಲ್ಲಿ 66.5% ಇದೆ, ಎಲೆಕ್ಟ್ರಿಕಲ್ ವೃಂದದಲ್ಲಿ 19% ಇದೆ, ಮೆಕಾನಿಕಲ್ ವೃಂದದಲ್ಲಿ 11% ಇದೆ. ಕಂಪ್ಯೂಟರ್ ವಿಜ್ಞಾನದಲ್ಲಿ 3.5% ಇದೆ. ಮಾನ್ಯ ಸಭಾಪತಿಗಳೇ, ಏನಾಗಿದೆ ಎಂದರೆ, ಇದರ ಹಳೆಯ C & R Rules ನಲ್ಲಿ ಯಾರ್ಯಾರು AEE, AE join ಆಗುತ್ತಾರೆ, ಅವರಿಗೆ ಬಡ್ತಿ ಮುಖಾಂತರ Chief Engineer ಆಗುತ್ತಾರೆ. ಆದರೆ, ಈಗ ಎಲೆಕ್ಟ್ರಿಕಲ್ ಹಾಗೂ ಮೆಕಾನಿಕಲ್‌ನವರು ಅವರು ಸೀನಿಯಾರಿಟಿ ಪ್ರಕಾರ ಇದ್ದಾರೆ. ಆದರೆ, ನಮ್ಮ ಸದಸ್ಯರು ಹೇಳಿದ ಪ್ರಕಾರ ಸಿವಿಲ್ ಇಂಜಿನಿಯರ್ ಕೆಲಸವನ್ನು ಸಿವಿಲ್ ಇಂಜಿನಿಯರ್‌ಗಳೇ ಮಾಡಬೇಕು ಎಲೆಕ್ಟ್ರಿಕಲ್ ಇಂಜಿನಿಯರ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವಂತಹದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಡ್ತಿ ಪ್ರಕಾರ ನೋಡುವಾಗ ಇದರಲ್ಲಿ ಹೊಸ ಒಂದು C & R Rules ನ್ನು ಮಾಡಬೇಕಾಗುತ್ತದೆ, ಆಗ ಮಾತ್ರ ನಾವು ಮೂರೂ ವೃಂದಗಳಲ್ಲಿಯೂ ಸಹಿತ Chief Engineers ಅನ್ನು ನಾವು ಪಡೆದುಕೊಳ್ಳಬಹುದು. ಇದು ಮಾನ್ಯ ಮುಖ್ಯಮಂತ್ರಿಗಳ ಗಮನದಲ್ಲಿದೆ. ಅವರಿಗೆ ಇಲ್ಲಿಯ ಭಾವನೆಗಳನ್ನು ಹೇಳಿ ಒಂದು ಸಭೆಯನ್ನು ಕರೆದು ಇದಕ್ಕೆ ತಿದ್ದುಪಡಿ ಮಾಡುವುದಕ್ಕೆ ಏನೆಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕ್ರಮಗಳನ್ನು ರೂಪಿಸಬೇಕು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಇರುವಂತಹ ಮಾಹಿತಿಯನ್ನೆಲ್ಲಾ ಒದಗಿಸಿ, ಈಗಿರುವಂತಹದ್ದು ಇದೆ, ಮುಂದೆ ಬರುವಂತಹ ದಿನಗಳಲ್ಲಿ ಇದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:** ಮಾನ್ಯ ಸಭಾಪತಿಗಳೇ, ಒಂದು ನಾನು ಹೇಳುವುದು ಏನೆಂದರೆ, ಇತರೆ ಮುಖ್ಯ ಇಂಜಿನಿಯರ್‌ಗಳನ್ನು supernumerary ಹುದ್ದೆಗಳನ್ನಾಗಿ ಪರಿಗಣಿಸಿ ವಿಂಗಡಿಸಬಹುದಲ್ಲವೇ? ಆಮೇಲೆ ಇದಕ್ಕೆ ಸಿವಿಲ್ ಇಂಜಿನಿಯರ್‌ಗಳನ್ನೇ ಹಾಕಬೇಕು ಹಾಗೂ ಅದಕ್ಕೆ C & R Rules ನಲ್ಲಿ ಬದಲಾವಣೆಯನ್ನು ತರಬೇಕು. ಆದರೆ, ಆ ಕಾಲದಲ್ಲಿ ಅಲ್ಲಿ ಸಿವಿಲ್ ಇಂಜಿನಿಯರ್‌ಗಳಿಲ್ಲವೆಂದು ಹೇಳುತ್ತಾರೆ, ಆ ಕಾಲದಲ್ಲಿ ಅಲ್ಲಿ ಇರಲಿಕ್ಕಿಲ್ಲ. ಸಿವಿಲ್ ಇಂಜಿನಿಯರ್‌ಗಳ ಕೊರತೆ ಇರುವ ಕಾರಣ ಎಲೆಕ್ಟ್ರಾನಿಕ್ಸ್ ಇಂಜಿನಿಯರ್‌ಗಳನ್ನೆಲ್ಲಾ ನೇಮಕಾತಿ ಮಾಡಿಕೊಂಡಿರಬಹುದು. ಆದರೆ, ಸಿವಿಲ್ ಇಂಜಿನಿಯರ್‌ಗಳ ಕೊರತೆಯಿಲ್ಲ. ಆದ್ದರಿಂದ, ತುರ್ತಾಗಿ ಈ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ್ ಬೊಮ್ಮಾಯಿ:** ರೂಲ್ಸ್‌ಗೆ ತಿದ್ದುಪಡಿ ತರಬೇಕಾಗುತ್ತದೆ. ಸದಸ್ಯರು ಏನು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಅಲ್ಲಮ ವೀರಭದ್ರಪ್ಪ:** ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇವತ್ತು ಕೋರಮಂಗಲ ಸಂಕೀರ್ಣದ ಬಳಿ 210 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಕೊಳಚೆ ನೀರಿನ ರೇಚಕ ಯಂತ್ರದ ಸ್ಥಾವರ ಹಾಗೂ ಈ ಸ್ಥಾವರದಿಂದ ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿರುವ ತ್ಯಾಜ್ಯ ನೀರು ಸಂಸ್ಕರಣೆ ಘಟಕದವರೆಗೂ ರೈಸಿಂಗ್ ಕೊಳವೆ ಮಾರ್ಗ ಅಳವಡಿಸುವ ಎರಡು ಕಾಮಗಾರಿಗಳಲ್ಲಿ ರೇಚಕ ಕೇಂದ್ರದ ಕಾಮಗಾರಿಯು ಪೂರ್ಣಗೊಂಡು ಚಾಲನೆಯಲ್ಲಿರುವುದು. ಇವತ್ತು ಬೆಂಗಳೂರಿನಲ್ಲಿ ಏನಾಗಿದೆ ಎಂದರೆ, if I am right, ಇದು ತ್ಯಾಜ್ಯ ನೀರಿನ purification ಆಗುತ್ತದೆ. ಮಂತ್ರಿಗಳೇ, drainage water 1/4th ಇದ್ದರೆ 3/4th water ಮಳೆಯಿಂದ ಬರುತ್ತದೆ. ಎರಡೂ ಮಿಶ್ರಣವಾಗುತ್ತದೆ.

**(ಮುಂದು . . .)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(141) 04.02.2021 11.40 ಎಸ್‌ವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅಲ್ಲಂ ವೀರಭದ್ರಪ್ಪ (ಮುಂದು):-**

ಅಷ್ಟನ್ನು ಸ್ವಚ್ಛಗೊಳಿಸುವುದಕ್ಕೆ ಒಂದು ಅಣೆಕಟ್ಟನ್ನು ನಿರ್ಮಿಸಬೇಕಾಗುತ್ತದೆ. Instead of this, ಮಳೆನೀರನ್ನು ಸಂಗ್ರಹಿಸುವುದಕ್ಕೆ ಬಹಳ ಪ್ರಾಮುಖ್ಯತೆ ನೀಡಬೇಕಾಗಿದೆ. ಬೆಂಗಳೂರಿನಲ್ಲಿ ಹೆಚ್ಚು ಕಡಿಮೆ 300 ದಿನಗಳು ಮಳೆ ಬರುತ್ತಿದ್ದು, ಇದಕ್ಕೆ ಅತ್ಯಂತ ಹೆಚ್ಚಿನ ಮಹತ್ವ ಕೊಡಬೇಕು. ಇದು ಸುಲಭವಾಗಿ ಮಾಡಬಹುದಾಗಿರುತ್ತದೆ. It becomes more costlier.

**ಶ್ರೀ ಬಸವರಾಜ ಎಸ್.ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಅಲ್ಲಂ ವೀರಭದ್ರಪ್ಪನವರು ನೀಡಿರುವಂತಹ ಸಲಹೆಯನ್ನು ಇಂಜಿನಿಯರಿಂಗ್ ವಿಭಾಗ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 458**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಇಂದಿನ ಪ್ರಶ್ನೋತ್ತರ ಅವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ನೇರವಾಗಿ ಪ್ರಶ್ನೆಗಳನ್ನು ಕೇಳಬಹುದು ಎಂದು ತಿಳಿದಿದ್ದೆವು. ಮಾನ್ಯ ಮುಖ್ಯಮಂತ್ರಿಯವರೊಡನೆ ಮಾತನಾಡುವ ಅವಕಾಶ ವಿಧಾನ ಪರಿಷತ್ತಿಗೆ ಸಿಗುವುದೇ ಬಹಳ ಕಡಿಮೆ. ಇಂತಹ ಸಮಯದಲ್ಲಿ ಮುಖ್ಯಮಂತ್ರಿಗಳು ಬರಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಯವರು ಏಕೆ ಬಂದಿರುವುದಿಲ್ಲ ಎಂದು ನಮಗೆ ತಿಳಿದಿಲ್ಲ. ಆದರೂ ಕೂಡ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೈತರ ಕೃಷಿ ಭೂಮಿಗೆ ಕೊಳವೆ ಬಾವಿಯಿಂದ ನೀರು ಹರಿಸುವ ಸಂಬಂಧ ವಿದ್ಯುತ್ ಸಂಪರ್ಕ (ಟಿ.ಸಿ.) ನೀಡಲು ಯಾವ ಹೊಸ ಯೋಜನೆ ಕೈಗೊಳ್ಳಲಾಗಿದೆ? ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಯೋಜನೆಯನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು ಅಂದಾಜು ಮೊತ್ತವೆಷ್ಟು? ರೈತರ ಕೃಷಿ ಭೂಮಿಯ ಪಂಪ್‌ಸೆಟ್‌ಗೆ ಸಂಪರ್ಕ ಕಲ್ಪಿಸುವ ಟ್ರಾನ್ಸ್‌ಫಾರ್ಮರ್ ಹಾಳಾದರೆ ಎಷ್ಟು ದಿನಗಳಲ್ಲಿ ಬದಲಾವಣೆ ಮಾಡಿ ಹೊಸ/ರಿಪೇರಿ ಮಾಡಲಾದ ಟಿ.ಸಿ. ಅಳವಡಿಸಲಾಗುವುದು ಎನ್ನುವ ಪ್ರಶ್ನೆಗಳನ್ನು ಕೇಳಿದ್ದು, ಉತ್ತರಗಳನ್ನು ಕೊಟ್ಟಿದ್ದಾರೆ. ಸರ್ಕಾರವು ನೀಡಿರುವ ಉತ್ತರ ಬಹಳ ಮಾಮೂಲಾಗಿ ಕೊಡುವಂತಹ ಉತ್ತರವಾಗಿದೆ. ನಾವು ಹಳ್ಳಿಗಾಡು ಪ್ರದೇಶದಿಂದ ಬಂದವರಾಗಿದ್ದೇವೆ. ರೈತರಿಗೆ ಇಂದು ಪಂಪ್‌ಸೆಟ್‌ನ ಅವಶ್ಯಕತೆ ಬಹಳ ಮುಖ್ಯವಾಗಿದೆ. ನಾನು ಮಂಡ್ಯ ಜಿಲ್ಲೆಗೆ ಸೀಮಿತವಾಗಿ ಮಾತನಾಡುವುದಾದರೆ 72 ಗಂಟೆಗಳೊಳಗೆ ಪರಿವರ್ತಕಗಳನ್ನು ಬದಲಾಯಿಸುವುದಾಗಿ ಉತ್ತರದಲ್ಲಿ ಹೇಳಿದ್ದಾರೆ. ನಿಜವಾಗಿಯೂ ಅಧಿಕಾರಿಗಳು ಬರೆದು ಕೊಟ್ಟಿರುವ ಉತ್ತರವನ್ನು ಇಲ್ಲಿ ಯಥಾವತ್ತಾಗಿ ಸಚಿವರು ಹೇಳಿದ್ದಾರೆ. ಇದಕ್ಕೆ ನಾನು ಒಂದು ಉದಾಹರಣೆಯನ್ನು ನೀಡುತ್ತೇನೆ. ಮದ್ದೂರು ತಾಲ್ಲೂಕಿನ ಕೊಪ್ಪ ಭಾಗದಲ್ಲಿ ತಗ್ಗಳ್ಳಿ ಕಾಂತರಾಜು ಎನ್ನುವ ಒಬ್ಬ ಪ್ರಗತಿಪರ ರೈತರಿದ್ದು, ಮಾನ್ಯ ಶ್ರೀಕಂಠೇಗೌಡರಿಗೆ ಬಹಳ ಚೆನ್ನಾಗಿ ತಿಳಿದವರಾಗಿದ್ದಾರೆ. ಸುಮಾರು 15 ದಿನಗಳಿಂದ ನಾವು ದೂರವಾಣಿಯನ್ನು ಮಾಡುತ್ತಿದ್ದೇವೆ. ಮಾನ್ಯ ಶ್ರೀಕಂಠೇಗೌಡರು ಕೂಡ ದೂರವಾಣಿ ಮಾಡಿ ತಿಳಿಸಿದ್ದಾರೆ. ಇದು ಕಟುಸತ್ಯ. ಇದನ್ನು ತಾವು ಪರಿಶೀಲನೆ ಮಾಡಬೇಕು.

ನಾನು ಸರ್ಕಾರಕ್ಕೆ ಏನಾದರೂ ದೂರುಗಳಿವೆಯೇ ಎಂದು ಕೇಳಿರುವ ಪ್ರಶ್ನೆಗೆ ಇಲ್ಲ ಎಂದು ಹೇಳಿದ್ದಾರೆ. ನಮಗೆ ವ್ಯವಸ್ಥಾಪಕ ನಿರ್ದೇಶಕರಾಗಲೀ ಅಥವಾ ಮುಖ್ಯ ಅಭಿಯಂತರರಾಗಲೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಹೀಗಿರುವಾಗ ಚೆಸ್ಕಾಂನ ಕಛೇರಿಯು ಮೈಸೂರಿನಲ್ಲಿದ್ದು, ಅಲ್ಲಿಗೆ ಹೋಗಿ ವ್ಯವಸ್ಥಾಪಕ ನಿರ್ದೇಶಕರ ಬಳಿ ಅರ್ಜಿಯನ್ನು ಕೊಡುವುದಕ್ಕೆ ಆಗುತ್ತದೆಯೇ? ಆದ್ದರಿಂದ ಮಾನ್ಯ ಸಚಿವರು ಈ ಒಂದು ಪಂಪ್‌ಸೆಟ್‌ಗಳಿಗೆ ಏನಾದರೊಂದು permanent solution ಮಾಡದಿದ್ದರೆ ರೈತರ ಜೀವನ ಹಸನಾಗುತ್ತದೆ. ರೈತರಿಗೆ ಬೇಕಾಗಿರುವ ಕರೆಂಟ್ ಅನ್ನು ಕೊಟ್ಟರೆ ಅವರ ಜೀವನ ಅರ್ಧದಷ್ಟು ಸರಿಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು, ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಅಪ್ಪಾಜಿಗೌಡರು ಮಂಡ್ಯ ಜಿಲ್ಲೆ ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಯಾವ ಮಾನದಂಡದಲ್ಲಿ ಅಕ್ರಮ-ಸಕ್ರಮ ಮಾಡುತ್ತೀರಿ ಎಂದು ಕೇಳಿರುವ ಮೊದಲನೆಯ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಅದರಲ್ಲಿ ಜ್ಯೇಷ್ಠತೆಯ ಅಧಾರದಲ್ಲಿ ರೂ.10,000/- ಡೆಪಾಸಿಟ್ ಹಾಗೂ ಮೂಲಭೂತ ಸೌಕರ್ಯಕ್ಕಾಗಿ ರೂ.10,000/- ಗಳನ್ನು ತೆಗೆದುಕೊಂಡು ಸಕ್ರಮ ಮಾಡುವಂತಹ ಒಂದು ಕಾರ್ಯಕ್ರಮವಿದೆ. ಅದನ್ನು ನಾವು ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, 72 ಗಂಟೆಗಳಲ್ಲಿ ಪರಿವರ್ತಕಗಳನ್ನು ಬದಲಾಯಿಸುತ್ತೇವೆ ಎನ್ನುವುದು ಸತ್ಯಕ್ಕೆ ದೂರ ಎಂದು ಮಾನ್ಯ ಸದಸ್ಯರು ಹೇಳಿದ್ದು, ಈ ಪ್ರಶ್ನೆಯನ್ನು ನಾನು ಅಧಿಕಾರಿಗಳಿಗೆ ಕೇಳಿದ್ದೇನೆ. ಇದು ಸ್ವಲ್ಪ ಕಷ್ಟಸಾಧ್ಯ ಎನ್ನುವುದು ನನ್ನ ಗಮನದಲ್ಲಿಯೂ ಇದೆ. ಅವರ ಒಂದು Circular ನಲ್ಲಿ ಏನಾದರೂ ಮಾಡಿಕೊಂಡಿರಬಹುದು. ಆದರೆ ಕೆಲವು ಸಂದರ್ಭಗಳಲ್ಲಿ material ಲಭ್ಯತೆ, ತಾಂತ್ರಿಕ ತೊಂದರೆಗಳಿಂದ ತಡವಾಗುವುದನ್ನು ನಾನು ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ನನ್ನ ಪ್ರಕಾರ ಮಂಗಳೂರು ಹಾಗೂ ಮೈಸೂರು ವಿದ್ಯುತ್ ಸರಬರಾಜು ಕಂಪನಿಗಳು ಬೇರೆ ಕಡೆಗಳಿಗೆ ಹೋಲಿಸಿದರೆ ಚೆನ್ನಾಗಿ ಕೆಲಸ ಮಾಡುತ್ತಿವೆ. 72 ಗಂಟೆಗಳಲ್ಲಿ ಮಾಡುವುದಕ್ಕೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆಯೋ, ಅದನ್ನು ತೆಗೆದುಕೊಳ್ಳಲಿಕ್ಕೆ ಹೇಳುತ್ತೇನೆ. ತಾವು particular ಆಗಿ ಒಂದು ಪಂಪ್‌ಸೆಟ್ ಬಗ್ಗೆ ಪ್ರಸ್ತಾಪಿಸಿದ್ದಾರೆ. ಬಹುಶಃ ಅದು ಮದ್ದೂರು ತಾಲ್ಲೂಕಿನದ್ದು ಇರಬಹುದು. ಅದರ ಬಗ್ಗೆ ನಾನು ಈ ಕೂಡಲೇ ವ್ಯವಸ್ಥಾಪಕ ನಿರ್ದೇಶಕರಿಗೆ ನಿರ್ದೇಶನವನ್ನು ನೀಡಿ, 72 ಗಂಟೆಗಳಲ್ಲಿ ಟಿ.ಸಿ.ಯನ್ನು ಹಾಕುವುದಕ್ಕೆ ನಾನು ಆದೇಶವನ್ನು ಕೊಡುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಚಿವರೇ, ಮಾನ್ಯ ಮುಖ್ಯಮಂತ್ರಿಯವರು ಬಂದಿರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಸದನಕ್ಕೆ ಬಂದಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:-** ಬಂದಿದ್ದಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಎರಡನೆಯದಾಗಿ ಅವರು 72 ಗಂಟೆಗಳಲ್ಲಿ ಕೆಲಸವನ್ನು ಮಾಡುತ್ತೇವೆಂದು ಅವರು ಹೇಳುತ್ತಾರೆ. ಒಬ್ಬರಲ್ಲ, ಇಬ್ಬರು ಮಾನ್ಯ ಸದಸ್ಯರು ಅದು ಸುಳ್ಳು ಎಂದು ಹೇಳಿದ್ದಾರೆ. ಇದನ್ನು ಹಕ್ಕುಬಾಧ್ಯತಾ ಸಮಿತಿಗೆ refer ಮಾಡಿ. ಒಬ್ಬ ಸದಸ್ಯರು ಹೇಳುವುದು ಸುಳ್ಳು ಎಂದರೆ ಹೇಗೆ? ನಿಮ್ಮ ಬಾಯಿಯಿಂದ ಅಧಿಕಾರಿಗಳು 72 ಗಂಟೆಗಳಲ್ಲಿ ಮಾಡುತ್ತೇವೆಂದು ಹೇಳಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿ ಹೇಳಿ ಸಾಕಾಗಿದೆ, ಕೆಲಸ ಆಗಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಇದರಲ್ಲಿ ಸತ್ಯ ಯಾರದ್ದು? ಇವರು ಹೇಳುವುದು ಸತ್ಯವೋ ಅಥವಾ ಅಧಿಕಾರಿಗಳು ಹೇಳುವುದು ಸತ್ಯವೋ? ಎರಡನ್ನೂ ಹಕ್ಕುಬಾಧ್ಯತಾ ಸಮಿತಿಗೆ refer ಮಾಡಿದರೆ ಅಲ್ಲಿ ವಿಚಾರ ಮಾಡೋಣ. ಇದು ಆಗಲೇ ಬೇಕು. ಏಕೆಂದರೆ ಇಲ್ಲಿ ಕುಳಿತಿರುವ ಸದಸ್ಯರ ಗೌರವದ ಪ್ರಶ್ನೆಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಜೆ.ಇ. ಅವರು ಎ.ಇ. ಅವರ ಮೇಲೆ ಹೇಳುತ್ತಾರೆ. ಎ.ಇ. ಅವರು ಎ.ಇ.ಇ ಅವರ ಮೇಲೆ ಹೇಳುತ್ತಾರೆ. ಎ.ಇ.ಇ. ಅವರು ಇ.ಇ. ಅವರ ಮೇಲೆ ಹೇಳುತ್ತಾರೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಚಿವರೇ, ಇದು ಶ್ರೀಕಂಠೇಗೌಡರ ಪಕ್ಕದ ಊರಿನ ವಿಚಾರ.

**ಶ್ರೀ ಬಸವರಾಜ ಎಸ್.ಬೊಮ್ಮಾಯಿ:-** ಮಾನ್ಯ ಅಪ್ಪಾಜಿಗೌಡರೇ, ನಾನು ನೇರವಾಗಿ ನಿಮ್ಮ ಮಾತುಗಳನ್ನು ಒಪ್ಪಿಕೊಂಡಿದ್ದೇನೆ. ಅವರ ಗುರಿ 72 ಗಂಟೆ ಇರಬಹುದು. ಆದರೆ ಕೆಲವು ಸಂದರ್ಭಗಳಲ್ಲಿ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ತಾಂತ್ರಿಕೇತರ ಕಾರಣಗಳಿಂದ ಮಾಡಲು ಸಾಧ್ಯವಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಚಿವರೇ, ಮಾಡುವುದಕ್ಕಾಗುವುದಿಲ್ಲ ಎಂಬುದನ್ನೇ ಹೇಳಬೇಕಾಗಿತ್ತು.

**ಶ್ರೀ ಬಸವರಾಜ ಎಸ್.ಬೊಮ್ಮಾಯಿ:-** ನಾನು ಹೇಳುತ್ತಿದ್ದೇನೆ. Inordinate delay ಆಗುವುದು ಸರಿಯಲ್ಲ. ಆದ್ದರಿಂದ ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ಸಂದರ್ಭದಲ್ಲಿ ಎಷ್ಟು ಟಿ.ಸಿ.ಗಳನ್ನು ಬದಲಾವಣೆ ಮಾಡಿದ್ದಾರೆ ಎನ್ನುವುದನ್ನು ಕೂಡ ಸಂಪೂರ್ಣವಾಗಿ ತನಿಖೆ ಮಾಡಿಸಲಾಗುವುದು. ತಾವು ಹೇಳಿರುವ ಪ್ರಕರಣದ ಬಗ್ಗೆಯೂ ತನಿಖೆ ಮಾಡಿಸಲಾಗುವುದು. ಆದುದರಿಂದ ಇದನ್ನು ಮುಂದುವರೆಯುವುದಕ್ಕೆ ಬಿಡುವುದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಚಿವರೇ, ನಾನು ಹಾಗೂ ಮಾನ್ಯ ಶ್ರೀಕಂಠೇಗೌಡರು ದೂರವಾಣಿ ಮುಖಾಂತರ ಮಾತನಾಡಿದ್ದೇವೆ. ನಾವು ಹೇಳಿರುವ ವ್ಯಕ್ತಿಯು ಪ್ರಗತಿಪರ ರೈತರಾಗಿದ್ದಾರೆ. ನಾವು ದೂರವಾಣಿ ಮೂಲಕ ಮಾತನಾಡಿದ ಅಧಿಕಾರಿಯು ನಮ್ಮ ಜೊತೆಯಲ್ಲಿಯೂ ಬೇಜವಾಬ್ದಾರಿಯಿಂದ ಮಾತನಾಡಿದ್ದಾರೆ. ಜೊತೆಗೆ ಇವರ ಜಮೀನಿನಲ್ಲಿ ಇಳಿಸಿದ್ದಂತಹ ವಿದ್ಯುತ್ ಪೋಲ್ ಅನ್ನು ಹಣಕಾಸು ವ್ಯವಹಾರದ ನಂತರ ಬೇರೆ ಕಡೆಗೆ ಶಿಫ್ಟ್ ಮಾಡಿದ್ದಾರೆ. ಇದೆಲ್ಲಾ ಸತ್ಯ. ನಾಗಮಂಗಲದ ಹೊಣಕೆರೆ ಹೋಬಳಿಯಲ್ಲಿ ಕೂಡ ಇದೇ ರೀತಿ ನಡೆಯುತ್ತಿದೆ.

ಮಾನ್ಯ ಸಭಾಪತಿಯವರೇ, ನಾಗಮಂಗಲ, ಕೆ.ಆರ್.ಪೇಟೆ ಮತ್ತು ಪಾಂಡವಪುರ ಇವು ಬರಡು ಪ್ರದೇಶ. ನಾವು ಇಲ್ಲಿಗೆ ಟ್ರಾನ್ಸ್‌ಫಾರ್ಮರ್ ಅನ್ನು ನೀಡಲಿಲ್ಲ ಎಂದರೆ ಹೇಗೆ? ಈಗ ಸೋಲಾರ್ ಸಿಸ್ಟಂ ಮುಂತಾದ technology ಬಂದಿದೆ. ಒಂದು ಟ್ರಾನ್ಸ್‌ಫಾರ್ಮರ್ ಅನ್ನು ಕೊಡದಂತಹ ಸ್ಥಿತಿಯಲ್ಲಿ ಇಂದು ಸರ್ಕಾರವಿದ್ದರೆ, ನಾಗರಿಕ ಸಮಾಜವು ಎಲ್ಲಿಗೆ ತಲುಪುತ್ತದೆ?

**ಶ್ರೀ ಬಸವರಾಜ ಎಸ್.ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ ಅವರು ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇನ್ನೊಂದು ಪ್ರಶ್ನೆಯಲ್ಲಿ ಹೊಣಕೆರೆ ಹೋಬಳಿಯ ಕುರಿತು ಹೇಳಿರುತ್ತಾರೆ. ಇಲ್ಲಿ ಉತ್ತರ ಏನಾದರೂ ಇರಲಿ, ಅದನ್ನು ತನಿಖೆ ಮಾಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 433**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ technical ಆಗಿ ಬಂದಿದೆ. ಬೆಂಗಳೂರು ನಗರ ಅನಾಥವಾಗಿದೆ ಎನ್ನುವುದನ್ನು ಈ ಸದನದಲ್ಲಿ ಇಂದು ನಾವು ನೋಡಬಹುದಾಗಿದೆ. ಬೆಂಗಳೂರು ನಗರದ ಉಸ್ತುವಾರಿಯನ್ನು ಮಾನ್ಯ ಮುಖ್ಯಮಂತ್ರಿಯವರು ವಹಿಸಿಕೊಂಡಿದ್ದಾರೆ. ಅವರಿಗೆ ಬೆಂಗಳೂರು ನಗರದ ವಿಚಾರದ ಬಗ್ಗೆ ಇಲ್ಲಿ ಉತ್ತರ ಕೊಡಲಿಕ್ಕೆ ಪುರುಸೊತ್ತಿಲ್ಲ.

**(...ಮುಂದು)**

(142) 04.02.2021, 11 .50. KG.RN

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು.,):-**

ಇತ್ತೀಚೆಗೆ ಬೃಹತ್ ಬೆಂಗಳೂರು ನಗರ ಪಾಲಿಕೆಯ ಆಯುಕ್ತರವರು ನಮಗೆ ಕೆರೆದುಕೊಳ್ಳುವುದಕ್ಕೆ ಸಮಯವಿಲ್ಲವೆಂದು ಹೇಳಿದ್ದಾರೆ. ಆದರೆ, ಬೆಂಗಳೂರು ಅನಾಥವಾಗಿದೆ ಎನ್ನುವುದನ್ನು ನಾನು ಈ ಪ್ರಶ್ನೆಯ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರೊಬ್ಬರು ಬೆಂಗಳೂರು ನಗರ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವ ರೀತಿ ಪ್ರಸಿದ್ಧಿ ಪಡೆದಿದೆ ಎನ್ನುವ ಬಗ್ಗೆ ಹೇಳಿದ್ದಾರೆ. ಬೆಂಗಳೂರು ನಗರ ಪ್ರಖ್ಯಾತಿ ಪಡೆದಿದ್ದು, ಈಗ ಕುಖ್ಯಾತಿಗೆ ಹೆಸರಾಗಿದೆ. ಇಲ್ಲಿ ಅವರ ಸರ್ಕಾರ, ನಮ್ಮ ಸರ್ಕಾರ ಎಂದಲ್ಲ. ಅಲ್ಲಿ ದೊಡ್ಡ ಮಾಫಿಯಾ ಇದೆ. ಏಕೆಂದರೆ, ಇಲ್ಲಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಪ್ರತಿಯೊಬ್ಬರು ಹಲವಾರು ಮಾಫಿಯಾಗಳ ಹೆಸರುಗಳನ್ನು ಹೇಳುತ್ತಾರೆ. ಬೃಹತ್ ಬೆಂಗಳೂರು ನಗರ ಪಾಲಿಕೆಯಲ್ಲಿಯೂ ಸಹ ದೊಡ್ಡ ಮಾಫಿಯಾ ಇದೆ.

ಮಾನ್ಯ ಸಭಾಪತಿಯವರೇ, ಈಗ ಘನ ತಾಜ್ಯ ವಿಲೇವಾರಿ ವಿಚಾರವನ್ನು ತೆಗೆದುಕೊಂಡಾಗ, Garden City ಹೋಗಿ Garbage City ಆಗಿರುವುದನ್ನು ನೋಡಿದ್ದೇವೆ. ಕೇವಲ Garbage City ಗೆ ಕಸ ಹಾಕುತ್ತಾರೆ ಎಂದಲ್ಲ. ಇತ್ತೀಚೆಗೆ ಒಂದು ವರ್ಷದಿಂದ white tapping ಮತ್ತು footpath ಅನ್ನು ಮಾಡುವುದಕ್ಕೆ ಇಡೀ ಬೆಂಗಳೂರು ನಗರವನ್ನು ಅಗೆದು ಬಿಟ್ಟಿದ್ದಾರೆ. ಅದರಿಂದ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟು accident ಗಳು ಆಗಿವೆ ಎನ್ನುವುದು ಇವರ ಗಮನಕ್ಕೆ ಬಂದಿದೆಯೇ? ಅದಲ್ಲದೇ, ಈ garbage handle ಮಾಡುವಂತಹ contractor ರವರದ್ದು ದೊಡ್ಡ ಮಾಫಿಯಾ, ಬೃಹತ್ ಬೆಂಗಳೂರು ನಗರ ಪಾಲಿಕೆಯನ್ನು ಮುಖ್ಯಮಂತ್ರಿಯಾಗಲಿ ಅಥವಾ ಯಾವುದೇ ಸರ್ಕಾರ ಇರಲಿ ಅವರನ್ನು ಮುಟ್ಟುವುದಕ್ಕೆ ಬಹಳ ಕಷ್ಟ. ಏಕೆಂದರೆ, ಮುಟ್ಟಿದ ತಕ್ಷಣ ಅವರನ್ನೇ ತೆಗೆಯುವುದಕ್ಕೆ ಪ್ರಯತ್ನ ಪಡುತ್ತಾರೆ. ಅವರು ಅಂತಹ ಮಾಫಿಯಾ ಇರುವಂತಹವರು. ಆದ್ದರಿಂದ, ಜನಸಾಮಾನ್ಯರು ಈ ವಿಚಾರದಲ್ಲಿ ಯಾವ ರೀತಿ ನರಳುತ್ತಿದ್ದಾರೆ ಎನ್ನುವುದನ್ನು ನೋಡಬೇಕಾಗಿದೆ. ಮಾನ್ಯ ಸಚಿವರು ಸರ್ಕಾರದ ಪಾಲಿಸಿ ಮತ್ತು ಬೃಹತ್ ಬೆಂಗಳೂರು ನಗರ ಪಾಲಿಕೆಯು ಎಷ್ಟು ದಂಡ ಹಾಕುತ್ತಿದ್ದಾರೆ ಮತ್ತು ಏನೇನೂ ಮಾಡಿದ್ದಾರೆ ಎಂಬುದನ್ನು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಆದರೆ, ಕೋವಿಡ್-19 ಬಂದಂತಹ ಸಂದರ್ಭದಲ್ಲಿ seal down, lock down ಮಾಡಿದಂತಹ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಜನರು ಓಡಾಡುವುದಕ್ಕೆ ಆಗುತ್ತಿರಲಿಲ್ಲ. ಅಂತಹ ಪರಿಸ್ಥಿತಿ ಇತ್ತು. ನಮ್ಮಲ್ಲಿ ಕಾನೂನು ಬಹಳ ಇದೆ. ಆದರೆ, ಅದರಲ್ಲಿ ಎಷ್ಟು ಅನುಷ್ಠಾನಕ್ಕೆ ಬರುತ್ತದೆ ಎನ್ನುವುದು ಬಹಳ ಮುಖ್ಯ. ಆದ್ದರಿಂದ, ಈ ಮಾಫಿಯಾ ಗುತ್ತಿಗೆದಾರರ ಕೈಯಲ್ಲಿದೆ, ಇದನ್ನು ಯಾವ ರೀತಿ ಸುಧಾರಣೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳು ಇದೆಯೇ? ಸುಮಾರು ರೂ.800/- ಗಳಿಂದ 1000/- ದಂಡವನ್ನು ಹಾಕುವುದಕ್ಕೆ ಹೇಳಿದ್ದಾರೆ. ಈ ಕಾನೂನನ್ನು ಉಲ್ಲಂಘನೆ ಮಾಡಿರುವುದಕ್ಕೆ ಇಲ್ಲಿಯವರೆಗೆ ಎಷ್ಟು ದಂಡವನ್ನು ಸಂಗ್ರಹಣೆ ಮಾಡಲಾಗಿದೆ ಎಂಬುದನ್ನು ಹೇಳುವುದಕ್ಕೆ ತಮ್ಮಲ್ಲಿ ಏನಾದರೂ ವರದಿ ಇದ್ದರೆ, ಅದನ್ನು ಸದನಕ್ಕೆ ತಿಳಿಸಿದರೆ ಬಹಳ ಒಳ್ಳೆಯದು.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು, ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರದಲ್ಲಿ ಎಲ್ಲ ವಿವರಗಳನ್ನು ಒದಗಿಸಿದ್ದೇವೆ. ಮಾನ್ಯ ಸದಸ್ಯರು ಮೊದಲನೆಯದಾಗಿ, ರಸ್ತೆ ಬದಿಗಳಲ್ಲಿ ಹಾಕುವಂತಹ ಕಸದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದನ್ನು ಸಂಪೂರ್ಣವಾಗಿ GPS ಮುಖಾಂತರ ಸರ್ವೆ ಮಾಡಿದ್ದೇವೆ. ಸುಮಾರು 2370 spot ಗಳನ್ನು ಅಂದರೆ, ಎಲ್ಲಿ ಯಾವ ರೀತಿ ಕಸ ಹಾಕುತ್ತಾರೆ ಎಂಬುದನ್ನು ಗುರುತಿಸಲಾಗಿದೆ. ಇದರಲ್ಲಿ ಈಗಾಗಲೇ 600 ಅನ್ನು clear ಮಾಡಿದ್ದೇವೆ. ಮುಂದಿನ ಮುರ್‍ನಾಲ್ಕು ತಿಂಗಳಿನಲ್ಲಿ ಬಹುಶಃ ಇದೆಲ್ಲವನ್ನು clear ಮಾಡುತ್ತೇವೆ. ಇದು ಅನಾರೋಗ್ಯದ ಮತ್ತು ಪರಿಸರ ಹಾನಿಗೆ ಬಹಳ ಮುಖ್ಯವಾಗಿ ಇರುವಂತಹದ್ದು. ಇನ್ನೂಳಿದ 4 ಸಾವಿರ ಟನ್‌ಗಳಷ್ಟು ಕಸವನ್ನು ವಾಹನಗಳಲ್ಲಿ ಮನೆ ಮನೆಗೆ ಹೋಗಿ ಸಂಗ್ರಹಣೆ ಮಾಡುತ್ತಿದ್ದಾರೆ. ಅಷ್ಟು ದೊಡ್ಡ ಪ್ರಮಾಣದ ಕಸ ಬೆಂಗಳೂರಿನ ಮನೆ ಮನೆಗಳಿಂದ ಬರುತ್ತಿದೆ. ಇನ್ನಿತರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

commercial area ಕಸ ಎಲ್ಲವೂ ಸೇರಿದರೆ ಸುಮಾರು ಆರರಿಂದ ಆರುವರೆ ಸಾವಿರ ಟನ್‌ಗಳಷ್ಟು ಕಸ ಪ್ರತಿದಿವಸ ಉತ್ಪಾದನೆಯಾಗುತ್ತದೆ. ಹಾಗಾಗಿ, ಇದರ ನಿರ್ವಹಣೆ ಒಂದು ಸವಲಾಗಿದೆ. ರಸ್ತೆ ಬದಿಯಲ್ಲಿ ಕಸ ಬೀಳುವುದಕ್ಕೆ ಏನು ಕಾರಣವೆಂದರೆ, ಕಸವನ್ನು ಸಂಗ್ರಹಣೆ ಮಾಡಿದ ನಂತರ ಕೆಲವರು ಕಸವನ್ನು ರಸ್ತೆಯ ಬದಿಗೆ ಹಾಕುತ್ತಾರೆ. ಅದರಲ್ಲೂ ವಿಶೇಷವಾಗಿ commercial establishments. ಮಾನ್ಯ ಸದಸ್ಯರು ಹೇಳಿದಂತೆ, ಇದರ ದುರುಪಯೋಗವನ್ನು ಪಡೆದುಕೊಳ್ಳುವಂತಹ ಒಂದು ವರ್ಗವಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಸವನ್ನು ಸಂಗ್ರಹಣೆ ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ಬೇಕಾದಂತಹ ಸಿಬ್ಬಂದಿ ಮತ್ತು ಅದಕ್ಕೆ ಬೇಕಾದಂತಹ ಯಂತ್ರೋಪಕರಣಗಳ ಮೇಲೆ ಹಿಡಿತವಿಟ್ಟುಕೊಂಡು ಕಾಲಕಾಲಕ್ಕೆ ಬಿಬಿಎಂಪಿಗೆ ಮತ್ತು ಸರ್ಕಾರಕ್ಕೆ ಸವಾಲಿಗಿರುವಂಥದ್ದು, ನಾವು ಇದನ್ನು ಬಹಳ strict ಮಾಡುವುದಕ್ಕೆ ಹೋದರೆ, ಆ ಕಸವನ್ನು ಎಲ್ಲಿದ್ದರಲ್ಲಿ ಹಾಕುವಂತಹ ರೀತಿಯಲ್ಲಿ ಈ ಹಿಂದೆ ಘಟನೆಗಳು ಆಗಿರುತ್ತವೆ.

ಮಾನ್ಯ ಸಭಾಪತಿಯವರೇ, ನಾವು ಅದನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡುವುದಕ್ಕೆ ಎಲ್ಲಾ ರೀತಿಯ ಒಂದು scientific ಆಗಿ Garbage Vulnerable Points (GVP) ಅನ್ನು ಮಾಡುತ್ತಿದ್ದೇವೆ. ಇದು ಈ ಹಿಂದೆ ಇರಲಿಲ್ಲ. ಇದನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ಮಾನ್ಯ ಸದಸ್ಯರು ಎಷ್ಟು ದಂಡ ಸಂಗ್ರಹಣೆಯಾಗಿದೆ ಎನ್ನುವಂತಹ ಮಾಹಿತಿಯನ್ನು ಕೇಳಿದ್ದಾರೆ. ಈಗ ಆ ಮಾಹಿತಿ ನನ್ನ ಬಳಿ ಇಲ್ಲ. ನಂತರ ಖಂಡಿತವಾಗಿ ಆ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ. ಮತ್ತೆ ಈ contractors ರವರನ್ನು ನಿಯಂತ್ರಿಸುವುದಕ್ಕೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಬಹಳ ಒಂದು ದೊಡ್ಡ ಸ್ವಚ್ಛ ಭಾರತ್ ಕಾರ್ಯಕ್ರಮ ಇತ್ತು. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮತ್ತು ಸಚಿವರು ಎಲ್ಲರೂ ಪರಕೆಗಳನ್ನು ಹಿಡಿದುಕೊಂಡು ರಸ್ತೆಯ ಮೇಲೆ ನಿಂತಿದ್ದರು. ಆ ಕಾರ್ಯಕ್ರಮ ಎಷ್ಟು ಯಶ್ವಸಿಯಾಗಿದೆ ಎನ್ನುವುದನ್ನು ನೋಡಬೇಕೆಂದರೆ, ನಮ್ಮ ಬೆಂಗಳೂರು ನಗರದಲ್ಲಿರುವಂತಹ ತ್ಯಾಜ್ಯ ವಿಲೇವಾರಿಯನ್ನು ನೋಡಿದರೆ ಗೊತ್ತಾಗುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರರವರು ಕೋವಿಡ್-19 ಬಂದ ನಂತರ ಪೌರ ಕಾರ್ಮಿಕರಿಗೆ ರಸ್ತೆಗಳನ್ನು ಸ್ವಚ್ಛ ಮಾಡುವಂತಹವರಿಗೆ hand gloves ಮಾತ್ರ ಕೊಟ್ಟಿದ್ದಾರೆ. ನಾವು ಸ್ವಚ್ಛ ಮಾಡುವವರನ್ನು ನೋಡಿದಾಗ, ಅವರ ಕಾಲಿನಲ್ಲಿ ಚಪ್ಪಲಿ ಇರುವುದಿಲ್ಲ. ಬೆಂಗಳೂರು ನಗರದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಣೆಯಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ನಮ್ಮ ಪೌರ ಕಾರ್ಮಿಕರಿಗೆ ಕೇವಲ gloves ಕೊಡುವುದರ ಜೊತೆಗೆ gumboot ಗಳನ್ನು ಮತ್ತು ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಸರ್ಕಾರ ಏನಾದರೂ ಕ್ರಮಗಳನ್ನು ತೆಗೆದುಕೊಂಡಿದ್ದೇಯೇ? ಏಕೆಂದರೆ, ಇದು ಸಹ ಬಹಳ ಮುಖ್ಯವಾದಂತಹ ವಿಚಾರ. ಸ್ವಚ್ಛ ಭಾರತ್ ಕಾರ್ಯಕ್ರಮ ಎಷ್ಟು ಮಟ್ಟಿಗೆ ಯಶ್ವಸಿಯಾಗಿದೆ ಎನ್ನುವುದು ಈ ಉತ್ತರದಲ್ಲಿ ನಮಗೆ ಗೊತ್ತಾಗುತ್ತದೆ. ಸುಮಾರು 10 ಸಾವಿರ metric ton ಕ್ಕಿಂತ ಹೆಚ್ಚು ಪ್ರತಿದಿವಸ ಬರುವಂತಹ garbage ಅನ್ನು ಯಾವ ರೀತಿ disposal ಮಾಡಿದ್ದಾರೆ ಎಂದರೆ, ಕೆಲವು ಕಡೆಗೆ ಹೋದರೆ garbage hill ಅನ್ನು ನೋಡಬಹುದು. ಅದರಿಂದ, ಏನೇನೂ ಅನಾಹುತ ಆಗುತ್ತಿದೆ ಎನ್ನುವುದನ್ನು ಇವರು ಗಮನಕ್ಕೆ ತೆಗೆದುಕೊಂಡಿಲ್ಲ. ಅದಕ್ಕೆ ನಾನು ತಮ್ಮ ಮೂಲಕ ಮನವಿ ಮಾಡಿದ್ದು ಏನೆಂದರೆ, ಮಾನ್ಯ ಮುಖ್ಯ ಮಂತ್ರಿಯವರು ಸದನಕ್ಕೆ ಬಂದಿದ್ದರೆ ಚೆನ್ನಾಗಿತ್ತು. ಏಕೆಂದರೆ, ಇದು ಬಹಳ ಗಂಭೀರವಾದ ವಿಚಾರ. ಏಕೆಂದರೆ, ಇದು ಕೇವಲ ಬೆಂಗಳೂರು ನಗರದ ಪರಿಸರದ ವಿಚಾರವಲ್ಲ, ಇದನ್ನು ಆರೋಗ್ಯ ಇಲಾಖೆಯವರು ಸಹ ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಏನು ಕ್ರಮಗಳನ್ನು ಜರುಗಿಸುತ್ತಾರೆ? ಮಾನ್ಯ ಸಚಿವರು commercial establishment ಹೇಳಿದ್ದಾರೆ. ಅದೊಂದು ಸತ್ಯ. ಅದನ್ನು ಯಾರು ಸಹ ಮುಟ್ಟುತ್ತಿಲ್ಲ. ಮನೆಗಳ ಕಸ ಅಷ್ಟೊಂದು ಬರುತ್ತಿಲ್ಲ. ಮನೆಗಳ ಬಳಿ plastic bag ನಲ್ಲಿಟ್ಟಿರುತ್ತಾರೆ. ಪೌರ ಕಾರ್ಮಿಕರು ಬಂದು ಅನ್ನು ತೆಗೆದುಕೊಂಡು ಹೋಗುತ್ತಾರೆ. ಈ commercial garbage ಯಾವ ರೀತಿ handle ಮಾಡುತ್ತೀರಿ ಮತ್ತು ಪೌರ ಕಾರ್ಮಿಕರಿಗೆ ಯಾವ ರೀತಿ ರಕ್ಷಣೆ ಕೊಡುತ್ತೀರಿ ಎನ್ನುವುದನ್ನು ಈ ಸದನದ ಮೂಲಕ ತಿಳಿಸಿದರೆ ಅವರಿಗೆ ಬಹಳ ಒಳ್ಳೆಯದು ಆಗುತ್ತದೆ. .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಸುಮಾರು 18 ಸಾವಿರ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ, garbage handle ಮಾಡುವಂತಹ ಪೌರಕಾರ್ಮಿಕರಿಗೆ gloves ಕೊಟ್ಟಿದ್ದೇವೆ. ಇನ್ನೂ gumboots ಗಳನ್ನು ಕೊಡುವ ಬಗ್ಗೆ ಹೇಳುವುದಾದರೆ, gumboots ಗಳನ್ನು ಕೊಡುವುದಕ್ಕೆ ಏನು ತೊಂದರೆ ಇಲ್ಲ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಆದರೆ, ಅವುಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ಅವರು ಬಳಕೆ ಮಾಡುವಂತಹದ್ದು ಬಹಳ ಕಡಿಮೆ. ನಾವು ನೋಡುತ್ತೇವೆ. ಈಗ ನಮಗೆ gumboots ಎಷ್ಟು ದಿವಸ ಬಳಸುವುದಕ್ಕೆ ಆಗುತ್ತದೆ? ಹಾಗಾಗಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ ಯಾವ ತರಹದ gumboots ಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತೇನೆ. ಪೌರ ಕಾರ್ಮಿಕರಿಗೆ ಕೊಡುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಖಂಡಿತವಾಗಿ, ಈ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದ ಮಾಡಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಮಾನ್ಯ ಸದಸ್ಯರು ಈ commercial ಬಗ್ಗೆ ಹೇಳಿದ್ದಾರೆ. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಅವರಿಗೆ heavy penalty ಅನ್ನು ಹಾಕಿ ಮಾಡುತ್ತೇವೆ. ಎಲ್ಲೆಲ್ಲಿ ಅವರು repeat ಮಾಡುತ್ತಾರೆ. ಅಂತಹವರ ವಿರುದ್ಧ ಕಾನೂನು ರೀತಿ ಕ್ರಮಗಳನ್ನು ಮತ್ತು ಜೊತೆಗೆ commercial establishment ನ licensing ಅನ್ನು ಸ್ಥಗಿತ ಮಾಡುವುದಕ್ಕೆ ಬಿಬಿಎಂಪಿ ಕಾನೂನಿನಡಿಯಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆ, ಆ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ, ನಾನು ಇದನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪೌರಕಾರ್ಮಿಕರು gumboot ಹಾಕುವುದಿಲ್ಲವೆಂದು ಅಲ್ಲ, ಮಾನ್ಯ ಪ್ರಧಾನ ಮಂತ್ರಿಯವರು ಈಗಾಗಲೇ ಪೌರಕಾರ್ಮಿಕರ ಕೆಲಸದಲ್ಲಿ ಆಧ್ಯಾತ್ಮಿಕವಾದ ಸುಖ ಸಿಗುತ್ತದೆ ಎಂದು ಬನಾರಸ್‌ನಲ್ಲಿ ಹೇಳಿದ್ದಾರೆ. ಪೌರಕಾರ್ಮಿಕರಲ್ಲಿ ಬಹಳಷ್ಟು ಮಂದಿ ಅನಕ್ಷರಸ್ಥರು ಇದ್ದಾರೆ. ನಾವು ಅವರಿಗೆ ತರಬೇತಿ ಕೊಟ್ಟು gumboot ಗಳನ್ನು ಹಾಕಿಕೊಳ್ಳಬೇಕೆಂದು compulsory or mandatory ಮಾಡಿದಾಗ, ಅವರು ಹಾಕಿಕೊಳ್ಳುತ್ತಾರೆ. ಏಕೆಂದರೆ, ನಮ್ಮ ಆರೋಗ್ಯವನ್ನು ರಕ್ಷಣೆ ಮಾಡುವಂತಹವರ ಪೌರಕಾರ್ಮಿಕರ ಆರೋಗ್ಯವನ್ನು ನಾವು ರಕ್ಷಣೆ ಮಾಡಲಿಲ್ಲವೆಂದರೆ ಹೇಗೆ? ಮಾನ್ಯ ಸಚಿವರು ಅವರಿಗೆ ಸೌಲಭ್ಯಗಳನ್ನು ಕೊಡುವುದಲ್ಲಿ ನಮಗೆ ಅಡಚಣೆಗಳು ಇಲ್ಲವೆಂದು ಹೇಳಿದ್ದಾರೆ. ಆದರೆ, ಅಲ್ಲಿ ಬಹಳಷ್ಟು ರೀತಿಯ ಅಡಚಣೆಗಳು ಇವೆ. ಪೌರಕಾರ್ಮಿಕರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಏಕೆಂದರೆ, ನಮ್ಮ ಬೆಂಗಳೂರು ನಗರದಲ್ಲಿರುವಂತಹ ಜನರ ಆರೋಗ್ಯವನ್ನು ಕಾಪಾಡುವಂತಹ ಕೆಲಸವನ್ನು ಮೊಟ್ಟಮೊದಲಿಗೆ ಪೌರಕಾರ್ಮಿಕರು ಮಾಡುತ್ತಾರೆ. ಮಾನ್ಯ ಸಚಿವರು ದಯವಿಟ್ಟು ಅವರ ಆರೋಗ್ಯ ರಕ್ಷಣೆಗೆ ಏನು ಕ್ರಮ ಜರುಗಿಸುತ್ತಾರೆ ಎನ್ನುವುದನ್ನು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು., )**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(143)04-02-2021(12-00)ಎಂವಿ-ಬಿಎನ್‌ಎಸ್ **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೌರ ಕಾರ್ಮಿಕರಿಗೆ Gumboots ಕೊಡುವ ಬಗ್ಗೆ ಹೇಳಿದ್ದಾರೆ. ಅದನ್ನು ಸಹ ಒಂದು ಸಂದರ್ಭದಲ್ಲಿ ಕೊಡುತ್ತಿದ್ದೆವು. ನಾವು ಮತ್ತೆ ಅದನ್ನು ಪ್ರಾರಂಭ ಮಾಡುವುದಕ್ಕೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದನ್ನು ಮಾಡಿಸುವಂತಹ ಕೆಲಸವನ್ನು ಮಾಡುತ್ತೇವೆ. ಆಮೇಲೆ ಮಾನ್ಯ ಸದಸ್ಯರು ಕಂಟ್ರಾಕ್ಟರ್‌ಗಳ ಬಗ್ಗೆಯೂ ಸಹ ಹೇಳಿದ್ದಾರೆ. ಈಗ ಎಷ್ಟೋ ಬಾರಿ ಟೆಂಡರ್ ಆಗದ ರೀತಿ ನೋಡಿಕೊಳ್ಳುವಂತಹ ವ್ಯವಸ್ಥೆ ಇತ್ತು. ಈಗ ನಾವು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. ಈಗ ಒಂಭತ್ತು ವಾರ್ಡ್‌ಗಳಲ್ಲಿ ವರ್ಕ್ ಆರ್ಡರ್ ಕೊಟ್ಟಿದ್ದೇವೆ. ಉಳಿದಂತಹ ವಾರ್ಡ್‌ಗಳಿಗೂ ಕೂಡ ಆದಷ್ಟು ಬೇಗ ಟೆಂಡರ್ ಪ್ರಕ್ರಿಯೆ ಮುಗಿಸಿ ವರ್ಕ್ ಆರ್ಡರ್ ಕೊಡುವಂತಹ ಕೆಲಸ ಮಾಡುತ್ತೇವೆ. ಮತ್ತೆ ಅವರು ಸಂಗ್ರಹಿಸಿದಂತಹ ಕಸವನ್ನು ಸರಿಯಾಗಿ ಸಾಗಾಣಿಕೆ ಮಾಡುವುದಿಲ್ಲ. ಒಂದು ಕಡೆ ಇದ್ದಂತಹ ಕಸವನ್ನು ಹತ್ತು ಕಡೆ ಹರಡುವಂತಹ ಕೆಲಸವಾಗುತ್ತದೆ. Compactors ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ದೂರು ಸಹ ಬಂದಿತ್ತು. ಈಗ ಜಿ.ಪಿ.ಎಸ್. ಅಳವಡಿಸಿ, ಅದನ್ನು ನಿಯಂತ್ರಣ ಮಾಡುವಂತಹ ಕೆಲಸ ಮಾಡುತ್ತೇವೆ. ಒಟ್ಟಾರೆ ಬೆಂಗಳೂರು ಕಸ ವಿಲೇವಾರಿಗೆ ಹೊಸ ವಿಧಾನಗಳನ್ನು ಬಳಕೆ ಮಾಡಿ, ಇದು ಏನು ಬೃಹತ್ ಪ್ರಮಾಣದಲ್ಲಿದೆ, ಅದನ್ನು ನಿಯಂತ್ರಣ ಮಾಡುವುದಕ್ಕೆ ಮತ್ತು ಕಸ ವಿಲೇವಾರಿ ಸಮರ್ಪಕವಾಗಿ ಆಗುವುದಕ್ಕೆ ಏನು ಸಲಹೆ ಸೂಚನೆಗಳಿವೆ ಅವುಗಳನ್ನು ಸಹ ಸೇರಿಸಿಕೊಂಡು ಎಲ್ಲಾ ಕ್ರಮಗಳನ್ನು ಜರುಗಿಸುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲಿ ಮಾಫಿಯಾ ಇದೆಯೆಂದು ಅದನ್ನು ಒಪ್ಪಿಕೊಂಡಿರುವುದಕ್ಕೆ ಅವರಿಗೆ ಧನ್ಯವಾದಗಳು. ಮಾನ್ಯ ಸಚಿವರು ಅದನ್ನು ಸರಿಪಡಿಸುವುದಕ್ಕೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲಿ ಟೆಂಡರ್ ಆಗದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಇದು ವರ್ಷಾನುಗಟ್ಟಲೆಯಿಂದ ನಡೆಯುತ್ತಿದೆ ಎಂದು ಅವರು ಸತ್ಯವನ್ನು ಒಪ್ಪಿಕೊಂಡಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳು. ಆದುದರಿಂದ ಆದಷ್ಟು ಬೇಗ ಅದಕ್ಕೆ ಪರಿಹಾರವನ್ನು ಸಹ ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ 90 ವಾರ್ಡ್‌ಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದು, ವರ್ಕ್ ಆರ್ಡರ್ ಇಶ್ಯು ಆಗಿದೆ. ಇನ್ನು ಉಳಿದಂತಹ ವಾರ್ಡ್‌ಗಳ ಟೆಂಡರ್ ಪ್ರಕ್ರಿಯೆ ಈಗಾಗಲೇ ನಡೆಯುತ್ತಿದೆ. ಅದರ ಕರಡು ಸಿದ್ಧತೆ ಆಗಿದೆ. ಅದು ಆದ ತಕ್ಷಣ ಅಲ್ಲೂ ಕೂಡ ಆ ಕೆಲಸವನ್ನು ಮಾಡುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ತೆಗೆದಿರುವಂತಹ ಪ್ರಶ್ನೆ, ಬಹಳಷ್ಟು ಗಂಭೀರವಾಗಿರುವಂತಹ ಪ್ರಶ್ನೆ. ಮಾನ್ಯ ಸಚಿವರು ಉತ್ತರವನ್ನು ಹೇಳುವುದಕ್ಕೆ ಪ್ರಯತ್ನವನ್ನು ಪಡುತ್ತಿದ್ದಾರೆ. ಅವರು ಉತ್ತರ ಕೊಡುವುದಕ್ಕೆ ಸಮರ್ಥರಿದ್ದಾರೆ. ಆದರೆ, ಅವರಿಗೆ ಮಾಹಿತಿ ಕೊರತೆ ಇದೆ. ಇದು ಬೆಂಗಳೂರಿಗೆ ಸಂಬಂಧಪಟ್ಟಿರುವಂತಹ ಒಂದು ಗಂಭೀರವಾದಂತಹ ಪ್ರಶ್ನೆ. ದಯಮಾಡಿ ಈ ವಿಷಯವನ್ನು ಯಾವೊತ್ತಾದರು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಬಹಳಷ್ಟು ಗಂಭೀರವಾಗಿರುವುದಕ್ಕೋಸ್ಕರವಾಗಿ, ಮಾನ್ಯ ಸಚಿವರು ಅಧಿಕಾರಿಗಳಿಂದ ಚೀಟಿಯಲ್ಲಿ ಮಾಹಿತಿಯನ್ನು ಪಡೆದು ಉತ್ತರವನ್ನು ನೀಡುತ್ತಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಒಂದು ನಿಮಿಷ ಮಾನ್ಯ ಎಂ.ನಾರಾಯಣಸ್ವಾಮಿಯವರೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಅವರನ್ನು ಹೊಗಳುತ್ತಿದ್ದೇನೆ, ನಾನೇನು ಅವರನ್ನು ತೆಗಳುತ್ತಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೆ, ಒಂದು ನಿಮಿಷದಲ್ಲಿ ಮುಗಿಸಬೇಕು. ಈ ಪ್ರಶ್ನೆ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಕೇಳಿರುವುದು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾವು ಎಲ್ಲೂ ಕೂಡ ಅವರು ಕೇಳಿರುವಂತಹ ಪ್ರಶ್ನೆಗಳಿಗೆ ಮಾಹಿತಿಯನ್ನು ಮರೆಮಾಚುವಂತಹ ಕೆಲಸವನ್ನು ಮಾಡಿಲ್ಲ. ಹಲವಾರು ಕಂಟ್ರಾಕ್ಟರ್‌ಗಳಿಂದ ಹಿಡಿದು ಪೌರಕಾರ್ಮಿಕರವರೆಗೂ ಏನು ವಿಷಯಗಳನ್ನು ಎತ್ತಿದ್ದಾರೆ, ಅವುಗಳಿಗೆ ಪ್ರಾಮಾಣಿಕವಾಗಿ ಉತ್ತರ ಹೇಳಿದ್ದೇನೆಯೇ ಹೊರತು ಯಾವುದೇ ರೀತಿಯಲ್ಲಿ ಮರೆಮಾಚುವಂತಹ ಕೆಲಸ ಮಾಡಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ, ಇದರಲ್ಲಿ ಎಷ್ಟು ಅಡಗಿದೆ ಎನ್ನತಕ್ಕಂಥದ್ದನ್ನು...

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಎಲ್ಲವನ್ನು ಸಹ ಹೇಳಿದ್ದಾರೆ. ಆದುದರಿಂದ, ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡುವುದಕ್ಕೆ ಬೇರೆ ಸಮಯವನ್ನು ನಿಗದಿಪಡಿಸಿ.

**ಉಪ ಸಭಾಪತಿಯವರು:–** ಆಯಿತು. ಮಾನ್ಯ ಸದಸ್ಯರೆ ನೀವು ಮಾನ್ಯ ಸಚಿವರಿಗೆ ಲಿಖಿತವಾಗಿ ನೀಡಿ. ಮಾನ್ಯ ಮಂತ್ರಿಗಳು ಉತ್ತರವನ್ನು ನೀಡುತ್ತಾರೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ 2370 ಬ್ಲಾಕ್ ಸ್ಪಾಟ್‌ಗಳೆಂದು ಹೇಳಿದ್ದಾರೆ. ದಯಮಾಡಿ ಬಿಬಿಎಂಪಿ ಆಯುಕ್ತರು ಸಹ ಇಲ್ಲೇ ಕುಳಿತಿದ್ದಾರೆ. ಈಗ ಒಂದೇ ಒಂದು ಝೋನ್‌ನಲ್ಲಿ 2370 ಬ್ಲಾಕ್ ಸ್ಪಾಟ್‌ಗಳು ಸಿಗುತ್ತವೆ. ಅದನ್ನು ಖಾಲಿ ಮಾಡುವುದಕ್ಕೆ ಆಗುತ್ತಿಲ್ಲ. ಆ ಏರಿಯಾದಲ್ಲಿರುವಂತಹ ಎನ್.ಜಿ.ಓ. ಮತ್ತು ವೆಲ್‌ಫೇರ್ ಅಸೋಸಿಯೇಷನ್‌ರವರೆ ಸ್ವಚ್ಛ ಮಾಡಿಕೊಳ್ಳುತ್ತಿದ್ದಾರೆ. ಇವತ್ತಿನ ದಿವಸ ಈ ರೀತಿಯ ಪರಿಸ್ಥಿತಿ ಇದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ವೆಲ್‌ಫೇರ್ ಅಸೋಸಿಯೇಷನ್ ಮತ್ತು ಎನ್.ಜಿ.ಓ. ರವರ ಸಹಕಾರ ಬೇಕೇ ಬೇಕು. ಯಾವುದೇ ಊರಿನಲ್ಲಿ ಮತ್ತು ಯಾವುದೇ ಮಹಾನಗರದಲ್ಲಿ ಹಾಗೂ ಬೃಹತ್ ಪ್ರಮಾಣದ ಮಹಾನಗರಗಳಲ್ಲಿ ನಾವು Residents' Welfare Association ಮತ್ತು ಎನ್.ಜಿ.ಓ. ಗಳ ಸಹಕಾರವನ್ನು ಎಲ್ಲರೂ ಕೂಡ ಪಡೆದುಕೊಳ್ಳುತ್ತಾರೆ. ಅದನ್ನು ಪಡೆದುಕೊಳ್ಳುವಂತಹ ಅವಶ್ಯಕತೆ ಇದೆ. ಏಕೆಂದರೆ, ಕಸ ಉತ್ಪತ್ತಿಯಾಗುವುದೇ ಜನರು ಬಳಕೆ ಮಾಡುವಂತಹ ವಸ್ತುಗಳಿಂದ. ಹಾಗಾಗಿ, ಬಳಕೆ ಮಾಡುವ ವಸ್ತುಗಳ ನಿಯಂತ್ರಣದಿಂದ ಹಿಡಿದು, ಅವರು ಕಸವನ್ನು ಯಾವ ರೀತಿ, ಯಾವ ಸಂದರ್ಭಕ್ಕೆ ಮತ್ತು ಎಲ್ಲಿ ಒದಗಿಸಬೇಕು ಎಂಬುದು ಅವರ ಸಹಕಾರದಿಂದಾಗುತ್ತದೆ. ಈಗ ಮನೆ ಮನೆಗಳಲ್ಲಿ ಸಂಗ್ರಹ ಮಾಡಬೇಕಾದರೆ, ಮನೆಯವರ ಸಹಕಾರವು ಬೇಕಾಗುತ್ತದೆ. ಅದರಿಂದ ಆ ಕೆಲಸವನ್ನು ಮಾಡುತ್ತಿದ್ದೇವೆ.

**ಉಪ ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೆ, ನೀವು ಮಾನ್ಯ ಸಚಿವರಿಗೆ ಲಿಖಿತವಾಗಿ ಉತ್ತರವನ್ನು ಕೇಳಿ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ಪ್ರಶ್ನೆ.

**ಉಪ ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೆ ಈಗಾಗಲೇ ಹನ್ನೆರಡು ಗಂಟೆಯಾಗಿದೆ. ನೀವು ವಿರೋಧ ಪಕ್ಷದ ಮುಖ್ಯ ಸಚೇತಕರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಇದು ಸದಸ್ಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಪ್ರಶ್ನೆ ಸಂಖ್ಯೆ: 396)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಶ್ನೆಗಳಿಗೂ ಮಾನ್ಯ ಕಾನೂನು ಸಚಿವರೆ ಉತ್ತರ ನೀಡುತ್ತಿದ್ದಾರೆ. ಇಲ್ಲಿ ಮುಖ್ಯಮಂತ್ರಿಗಳು ಮತ್ತು ಬೇರೆ ಮಂತ್ರಿಗಳು ಇಲ್ಲ. ನಾವು ಸದನದಲ್ಲಿ ಮಾನ್ಯ ಜಲ ಸಂಪನ್ಮೂಲ ಸಚಿವರನ್ನು ನೋಡಿಯೇ ಇಲ್ಲ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಅವರು ಸದನಕ್ಕೆ ಬರುವುದೇ ಇಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಜಲ ಸಂಪನ್ಮೂಲ ಸಚಿವರು ಉತ್ತರ ಕೊಟ್ಟಿರುವುದನ್ನೇ ನೋಡಿಲ್ಲ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಅವರು ಉತ್ತರವನ್ನು ಸಹ ಕೊಡುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಜಲ ಸಂಪನ್ಮೂಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಸದನದ ಗಮನಕ್ಕೆ ತಿಳಿಸುವುದೇನೆಂದರೆ, ಮಾನ್ಯ ಜಲ ಸಂಪನ್ಮೂಲ ಸಚಿವರಿಗೆ ಹುಷಾರಿಲ್ಲ. ಆದುದರಿಂದ ಅವರು ಆಸ್ಪತ್ರೆಗೆ ಹೋಗಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಆರೋಗ್ಯ ಸರಿಯಿಲ್ಲದ ದಿಸೆಯಿಂದ ಸನ್ಮಾನ್ಯ ಕಾನೂನು ಸಚಿವರು ಉತ್ತರವನ್ನು ಕೊಡುತ್ತಾರೆಂದು ಮಾನ್ಯ ಜಲ ಸಂಪನ್ಮೂಲ ಸಚಿವರು ಪತ್ರವನ್ನು ನೀಡಿದ್ದಾರೆ. ಮಾನ್ಯ ಮಂತ್ರಿಗಳೇ, ತಾವು ಮುಂದುವರೆಸಿ.

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಬೊಮ್ಮಾಯಿಯವರು ನೀರಾವರಿ ಸಚಿವರಾಗಿದ್ದಾಗ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ದಯಮಾಡಿ ಜಲ ಸಂಪನ್ಮೂಲ ಸಚಿವರಿಗೆ ಗೃಹ ಇಲಾಖೆಯನ್ನು ಕೊಟ್ಟುಬಿಡಿ.

**(ಗೊಂದಲ)**

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಅವರ ಇಲಾಖೆಯ ಪ್ರಶ್ನೆ ಇರುವ ದಿವಸ ಅವರು ಸದನಕ್ಕೆ ಬರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಹಿಂದೆ ಈ ಪ್ರಶ್ನೆಗೆ ಬೇರೆ ಸಚಿವರಿಂದ ಉತ್ತರವನ್ನು ಅಪೇಕ್ಷೆ ಮಾಡುವುದಿಲ್ಲ ಎಂದಾಗ, ಆ ಪ್ರಶ್ನೆಯನ್ನು ಮುಂದಕ್ಕೆ ಹಾಕಿ ನಂತರ ಉತ್ತರ ನೀಡಿದರು. ಸದನಕ್ಕೆ ಮಾನ್ಯ ಜಲಸಂಪನ್ಮೂಲ ಸಚಿವರು ಏಕೆ ಬರುವುದಿಲ್ಲ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಪ್ರಥಮ ಬಾರಿಗೆ ಆಗಿದ್ದರೆ, it is different. Repeatedly it is happening in this House. ಇದು ಬಹಳ ಪ್ರತಿಷ್ಠಿತವಾದ ನೀರಾವರಿ ಯೋಜನೆ. ಇದು ಉತ್ತರ ಕರ್ನಾಟಕದ ಭವಿಷ್ಯತ್ತಿನ ಪ್ರಶ್ನೆ. ಹಿಂದೆ ಅದಕ್ಕೆ ಅವರು ಉತ್ತರ ಕೊಡುವುದಕ್ಕೆ ಆ ಪ್ರಶ್ನೆಯನ್ನು ಎರಡ್ಮೂರು ದಿವಸ ಮುಂದಕ್ಕೆ ಹಾಕಿಸಿ, ಮತ್ತೊಮ್ಮೆ ಬಂದಾಗ ಮಾನ್ಯ ಸಚಿವರಿಂದ ಉತ್ತರ ಪಡೆದೆವು.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರೇ ನೀರಾವರಿ ಇಲಾಖೆಯನ್ನು ತೆಗೆದುಕೊಳ್ಳಲಿ. ನಿಜವಾಗಿಯೂ ಅವರ ಕೆಲಸದ ಬಗ್ಗೆ good stand ಇದೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ನೀರಾವರಿ ಸಚಿವರಾಗಿ ಕೆಲಸ ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾನ್ಯ ಬಸವರಾಜ ಬೊಮ್ಮಯಿಯವರು ನೀರಾವರಿ ಸಚಿವರಾಗಿ ಬಹಳ ಕೆಲಸ ಮಾಡಿದ್ದಾರೆ. ಅವರಿಗೆ ಸಾಮರ್ಥ್ಯವಿದೆ. ಅದರ ಬಗ್ಗೆ there is no second opinion. ಆದರೆ, ಸಂಬಂಧಪಟ್ಟಂತಹ ಮಂತ್ರಿಗಳು ಬಂದರೆ ಒಳ್ಳೆಯದು. ಏಕೆಂದರೆ, ಅವರು ಇಲಾಖೆಯನ್ನು handle ಮಾಡುತ್ತಾರೆ. ಆದುದರಿಂದ ಅವರು ಹೆಚ್ಚು ಬೆಳಕು ಚೆಲ್ಲುವಂತಹ ವಿಚಾರಗಳನ್ನು ಹೇಳಬಹುದು. ಇಲ್ಲಿ ಏನು ಲೋಪದೋಷಗಳಿವೆ ಮತ್ತು ಏನು tricky point ಗಳಿವೆ ಎಂದು ಅದನ್ನು ಹೇಳಬಹುದು. ಮಾನ್ಯ ಕಾನೂನು ಸಚಿವರು ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದಿಲ್ಲ. ಇದು ಸತ್ಸಂಪ್ರದಾಯವಲ್ಲ. ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಸಂಬಂಧಪಟ್ಟಂತ ಇಲಾಖೆಯ ಮಂತ್ರಿಗಳು ಸದನದಲ್ಲಿ ಇರಬೇಕಾಗಿರುವುದು ಬಹಳ ಮಹತ್ವವಾದುದು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಜಲ ಸಂಪನ್ಮೂಲ ಸಚಿವರು ಖಂಡಿತವಾಗಿ ಬರುತ್ತಿದ್ದರು. ಅವರು ಅನಾರೋಗ್ಯದ ಕಾರಣದಿಂದ ಸದನಕ್ಕೆ ಬಂದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಜಲ ಸಂಪನ್ಮೂಲ ಸಚಿವರು ಪ್ರಸ್ತುತ ಅಧಿವೇಶನದಲ್ಲಿ ಸದನಕ್ಕೆ ಬಂದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ನೋಡಿಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಗೃಹ ಮಂತ್ರಿಗಳು ಉತ್ತರ ನೀಡುತ್ತಾರೆ. ಏನಾದರೂ ತೊಂದರೆ ಇದ್ದರೆ ಮತ್ತೆ ನೋಡೋಣ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದನ ನಾಳೆಗೆ ಮುಗಿಯುತ್ತಿದೆ. ಈ ಸದನ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಿಲ್ಲ. ಅವರ ಇಲಾಖೆಗೆ ಸಂಬಂಧಪಟ್ಟಂತಹ ಪ್ರಶ್ನೆಗಳಿವೆ. ಇದನ್ನು 'ಚಿಂತಕರ ಚಾವಡಿ' ಮತ್ತು 'ಮೇಲ್ಮನೆ' ಎಂದು ಹೆಸರನ್ನು ಇಟ್ಟುಕೊಂಡಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ಮಾನ್ಯ ಗೃಹ ಸಚಿವರು ಸಮರ್ಪಕವಾಗಿ ಉತ್ತರವನ್ನು ನೀಡುತ್ತಾರೆ. ಅವರು ಅನುಭವದ ಹಿನ್ನೆಲೆಯಲ್ಲಿ ಉತ್ತರ ಕೊಡುತ್ತಿದ್ದಾರೆ, ಮತ್ತೇನಾದರು ಸಮಸ್ಯೆಗಳಾದರೆ ಆಗ ನೋಡೋಣ. ಮಾನ್ಯ ಮರಿತಿಬ್ಬೇಗೌಡರೆ ಅನೇಕ ಬಾರಿ ಬೇರೆ ಸಚಿವರಿಂದ ಉತ್ತರವನ್ನು ಕೊಡಿಸಿರುವುದನ್ನು ತಾವು ನೋಡಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರದೆ ಇರುವುದು ಅನಿವಾರ್ಯ. ಏಕೆಂದರೆ, ಅವರಿಗೆ ಬಹಳ ಜವಾಬ್ದಾರಿಯುತವಾದ ಕೆಲಸ ಕಾರ್ಯಗಳು ಇರುತ್ತವೆ. ಆದರೆ, ಜಲ ಸಂಪನ್ಮೂಲ ಸಚಿವರಿದ್ದಾರಲ್ಲ, mostly ಅವರು ಸರ್ಕಾರ ಬದಲಾವಣೆ ಮಾಡುವುದಕ್ಕೆ ದೆಹಲಿಗೆ ಹೋಗಿರಬಹುದು. ಆಡಳಿತ ಪಕ್ಷದವರು ಸತ್ಯವನ್ನು ಮರೆಮಾಚುತ್ತಿದ್ದಾರೆ. ಮಾನ್ಯ ಜಲ ಸಂಪನ್ಮೂಲ ಸಚಿವರು ಆ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಏನು ಸ್ವಾಮಿ, ಏಳು ದಿನಗಳ ಕಾಲ ಸದನ ನಡೆದಾಗ ಅವರು ಐದು ನಿಮಿಷ ಸದನಕ್ಕೆ ಮುಖ ತೋರಿಸಲಿಲ್ಲವೆಂದರೆ, ಅವರಿಗೆ ಬೃಹತ್ ಜಲ ಸಂಪನ್ಮೂಲ ಇಲಾಖೆಯೇ ಬೇಕು ಮತ್ತು ಮುಖ್ಯಮಂತ್ರಿ ಪಟ್ಟ ಬೇಕೆಂದು ಈ ರೀತಿ ಲಾಬಿ ಮಾಡಿ ತೆಗೆದುಕೊಂಡಂತಹ ಮಾನ್ಯ ಮಂತ್ರಿಗಳು ಸದನಕ್ಕೆ ಮುಖ ತೋರಿಸುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಶ್ನೆಗಳಿಗೂ ಮಾನ್ಯ ಗೃಹ ಸಚಿವರೆ ಉತ್ತರ ಕೊಟ್ಟರೆ ಹೇಗೆ?

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಕೇಳುವಂತಹ ಪ್ರಶ್ನೆ ಏನೆಂದರೆ, 'ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಇದರ ಅಡಿಯಲ್ಲಿ ಬರುವಂತಹ ಹುದ್ದೆಗಳು ಎಷ್ಟು? ಖಾಲಿ ಇರುವಂತಹ ಹುದ್ದೆಗಳು ಎಷ್ಟು' ಎಂದು ಕೇಳಿರುವಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ನಿಖರವಾದ ಉತ್ತರವನ್ನು ನೀಡಿದ್ದಾರೆ. ಇದು ಒಂದು ಬೃಹದಾಕಾರವಾದ ಇಲಾಖೆಯಾಗಿರುವುದರಿಂದ ಸುಮಾರು 2490 ಹುದ್ದೆಗಳು ಸೃಷ್ಟಿಯಾಗಿದ್ದು, ಇದರಲ್ಲಿ ಕೇವಲ 1334 ಹುದ್ದೆಗಳಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಅದರಲ್ಲೂ ಕೂಡ ಬಹಳ ಜನರು ನಿಯೋಜನೆ ಮೇಲೆ ಇರುವಂತಹ ಅಧಿಕಾರಿಗಳು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಲ್ಲಿ ಸುಮಾರು ಶೇಕಡಾ 50ರಷ್ಟು ಹುದ್ದೆಗಳು ಖಾಲಿಯಿವೆ. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಸುಮಾರು 1136 ಹುದ್ದೆಗಳು ಖಾಲಿಯಿವೆ. ಅಂದರೆ, ಶೇಕಡಾ 50ರಷ್ಟು ಖಾಲಿ ಹುದ್ದೆಗಳನ್ನು ಇಟ್ಟುಕೊಂಡು ಮೂರನೆ ಹಂತದ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಕಷ್ಟವಾಗುತ್ತದೆ. ಆ ಹಿನ್ನೆಲೆಯಲ್ಲಿ ಸಂಪೂರ್ಣವಾಗಿ ಎಲ್ಲಾ ಹುದ್ದೆಗಳನ್ನು ಶೀಘ್ರಗತಿಯಲ್ಲಿ ತುಂಬುವಂತಹ ಕೆಲಸವನ್ನು ಮಾಡಬೇಕು.

**(ಮುಂದು...)**

(144) 04.02.2021 12.10 LL-BNS **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ(ಮುಂದುವರೆದಿದ್ದು...):-**

ಅದನ್ನು ಯಾವ ಕಾಲಮಿತಿಯಲ್ಲಿ ಮಾಡುತ್ತಾರೆ ಎನ್ನುವುದನ್ನು ಸಹ ತಿಳಿಸಬೇಕೆಂಬ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಈ ಯೋಜನೆ 519.6 ರಿಂದ 524.256 ಎಫ್.ಆರ್.ಎಲ್. ಗೆ ಎತ್ತರಿಸುವಂತಹ ಸಂದರ್ಭದಲ್ಲಿ ಸುಮಾರು 1 ಲಕ್ಷದ 34 ಸಾವಿರ ಎಕರೆಯಷ್ಟು ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವಂತಹ ಪ್ರಕ್ರಿಯೆ ಇದರಲ್ಲಿ ನಡೆಯುತ್ತಿರುತ್ತದೆ. ಆ ಸಂದರ್ಭದಲ್ಲಿ ಸುಮಾರು 20 ಗ್ರಾಮಗಳನ್ನು ಸ್ಥಳಾಂತರ ಮಾಡಬೇಕು. ಆ 20 ಗ್ರಾಮಗಳಿಂದಾಗಿ ಸುಮಾರು 25 ಸಾವಿರ ಕುಟುಂಬಗಳು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕೇಂದ್ರಕ್ಕೆ ಹೋಗಬೇಕಾಗಿರುವಂತಹ ಸಂದರ್ಭದಲ್ಲಿ ಈ ಎಲ್ಲಾ ಅಧಿಕಾರಿಗಳ ಅವಶ್ಯಕತೆ ಅಲ್ಲಿರುತ್ತದೆ. ನಾವು ಈ ಯೋಜನೆಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಬೇಕಾದರೆ ಅಲ್ಲಿ ಅಧಿಕಾರ ವರ್ಗ/ಕಾರ್ಯಾಂಗ ವರ್ಗ ಅಲ್ಲಿ ಕಾರ್ಯ ಮಾಡಿದರೆ ಮಾತ್ರ ಈ ಯೋಜನೆ ಪೂರ್ಣಗೊಳ್ಳುತ್ತದೆ. ಆ ಹಿನ್ನೆಲೆಯಲ್ಲಿ ಆದಷ್ಟು ಬೇಗ ಈ ಕಾರ್ಯ ಮಾಡಬೇಕಾಗುತ್ತದೆ. ಸುಮಾರು ಭೂಮಿಗಳನ್ನು ಈಗಾಗಲೇ ಭೂಸ್ವಾಧೀನ ಮಾಡಿಕೊಂಡು, ಪ್ರಸ್ತುತ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಟ್ಟಿರುವಂಥದ್ದು ಆ ಭಾಗದ ಜನರಿಗೆ ಬಹಳ ನೋವನ್ನು ತರುವಂತಹ ಸಂಗತಿಯಾಗಿದೆ. ಆದುದರಿಂದ, ಆದಷ್ಟು ಬೇಗನೆ ಖಾಲಿ ಇರುವಂತಹ 1334 ಹುದ್ದೆಗಳನ್ನು ಭರ್ತಿ ಮಾಡಿ, ಈ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ನಿರಾಣಿ ಹಣಮಂತ ರುದ್ರಪ್ಪನವರು ಬಹಳಷ್ಟು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿರುತ್ತಾರೆ. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಒಟ್ಟಾರೆಯಾಗಿ ಮಂಜೂರಾದ 2490 ಖಾಯಂ ಹುದ್ದೆಗಳಲ್ಲಿ, 1354 ಹುದ್ದೆಗಳು ಖಾಯಂ ನೌಕರಾಗಿದ್ದು, 2 ಹುದ್ದೆಗಳು ದಿನಗೂಲಿ ನೌಕರರು ಕಾರ್ಯನಿರ್ವಹಿಸುತ್ತಿರುತ್ತಾರೆ. ಅಂದಾಜು 1136 ಹುದ್ದೆಗಳು ಅಂದರೆ, ಶೇಕಡ 50 ರಷ್ಟು ಹುದ್ದೆಗಳು ಖಾಲಿ ಇರುತ್ತವೆ. ಅಲ್ಲದೇ, ಇದು ಕರ್ನಾಟಕ ರಾಜ್ಯದ ಅತ್ಯಂತ ಪ್ರತಿಷ್ಠಿತ ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಯಾಗಿದೆ. ಅದರಲ್ಲಿಯೂ ಅದು 3ನೇ ಹಂತದ ಯೋಜನೆಯಾಗಿದೆ. ಈ ಯೋಜನೆ ಪೂರ್ತಿಯಾದರೆ, ಇಡೀ ರಾಜ್ಯದ ವರಮಾನ ಹೆಚ್ಚಾಗುವುದಲ್ಲದೇ, ಇಡೀ ರಾಷ್ಟ್ರದ ವರಮಾನ ಕೂಡ ಹೆಚ್ಚಾಗುತ್ತದೆ. ಈ ಯೋಜನೆಯಿಂದ 14 ಲಕ್ಷ ಎಕರೆಯಷ್ಟು ಜಮೀನಿಗೆ ನೀರಾವರಿಯಾಗುವಷ್ಟು ಅಂದರೆ, 130 ಟಿ.ಎಂ.ಸಿ. ನೀರು ಬಳಕೆ ಮಾಡುವಂಥದ್ದಾಗಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ರೀತಿ ಇನ್ನೂ ಸುಮಾರು 20 ಗ್ರಾಮಗಳನ್ನು ಸ್ಥಳಾಂತರ ಮಾಡಬೇಕು ಮತ್ತು ಅವರಿಗೆ ಪುನರ್‌ವಸತಿ ಕೇಂದ್ರ ಕಲ್ಪಿಸಬೇಕು. ಅದರ ಜೊತೆಗೆ, ಸುಮಾರು 1 ಲಕ್ಷ 35 ಸಾವಿರ ಎಕರೆಯಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು. ಇಡೀ ಏಷ್ಯಾ ಖಂಡದಲ್ಲಿಯೇ ಅತೀ ದೊಡ್ಡ ಪಟ್ಟಣವಾದ ಬಾಗಲಕೋಟೆ ಪಟ್ಟಣ ಈ ಯೋಜನೆಯಿಂದ ಮುಳುಗಡೆಯಾಗುತ್ತದೆ. ಸುಮಾರು 1 ಲಕ್ಷ ಜನ ವಸತಿಯುಳ್ಳ ದೊಡ್ಡ ಪಟ್ಟಣ ಇಡೀ ಏಷ್ಯಾ ಖಂಡದಲ್ಲಿ ಎಲ್ಲಿಯಾದರೂ ಮುಳುಗಡೆ ಆಗುತ್ತಿದ್ದರೆ ಅದು ಬಾಗಲಕೋಟೆ ಪಟ್ಟಣ. ಅಲ್ಲಿಯೂ ಕೂಡ 519 ರ ಮೇಲ್ಪಟ್ಟ ಇರುವಂತಹ ಜನವಸತಿಯನ್ನು ನವ ನಗರಕ್ಕೆ ಸ್ಥಳಾಂತರ ಮಾಡಬೇಕು. ಈ ಯೋಜನೆಯಲ್ಲಿ ಅತ್ಯಂತ ಬೃಹದಾಕಾರವಾದ ಕೆಲಸ ಇರುತ್ತದೆ. ಇಂತಹ ಸಂದರ್ಭದಲ್ಲಿ ಈ ಯೋಜನೆಗೆ ಮಂಜೂರಾದ ಹುದ್ದೆಗಳಲ್ಲಿ ಕೇವಲ 1354 ಹುದ್ದೆಗಳನ್ನು ಮಾತ್ರ ತುಂಬಿ, ಸುಮಾರು ಅರ್ಧದಷ್ಟು ಹುದ್ದೆಗಳು ಖಾಲಿ ಇದ್ದರೆ ಹೇಗೆ? ಈ ಯೋಜನೆ ಸುಮಾರು 7 ಜಿಲ್ಲೆಗಳಿಗೆ ಫಲಪ್ರದವಾದ ಯೋಜನೆಯಾಗಿರುತ್ತದೆ. ಅವುಗಳೆಂದರೆ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಾಗಲಕೋಟೆ, ಬಿಜಾಪುರ ಮತ್ತು ಗದಗ ಜಿಲ್ಲೆಗಳಿಗೆ ಫಲಪ್ರದವಾಗುತ್ತದೆ. ಉತ್ತರ ಕರ್ನಾಟಕದ ಅರ್ಧ ಭಾಗ ನೀರಾವರಿಯಿಂದ ಸಂಪತ್ಭರಿತವಾಗುತ್ತದೆ. ಇಂತಹ ಪ್ರತಿಷ್ಠಿತ ನೀರಾವರಿ ಯೋಜನೆಗೆ ಇಷ್ಟೊಂದು ಹುದ್ದೆಗಳು ಖಾಲಿ ಇರುತ್ತವೆ. ಈ ಬಗ್ಗೆ ಸಾಕಷ್ಟು ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಇದ್ದು, ಅದನ್ನು ಇಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಈ ಯೋಜನೆಗೆ ಹಣದ ವಹಿವಾಟು ಬೇರೆ ರೂಪದಲ್ಲಿ ನಾವು ಮಾತನಾಡುತ್ತೇವೆ.

**ಉಪ ಸಭಾಪತಿಯವರು:–** ಆ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಸಮಯ ಕೂಡ ಇರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಕೂಡ ಇಂತಹ ವಿಷಯಗಳಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಬೇಕಾಗುತ್ತದೆ. 'ಈ ಪರಿಸ್ಥಿತಿ ಏತಕ್ಕೆ ಈ ರೀತಿ ಬಂದಿದೆ' ಎಂದು ತಾವು ಆ ಪೀಠದಲ್ಲಿ ಕುಳಿತು ಸರ್ಕಾರಕ್ಕೆ ಹೇಳಬಹುದು. ಆ ರೀತಿ ಹೇಳಬಾರದೆಂದು ಇರುವುದಿಲ್ಲ. ಕೇವಲ ಸದನ ನಡೆಸಿಕೊಂಡು ಹೋಗುವುದು ಅಷ್ಟೇ ಅಲ್ಲದೇ, ಸರ್ಕಾರ ತಪ್ಪು ಮಾಡಿದಾಗ, ಎಚ್ಚರಿಕೆ ನೀಡಬೇಕು. ಒಂದು ವೇಳೆ ಮಂತ್ರಿಗಳು ಸದನಕ್ಕೆ ಹಾಜರಾಗದೇ ಇದ್ದರೆ, ಮುಂದಿನ ಅಧಿವೇಶನದಲ್ಲಿ ಮಂತ್ರಿಗಳು ಹಾಜರಿರಬೇಕೆಂದು ಆದೇಶ ಕೊಡಬೇಕು. ನಾವೆಲ್ಲರೂ ಕೂಡ ಆ ಪೀಠಕ್ಕೆ ಅಪಾರವಾದ ಗೌರವ ನೀಡುತ್ತೇವೆ. ಜೊತೆಗೆ, ಪೀಠದಿಂದ ಆದೇಶವಾದರೆ ಸರ್ಕಾರ ಕೂಡ ಬಹಳ ಎಚ್ಚರಿಕೆಯಿಂದ ಕೆಲಸ ಮಾಡುತ್ತದೆ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಹಿಂದಿನ ಜಲಸಂಪನ್ಮೂಲ ಸಚಿವರು ಬಹಳ ಸಮರ್ಥವಾಗಿ ಕೆಲಸ ಮಾಡಿದ್ದಾರೆ. I have got a personal regard for the concerned Minister. ಇದಕ್ಕೆ ಏನು ಕಾಯಕಲ್ಪ ಕಲ್ಪಿಸುತ್ತಾರೆಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಉಪ ಸಭಾಪತಿಯವರು:–** ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)(ಜಲಸಂಪನ್ಮೂಲ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಎಷ್ಟು ಮಂಜೂರಾದ ಹುದ್ದೆಗಳಿವೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದು, ಅದಕ್ಕೆ ಉತ್ತರ ನೀಡಿದ್ದೇವೆ. ಅದರಲ್ಲಿ ಖಾಯಂ ಆಗಿ 1354 ಇಂಜಿನಿಯರ್ಸ್, ಅಂದರೆ, ಗ್ರೂಪ್ 'ಎ' ಮತ್ತು 'ಬಿ' ಸೇರಿ ನಮ್ಮಲ್ಲಿ ಕೆಲಸ ಮಾಡುತ್ತಿದ್ದಾರೆ. ತದನಂತರ, ಬಾಕಿ ಇರುವಂತಹ ಹುದ್ದೆಗಳನ್ನು ಯಾವಾಗ ತುಂಬುತ್ತಾರೆ ಎಂಬ ಪ್ರಶ್ನೆ ಕೇಳಿರುತ್ತಾರೆ. ತಮಗೆಲ್ಲಾ ಗೊತ್ತಿರುವ ವಿಚಾರದಂತೆ, ಸಿವಿಲ್ ಇಂಜಿನಿಯರ್ಸ್ ಮತ್ತು ಇತರೆ ಇಂಜಿನಿಯರ್ಸ್‌ಗೆ ಮಾತ್ರ ಇಲಾಖೆ ಲೋಕೋಪಯೋಗಿ ಇಲಾಖೆ ಇತ್ತು. ನಮ್ಮ ಅಧಿಕಾರ ಅವಧಿಯಲ್ಲಿ ಅದನ್ನು ವಿಂಗಡನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದು, ಈಗ ಅದು ಒಂದು ಅಂತಿಮ ಹಂತಕ್ಕೆ ಬಂದಿರುತ್ತದೆ. ಜಲಸಂಪನ್ಮೂಲ ಇಲಾಖೆಗೆ ಇಂಜಿನಿಯರ್ಸ್‌ನ್ನು ನಿಯೋಜನೆ ಮಾಡಬೇಕಾದರೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲೋಕೋಪಯೋಗಿ ಇಲಾಖೆಯಿಂದಲೇ ನಿಯೋಜನೆ ಮಾಡುವಂತಹ ಪರಿಸ್ಥಿತಿ ಬಹಳ ಹಿಂದಿನಿಂದಲೂ ಇದೆ. ಹೀಗಾಗಿ, ಎಷ್ಟೇ ಇಂಜಿನಿಯರ್ಸ್ ಹುದ್ದೆಗಳಿಗೆ ನಾವು ನೇಮಕಾತಿ ಮಾಡಿದರೂ ಸಹ ನೀರಾವರಿ ಇಲಾಖೆಯಲ್ಲಿ ಪ್ರಾಜೆಕ್ಟ್ ಏರಿಯಾ ಇದೆ ಎಂದು ಯಾರೂ ಕೂಡ ಬರುವುದಿಲ್ಲ. ಅದಕ್ಕೆ ನಾವು ನೀರಾವರಿ ಇಲಾಖೆಯಲ್ಲಿಯೇ ನಿರ್ದಿಷ್ಟವಾಗಿ ನೇಮಕಾತಿಯನ್ನು ಪ್ರಾರಂಭ ಮಾಡಿರುತ್ತೇವೆ. ಆ ಸಂದರ್ಭದಲ್ಲಿ ಸುಮಾರು 2 ಸಾವಿರಕ್ಕಿಂತ ಹೆಚ್ಚು ಅವೊತ್ತಿನ ದಿವಸ ನೇಮಕಾತಿ ಮಾಡಿರುತ್ತೇವೆ. ಅಷ್ಟು ಆಗಿದ್ದರೂ ಸಹ ನಿರ್ದಿಷ್ಟವಾಗಿ ಪ್ರಾಜೆಕ್ಟ್ ಏರಿಯಾಗೆ ಇಂಜಿನಿಯರ್ಸ್ ಬರುವುದಕ್ಕೆ ಹಿಂದೆ-ಮುಂದೆ ನೋಡುವಂತಹ ಒಂದು ವಸ್ತು ಸ್ಥಿತಿ ಇದೆ. ಹೀಗಾಗಿ, ಈ ಹುದ್ದೆಗಳ ವಿಂಗಡನೆ ಈಗ ಆಗುತ್ತಿದೆ. ಬಹುತೇಕವಾಗಿ ಕೆಲವೇ ತಿಂಗಳಿನಲ್ಲಿ ಅದು ವಿಂಗಡನೆ ಆಗುತ್ತದೆ. ಅದಾದ ನಂತರ, ಲೋಕೋಪಯೋಗಿ ಇಲಾಖೆಯಿಂದ ನಮ್ಮ ನೀರಾವರಿ ಇಲಾಖೆಗೆ ಎಷ್ಟು ಹುದ್ದೆಗಳು ಲಭ್ಯವಾಗುತ್ತದೆ ಎನ್ನುವುದು ನಿಖರವಾಗಿ ಗೊತ್ತಾಗುತ್ತದೆ. ಬಾಕಿ ಏನು ಹುದ್ದೆಗಳು ಉಳಿಯುತ್ತವೆ, ಅದಕ್ಕೆ ನೇರ ನೇಮಕಾತಿ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಯು.ಕೆ.ಪಿ. 3ನೇ ಹಂತದ ಯೋಜನೆ ಏನಿದೆ, ಅದು ಬಹಳ ಮಹತ್ವವಾದದ್ದೆಂದು ನನಗೂ ಸಹ ಗೊತ್ತಿದೆ. ಅತೀ ಹೆಚ್ಚು ನೀರಾವರಿ ಮಾಡುವಂಥ ಯೋಜನೆ ಇದಾಗಿದ್ದು, ಇದರಿಂದ ಸುಮಾರು 15 ಲಕ್ಷಕ್ಕೂ ಅತೀ ಹೆಚ್ಚು ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಇದರಲ್ಲಿ 9 ಪ್ರಾಜೆಕ್ಟ್‌ಗಳು ಇದ್ದು, 7 ಜಿಲ್ಲೆಗಳಿಗೆ ಆ ಯೋಜನೆ ವ್ಯಾಪ್ತಿ ಇದೆ. ಎಲ್ಲದಕ್ಕಿಂತಲೂ ದೊಡ್ಡದಾಗಿ R and R (Rehabilitation and Reconstruction) ಏನಿದೆ ಇದು ಇಡೀ ಏಷ್ಯಾ ಖಂಡದಲ್ಲಿಯೇ ಇವೊತ್ತಿನ ದಿನಮಾನಗಳಲ್ಲಿ ಬಹಳ ದೊಡ್ಡ replacement, displacement ಆಗುವಂಥದ್ದು ಇದೆ. ಹೀಗಾಗಿ, ಈ ಯೋಜನೆಗೆ ಇನ್ನೂ ಹೆಚ್ಚಿನ ಸಿಬ್ಬಂದಿಗಳ ಅವಶ್ಯಕತೆ ಇದೆ. ಅದನ್ನು ನಾವು ಮಾಡುವ ಸಲುವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಆ 9 ಪ್ರಾಜೆಕ್ಟ್‌ಗಳು ಹಲವಾರು ಹಂತಗಳಲ್ಲಿ ಪ್ರಗತಿಯಾಗುತ್ತಿರುವುದರಿಂದ, bifurcation of Department and recruitment, ಎರಡಕ್ಕೂ ಕೂಡ ಪ್ರಥಮ ಆದ್ಯತೆಯಲ್ಲಿ ಚಾಲನೆ ಕೊಡುವುದಕ್ಕೆ ಜಲಸಂಪನ್ಮೂಲ ಇಲಾಖೆ ಕೆಲಸ ಮಾಡುತ್ತದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸದರಿ ಪ್ರಶ್ನೆಗೆ ಬಹಳ ವಿವರವಾದ ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ, ಭಾರತ ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಈ ಯೋಜನೆ ಬಹಳ ಮಹತ್ವಪೂರ್ಣವಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯಾಗಿದ್ದು, ಇದನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡುವ ಆಲೋಚನೆ ಸರ್ಕಾರದ ಮುಂದಿದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರದ ಇಚ್ಛೆ ಏನೆಂದರೆ, ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಬೇಕೆಂದು ಇದೆ. ಆದರೆ, ಫೈನಲ್ ನೋಟಿಫಿಕೇಷನ್ ಇನ್ನೂ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಅದು ಆಗಿರುವುದಿಲ್ಲ. ಆದರೆ, ರಾಷ್ಟ್ರೀಯ ಯೋಜನೆಗೆ ಏನೆಲ್ಲಾ criteria ಬೇಕು ಅದೆಲ್ಲವನ್ನೂ ನಾವು ಈಗಾಗಲೇ ಸಿದ್ಧಪಡಿಸುತ್ತಿದ್ದೇವೆ. ಸದರಿ ನೋಟಿಫಿಕೇಷನ್ ಆದ ತಕ್ಷಣವೇ ಆದಷ್ಟು ಬೇಗನೆ, ಖಂಡಿತವಾಗಿಯೂ ರಾಷ್ಟ್ರೀಯ ಯೋಜನೆಗೆ ಏನೆಲ್ಲಾ ಕ್ಲಿಯರೆನ್ಸ್ ಬೇಕು ಅದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಹಿಂದೆ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಇದೇ ರೀತಿ ಸುಮಾರು 8-10 ವರ್ಷಗಳಿಂದ ಪ್ರಯತ್ನ ಮಾಡಿದ್ದಕ್ಕಾಗಿ ಆ ಯೋಜನೆ ಇವೊತ್ತಿನ ದಿವಸ ರಾಷ್ಟ್ರೀಯ ಯೋಜನೆಯಾಗಿದೆ. ಇದು ಅದಕ್ಕಿಂತಲೂ ದೊಡ್ಡ ಯೋಜನೆಯಾಗಿದೆ; ಇದು ಅದಕ್ಕಿಂತಲೂ ಹೆಚ್ಚು ಜನರಿಗೆ ಅನುಕೂಲವಾಗುವಂಥದ್ದು; ಅದಕ್ಕಿಂತಲೂ ಹೆಚ್ಚು ಜನ ಇದರಲ್ಲಿ suffer ಆಗುವಂಥದ್ದು, because of R and R. ಆದ್ದರಿಂದ, ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಮಾಡಿಕೊಳ್ಳುವುದಕ್ಕೆ ಎಲ್ಲಾ ತಯಾರಿ ಮಾಡಿಕೊಳ್ಳುತ್ತೇವೆ. ಇದರಲ್ಲಿ ಫೈನಲ್ ನೋಟಿಫಿಕೇಷನ್ ಆದ ತಕ್ಷಣವೇ ಅದಕ್ಕೆ ಕ್ಲಿಯರೆನ್ಸ್ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:-** ಒಂದು ಪ್ರಶ್ನೆಗೆ ಈಗಾಗಲೇ ಸುಮಾರು 20 ನಿಮಿಷಕ್ಕಿಂತಲೂ ಹೆಚ್ಚು ಸಮಯ ಆಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಸಾಮಾನ್ಯ ಪ್ರಶ್ನೆಯಲ್ಲ. ಇದರಲ್ಲಿ ಬಹಳ ಜನರ ಬದುಕಿನ ಪ್ರಶ್ನೆ ಇದೆ. ಹಾಗಾಗಿ, ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಆದರೂ ಮಾಡಲಿ ಅಥವಾ ಅಂತರಾಷ್ಟ್ರೀಯ ಯೋಜನೆ ಆದರೂ ಮಾಡಲಿ. ಅದಕ್ಕೆ ನಮ್ಮ ಅಭ್ಯಂತರವೇನು ಇಲ್ಲ. ಆದರೆ, beg, borrow or steal but, they have to complete this project. ಏಕೆಂದರೆ, 80% of the project work is already over. ಅಂದರೆ, 2 ಲಕ್ಷ 30 ಸಾವಿರ ಎಕರೆ ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಂಡಿರುತ್ತೇವೆ. ಇನ್ನೂ ಉಳಿದಿರುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇವಲ 1 ಲಕ್ಷದ 30 ಸಾವಿರ ಎಕರೆ ಮಾತ್ರ. ಈ ಯೋಜನೆಯಿಂದ 170 ಹಳ್ಳಿಗಳು ಮುಳುಗಡೆಯಾಗಿದ್ದು, ಆ ಹಳ್ಳಿಗಳಿಗೆ ಈಗಾಗಲೇ ಪುನರ್‌ವಸತಿ ಕೇಂದ್ರ ಕಲ್ಪಿಸಲಾಗಿರುತ್ತದೆ. ಆದರೆ, ಇನ್ನೂ ಕೇವಲ 20 ಹಳ್ಳಿಗಳು ಮಾತ್ರ ಉಳಿದಿರುತ್ತವೆ. ಅಂದರೆ, ಶೇಕಡ 20 ರಷ್ಟು ಕೆಲಸ ಮಾತ್ರ ಉಳಿದಿರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯ 1ನೇ ಮತ್ತು 2ನೇ ಹಂತದಲ್ಲಿ ಶೇಕಡ 80 ರಷ್ಟು ಕೆಲಸ ಏನು ಮಾಡಿದ್ದೇವೆ, ಅದನ್ನು ನಮ್ಮ ರಾಜ್ಯದ ಸಂಪನ್ಮೂಲದಿಂದಲೇ ಮಾಡಿರುತ್ತೇವೆ. ಉಳಿದ ಯೋಜನೆಗೆ ಕೇಂದ್ರದಿಂದ ಹಣ ತರುತ್ತೇವೆಂದು...

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:-ಮಾನ್ಯ ಸಭಾಪತಿಯವರೇ, ಮಾನ್ಯ ಕಾಂತರಾಜ್‌ರವರು ಕೇಳಿದ ಪ್ರಶ್ನೆ ಮಹತ್ವವಾದುದು. ಡಾ: ಸರೋಜಿನಿ ಮಹಿಷಿ ವರದಿಯಲ್ಲಿ, ಈ ನಾಡಿನ ಮಕ್ಕಳಿಗೆ ಉದ್ಯೋಗದಲ್ಲಿ ಅನ್ಯಾಯವಾಗುತ್ತಿದೆ, ಬೇರೆ ರಾಜ್ಯದವರು ಇಲ್ಲಿ ಉದ್ಯೋಗ ಮಾಡುತ್ತಿದ್ದಾರೆ ಎಂದಿದೆ. ಈ ವರದಿ ಇನ್ನೂ ಕಾರ್ಯಗತ ಮಾಡಿಲ್ಲ. ಬಿಎಂಆರ್‌ಸಿಎಲ್‌ನಲ್ಲಿ Deputy General Manager ಮಟ್ಟದ ಅಧಿಕಾರಿಗಳ 22 ಜನರ ಪೈಕಿ 21 ಜನ ಬೇರೆ ರಾಜ್ಯದವರಿದ್ದಾರೆ. ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಂತಹ ಅಧಿಕಾರ ಅವರಿಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಈ ರಾಜ್ಯದ ಬಹುತೇಕ ಜನರಿಗೆ ಉದ್ಯೋಗ ಸಿಗುವುದಿಲ್ಲ. ಅವರು ಹಣದ ಆಮಿಷದಿಂದಾಗಲಿ ಅಥವಾ ತಾವು ಯಾವ ರಾಜ್ಯದಿಂದ ಬಂದಿರುತ್ತಾರೋ ಆ ರಾಜ್ಯದ ಜನರಿಗೆ ಉದ್ಯೋಗ ಕೊಡುತ್ತಾರೆ. ಇದರಿಂದ ಇಲ್ಲೇ ಬೆಳೆದಂತಹ ನಮ್ಮ ಮಕ್ಕಳಿಗೆ ಅನ್ಯಾಯವಾಗುತ್ತದೆ. ಇದನ್ನೂ ಹೇಗಾದರೂ ಮಾಡಿ ಬಿಎಂಆರ್‌ಸಿಎಲ್ ನಲ್ಲಿ ಸರಿಪಡಿಸಬೇಕು. ಇಲ್ಲಿ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ಇರುವುದಿಲ್ಲ. ಗುತ್ತಿಗೆ ಆಧಾರದ ಮೇಲೆ ಉದ್ಯೋಗಕ್ಕೆ ತೆಗೆದುಕೊಳ್ಳುವ ವಿಚಾರ ಇವರ ವ್ಯಾಪ್ತಿಗೆ ಬರುವುದಿಲ್ಲ. ಇದರಿಂದ ನಮ್ಮ ಜನರಿಗೆ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗುತ್ತದೆ. ಇದಕ್ಕೆ ಸೂಕ್ತವಾದ ಕಟ್ಟಪ್ಪಣೆ ಮಾಡಬೇಕು. ನಿರ್ದೇಶನಗಳನ್ನು ನೀಡಬೇಕು, ಗೈಡ್‌ಲೈನ್ಸ್ ಕೊಡಬೇಕು.

ಮಾನ್ಯ ಸಭಾಪತಿಯವರೇ, ಆರ್ಟಿಕಲ್ 14 ಪ್ರಕಾರ ಡಿಸ್ಕ್ರಿಮಿನೇಷನ್ ಮಾಡುವುದಕ್ಕೆ ಬರುವುದಿಲ್ಲ. Place of birth ಎಂದಿದೆ. ಹಾಗಿದ್ದಾಗಿಯೂ ಕೂಡ ನಮ್ಮ ರಾಜ್ಯದ ಮಕ್ಕಳಿಗೆ ಹೆಚ್ಚು ಉದ್ಯೋಗ ದೊರೆಯುವಂತೆ ಕೆಲವೊಂದು ವಿಚಾರಗಳಲ್ಲಿ ಸರ್ಕಾರ ಗೈಡ್‌ಲೈನ್ಸ್ ಕೊಡುವುದಕ್ಕೆ ಅವಕಾಶ ಇದೆ. ಆದ್ದರಿಂದ, ಬಿಎಂಆರ್‌ಸಿಎಲ್ ನಲ್ಲಿ ನಮ್ಮ ರಾಜ್ಯದವರು ಗುತ್ತಿಗೆ ಆಧಾರದ ಮೇಲೆ ನೇಮಕ ಆಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಆಗ ಮಾತ್ರ ರಾಜ್ಯದ ಜನರಿಗೆ ನ್ಯಾಯ ಒದಗಿಸಿದ ಹಾಗೆ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ಮೆಟ್ರೋ ನಿಗಮದಲ್ಲಿ ಖಾಯಂ ನೌಕರರು 1500 ಜನ. ನೇರ ಕಂಪನಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರು 1200 ಜನ. ಏಜೆನ್ಸಿಯಿಂದ ಭರ್ತಿಯಾದವರು 5000 ಜನ. ನಿಗಮದ 22 ಆಯಕಟ್ಟಿನ ಕೀ-ಪೋಸ್ಟ್‌ಗಳ ಜಾಗದಲ್ಲಿ ಶ್ರೀ ಮಂಜುನಾಥ್ ಸ್ವಾಮಿ ಎನ್ನುವವರನ್ನು ಬಿಟ್ಟರೆ ಮಿಕ್ಕ 21 ಜನರು ತಮಿಳುನಾಡಿನವರು. 1500 ಜಾಗದಲ್ಲೇನು ಖಾಯಂ ಆಗಿ ಕೆಲಸ ಮಾಡುತ್ತಾರೋ ಅವರಿಗೆ ಯಾವುದೇ ಕಾರಣಕ್ಕೂ ಆಯಕಟ್ಟಿನ ಹುದ್ದೆಗಳನ್ನು ಕೊಡುವುದಿಲ್ಲ. ನಮ್ಮ ರಾಜ್ಯದ ಐಎಎಸ್ ಅಧಿಕಾರಿಯಾದ ಮಾನ್ಯ ಅಜಯ್ ಸೇಠ್‌ರವರು ಇದರ ಎಂ.ಡಿ.ಆಗಿದ್ದಾರೆ. ಇವೆಲ್ಲವೂ ಸಹ ಅವರ ನಜ಼ರ್‌ಗೆ ಬರುವುದೇ ಇಲ್ಲ. ಬೇರೆ ಯಾರು ಅಧಿಕಾರಿಗಳಿರುತ್ತಾರೋ ಅವರು ಹೊರಗಿನ ರಾಜ್ಯದವರಿಗೆ ಉದ್ಯೋಗ ಕೊಡುತ್ತಾರೆ. ನಾನು ಕೂಡ 2-3 ಸಲ ಪತ್ರ ಬರೆದಿದ್ದೇನೆ, ಮೌಖಿಕವಾಗಿ ಕೂಡ ಹೇಳಿದ್ದೇನೆ. ಆದರೆ ಈ ನಿಟ್ಟಿನಲ್ಲಿ ಅವರು ಯಾವುದೇ ರೀತಿಯ ಕ್ರಮಗಳನ್ನು ಕ್ರಮ ಕೈಗೊಂಡಿಲ್ಲ. ಅಲ್ಲಿರುವ ಒಬ್ಬ ಮನುಷ್ಯನ ಅಧಿಕಾರ ನಡೆಯುವುದರಿಂದ ಬೇರೆ ರಾಜ್ಯದವರಿಗೆ ಉದ್ಯೋಗ ಸಿಗುವಂತಾಗುತ್ತಿದೆ. ಅಲ್ಲಿ ನಮ್ಮ ರಾಜ್ಯದವರು ಶೇಕಡ 5ರಷ್ಟೂ ಇಲ್ಲ. ನಮ್ಮ ಮಕ್ಕಳಿಗೆ ಅಲ್ಲಿ ಉದ್ಯೋಗ ಸಿಗುವುದಿಲ್ಲ ಎನ್ನುವುದಾದರೆ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಕಳೆದ 10 ವರ್ಷಗಳಿಂದ ಕರ್ನಾಟಕದವರು ಏನು ಕೆಲಸ ಮಾಡುತ್ತಿದ್ದಾರೋ ಅವರ್‍ಯಾರಿಗೂ ಪದೋನ್ನತಿ ಆಗಿಲ್ಲ. ಇದು ಎಂ.ಡಿ.ಯವರ ಗಮನಕ್ಕೆ ಬರದೇ ಇರುವುದರಿಂದ ಕೆಳಗಿನ ಅಧಿಕಾರಿಗಳು ತಮ್ಮ ಅಧಿಕಾರವನ್ನು ಚಲಾಯಿಸುತ್ತಾರೆ. ಮಾನ್ಯ ಸಭಾಪತಿಯವರೇ, ಈ ನಿಟ್ಟಿನಲ್ಲಿ ಸರ್ಕಾರ ಒಂದು ನಿರ್ದಿಷ್ಟ ತೀರ್ಮಾನ ಮಾಡಬೇಕು. ಮಹಾರಾಷ್ಟ್ರ, ತಮಿಳುನಾಡು ಅಥವಾ ಆಂಧ್ರಪ್ರದೇಶಕ್ಕೆ ಹೋಗಿ ನೋಡಿದರೆ, ಅಲ್ಲಿ ಹೊರ ರಾಜ್ಯದವರು ಸರಿಯಾಗಿ 10 ಮಂದಿ ಕೂಡ ಕೆಲಸ ಮಾಡದೇ ಇರುವುದು ಕಂಡುಬರುತ್ತದೆ; ಅಲ್ಲೋ ಇಲ್ಲೋ ಒಬ್ಬೊಬ್ಬರು ಕೆಲಸ ಮಾಡುತ್ತಿರುತ್ತಾರೆ. ಬೆಂಗಳೂರಿನಲ್ಲಿ ಹೊರಗಿನ ರಾಜ್ಯದವರು ಜಾಸ್ತಿಯಾಗಿದ್ದಾರೆ. ಶೇಕಡ 21 ರಷ್ಟು ಜನ ಮಾತ್ರ ಕರ್ನಾಟಕದವರಿದ್ದಾರೆ. ಈಗಲೇ ಪರಿಸ್ಥಿತಿ ಹೀಗಾದರೆ ಮುಂದಿನ ಪರಿಸ್ಥಿತಿ ಏನಾಗಬಹುದು? ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಎಲ್ಲವೂ ಎಂ.ಡಿ.ಯವರ ಗಮನಕ್ಕೆ ಬರುವ ಹಾಗೆ ವ್ಯವಸ್ಥೆ ಮಾಡಬೇಕು. ನಿಯಮಗಳನ್ನು ಮಾಡಬೇಕು, ಎಂ.ಡಿ. ಗಮನಕ್ಕೆ ಬಂದರೆ ಅನ್ಯಾಯ ಆಗುತ್ತಿರುವುದು ಸರಿಹೋಗುತ್ತದೆ ಎಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :482 ನ್ನು ಕೇಳಿದ ಸಂದರ್ಭದಲ್ಲಿ, ಅನಿಯಂತ್ರಿತ ಮಾತಿನ ಓಘದಲ್ಲಿ "ಮಂತ್ರಿಗಳು ದುಡ್ಡು ತೆಗೆದುಕೊಂಡು ಕೆಲಸ ಮಾಡಿದ್ದಾರೆ" ಎನ್ನುವ ಒಂದು ಮಾತನ್ನು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(152)04-02-21/1.40/ಡಿಎಸ್-ಬಿಎನ್ಎಸ್

**ಶ್ರೀ ಎನ್.ರವಿಕುಮಾರ್(ಮುಂದು):-**

ನಾನು ಬಯ್ಯುತ್ತೇನೆ, ಕ್ಷಮೆ ಕೇಳುತ್ತೇನೆ. ಕಡತದಿಂದ ಆ ಶಬ್ದವನ್ನು ತೆಗೆದು ಹಾಕಿ. ಎಲ್ಲರೂ ಸೇರಿ ವಿಷಯವನ್ನು ಮುಗಿಸಿದ್ದೇವೆ. ಕಡತದಲ್ಲಿ ಹೋಗಿರುವುದನ್ನು ತೆಗೆದು ಹಾಕಿ. ಕ್ಷಮೆ ಕೇಳುವುದು ಸದಸ್ಯರ ದೊಡ್ಡತನ.

(ಗೊಂದಲ)

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಕಡತದಿಂದ ತೆಗೆದು ಹಾಕಿ ಎಂದು ಹೇಳುತ್ತಿದ್ದಾರೆ ಅಷ್ಟೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಈ ಪ್ರಶ್ನೆ ಮುಗಿದ ಮೇಲೆ ಅವರು ಹೇಳಲಿ. ಈ ಪ್ರಶ್ನೆ ನಡುವೆ ಅದು ಬರಬಾರು. ಈ ಪ್ರಶ್ನೆ ಮುಗಿದ ನಂತರ ತಾವು ಆ ಪ್ರಶ್ನೆ ಬಗ್ಗೆ ಪ್ರಸ್ತಾಪ ಮಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಹೇಳಿದೆ.

**ಸಭಾಪತಿಯವರು:-** ತಮಗೆ ಅವಕಾಶ ಕೊಟ್ಟಿರುವುದು ಅದನ್ನು ಹೇಳುವುದಕ್ಕಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಾವು ಅನುಮತಿಯನ್ನು ಕೊಟ್ಟಿದ್ದೀರಿ, ನಾನು ಹೇಳಿಬಿಡುತ್ತೇನೆ. ಕಡತದಿಂದ ಆ ಶಬ್ದವನ್ನು ತೆಗೆದು ಹಾಕಿ ಎಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ತಾವು ಆಮೇಲೆ ಕೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾಂತರಾಜ್ ರವರು ಬೆಂಗಳೂರು ಮೆಟ್ರೋ ರೈಲು ನಿಗಮದಲ್ಲಿರುವಂತಹ ಗುತ್ತಿಗೆದಾರರು ಮತ್ತು ಖಾಯಂ ಉದ್ಯೋಗಿಗಳ ಬಗ್ಗೆ ಅವರು ಕೇಳಿದ್ದಾರೆ. ಇದರಲ್ಲಿ ಎರಡು ರೀತಿಯ ನೇಮಕಾತಿಗಳಿವೆ. ಇದೊಂದು Limited Company where equity shares of both Central and State Governments are there. ಹೀಗಾಗಿ ಅಲ್ಲಿರುವಂತಹ M.D., E.D., Finance Directors ಕಂಪನಿ ಆಕ್ಟ್ ಪ್ರಕಾರ ಇರಬೇಕು, ಅವರು ಇರುತ್ತಾರೆ. ಇಲ್ಲಿ ನೇಮಕಾತಿ ಮಾಡುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡು ರೀತಿಯಲ್ಲಿ ಇದೆ. ಒಂದನೆಯದು, ಖಾಯಂ ನೇಮಕಾತಿ. ಅದಕ್ಕೆ Karnataka Examination Authority ಏನಿದೆ ಅದರ ಅನುಗುಣವಾಗಿ ಖಾಯಂ ನೇಮಕಾತಿಯಾಗುತ್ತದೆ. ಖಾಸಗಿಯಲ್ಲಿ ನೇಮಕಾತಿ ಮಾಡಿಕೊಳ್ಳುವುದು ಮೂರು ರೀತಿಯಲ್ಲಿ ಇದೆ. ಕಾಲ್‌ಫಾರ್ ಮಾಡಿ ಅವರ ಅನುಭವ, ವಯಸ್ಸು ಎಲ್ಲಾ ನೋಡಿಕೊಂಡು ನೇಮಕಾತಿ ಮಾಡುತ್ತಾರೆ. ಮತ್ತೊಂದು ಹೊರಗುತ್ತಿಗೆಯಲ್ಲಿ ನೇಮಕಾತಿ ಮಾಡಿಕೊಳ್ಳುತ್ತಾರೆ. ಅಂದರೆ, contract basis ಮೇಲೆ ನೇಮಕಾತಿ ಮಾಡಿಕೊಳ್ಳುತ್ತಾರೆ. ಇದೊಂದು ಪ್ರಾಜೆಕ್ಟ್ ಆಗಿರುವುದರಿಂದ ಖಾಯಂ ಆಗಿ ನೌಕರರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಪ್ರಾಜೆಕ್ಟ್ ಮುಗಿದ ಮೇಲೆ ಅವರ ಕೆಲಸ ಮುಗಿಯುತ್ತದೆ. ಇದರಲ್ಲಿ ಗುತ್ತಿಗೆ ಆಧಾರದ ಮೇಲೆ 1112 ಉದ್ಯೋಗಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಸದರಿ ಉದ್ಯೋಗಿಗಳಲ್ಲಿ 997 ಉದ್ಯೋಗಿಗಳು ಕರ್ನಾಟಕದವರಾಗಿದ್ದಾರೆ. ಆದರೆ ಹೊರ ಗುತ್ತಿಗೆಯಲ್ಲಿ ಅತೀ ಹೆಚ್ಚು ಬೇರೆಯವರು ಇದ್ದಾರೆ ಎನ್ನುವ ಆತಂಕವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ನೇಮಕಾತಿ ಮಾಡಿಕೊಳ್ಳುವುದು, ಹೊರ ಗುತ್ತಿಗೆ ಕೊಡುವಂಥದ್ದು ಅಲ್ಲಿನ ನಿರ್ದೇಶಕರು ಮಾಡಿದ್ದಾರೆ. ಅವರೆಲ್ಲಾ ಹೊರಗಿನವರು ಇದ್ದಾರೆ. ಹೀಗಾಗಿ ಹೊರ ರಾಜ್ಯದವರಿಗೆ ಆದ್ಯತೆ ಸಿಗುತ್ತಿದೆ ಎಂದು ಅವರೇನು ವ್ಯಕ್ತಪಡಿಸಿದ್ದಾರೆ. ಎಂ.ಡಿ. ಯವರ ಕೈಯಲ್ಲಿರಬೇಕು. ಎಂ.ಡಿ. ಯವರ ಕೈಯಲ್ಲಿ ಸಂಪೂರ್ಣವಾಗಿ ನಿಯಂತ್ರಣದಲ್ಲಿದ್ದರೆ ನಿಲ್ಲುತ್ತದೆಂದು ಹೇಳಿದ್ದಾರೆ. ಖಂಡಿತವಾಗಿಯೂ ಈ ಹೊರ ಗುತ್ತಿಗೆ, ಗುತ್ತಿಗೆ ನೇಮಕಾತಿಯನ್ನು ನಿರ್ದೇಶಕರು ಮಾಡುತ್ತಿದ್ದಾರೆ ಅದನ್ನು ಸಂಪೂರ್ಣವಾಗಿ ಎಂ.ಡಿ. ಯವರ ನಿಯಂತ್ರಣಕ್ಕೆ ಕೊಟ್ಟು ನಮ್ಮ ರಾಜ್ಯದ ಅರ್ಹತೆ ಇರುವಂಥವರಿಗೆ ಪ್ರಥಮ ಆದ್ಯತೆಯಲ್ಲಿ ಕೊಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದರ ಪ್ರಕಾರ ಮುಂದಿನ ದಿನಗಳಲ್ಲಿ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವುದಕ್ಕೆ ಎಂ.ಡಿ. ಯವರಿಗೆ ಅಧಿಕಾರವನ್ನು ಬಳಸುವುದಕ್ಕೆ ನಾವು ಸೂಚನೆಯನ್ನು ಕೊಡುತ್ತೇವೆ. ಎರಡನೆಯದಾಗಿ, ಯಾರ‍್ಯಾರನ್ನು ತೆಗೆದಿದ್ದಾರೆ ಎನ್ನುವಂಥದ್ದನ್ನು ಹೇಳಿದ್ದಾರೆ. ಯಾರ‍್ಯಾರನ್ನು ವಿನಾಕಾರಣ ತೆಗೆದಿದ್ದಾರೆ, ಕಿರುಕುಳ ಕೊಟ್ಟಿದ್ದರೆ ಅದರ ಬಗ್ಗೆಯೂ ಕ್ರಮ ತೆಗೆದುಕೊಳ್ಳುವುದಕ್ಕೆ ಎಂ.ಡಿ. ಯವರಿಗೆ ನಾನು ಸೂಚನೆ ಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, 2700 ಖಾಯಂ ನೌಕರರು ನೇರ ನೇಮಕಾತಿಯಾಗಿದ್ದಾರೆ. 5,000 ಜನರು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದಾರೆ. ನಾನು ಹೇಳುವುದೇನೆಂದರೆ, ಗುತ್ತಿಗೆ ಆಧಾರದ ಮೇಲೆ ಪತ್ರಿಕೆಯಲ್ಲಿ ಕಾಲ್‌ಫಾರ್ ಮಾಡಿ ತೆಗೆದುಕೊಂಡರೆ ತಪ್ಪಾಗುವುದಿಲ್ಲ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ಇಲ್ಲಿನ ಒಬ್ಬ ಮನುಷ್ಯ ಕನ್ನಡದಲ್ಲಿ ಮಾತನಾಡಿದ್ದಾನೆಂದು ನೌಕರಿಯಿಂದ ತೆಗೆದಿದ್ದಾರೆ. ನಮ್ಮ ರಾಜ್ಯದಲ್ಲಿದ್ದುಕೊಂಡು ಈ ರೀತಿ ಆಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಬಹಳ ಅಪಮಾನದ ಕೆಲಸ. ಪತ್ರಿಕೆಯಲ್ಲಿ ಕಾಲ್‌ಫಾರ್ ಮಾಡಿದರೆ ಅವರ ವಿಳಾಸ, ಹೆಸರು ಗೊತ್ತಾಗುತ್ತದೆ. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ ಕನ್ನಡಿಗರಿಗೆ ಪ್ರಥಮ ಆದ್ಯತೆ ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ನಾವು ನೇರವಾಗಿ ಬೆಂಗಳೂರು ಮೆಟ್ರೋ ರೈಲ್ವೆ ನಿಗಮದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವಾಗ ಪತ್ರಿಕೆಯಲ್ಲಿ ಕಾಲ್‌ಫಾರ್ ಮಾಡಿ ಸಂದರ್ಶನ ಮಾಡಿ ನೇಮಕಾತಿ ಮಾಡಿಕೊಳ್ಳುತ್ತೇವೆ. ಆದರೆ, ಈ ಹೊರ ಗುತ್ತಿಗೆಯಲ್ಲಿ ನೇಮಕಾತಿ ಮಾಡಿಕೊಳ್ಳುವಾಗ ಅದು ನಮ್ಮ ನಿಯಂತ್ರಣದಲ್ಲಿರುವುದಿಲ್ಲ. ಇದನ್ನು ನಿಯಂತ್ರಣ ಮಾಡುವುದಕ್ಕೆ ನಾನು ಎಂ.ಡಿ. ಯವರಿಗೆ ಸೂಚನೆ ಕೊಡುತ್ತೇನೆ.

**ಶ್ರೀ ಕಾಂತರಾಜ್ (ಬಿಎಂಎಲ್):–** ಮಾನ್ಯ ಸಭಾಪತಿಯವರೇ, ಹೊರ ಗುತ್ತಿಗೆದಾರರಿಗೆ ಕೆಲಸ ಕೊಡುವಾಗ ನೀವು ಕನ್ನಡಿಗರಿಗೆ ಇಷ್ಟು ಕೊಡಬೇಕೆಂದು ಒಂದು ಮಾನದಂಡವನ್ನು ಹಾಕಬೇಕು. ಭದ್ರತೆಯ ಉದ್ದೇಶಕ್ಕೆ ನೇಮಕಾತಿಯನ್ನು ಮಾಡಿಕೊಳ್ಳುತ್ತಾರೆ. ಈ ರೀತಿ ಇನ್ನು ಒಳ್ಳೊಳ್ಳೆಯ ಉದ್ಯೋಗಗಳಿವೆ. ನಮಗೆ ಗೊತ್ತಿರುವ ಹಾಗೆ ಒಳ್ಳೆಯ ಸಂಬಳವೂ ಇದೆ. ನಮ್ಮ ಕರ್ನಾಟಕದಲ್ಲಿ Ex-Servicemen ಗೂ ಉದ್ಯೋಗವನ್ನು ಕೊಡಿ. ಏಕೆಂದರೆ, ಬಿಹೆಚ್‌ಇಎಲ್, ಇಸ್ರೋನಲ್ಲಿ ನಮ್ಮ Ex-Servicemen ಅವರಿಗೆ ಉದ್ಯೋಗವನ್ನು ಕೊಡುತ್ತಿದ್ದಾರೆ. ಅವರು 15–20 ವರ್ಷ ಕೆಲಸ ಮಾಡಿಕೊಂಡು ಬಂದಿರುತ್ತಾರೆ. ನಮ್ಮಲ್ಲಿಯೂ ಅವರಿಗೆ ಉದ್ಯೋಗವನ್ನು ಕೊಡಿಸಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ಗಮನದಲ್ಲಿಟ್ಟುಕೊಂಡು ಕ್ರಮ ಜರುಗಿಸುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆ ಮಾಡಿ ಎಷ್ಟು ವರ್ಷಗಳಾಯಿತು, ನಮ್ಮ ಸರ್ಕಾರವೇ ಇದನ್ನು ಅನುಷ್ಠಾನಕ್ಕೆ ತರದಿದ್ದರೆ ಹೇಗೆ? ಅವರ ದಬ್ಬಾಳಿಕೆ ಯಾವ ಮಟ್ಟದಲ್ಲಿದೆ ಎಂದರೆ, ಮೆಟ್ರೋ ಸ್ಟೇಷನ್‌ನಲ್ಲಿ ಟಿಕೆಟ್ ಕೌಂಟರ್‌ಗಳಿವೆಯಲ್ಲಾ ಅಲ್ಲಿ ಯಾರು ಕೂಡ ಕನ್ನಡ ಭಾಷೆ ಮಾತನಾಡುವಂಥವರು ಇಲ್ಲ. ರೈಲಿನಲ್ಲಿ ಪ್ರಯಾಣ ಮಾಡತಕ್ಕಂಥವರು ಹಳ್ಳಿ ಜನರಿದ್ದಾರೆ, ಇಂಗ್ಲಿಷ್, ಹಿಂದಿ ಬರದಿರುವಂಥವರು ಪ್ರಯಾಣ ಮಾಡುತ್ತಾರೆ. ಆದರೆ ಆ ಕೌಂಟರ್‌ನಲ್ಲಿ ಕನ್ನಡದಲ್ಲಿ ಕೇಳಿದಾಗ ಅವರಿಗೆ ಅರ್ಥವಾಗುವುದಿಲ್ಲ. ಕೊನೆಗೆ ಅವರಿಗೆ ಟಿಕೆಟ್ ಕೊಡುವುದಿಲ್ಲ. ಕೊರೋನಾ ಇದ್ದಂತಹ ಸಂದರ್ಭದಲ್ಲಿ ಪಾಸ್ ಇದ್ದವರಿಗೆ ಮಾತ್ರ ರೈಲಿನಲ್ಲಿ ಪ್ರಯಾಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದರು. ಟಿಕೆಟ್ ವ್ಯವಸ್ಥೆ ಇರಲಿಲ್ಲ. ಪಾಸ್ ಇಲ್ಲದೆ ಕೌಂಟರ್‌ನಲ್ಲಿ ನಿಂತುಕೊಂಡು ಮಾತನಾಡಿದರೆ ಅವರಿಗೆ ಉತ್ತರ ಕೊಡದೆ ಅವರನ್ನು ಆಚೆ ಕಳುಹಿಸಿದ್ದಾರೆ. ದಯಮಾಡಿ ಟಿಕೆಟ್ ಕೌಂಟರ್‌ನಲ್ಲಿ ಕನ್ನಡಿಗರೇ ಇರುವ ಹಾಗೆ ಮಾಡಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇಲ್ಲಿ ಹಿರಿಯ ಹುದ್ದೆಗಳು ಏನಿದೆ ಇಲ್ಲಿ ಕೆಲಸ ಮಾಡತಕ್ಕಂಥವರೆಲ್ಲರೂ ಭಾರತೀಯ ರೈಲ್ವೆ ಮತ್ತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿರುವಂತಹ ಅಧಿಕಾರಿಗಳು. ಅದು ಜಿ.ಎಮ್. ಇರಬಹುದು, ಡಿ.ಜಿ.ಎಮ್. ಇರಬಹುದು. ಅವರೆಲ್ಲರೂ ಕೂಡ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಈ ಬಿಎಮ್‌ಆರ್‌ಸಿಎಲ್‌ನಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಮಾಡಿಲ್ಲ. ನಿಯಮಾವಳಿಗಳನ್ನು ಮಾಡಿದ್ದರೂ ಕೂಡ ಇದುವರೆಗೂ ಕೂಡ ಅಸಿಸ್ಟೆಂಟ್ ಇಂಜಿನಿಯರ್ ಆಗಲಿ, ಅಕೌಂಟ್ಸ್ ಆಫೀಸರ್ ಆಗಲಿ ಅಥವಾ ಅಡ್ಮಿನಿಸ್ಟ್ರೇಟೀವ್ ಆಫೀಸರ್‌ನ್ನು ನೇಮಕಾತಿ ಮಾಡುವಂಥದ್ದನ್ನು ಮಾಡಿಲ್ಲ. ದಯಮಾಡಿ ಇದನ್ನು ಮಾಡಿದರೆ ಆಗ ಕನ್ನಡಿಗರಿಗೆ ಆದ್ಯತೆ ಬರುತ್ತದೆ. ಎಲ್ಲಾ ಪ್ರಾಜೆಕ್ಟ್ ಮುಗಿದ ಮೇಲೆ ನಿರ್ವಹಣೆ ಮಾಡುವುದಕ್ಕೆ ಮತ್ತು ಅಡ್ಮಿನಿಸ್ಟ್ರೇಷನ್ ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಬರಲಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಬರುವಂತಹ ದಿನಗಳಲ್ಲಿ ಕನ್ನಡಿಗರಿಗೆ ಎಲ್ಲಾ ಸ್ಥಳಗಳಲ್ಲಿ ಆದ್ಯತೆ ಕೊಡುವುದಕ್ಕೆ ನಾನು ಎಂ.ಡಿ. ಯವರ ಮುಖಾಂತರ ಸೂಚನೆ ಕೊಡುತ್ತೇನೆ. ಈಗಾಗಲೇ ಕೆಲವು ಸೂಚನೆಗಳಿವೆ ಅವುಗಳನ್ನು ಪರಿಪಾಲನೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚುಕ್ಕೆ ಪ್ರಶ್ನೆ ಸಂಖ್ಯೆ:414

**ಸಭಾಪತಿಯವರು:–** ಮಾನ್ಯ ರಮೇಶ್ ಗೌಡರವರೇ, ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

ಚುಕ್ಕೆ ಪ್ರಶ್ನೆ ಸಂಖ್ಯೆ:476

**ಸಭಾಪತಿಯವರು:–** ಮಾನ್ಯ ಅರುಣ ಶಹಾಪುರರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಈಗ ಮಾಹಿತಿ ಬೇಕಾಗಿದೆ. ಉತ್ತರವನ್ನು ಬೇಕಾದರೆ ನಂತರ ಕೊಡಲಿ.

**ಸಭಾಪತಿಯವರು:–** ಆ ವ್ಯವಸ್ಥೆಯನ್ನು ಮುಂದೆ ಮಾಡೋಣ. ಈಗ ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ನೀವು ಕೇಳುವ ಪ್ರಶ್ನೆಯನ್ನು ಯಾರು ಬರೆದುಕೊಳ್ಳುತ್ತಾರೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ,.....

**ಸಭಾಪತಿಯವರು:–** ನೀವು ಹೇಳುವುದು ನನಗೆ ಅರ್ಥವಾಗಿದೆ. ಅವರು ಕಾಲಾವಕಾಶವನ್ನು ಕೇಳಿದ್ದಾರೆ. ಕಾಲಾವಕಾಶ ಕೇಳಿರುವುದಕ್ಕೆ ನೀವು ಪ್ರಶ್ನೆ ಕೇಳಿ ಏನು ಮಾಡುತ್ತೀರಿ?

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಒಂದು ವರ್ಷದಿಂದ ಅನುದಾನಕ್ಕೆ ಬಂದಿರುವ ಕಡತಗಳು ಸರ್ಕಾರದ ಟೇಬಲ್ ಮೇಲೆ ಇದೆ. ದಯವಿಟ್ಟು ಅವರಿಗೆ ಪರಿಹಾರವನ್ನು ಕೊಡಿ. ಆರ್ಥಿಕ ಮಿತವ್ಯಯ ಆದೇಶವನ್ನು ಹಿಂತೆಗೆದುಕೊಳ್ಳಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಇದಕ್ಕೆ ಉತ್ತರ ಕೊಡುವವರು ಯಾರು?

**ಶ್ರೀ ಅರುಣ ಶಹಾಪುರ:–** ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳು ವರ್ಗಾವಣೆಯಾಗಿರುವುದು ಮತ್ತು ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಕಾಲಾವಕಾಶ ತೆಗೆದುಕೊಳ್ಳುತ್ತಾರೆ. ಮತ್ತೆ ಆ ಪ್ರಶ್ನೆಗಳು ಬರುವುದೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ:453**
**ಉತ್ತರ ಲಗತ್ತಿಸಲಾಗಿದೆ**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂತರ್ಜಲ ಸುಮಾರು 1500 ರಿಂದ 2000 ಅಡಿಗೆ ಹೋಗಿದೆ. ಇಡೀ ರಾಜ್ಯದಲ್ಲಿರುವ ಅಂಗವಿಕಲರ ಸಂಖ್ಯೆಯಲ್ಲಿ ಲೆಕ್ಕ ಮಾಡಿದಾಗ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 12,000 ಅಂಗವಿಕಲರು ಇದ್ದಾರೆ. ಆ ಫ್ಲೋರೈಡ್ ಮಿಶ್ರಿತ ನೀರನ್ನು ಕುಡಿದು ಅವರ ಜೀವನ ದುರ್ಬಲವಾಗಿದೆ ಎಂದು ಸರ್ಕಾರ ಈ ಎತ್ತಿನಹೊಳೆ ಯೋಜನೆಯನ್ನು ತಂದು ಅಂದಿನ ಕಾಲದಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿಯವರು ಸಚಿವರಾಗಿದ್ದಾಗ, ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಈ ಯೋಜನೆಯನ್ನು ಎಂಟು ವರ್ಷಗಳ ಹಿಂದೆ ಅನುಷ್ಠಾನಕ್ಕೆ ತಂದರು. ಈ ಯೋಜನೆಯ ಪ್ಲಾನ್ ಮಾಡಿ ನೀರು ತರುವುದಕ್ಕೆ ಪ್ರಯತ್ನ ಮಾಡಿದರು. ಈ ಯೋಜನೆಗೆ ಒಂದನೇ ಹಂತ ಮತ್ತು ಎರಡನೇ ಹಂತದ ಕಾಮಗಾರಿಗಳು ಪ್ರಾರಂಭವಾಗಿ ಎಂಟು ವರ್ಷಗಳಾಗಿವೆ. ಸುಮಾರು ಏಳೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಈ ಯೋಜನೆಯ preamble ನಲ್ಲಿ ಇರುವುದೇನೆಂದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಈ ಯೋಜನೆ ಎಂದು preamble ನಲ್ಲಿ ಇದೆ. ಆದರೆ ಅನುಷ್ಠಾನದ ವ್ಯವಸ್ಥೆ ನೋಡಿದಾಗ ಯಾವ ಊರಿಗೆ ನೀರು ಕೊಡಬೇಕಾಗಿತ್ತೋ ಅಲ್ಲಿ ಇನ್ನು ಯಾವುದೇ ಕಾಮಗಾರಿ ಪ್ರಾರಂಭವಾಗಿಲ್ಲ. 260 ಕಿ.ಮೀ. ದೂರದಿಂದ ಅರೋನಳ್ಳಿಯಿಂದ ಲಿಫ್ಟ್ ಮಾಡಿ ನೀರು ತೆಗೆದುಕೊಂಡು ಬರುತ್ತೇವೆ ಅಲ್ಲಿ ಬೈರ್‌ಗೊಂಡ್ಲು ಜಲಾಶಯ ಕೊರಟಗೆರೆ ತಾಲ್ಲೂಕು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು ಮಧ್ಯದಲ್ಲಿ ಬೈರ್‌ಗೊಂಡ್ಲು ಜಲಾಶಯದಿಂದ 5.7 ಟಿಎಂಸಿ ನೀರು ಸಂಗ್ರಹವಾಗಬೇಕು. ಆದರೆ, ಇನ್ನು ಬೈರ್‌ಗೊಂಡ್ಲು ಜಲಾಶಯ ಕಟ್ಟುವುದಕ್ಕೆ ಪ್ರಾರಂಭವೇ ಆಗಿಲ್ಲವೆಂದ ಮೇಲೆ ಆ ಜಿಲ್ಲೆಗಳಿಗೆ ನಿಜವಾಗಿಯೂ ನೀರು ಕೊಡುವುದಕ್ಕೆ ಆಗುತ್ತದೆಯೇ ಎಂಬುದು ನನ್ನ ಮೂಲಭೂತ ಪ್ರಶ್ನೆ.

(ಮುಂದು)

153/4-2-2021/1-50/BKP-BNS

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ, ಕಾನೂನು ಮತ್ತು ಸಂಸದೀಯ ಸಚಿವರು):-** ಮಾನ್ಯ ಸಭಾಪತಿಯವರೆ, ಎತ್ತಿನಹೊಳೆ ಪ್ರಮುಖವಾದಂತಹ ಯೋಜನೆ. ನಾವು ನಮ್ಮ ರಾಜ್ಯದ ಬರಪೀಡಿತ ಪ್ರದೇಶಗಳಿಗೆ ನೀರನ್ನು ಒದಗಿಸಬೇಕು ಎನ್ನುವಂತಹ ಕಾರಣದಿಂದ ಈ ಯೋಜನೆಯನ್ನು ರೂಪಿಸಿದ್ದೇವೆ. ಇದಕ್ಕೆ ಹಲವಾರು ವಿಚಾರಗಳಲ್ಲಿ ತಾಂತ್ರಿಕ ಮತ್ತು ಕಾನೂನಾತ್ಮಕ ತೊಂದರೆಗಳು ಇದ್ದದ್ದನ್ನೆಲ್ಲಾ ನಿವಾರಣೆ

ಉಪಯೋಗಿಸಕೂಡದು

ಮಾಡಿದ್ದೇವೆ. 2010ನೇ ಸಾಲಿನಿಂದ ಪ್ರಾರಂಭವಾದಂತಹ ಯೋಜನೆ ಇದಾಗಿದ್ದು, ಕೊನೆಗೆ 2013-14ನೇ ಸಾಲಿಗೆ ಇದಕ್ಕೆ ಚಾಲನೆ ಸಿಕ್ಕಿದೆ. ಸುಮಾರು ರೂ.7,721 ಕೋಟಿಗಳು ಈಗಾಗಲೇ ಖರ್ಚಾಗಿದೆ. ಅಲ್ಲಿ 7 ಬ್ಯಾರೇಜ್‌ಗಳನ್ನು ಕಟ್ಟಿದ್ದೇವೆ, ನೀರು ಸಂಗ್ರಹ ಮಾಡುವುದಕ್ಕೆ ಪಂಪ್‌ಹೌಸ್ ಎಲ್ಲವೂ ಆಗಿದೆ. Raising main ಕೂಡ ಆಗಿದೆ. ಕೆಲವು ಕಡೆಗಳಲ್ಲಿ ರೈತರು ಸಹಕಾರ ಕೊಟ್ಟಿದ್ದಾರೆ. ಅಲ್ಲಿ ಎಲ್ಲವೂ ಕೂಡ ನಾವು distribution line ಪ್ರಾರಂಭ ಮಾಡಿದ್ದೇವೆ. ಇನ್ನೂ ಕೆಲವು ಕಡೆಗಳಲ್ಲಿ ರೈತರು ಸಹಕಾರ ಕೊಟ್ಟಿಲ್ಲ. 2013ನೇ ಸಾಲಿನ ಒಂದು ಭೂಸ್ವಾಧೀನ ಕಾಯ್ದೆಗೆ ಅನುಗುಣವಾಗಿ ನಾವು ಕೆಲಸ ಮಾಡಬೇಕಾಗಿದೆ. ಅದಕ್ಕಿಂತ ಮುಂಚಿತವಾಗಿ ಭೂಸ್ವಾಧೀನ ಕಾಯ್ದೆಯಡಿ ಪ್ರಾರಂಭ ಮಾಡಿದ್ದೇವೆ. ಆದರೆ, 2013ನೇ ಸಾಲಿನ ಭೂಸ್ವಾಧೀನ ಕಾಯ್ದೆ ಬಂದಮೇಲೆ ಮತ್ತೆ ಮಾಡುವಂತಹ ಸಂದರ್ಭದಲ್ಲಿ ವಿಳಂಬವಾಗಿದೆ. ಆದರೂ ಕೂಡ ಈಗ ಬಹಳಷ್ಟು ರೈತರ ಜೊತೆಗೆ ಮಾತನಾಡಿ ಅವರಿಗೆ ಎಲ್ಲಾ ರೀತಿಯಲ್ಲೂ ಒಪ್ಪಿಸಿ, ರೇಟ್‌ಗಳ ಬಗ್ಗೆಯೂ ಒಪ್ಪಿಸಿ ಈಗಾಗಲೇ ಕೆಲಸ ಪ್ರಗತಿಯಲ್ಲಿದೆ. ಸುಮಾರು ಅಂದರೆ ಇನ್ನು 2-3 ವರ್ಷಗಳ ಒಳಗಡೆ ಇದನ್ನು ಪ್ರಾರಂಭ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಅದಕ್ಕಾಗಿ ಕಾರ್ಯವನ್ನು ಮಾಡುತ್ತಿದ್ದೇವೆ. ಈ ವರ್ಷ ಸುಮಾರು ರೂ.890 ಕೋಟಿಗಳನ್ನು ಬಜೆಟ್‌ನಲ್ಲಿ ಇದಕ್ಕೆ ಇಟ್ಟಿದ್ದೇವೆ. ಇದನ್ನು ಆದಷ್ಟುಬೇಗ ಮುಗಿಸುವುದಕ್ಕೆ ಬರಪೀಡಿತ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ, ಈ ಎಲ್ಲಾ ಜಿಲ್ಲೆಗಳಿಗೆ ನೀರನ್ನು ಕೊಡುವಂತಹ ಮಹತ್ವಾಕಾಂಕ್ಷೆಯ ಯೋಜನೆಯನ್ನು ನಾವು ಆದಷ್ಟು ಬೇಗ ಮುಗಿಸುವುದಕ್ಕೆ ಎಲ್ಲಾ ರೀತಿಯಿಂದ ಅಂದರೆ, ಭೂಸ್ವಾಧೀನದಿಂದ ಹಿಡಿದು, ಕಾಮಗಾರಿಯಿಂದ ಹಿಡಿದು, storage reservoir ಕಟ್ಟುವುದರಿಂದ ಹಿಡಿದು ಎಲ್ಲಾ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವುದನ್ನು ಈ ಸದನಕ್ಕೆ ಹೇಳುತ್ತೇನೆ. ಸುಮಾರು ಮೂರು ವರ್ಷಗಳಲ್ಲಿ ಈ ಕೆಲಸವನ್ನು ಮುಗಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ನಾವು ಮಾಡುತ್ತೇವೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿ ಇದರ lifeline ಯಾವುದು ಎಂದರೆ, ಬೈರಗೊಂಡ್ಲು ಜಲಾಶಯ. ಇಲ್ಲಿ ಮೂರು ವರ್ಷಗಳಿಂದ ಒಂದು ಹಿಡಿ ಮಣ್ಣನ್ನು ಎತ್ತಿಲ್ಲ. ಒಂದು ಎಕರೆ ಜಮೀನನ್ನೂ ಸಹಿತ land acquisition ಮಾಡಿಲ್ಲ. ಇಲ್ಲಿ ತುಮಕೂರು ಜಿಲ್ಲೆಗೆ ಸೇರಿದ ಕೊರಟಗೆರೆ ತಾಲ್ಲೂಕಿನ ಕೆಲವು ಗ್ರಾಮಗಳು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ದೊಡ್ಡಬಳ್ಳಾಪುರ ತಾಲ್ಲೂಕಿನ ಕೆಲವು ಗ್ರಾಮಗಳು ಮುಳುಗಡೆಯಾಗುತ್ತಿದೆ. ಸುಮಾರು 550 ಎಕರೆ ಜಮೀನು ಇವತ್ತು acquire ಮಾಡಿಕೊಳ್ಳಬೇಕಾಗಿದೆ. Acquisition ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದಲ್ಲಿ ಮೂರು ವರ್ಷಗಳಿಂದ ಯಾವುದೇ ರೀತಿಯಾದಂತಹ ಕ್ರಮ ವಹಿಸಿಲ್ಲ. ಆ ರೈತರು ಆ difference amount ಏನಿದೆ, ತುಮಕೂರು ಜಿಲ್ಲೆಯಲ್ಲಿ guidance value ರೂ.8 ಲಕ್ಷಗಳಿವೆ. ಗ್ರಾಮಾಂತರ ಜಿಲ್ಲೆಯಲ್ಲಿ ರೂ. 15 ಲಕ್ಷಗಳಿವೆ, ಅದರ ನಾಲ್ಕು ಪಟ್ಟು ಕೊಡಬೇಕೆಂದು ಕೇಂದ್ರ ಸರ್ಕಾರದ Guidelines ಇದ್ದರೂ ಸಹಿತ ಸರ್ಕಾರ ಇದರ ಬಗ್ಗೆ ಇನ್ನೂ ಯಾವುದೇ ರೀತಿಯಾದಂತಹ ಕ್ರಮ ಕೈಗೊಂಡಿಲ್ಲ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಯಾವುದೇ ಯೋಜನೆಯಾಗಲಿ, ಅಂದರೆ ನಿಮ್ಮಲ್ಲಿ 'ವರಾಹಿ ಯೋಜನೆ' ಎಂದು ಹಿಂದು ಯೋಜನೆಯಾಗಿತ್ತು. 20 ವರ್ಷಗಳಾದ ಮೇಲೆ ಆ ಯೋಜನೆ open ಆಯಿತು ಎಂದು ಕಾಣುತ್ತದೆ. ಅದೇ ರೀತಿ ಈ ಯೋಜನೆ ಪ್ರಾರಂಭವಾಗಿ 8 ವರ್ಷಗಳಾಯಿತು. ಇನ್ನೂ ಬೈರಗೊಂಡ್ಲು ಜಲಾಶಯದ ಬಗ್ಗೆ ಯೋಚನೆ ನಿಮಗೆ ಖಂಡಿತವಾಗಿ ಇದ್ದರೆ timebound ಹಾಕಿ ನೀವು ಅದನ್ನು finish ಮಾಡದೇ ಇದ್ದರೆ ಇನ್ನೂ 10 ವರ್ಷಗಳಾದರೂ ಸಹಿತ ಆ ಜಿಲ್ಲೆಯಲ್ಲಿ ನೀರು ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ನಾನು ಆ ಜಿಲ್ಲೆಯ ಒಬ್ಬ ನಾಗರೀಕನಾಗಿ ಅಲ್ಲಿ ವಾಸ ಮಾಡುವವನಾಗಿ ನಾನು ಮಾನ್ಯ ಮಂತ್ರಿಗಳಿಗೆ ಮನವಿ ಮಾಡುತ್ತಿದ್ದೇನೆ, ದಯವಿಟ್ಟು ನಾನು ಈಗಾಗಲೇ ಜಲಸಂಪನ್ಮೂಲ ಇಲಾಖೆಗೆ ಪತ್ರ ಕೊಟ್ಟಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ, ಮೀಟಿಂಗ್ ಮಾಡಬೇಕೆಂದು ಹೇಳಿದ್ದೇನೆ, ಇದುವರೆಗೂ ಒಂದು ಮೀಟಿಂಗ್ ಸಹಿತ ಮಾಡಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಯಾವ ಸಮಯದ ಮಿತಿಯೊಳಗೆ ಈ land acquisition ಮಾಡುತ್ತೀರಿ? ಯಾವಾಗ ಕಾಮಗಾರಿ ಪ್ರಾರಂಭ ಮಾಡುತ್ತೀರಿ ಎನ್ನುವ ಬಗ್ಗೆ specific ಆಗಿ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ, ಕಾನೂನು ಮತ್ತು ಸಂಸದೀಯ ಸಚಿವರು):-** ಮಾನ್ಯ ಸಭಾಪತಿಗಳೇ, ಈ ಯೋಜನೆಗೆ ಎರಡು ಹಂತಗಳಿವೆ. ಮೊದಲನೆಯ ಹಂತ ಮುಗಿಯುತ್ತಾ ಬಂದಿದೆ. ಎರಡನೇ ಹಂತದಲ್ಲಿ ಈ ಬೈರಗೊಂಡ್ಲು ಜಲಾಶಯ ಕೂಡ ಇದರಲ್ಲಿದೆ. ಅದನ್ನು ಈಗಾಗಲೇ ನಾವು ಕೈಗೆ ಎತ್ತಿಕೊಳ್ಳುತ್ತಿದ್ದೇವೆ. ನಾನು ಈಗಾಗಲೇ ಹೇಳಿದಂತೆ ಅದಕ್ಕೆ ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ಆ ನಿಗದಿತ ಸಮಯದೊಳಗೆ ಕೆಲಸ ಮಾಡುತ್ತೇವೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳಿಗೆ ಸಭೆಯನ್ನು ಕರೆಯುವುದಕ್ಕೆ ಹೇಳಿ ನಾನು ಸೂಚನೆ ಕೊಡುತ್ತೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:** ಸರ್ ಒಂದು ನಿಮಿಷ. ಬೈರಗೊಂಡ್ಲು ಜಲಾಶಯ ಏನಿದೆ, ಅಲ್ಲಿ 5.5 ಟಿ.ಎಂ.ಸಿ. ನೀರು ಶೇಖರಣೆ ಮಾಡುವ ಜಾಗವಾಗಿದೆ. 2018ನೇ ಸಾಲಿನಿಂದ ಒಂದು ಇಂಚು ಕೆಲಸ ಸಹಿತ ಆಗಿಲ್ಲ. ನಾನು ಮಾನ್ಯ ಸಚಿವರಿಗೆ ಕಳಕಳಿಯ ಮನವಿ ಮಾಡುತ್ತೇನೆ. ಏಕೆಂದರೆ, ಈ ಯೋಜನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಗ್ಗೆ ತಮಗೆ ಗೊತ್ತಿದೆ. ಒಂದು ಸಮಯ ನಿಗದಿ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಆದಷ್ಟುಬೇಗ ಮೀಟಿಂಗ್ ಮಾಡುವುದಕ್ಕೆ ಕಾಲವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ ಎಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:** ಖಂಡಿತ ಮಾನ್ಯ ಜಲಸಂಪನ್ಮೂಲ ಸಂಪನ್ಮೂಲ ಸಚಿವರಿಗೆ ಹೇಳಿ ಮೀಟಿಂಗ್ ಮಾಡುವುದಕ್ಕೆ ಅನುವು ಮಾಡಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 475**

**ಉತ್ತರವನ್ನು ಲಗತ್ತಿಸಲಾಗಿದೆ**

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾಕ್ಷೇತ್ರ):** ಮಾನ್ಯ ಸಭಾಪತಿಗಳೇ, ಈ ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಗಲಭೆ ಏಕೆ ಆಯಿತು ಎಂಬುದು ಇದೂವರೆವಿಗೂ ಸಹಿತ ಸರ್ಕಾರಕ್ಕೆ ಗೊತ್ತಾಗಿಲ್ಲ ಎಂದು ಕಾಣುತ್ತದೆ. ಕಾರಣ ಏನು? ಇದು ಏನು communal ಅಥವಾ political ಏನು, ವೈಯಕ್ತಿಕವೋ ಅಥವಾ drugs ವಿಚಾರವೋ? ಮೂರರಲ್ಲಿಯೂ confusion ಆಗಿದ್ದೀರಿ. ಹಾಗಾಗಿ ಏನಾಗಿದೆ ಎಂದರೆ ಕುರುಡನ ಕೈಗೆ ಆನೆ ಕೊಟ್ಟು ಆನೆ ಹೇಗಿದೆ ಎಂದು ವಿವರಣೆ ಮಾಡು ಎಂದು ಹೇಳಿದ ಹಾಗೆ ಇದೆ. NIA ಗೂ ಕೊಟ್ಟಿದ್ದೀರಿ, ಏಕೆ ಕೊಟ್ಟಿರಿ? NIA ಒಂದು ಕಡೆಯಲ್ಲಿ ತನಿಖೆ ಮಾಡುತ್ತಿದೆ. ಇನ್ನೂ ಒಂದು ವೈಯುಕ್ತಿಕ, ರಾಜಕೀಯ ಎಂದು ಅಲ್ಲಿ ಮನೆ ಸುಟ್ಟು ಹಾಕಿದರು, ಅದನ್ನೂ ಒಂದು ಕಡೆಯಲ್ಲಿ ತನಿಖೆ ಮಾಡುತ್ತಿದ್ದಾರೆ. ಗಲಾಟೆ ಆದ ಮಾರನೇ ದಿವಸವೇ ನಾನು ಹೇಳಿದೆ, ಇದು drug peddlers ಗಲಾಟೆಯಾಗಿದೆ. ಬೆಂಗಳೂರಿನಲ್ಲಿ ಎಲ್ಲಾದರೂ ಹೆಚ್ಚಿಗೆ ಡ್ರಗ್ಸ್ ದಂಧೆ ನಡೆಯುತ್ತಿದೆ ಎಂದರೆ ಅದು ಡಿ.ಜೆ. ಹಳ್ಳಿ ಹಾಗೂ ಕೆ.ಜಿ.ಹಳ್ಳಿಯಲ್ಲಿ ನಡೆಯುತ್ತಿದೆ, ಯಾರ್ಯಾರಿಗೆ ಇದನ್ನು allow ಮಾಡಿದ್ದಾರೋ ಅವರುಗಳು ಸುಮ್ಮನೆ ಇದ್ದಾರೆ. Allow ಮಾಡದೇ ಇದ್ದವರು ಬಂದು ಗಲಾಟೆ ಮಾಡಿದ್ದಾರೆ. ಈ ದಿಸೆಯಲ್ಲಿ ತನಿಖೆ ಮಾಡಿ ಎಂದರೂ ಸಹಿತ ಇವತ್ತಿನವರೆಗೂ ಸಹಿತ ನೀವು ಅದಕ್ಕೆ ಕೈ ಹಾಕಿಲ್ಲ, ಅದು ಒಂದು. ಎರಡನೆಯದಾಗಿ ಏನೆಂದರೆ, ನಿರಪರಾಧಿಗಳು ಎಂದು ಹೇಳಿದ್ದೀರಿ, ದಯವಿಟ್ಟು ನಿಮಗೆ ಕೈಮುಗಿದು ನಾನು ಹೇಳುತ್ತೇನೆ, ಅದರಲ್ಲಿ ಸುಮಾರು 40-50% ಹುಡುಗರು Infosys, Wipro company ಗಳಲ್ಲಿ night shift ನಲ್ಲಿ ಕೆಲಸ ಮಾಡುವಂತಹವರು. ಅವರೆಲ್ಲರೂ ಕೆಲಸಕ್ಕೆ ಹೋಗಿದ್ದಾರೆ, ಕಂಪನಿಯವರು ಈ ಸಮಯದಲ್ಲಿ ಇವರು ಇಲ್ಲಿ ಕೆಲಸ ಮಾಡುತ್ತಿದ್ದರು ಎಂದು Certificate ಕೊಟ್ಟಿದ್ದಾರೆ. ಆದರೂ ಕೂಡ ಇವತ್ತಿನವರೆಗೂ ಸಹಿತ ಅವರುಗಳು ಜೈಲಿನಲ್ಲಿಯೇ ಇದ್ದಾರೆ. ಈ ನಿರಪರಾಧಿಗಳಿಗೆ ಇವತ್ತಿನವರೆಗೂ ಸಹಿತ ನೀವು ಚಾರ್ಜ್‌ಶೀಟ್ ಹಾಕಿಲ್ಲ. ಅನೇಕ ಕಡೆ ನೀವು ಚಾರ್ಜ್‌ಶೀಟ್ ಹಾಕಿಲ್ಲ, ಬೆಳಗ್ಗೆ ನನಗೆ ನಿಮ್ಮ ಅಧಿಕಾರಿಗಳೇ ಚಾರ್ಜ್‌ಶೀಟ್ ಹಾಕಿಲ್ಲವೆಂದು ಹೇಳಿದ್ದಾರೆ. ದಯವಿಟ್ಟು ನೀವು ಮಾಹಿತಿ ತರಿಸಿಕೊಳ್ಳಿ. ಅದನ್ನು ಯಾರ್ಯಾರು ಆ ಸಂದರ್ಭದಲ್ಲಿ ನಾವು ಇಲ್ಲವೆಂಬ ಮಾಹಿತಿ ಕೊಟ್ಟಿದ್ದಾರೋ, ಈಗಲಾದರೂ ಸಹಿತ ಅದರ ಬಗ್ಗೆ ದೊಡ್ಡ ಮನಸ್ಸು ಮಾಡಿ ಅದನ್ನು ಅವರು ಏನು 'B' report ಹಾಕುವಂತಹ ಸಾಧ್ಯತೆಯಿದೆಯೇ ಅದರ ಜೊತೆಗೆ ಯಾರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅನ್ಯಾಯವಾಗಿದೆ, ಅವರಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯತೆಯಿದೆಯೇ ಎಂದು ದಯವಿಟ್ಟು ತಾವು ಉತ್ತರ ಕೊಡಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ**: ಮಾನ್ಯ ಸಭಾಪತಿಗಳೇ, ಕೆ.ಜಿ.ಹಳ್ಳಿ ಹಾಗೂ ಡಿ.ಜೆ.ಹಳ್ಳಿ ಬಗ್ಗೆ ಈಗಾಗಲೇ ಮಾಧ್ಯಮದಲ್ಲಿ ಆಗಲಿ ಅಥವಾ ಸಾರ್ವಜನಿಕರಲ್ಲಾಗಲಿ ಇದು ಸಂಪೂರ್ಣವಾಗಿ ಚರ್ಚೆಯಾಗಿರುವಂತಹ ವಿಚಾರವಾಗಿದೆ. ಏಕೆ ಆಯಿತು, ಎಲ್ಲಿಂದ ಆಯಿತು ಎನ್ನುವಂತಹ ವಿಚಾರ ಕೂಡ ಬಹಳಷ್ಟು ವಿವರವಾಗಿ ಚರ್ಚೆಯಾಗಿದೆ. ಯಾರು ಮೊದಲು ಅದನ್ನು WhatsApp group ಗೆ ಹಾಕಿದ್ದರು, ಏನಾಯಿತು ಅದೆಲ್ಲಾ ಗೊತ್ತಿದೆ. ಅದರ ಬಗ್ಗೆ ಮತ್ತೆ ನಾನು ವಿವರವಾಗಿ ಹೋಗುವುದಿಲ್ಲ. ನಮ್ಮ ಮಾನ್ಯ ಇಬ್ರಾಹಿಂ ಸಾಹೇಬರ ಒಂದು ಕಳಕಳಿ ಏನೆಂದರೆ, ಅವರು 2-3 ವಿಚಾರಗಳನ್ನು ಹೇಳಿದ್ದಾರೆ. ಒಂದು ಡ್ರಗ್ಸ್ ಆ ಭಾಗದಲ್ಲಿದೆ, ಅದನ್ನು ತಡೆಹಿಡಿಯಬೇಕು ಎಂದು ಹೇಳಿದ್ದಾರೆ, ನಾವು ಅದನ್ನು ಬಿಟ್ಟಿಲ್ಲ, ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಘಟನೆಯ ಪೂರ್ವದಲ್ಲಿ ಮತ್ತು ನಂತರ ಅಲ್ಲಿ ಸಾಕಷ್ಟು raid ಗಳನ್ನು ಮಾಡಿದ್ದೇವೆ. ಅಲ್ಲಿ ಕೂಡ ಸಾಕಷ್ಟು seize ಮಾಡಿದ್ದೇವೆ. ಅಲ್ಲಿ ಬಹಳ ವರ್ಷಗಳಿಂದ ಡ್ರಗ್ಸ್, red sandalwood ಈ ರೀತಿ ಏನಿದೆ ಅದನ್ನು ಮಟ್ಟಾ ಹಾಕುವುದಕ್ಕೆ ನಮ್ಮ ಅಧಿಕಾರಿಗಳು ಈಗಾಗಲೇ ಸಾಕಷ್ಟು ಕೇಸ್‌ಗಳನ್ನೂ ಸಹಿತ ಬುಕ್ ಮಾಡಿದ್ದಾರೆ. ಈ ಕೆ.ಜಿ.ಹಳ್ಳಿ ಹಾಗೂ ಡಿ.ಜೆ.ಹಳ್ಳಿಯ ಒಂದು ಪ್ರಕರಣದಲ್ಲಿ ಒಟ್ಟು ನಾವು 72 FIR ಗಳನ್ನು ನಮ್ಮ ಬೆಂಗಳೂರು ಪೊಲೀಸ್‌ನವರು ದಾಖಲು ಮಾಡಿದ್ದಾರೆ. ಎರಡು FIR ಗಳನ್ನು NIA ನವರು ಮಾಡಿದ್ದಾರೆ. ಅಲ್ಲಿ ಏನಾಯಿತು ಎಂದರೆ, ಹೈಕೋರ್ಟ್‌ನಲ್ಲಿ ಒಂದು ಅರ್ಜಿ ಹೋಯಿತು, ಇದನ್ನು NIA ಗೆ ಕೊಡಬೇಕೆಂದು PIL ಹೋಯಿತು. ಆ ಸಂದರ್ಭದಲ್ಲಿ ಕೋರ್ಟ್ ಕೇಳಿದಾಗ NIA ನವರು ಆ ರೀತಿಯ sections ಇದ್ದರೆ, Unlawful Activities (Prevention) Act (UAPA) ನ sections ಇದ್ದರೆ ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆ ರೀತಿ ಹೇಳಿದಾಗ, ಇದನ್ನು ನೀವು ಏಕೆ ಪರಿಶೀಲನೆ ಮಾಡಬಾರದು ಎಂದು ಹೈಕೋರ್ಟ್ ಹೇಳಿತು. ಆದ್ದರಿಂದ, 72 ರಲ್ಲಿ ಎರಡು FIR ಕೇಸ್‌ಗಳನ್ನು UAPA ಅಡಿ ಹಾಕಿದ್ದೇವೆ. ಮಿಕ್ಕಿದ್ದು ನಮ್ಮ ಪೊಲೀಸರ ಬಳಿಯಲ್ಲಿಯೇ ಇದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(154) 04.02.2021 02.00 ಎಸ್‌ವಿ-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

The entire N.I.A., case is being monitored by the High Court. ನಮ್ಮ ಮೇಲ್ವಿಚಾರಣೆಯಲ್ಲಿ ಇಲ್ಲ ಅಥವಾ ಎನ್.ಐ.ಎ., ಮೇಲ್ವಿಚಾರಣೆಯಲ್ಲಿಯೂ ಇಲ್ಲ. ಅದು ಉಚ್ಚ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿದ್ದು, ಈಗಾಗಲೇ 13 ಸಿಟ್ಟಿಂಗ್‌ಗಳು ಆಗಿದೆ. ಅವರು ಆ Progress Report ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ನಮ್ಮ ಕೇಸ್‌ಗಳಲ್ಲಿ ನಾವು ಈಗಾಗಲೇ ಚಾರ್ಜ್‌ಶೀಟ್ ಅನ್ನು ಹಾಕಿದ್ದೇವೆ. ಇನ್ನು ಮೂರ್‍ನಾಲ್ಕು ಎಫ್.ಐ.ಆರ್., ಗಳಲ್ಲಿ ಮಾತ್ರ ಚಾರ್ಜ್‌ಶೀಟ್ ಅನ್ನು ದಾಖಲಿಸುವುದು ಬಾಕಿ ಇದೆ. ಅದಕ್ಕೆ ನಮಗೆ ಫೆಬ್ರವರಿ ಅಂತಿಮ ವಾರದವರೆಗೆ ಕಾಲಾವಕಾಶವಿದ್ದು, ಅವುಗಳಲ್ಲಿಯೂ ಚಾರ್ಜ್‌ಶೀಟ್ ಅನ್ನು ಹಾಕಲಾಗುವುದು.

ಮಾನ್ಯ ಸದಸ್ಯರು ಪ್ರಮುಖವಾಗಿ ಕೇಳಿರುವುದು ಅಮಾಯಕರು ಅರೆಸ್ಟ್ ಆಗಿದ್ದು, ತೊಂದರೆಯಾಗಿದೆ ಎನ್ನುವುದಾಗಿದೆ. ಪೂರ್ವಭಾವಿ ಹಂತದಲ್ಲಿ ನಾವು ಕೆಲವರನ್ನು ವಿಚಾರಣೆ ಮಾಡಿದ್ದು ನಿಜ. ನಂತರ ಸುಮಾರು 84 ರಿಂದ 90 ಜನರನ್ನು ಬಿಡುಗಡೆ ಮಾಡಲಾಗಿದೆ. ಕ್ಯಾಮೆರಾದಲ್ಲಿ ಸಿಕ್ಕಿ ಹಾಕಿಕೊಂಡವರು, ವೀಡಿಯೋದಲ್ಲಿ ಸಿಕ್ಕಿ ಹಾಕಿಕೊಂಡವರನ್ನು, action ನಲ್ಲಿ ಸಿಕ್ಕಿ ಹಾಕಿಕೊಂಡವರನ್ನು ಬಿಡುಗಡೆ ಮಾಡಲಾಗಿದೆ. ಅರೆಸ್ಟ್ ಮಾಡುವಾಗ ಎಲ್ಲರನ್ನೂ ಸೇರಿಸಿ ಅರೆಸ್ಟ್ ಮಾಡಲಾಗಿರುತ್ತದೆ. ಅಂತಹ ಸುಮಾರು 90 ಜನರನ್ನು ಬಿಡುಗಡೆ ಮಾಡಲಾಗಿದೆ. ಈಗಲೂ ಕೂಡ ನಾವು ಪ್ರಾಮಾಣಿಕವಾಗಿ ಚಾರ್ಜ್‌ಶೀಟ್ ಅನ್ನು ದಾಖಲಿಸಿದ್ದೇವೆ. ಪ್ರಸ್ತುತ ಪ್ರಕರಣವು ನ್ಯಾಯಾಲಯದಲ್ಲಿದ್ದು, ಆದಷ್ಟು ಬೇಗ ನಾವು ಚಾರ್ಜ್‌ಶೀಟ್ ಅನ್ನು ಹಾಕುತ್ತೇವೆ. ನಂತರ ನ್ಯಾಯಾಲಯದಲ್ಲಿ ಏನು ತೀರ್ಮಾನವಾಗುತ್ತದೆಯೋ ಅದಕ್ಕೆ ನಾವು ಒಪ್ಪಿಗೆಯನ್ನು ಸೂಚಿಸುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಗೃಹ ಸಚಿವರೇ, ನೀವು ಈ ವಿಷಯದಲ್ಲಿ ಹೆಚ್ಚು ಕೈ ಹಾಕುತ್ತಿಲ್ಲವೆಂಬುದು ನಮಗೆ ತಿಳಿದಿದೆ. ದಯವಿಟ್ಟು ಪೂರ್ಣವಾಗಿ ಪೊಲೀಸರಿಗೆ ನೀವೇ ತೀರ್ಮಾನ ತೆಗೆದುಕೊಂಡು ಮಾಡಿ ಎಂದು ಅವರ ಮೇಲೆ ಬಿಟ್ಟುಬಿಡಿ. ಖಂಡಿತವಾಗಿಯೂ ನನಗೆ ನಮ್ಮ ಪೊಲೀಸರ ಮೇಲೆ ವಿಶ್ವಾಸವಿದೆ. Ofcourse, ಅಲ್ಲಿ ಒಳ್ಳೆಯ ಪೊಲೀಸರ ತಂಡವಿದ್ದು, ಉತ್ತಮವಾಗಿ ಕೆಲಸ ಮಾಡುತ್ತಿದೆ. ಸರ್ಕಾರ ಯಾವುದೇ ಇರಬಹುದು. ಮುಂದಾದರೂ ಅವರೇ ಇರಬೇಕು. ಹಿಂದೆಯೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರೇ ಇದ್ದರು. ಅವರಿಗೆ free hand ಕೊಡಬೇಕು. ಮಧ್ಯೆ ದೂರವಾಣಿ ಮಾಡಿ ಹೀಗೆ ಮಾಡಿ, ಹಾಗೆ ಮಾಡಿ ಎಂದು ಹೇಳಿದರೆ ಕೆಲಸ ಕೆಡುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಘಟನೆ ನಡೆದಾಗಿನಿಂದಲೂ ಸಂಪೂರ್ಣವಾಗಿ ಲೈವ್ ಟಿ.ವಿ.ಯಲ್ಲಿತ್ತು. ಪೊಲೀಸ್ ಕಾರ್ಯಾಚರಣೆಯಲ್ಲಿ ಎಲ್ಲಿಯೂ ಕೂಡ ನಾವು ಹಸ್ತಕ್ಷೇಪ ಮಾಡಿರುವುದಿಲ್ಲ. ಮುಂದೆಯೂ ಕೂಡ ಮಾಡುವುದಿಲ್ಲ. ಪೊಲೀಸ್ ಅಧಿಕಾರಿಗಳಿಗೆ free hand ಕೊಟ್ಟಿದ್ದೇವೆ. ನ್ಯಾಯಸಮ್ಮತವಾದ ತನಿಖೆ ನಡೆಯುತ್ತಿದ್ದು, ಅಮಾಯಕರಿಗೆ ತೊಂದರೆಯಾಗದಂತೆ ಯಾರು ತಪ್ಪು ಮಾಡಿದ್ದಾರೆಯೋ ಅವರಿಗೆ ಶಿಕ್ಷೆ ವಿಧಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 390**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ (ಶ್ರೀ ಪ್ರಕಾಶ್ ಕೆ.ರಾಥೋಡ್ ಅವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಏನೆಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ವಸತಿ ಸಮುಚ್ಚಯಗಳನ್ನು ನಿರ್ಮಿಸಲಾಗಿದೆ? ವಿವರ ಒದಗಿಸುವುದು. ಅದಕ್ಕೆ 31 ವಸತಿ ಸಮುಚ್ಚಯಗಳನ್ನು ನಿರ್ಮಿಸಲಾಗಿದೆ ಎಂದು ಉತ್ತರ ನೀಡಿದ್ದಾರೆ. ಎರಡನೆಯದಾಗಿ ವಸತಿ ಸಮುಚ್ಚಯದಲ್ಲಿ ಎಷ್ಟು ಫ್ಲಾಟ್‌ಗಳನ್ನು ಮಾರಾಟ ಮಾಡಲಾಗಿದೆ? ಉಳಿದ ಫ್ಲಾಟ್‌ಗಳ ಸಂಖ್ಯೆಯೆಷ್ಟು ಎನ್ನುವುದಕ್ಕೆ ಒಂದು ಬಿ.ಹೆಚ್.ಕೆ., ಎರಡು ಬಿಹೆಚ್‌ಕೆ ಮತ್ತು ಮೂರು ಬಿ.ಹೆಚ್.ಕೆ., ಗಳನ್ನು ಸೇರಿಸಿ ಒಟ್ಟು 7909 ಫ್ಲಾಟ್‌ಗಳನ್ನು ಕಟ್ಟಲಾಗಿದ್ದು, ಅವುಗಳಲ್ಲಿ 1914 ಫ್ಲಾಟ್‌ಗಳನ್ನು ಯಾರೂ ತೆಗೆದುಕೊಂಡಿರುವುದಿಲ್ಲ ಎನ್ನುವ ಮಾಹಿತಿಯನ್ನು ನೀಡಲಾಗಿದೆ. ಇದನ್ನು ಮಾರಾಟ ಮಾಡುವುದಕ್ಕೆ ಏನು ಮಾಡಲಾಗುವುದು ಎಂದರೆ ಪ್ರಾಧಿಕಾರದ ವೆಬ್‌ಸೈಟ್ ಮುಖಾಂತರ ಜಾಹೀರಾತು ನೀಡಲಾಗುವುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದವರಿಗೆ ನೀಡುತ್ತೇವೆ ಎನ್ನುವ ಮಾಹಿತಿಯನ್ನು ಕೊಡಲಾಗಿದೆ.

ಏತಕ್ಕಾಗಿ ಈ ಫ್ಲಾಟ್‌ಗಳು ಮಾರಾಟವಾಗುತ್ತಿಲ್ಲ ಎನ್ನುವುದಕ್ಕೆ ಇರುವ practical difficulty ಅನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುವುದು. ಖಾಸಗಿ ಅಪಾರ್ಟ್‌ಮೆಂಟ್‌ಗಳವರು ಕಟ್ಟುತ್ತಿರುವ ಫ್ಲಾಟ್‌ಗಳು ಮಾರಾಟವಾಗುತ್ತಿದ್ದು, ಬಿ.ಡಿ.ಎ., ಕಟ್ಟುತ್ತಿರುವ ಫ್ಲಾಟ್‌ಗಳು ಮಾರಾಟವಾಗುತ್ತಿಲ್ಲ. ಬಿ.ಡಿ.ಎ., ವತಿಯಿಂದ ಖಾಸಗಿಯವರಿಗಿಂತಲೂ ಕಡಿಮೆ ದರಕ್ಕೆ ನೀಡಿದರೂ ಸಹ ತೆಗೆದುಕೊಳ್ಳುತ್ತಿಲ್ಲ. ತೆಗೆದುಕೊಳ್ಳುವವರು ಕೂಡ ಆರ್ಥಿಕ ಮುಗ್ಗಟ್ಟಿನಿಂದ ಇರುವವರು, ಬಡವರು ಆಗಿದ್ದು, ಅಂತಹವರು ಅರ್ಜಿಯನ್ನು ಹಾಕುತ್ತಾರೆ. ಆದರೆ construction quality ಯಾವ ಮಟ್ಟಕ್ಕಿದೆಯೆಂದರೆ ಒಳಗಡೆ ವಾಸಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ. ಅದೊಂದು ಕಡೆಯಾದರೆ, 31 ಪ್ರಾಜೆಕ್ಟ್‌ಗಳನ್ನು ಕೊಟ್ಟಿರುವುದರಲ್ಲಿ ನಿಮಗೆ ಎಂಟು ಪ್ರಾಜೆಕ್ಟ್ ಹೆಸರು ಹೇಳಬಯಸುತ್ತೇನೆ. ವಳಗೇರಹಳ್ಳಿ 1 ರಿಂದ 4ನೇ ಹಂತ, ಕಣಿಮಿಣಿಕೆ 2ನೇ ಹಂತದಿಂದ 5ನೇ ಹಂತದವರೆಗೂ ಮಾಡಲಾಗಿದೆ. ಕಟ್ಟಡದ ಬಳಿಗೆ ಹೋಗಲು ಸಂಪರ್ಕ ರಸ್ತೆಯೇ ಇರುವುದಿಲ್ಲ. ಇಂತಹ ಕಡೆಯಲ್ಲಿ ಹೇಗೆ ವಾಸ ಮಾಡಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಾಗುತ್ತದೆ? ಬಿ.ಡಿ.ಎ ಅವರು ಪ್ರಾಜೆಕ್ಟ್ ಮಾಡುವುದಕ್ಕಿಂತ ಮುಂಚಿತವಾಗಿ ಯಾವ ಜಾಗದಲ್ಲಿ ಮಾಡುತ್ತಾರೆಯೋ ಆ ಜಾಗಕ್ಕೆ ಹೋಗಲು ಇರುವ ಮೂಲಸೌಕರ್ಯ ಏನು ಎಂಬುದನ್ನು ನೋಡದಿದ್ದರೆ, ಜನರು ಯಾರೂ ವಾಸಿಸುವುದಕ್ಕೆ ಅಲ್ಲಿಗೆ ಹೋಗುವುದಿಲ್ಲ. ದಯಮಾಡಿ ಅಲ್ಲಿಗೆ ತಲುಪಲು ಇರುವ ಸಂಪರ್ಕ ರಸ್ತೆಯನ್ನು ಸರಿಪಡಿಸಿಕೊಡಬೇಕು, ವಾಸ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಡಬೇಕು ಮತ್ತು ಗುಣಮಟ್ಟವನ್ನು ನಿಯಂತ್ರಣ ಮಾಡಬೇಕು ಎಂದು ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಒಟ್ಟು 9826 ಮನೆಗಳು ನಿರ್ಮಾಣವಾಗಿದೆ. ಅದರಲ್ಲಿ 7909 ಮನೆಗಳು ಮಾರಾಟವಾಗಿದೆ. 1914 ಮನೆಗಳು ಮಾರಾಟವಾಗದೆ ಉಳಿದಿದೆ. 5086 ಮನೆಗಳು ನಿರ್ಮಾಣದ ಹಂತದಲ್ಲಿದೆ. ಮಾನ್ಯ ನಾರಾಯಣಸ್ವಾಮಿಯವರು ಹೇಳಿದಂತೆ 1914 ಮನೆಗಳು ಬಹುತೇಕ ಈ ಎಂಟು ಹಂತಗಳಲ್ಲಿಯೇ ಇವೆಯೆಂದು ನಾನು ಭಾವಿಸುತ್ತೇನೆ. ತಾವು ಹೇಳಿದಂತೆ ವಳಗೇರಹಳ್ಳಿ ಮತ್ತು ಕಣಿಮಿಣಿಕೆ ಬಿ.ಡಿ.ಎ., ವಸತಿ ಸಮುಚ್ಚಯಗಳಿಗೆ ಸಂಪರ್ಕ ರಸ್ತೆಯನ್ನು ಮಾಡುವುದಕ್ಕೆ ಅಧಿಕಾರಿಗಳಿಗೆ ಮತ್ತು ಇಂಜಿನಿಯರ್‌ಗಳಿಗೆ ಸೂಚನೆಯನ್ನು ನೀಡುತ್ತೇನೆ. 1914 ಮನೆಗಳನ್ನು ಮಾರಾಟ ಮಾಡುವುದಕ್ಕೆ ಸೂಚನೆಯನ್ನು ನೀಡುತ್ತೇನೆ. ನಿರ್ಮಾಣ ಹಂತದಲ್ಲಿರುವ 5086 ಮನೆಗಳಿಗೆ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಹ ಸೂಚನೆಯನ್ನು ನೀಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 440**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ನಾನು ಬಹಳ specific ಆಗಿ ಹೇಳುತ್ತೇನೆ. ಈಗ ಇರುವ ಅದಾನಿ ಸಂಸ್ಥೆಯ ಒಡೆತನದ ಉಡುಪಿ ವಿದ್ಯುತ್ ಕಾರ್ಪೊರೇಷನ್ ಲಿಮಿಟೆಡ್ ಅನ್ನು ಮೊದಲನೆಯದಾಗಿ ನಾಗಾರ್ಜುನ ಕಂಪನಿಯವರಿಗೆ 2012ರಲ್ಲಿ ಕೊಡಲಾಗಿತ್ತು. ತದನಂತರ 2014ರಲ್ಲಿ ಲ್ಯಾನ್ಕೊ ಇನ್ಫ್ರಾಸ್ಟ್ರಕ್ಚರ್ ಇವರಿಗೆ ಮಾರಾಟ ಮಾಡುತ್ತಾರೆ. ನಂತರ ಅವರು ಅದಾನಿ ಸಂಸ್ಥೆಯವರಿಗೆ ಮಾರುತ್ತಾರೆ. ಮೊದಲು ನಾಗಾರ್ಜುನ, ನಂತರ ಲ್ಯಾನ್ಕೊ, ಆಮೇಲೆ ಅದಾನಿ ಹೀಗೆ. ಅದಾನಿ ಸಂಸ್ಥೆಯವರು 2015ರಿಂದ ಅವರ ಶೇರ್ ಅನ್ನು ತೆಗೆದುಕೊಳ್ಳುತ್ತಾರೆ. ಇವರಿಗೆ ವಿದ್ಯುತ್ ಪರಭಾರೆಯನ್ನು ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ದಿನಾಂಕ 22.01.2020ರಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾರೆ. C.E.R.C., (Central Electricity Regulatory Commission) ಇದರ ಆದೇಶವನ್ನು ಮಾಡುತ್ತದೆ. The functions of the C.E.R.C., are:

- to regulate the inter-State transmission of electricity ;
- to determine tariff for inter-State transmission of electricity;
- to issue licences to persons to function as transmission licensee and electricity trader with respect to their inter-State operations;
- Improve access to information for all stakeholders.
- to adjudicate upon disputes involving generating companies or transmission licensee in regard to matters connected with clauses (a) to (d) above and to refer any dispute for arbitration;
- to levy fees for the purposes of the Act;
- to specify Grid Code having regard to Grid Standards;
- to specify and enforce the standards with respect to quality, continuity and reliability of service by licensees.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- to fix the trading margin in the inter-State trading of electricity, if considered, necessary;

This is the functions of the C.E.R.C., The Advisory Functions of the C.E.R.C., are as follows:-

- formulation of National Electricity Policy and Tariff Policy;
- promotion of competition, efficiency and economy in the activities of the electricity industry;
- promotion of investment in electricity industry;
- any other matter referred to the Central Commission by the Central Government.

ಇದು ಸಿ.ಇ.ಆರ್.ಸಿ., ಮಾಡುವ ಕೆಲಸ. ಆದರೆ ನನಗೆ ನೀಡಿರುವ ಉತ್ತರದಲ್ಲಿ ಸಿ.ಇ.ಆರ್.ಸಿ., ಆದೇಶದ ಮೇಲೆ ಜನರು ನೀಡುವ ತೆರಿಗೆ ಹಣವನ್ನು ನೀವು ಅವರೊಂದಿಗೆ ಮಾಡಿರುವ ಒಪ್ಪಂದದಲ್ಲಿ nearly one hundred and fifty times ಹೆಚ್ಚಿಗೆ ನೀಡಲಾಗಿದೆ. ನಿನ್ನೆ ನನಗೆ Karnataka Electricity Regulatory Commission ನಿಂದ ಒಂದು ಪತ್ರ ಬಂದಿದೆ. ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಮುಂತಾದ ಕಂಪನಿಗಳು ವಿದ್ಯುತ್ ದರ ಪರಿಷ್ಕರಣೆಯನ್ನು ಮಾಡಲು ಒಂದು ಸಭೆಯನ್ನು ಕರೆದಿದ್ದಾರೆ. ಈ ತಿಂಗಳ 15ರಿಂದ ಆ ಸಭೆಗಳು ಪ್ರಾರಂಭಗೊಳ್ಳುತ್ತವೆ. ಜನರಿಗೆ ವಿದ್ಯುತ್ ದರವನ್ನು ಹೆಚ್ಚಿಸುವುದಕ್ಕಾಗಿ ಪರಿಷ್ಕರಣೆ ಮಾಡಲಾಗುತ್ತಿದೆ. ಆದರೆ ಕಂಪನಿಗಳಿಗೆ ಇಷ್ಟ ಬಂದಂತೆ ಕೊಡಲಾಗುತ್ತಿದೆ. ಸುಮಾರು ರೂ.1600 ಕೋಟಿಗಳನ್ನು ಹೆಚ್ಚಿಗೆ ಕೊಡಲಾಗಿದೆ. ಪೊನ್ನುರಾಜ್ ಎನ್ನುವ ಒಬ್ಬರು ವ್ಯವಸ್ಥಾಪಕ ನಿರ್ದೇಶಕರು ಹೇಳುತ್ತಾರೆ.

(...ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(155) 04.02.2021, 2 .10. KG.GR **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು.,):-**

ರೂ. 17,900 ಕೋಟಿಗಳನ್ನು ಕೇಂದ್ರ ಸರ್ಕಾರದ ಸಂಸ್ಥೆಗಳಾದ N.T.P.C., N.L.C., N.T.C.C., N.T.C.L., ಇಂತಹ ಕಂಪನಿಗಳಿಗೆ ...

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು), (ಮುಖ್ಯ ಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಪ್ರಶ್ನೆಗೆ ಸೀಮಿತವಾಗಿ ಉಪ ಪ್ರಶ್ನೆಯನ್ನು ಕೇಳಬೇಕು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದ ವಿಷಯ. ನಮ್ಮ ಖಜಾನೆಗೆ ಎಷ್ಟರ ಮಟ್ಟಿಗೆ ದೋಖವಾಗುತ್ತಿದೆ ಎಂಬುದು ಬಹಳ ಸರಳವಾಗಿ ಕಾಣುತ್ತಿದೆ. 12 ವರ್ಷ ಅವರ ಅಗ್ರಿಮೆಂಟ್ ಅವಧಿ ಇರತಕ್ಕದ್ದಾಗಿದ್ದು, ಆ ಅವಧಿ ಮುಗಿದು ಈಗಾಗಲೇ ಎರಡು ವರ್ಷಗಳು ಕಳೆದಿದೆ. ಈಗ ಎರಡು ವರ್ಷಗಳು ಕಳೆದರೂ ಸಹ, ಅದನ್ನು ಮುಂದುವರಿಸುತ್ತಿದ್ದಾರೆ. ನಾವು ಸುಮಾರು ರೂ.1600/- ಕೋಟಿಗಳನ್ನು ಸುಮ್ಮನೆ ಕೊಡುತ್ತಿದ್ದೇವೆ. ಆ ಹಣ ಎಲ್ಲಿಂದ ಬರುತ್ತಿದೆ? ಅದನ್ನು ಸಾರ್ವಜನಿಕರ ಮೇಲೆ ಹಾಕುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, Electricity Regulatory Board ನ ಕಾನೂನುಗಳನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕಾಗುತ್ತದೆ. 2005 ರಲ್ಲಿ Udupi Power Corporation Limited ಎಂದು ಪ್ರಾರಂಭವಾಯಿತು. ಅದಾದ ಮೇಲೆ ಮಾನ್ಯ ಸದಸ್ಯರು ಹೇಳಿದಂತೆ, Nagarjuna Power Corporation, Lanco Infratech, ಇವೆಲ್ಲಾ ಪ್ರಾರಂಭವಾಗಿ 2015 ರಲ್ಲಿ Adani Power Limited ಗೆ ಹಸ್ತಾಂತರವಾಯಿತು. ಅಂದರೆ, 2005 ರಲ್ಲಿ Udupi Power Corporation Limited ಎಂದು ಇದ್ದದ್ದು, 2015 ರಲ್ಲಿ Adani Power Limited ಗೆ ಹಸ್ತಾಂತರವಾಯಿತು. ಆ ಸಂದರ್ಭದಲ್ಲಿ ಅಗ್ರಿಮೆಂಟ್ ಆಗಿದೆ. ಆ ಅಗ್ರಿಮೆಂಟ್‌ನಲ್ಲಿ ಏನಾಗಿದೆ ಎಂದರೆ, ಅವರು ವಿದ್ಯುತ್ ದರವನ್ನು; ಅವರು ವಿದ್ಯುಚ್ಛಕ್ತಿಯನ್ನು ಕೇವಲ ನಮ್ಮ ರಾಜ್ಯಕ್ಕೆ ಮಾತ್ರವಲ್ಲ, inter-state ಪಂಜಾಬ್‌ಗೂ ಕೊಡುತ್ತಾರೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ. ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯಕ್ಕೆ 50% ಕೊಡಬೇಕು. C.E.R.C., cannot involve in it. ತಾವು clarify ಮಾಡಿ. Don't confuse it.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, there is no confusion. I will put forth everything before the House. There is nothing hide here. ನಾನು ಪೂರ್ತಿ ವಿವರವನ್ನು ಕೊಟ್ಟರೆ, ಮಾನ್ಯ ಸದಸ್ಯರ ಬಹಳಷ್ಟು ಪ್ರಶ್ನೆಗಳಿಗೆ automatic ಆಗಿ ಉತ್ತರ ಸಿಗುತ್ತದೆ. ನಮ್ಮ ರಾಜ್ಯಕ್ಕೆ 90% ಮತ್ತು ಪಂಜಾಬ್‌ಗೆ 10% ಕೊಡುತ್ತೇವೆ. ನಮ್ಮ ರಾಜ್ಯಕ್ಕೆ 180 MW ಮತ್ತು ಪಂಜಾಬ್‌ಗೆ 120 MW ಕೊಡುತ್ತಿದ್ದೇವೆ. Since it is inter-state transaction, the C.E.R.C., will govern. Once it is an inter-state transaction, the C.E.R.C., will decide the entire cost.

(ಗೊಂದಲ)

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, Hon'ble Minister should not mislead.

**Sri BASAVARAJ BOMMAI**:- There is no question of misleading.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮೊದಲು ಅಗ್ರಿಮೆಂಟ್ ಪೇಪರ್ಸ್ ಕೊಡಿ ಎಂದು ಕೇಳಿದ್ದೆ. ಮಾನ್ಯ ಸಚಿವರು ಅವುಗಳನ್ನು ಕೊಟ್ಟಿಲ್ಲ. He has not given the Agreement papers.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಯಸಿದಲ್ಲಿ, we will give all the papers. ಆದ್ದರಿಂದ, C.E.R.C., will determine. ಇಲ್ಲಿ ಬೇರೆ ಏನಿಲ್ಲ. C.E.R.C., ಏನು determine ಮಾಡಿದೆಯೋ ಅದನ್ನು ಮಾಡುತ್ತೇವೆ. C.E.R.C., ಪ್ರಕಾರ ಪ್ರತಿ ಯೂನಿಟ್‌ಗೆ ರೂ.1.45 fixed cost, ಉಳಿದಿದ್ದು variable cost ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Variable cost ಎನ್ನುವುದು prevailing rate, diesel rate ಅದರ ಮೇಲೆ ಪ್ರತಿ ಯೂನಿಟ್‌ನ ಕನಿಷ್ಠ ದರ ರೂ. 2.756 ಹಾಗೂ ಗರಿಷ್ಠ ದರ ರೂ. 3.72 ರಂತೆ ನಿರ್ಧಾರವಾಗಿರುತ್ತದೆ. ಇದು ಸಹ ಯಾವ ರೀತಿ ನಿಗದಿಯಾಗುತ್ತದೆ ಎಂದರೆ, at the production level C.E.R.C., will determine and at the consumer level, K.E.R.C., will determine. ಈ ಎರಡೂ Regulatory Authority ಗಳು ಬೆಲೆಯನ್ನು ನಿಗದಿ ಮಾಡುತ್ತವೆ. ಇನ್ನೊಂದು ಷರತ್ತು ಹೇಗಿದೆ ಎಂದರೆ, ನಾವು ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳದಿದ್ದರೂ ಸಹ, Fixed Cost ಅನ್ನು ಕೊಡಲೇಬೇಕು ಎನ್ನುವಂತಹ ಷರತ್ತು ಇದೆ. 2004 ಮತ್ತು 2005ನೇ ಸಾಲಿನಲ್ಲಿ ವಿದ್ಯುತ್‌ಗೆ ಬರವಿತ್ತು. ಇದು ಆ ಸಂದರ್ಭದಲ್ಲಿ ಪ್ರಾರಂಭವಾಗಿದ್ದು, ಇವತ್ತು ನಮಗೆ surplus ಇದೆ. ಆದರೆ, ಅವತ್ತು ವಿದ್ಯುತ್ ಬರವಿದ್ದುದರಿಂದ ಈ conditionality ಮೇಲೆ C.E.R.C., ಮೇಲೆ ಮಾಡಿದ್ದೇವೆ ಹಾಗೂ K.E.R.C., ನಲ್ಲಿ ಮಾಡಿದ್ದೇವೆ. ಹಾಗಾಗಿ, ಯಾವುದೇ ರೀತಿಯಲ್ಲಿ ಹೆಚ್ಚಿಗೆ ಹಣ ಕೊಡುವಂತಹ ಪ್ರಶ್ನೆ ಬರುವುದಿಲ್ಲ. ಇದರಲ್ಲಿ ಯಾವುದೇ ರೀತಿಯ ರೂ.1600/- ಕೋಟಿಗಳನ್ನು ಹೆಚ್ಚಿಗೆ ಕೊಟ್ಟಿರುವಂತಹದ್ದಿಲ್ಲ. ನಾವು Regulatory Authority ಪ್ರಕಾರ ಮಾಡಿದ್ದೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಏನು ಉತ್ತರ ಕೊಟ್ಟಿದ್ದಾರೆ, 10% ಗೆ C.E.R.C., can involve. I agree with it. But, there is no provision for the C.E.R.C., to enter in respect of the remaining 90%. ನಮ್ಮ ರಾಜ್ಯದ K.E.R.C., ಅವರಿಗೆ ಏನು ದರವನ್ನು ನಿಗದಿ ಮಾಡಿಕೊಡುತ್ತಾರೆ, ಅದನ್ನೇ ಅವರು ಅಳವಡಿಸಿಕೊಳ್ಳಬೇಕು. ಆದರೆ, undue advantage ತೆಗೆದುಕೊಂಡು, ಅದಕ್ಕೆ ನಾನು ಕೇಳಿರುವಂತಹ ಮಾಹಿತಿಯಲ್ಲಿ ಅಗ್ರಿಮೆಂಟ್ ಪೇಪರ್ಸ್‌ನ್ನು ಕೊಟ್ಟಿಲ್ಲ. ನಾನು ಅದನ್ನು ಒದಗಿಸಿ ಕೊಡಬೇಕೆಂದು ಕೇಳಿದ್ದೇನೆ. ಆದರೆ, ಅವರು ಅದನ್ನು ಒದಗಿಸಿ ಕೊಟ್ಟಿಲ್ಲ. ಆದರೆ, C.E.R.C., ಏನು ಕ್ರಮ ತೆಗೆದುಕೊಂಡಿದೆ, ಆ ಕ್ರಮದಂತೆ ಏನು ಕೊಡಬೇಕು ಅಷ್ಟನ್ನು ಕೊಡುತ್ತಿಲ್ಲ, ಅದಕ್ಕಿಂತ ಹೆಚ್ಚಿಗೆ ಕೊಡುತ್ತಿದ್ದಾರೆ. ಸುಮಾರು 150% ಹಣ ಯಾರಿಂದ ಹೋಗುತ್ತಿದೆ? ಅದು ನಮ್ಮ ಸಾರ್ವಜನಿಕರಿಂದ ಹೋಗುತ್ತಿದೆ. ಮತ್ತೆ ಈ ತಿಂಗಳು revision ಮಾಡುವುದಕ್ಕೆ ತೆಗೆದುಕೊಂಡಿದ್ದಾರೆ. How it can be possible? ನಮ್ಮ ಜನರು ಸುಮ್ಮನೆ ಹಣ ಕೊಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದನ್ನು ಬರಿ 10%ಗೆ implement ಮಾಡಿ ಎಂದು ಕೇಳುತ್ತಿದ್ದಾರೆ. C.E.R.C., ಆದೇಶ 100% ಸರಿಯಾಗಿ ಇರುತ್ತದೆ. ಯಾವುದೇ 10% ಗೆ, 90% ಗೆ ಇರುವುದಿಲ್ಲ. ಅಗ್ರಿಮೆಂಟ್‌ನ ಎಲ್ಲಾ ವಿವರಗಳನ್ನು ಬೇಕಾದರೆ ಒದಗಿಸುತ್ತೇನೆ. ಯಾರಿಗೂ ಸಹ ಹೆಚ್ಚಿಗೆ ಕೊಡುವಂತಹ ಪ್ರಶ್ನೆಯೇ ಇಲ್ಲ. ಸರ್ಕಾರ C.E.R.C., ನಿಯಮಾವಳಿಗಳ ಪ್ರಕಾರ ಮಾಡಿದೆ ಹೊರತಾಗಿ, ಬೇರೆ ಯಾವುದೇ ದೃಷ್ಟಿಯಿಂದಲೂ ಮಾಡಿಲ್ಲ. ಆದ್ದರಿಂದ, ಈಗ ಮಾನ್ಯ ಸದಸ್ಯರು ಹೆಚ್ಚಿಗೆ ಕೊಟ್ಟಿದ್ದೇವೆಂದು ಏನು ಹೇಳಿದ್ದಾರೆ, it is a notional figure. ಇದರಲ್ಲಿ ಯಾವುದೇ basis ಇಲ್ಲ. ನಮ್ಮ ಸರ್ಕಾರ C.E.R.C., ನಿಯಮಾವಳಿಗಳ ಪ್ರಕಾರ ಮಾಡಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 423**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಈ ವಿಷಯದ ಬಗ್ಗೆ ನಾನು ಸದನದಲ್ಲಿ ನಾಲ್ಕೈದು ಬಾರಿ ಪ್ರಸ್ತಾಪ ಮಾಡಿದ್ದೇನೆ. ಅದಕ್ಕಿಂತಲೂ ಮೀರಿ 2003 ರ ಮಾರ್ಚ್, 19 ರಂದು ಶ್ರೀ ಹೆಚ್.ಹೊನ್ನಪ್ಪ ಎಂಬುವರು ಈ ಸದನದ ಸದಸ್ಯರು ಇದ್ದರು. ಅವರು ನಮ್ಮ ಮಂಡ್ಯ ಜಿಲ್ಲೆಯ ಬಿಜೆಪಿ ಅಧ್ಯಕ್ಷರಾಗಿದ್ದರು. ಶ್ರೀ ಅಪ್ಪಾಜಿಗೌಡರು ಆ ಸಂದರ್ಭದಲ್ಲಿ ಈ ವಿಚಾರವಾಗಿ ಚರ್ಚೆ ಮಾಡಿದ್ದರು.

ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ, ಕೆರಗೋಡು ಗ್ರಾಮದ ಕೆರೆಯಿಂದ ಒಂದು pickup ನಾಲೆ, ಒಂದು ವಿತರಣಾ ನಾಲೆ ಹೋಗುತ್ತದೆ. ಅಲ್ಲಿ ಗೂಳೂರು ಎಂಬ ಬೆಟ್ಟವಿದೆ. ಆ ಬೆಟ್ಟದ ತಪ್ಪಲಿನಲ್ಲಿ ಎರಡು ಕಲ್ಲುಬಂಡೆಗಳಿವೆ. ಅಲ್ಲಿಂದ ಸುಮಾರು 17 ಹಳ್ಳಿಗಳಿಗೆ ನೀರು ಸರಬರಾಜು ಆಗಬೇಕಾಗಿದೆ. ಈ ವಿಚಾರದಲ್ಲಿ ನಾನು ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯ ಅಧ್ಯಕ್ಷನಾಗಿದ್ದಂತಹ ಸಂದರ್ಭದಲ್ಲಿ ಇಡೀ ಸಮಿತಿಯ ತಂಡ ಅಲ್ಲಿಗೆ ಭೇಟಿ ಕೊಟ್ಟು inspect ಮಾಡಿ, ಇಲಾಖೆಯ ಕಾರ್ಯವೃಂದದವರಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಅವರು ಒಪ್ಪಿಕೊಂಡಿದ್ದಾರೆ. ನಂತರ 70 ಲಕ್ಷ ರೂಪಾಯಿಗಳಿಗೆ ಬಿಡ್ ಆಯಿತು. Financial bid ಮತ್ತು technical bid ಎರಡೂ ಬಿಡ್ ಆಯಿತು. ದಿನಾಂಕ 13-07-2018 ರಲ್ಲಿ ಅನುಮೋದನೆ ಆಯಿತು. ಈ ಮಧ್ಯೆ code of conduct ಬಂತು. ನಂತರ ತಡವಾಯಿತು. ಅವರು ಟೈಮ್‌ನ್ನು extend ಮಾಡಿಕೊಡಿ ಎಂದು ಕೇಳಿದರು. ಅದಕ್ಕೆ ಆಗುವುದಿಲ್ಲವೆಂದು ಹೇಳಿದರು. ಅಲ್ಲಿ 120 ಮೀಟರ್ ಉದ್ದದ ಮೇಲ್ಗಾಲುವೆಯನ್ನು ನಿರ್ಮಾಣ ಮಾಡಬೇಕಾಗಿದೆ. Aqueduct ಮಾಡಬೇಕು. Aqueduct ಮಾಡಿದರೆ, ಅಲ್ಲಿ ಬಂಡೆ ತೆಗೆಯುವಂತಹ ಪ್ರಶ್ನೆ ಬರುವುದಿಲ್ಲ. ನೀರು ದೊಡ್ಡ ಪ್ರಮಾಣದಲ್ಲಿ ಪೋಲಾಗುತ್ತಿದೆ. ಸುಮಾರು 17 ಹಳ್ಳಿಗಳ ರೈತರ ಗದ್ದೆಗಳಿಗೆ ನೀರು ಮುಟ್ಟುತ್ತಿಲ್ಲ. ಆಮೇಲೆ ಟೈಮ್‌ನ್ನು extend ಮಾಡಿಕೊಡುವುದಕ್ಕೆ ಆಗುದಿಲ್ಲವೆಂದು, rate ಅನ್ನು enhance ಮಾಡಿಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ರದ್ದು ಮಾಡಿದ್ದಾರೆ. ಮತ್ತೆ re-tender ಮಾಡಬೇಕಲ್ಲವೇ. Re-tender ಅನ್ನು ಮಾಡಲಿಲ್ಲ. ಅದನ್ನು ಅಲ್ಲಿಗೆ ಕೈಬಿಟ್ಟುಬಿಟ್ಟರು. ಮತ್ತೆ ಅದನ್ನು ಕೈಗೆತ್ತಿಕೊಂಡಿಲ್ಲ. ಇದರ ಬಗ್ಗೆ 2003 ರಿಂದ ಇಲ್ಲಿಯವರೆಗೆ ನಿರಂತರ ಪ್ರಯತ್ನ ನಡೆಯುತ್ತಿದೆ. ಇದು 70 ಲಕ್ಷ ರೂಪಾಯಿಗಳ ವಿಚಾರ. ಬಿಡ್ ಕರೆದಿದ್ದಾರೆ. ಮತ್ತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಡ್ code of conduct ನಿಂದ ತಡವಾಯಿತು. ಅವರು ತಡವಾಗಿದ್ದಕ್ಕೆ ನಮಗೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಅದನ್ನು ಹಾಗೆಯೇ ಕೈಬಿಟ್ಟುಬಿಟ್ಟರೆ ಸುಮಾರು 17 ಹಳ್ಳಿಗಳ ರೈತರ ವಿಚಾರ ಏನಾಗಬೇಕು? ದಯಮಾಡಿ, ಮಾನ್ಯ ಸಚಿವರು ಅದಕ್ಕೆ ಕೂಡಲೇ ಟೆಂಡರ್ ಕರೆದು ಕಾಮಗಾರಿಯನ್ನು ಮಂಜೂರು ಮಾಡಿ ಕೈಗೆತ್ತಿಕೊಂಡು 17 ಹಳ್ಳಿಗಳ ಜನರಿಗೆ ನ್ಯಾಯ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯ ಕೆರಗೋಡು ಹೋಬಳಿ ಚಿಕ್ಕಬಳ್ಳಿ ಕೆರೆಯ pickup ನಾಲೆಗೆ ಯೋಜನೆ ಮಂಜೂರಾತಿ ಆಗಿದೆ. ಅದರಲ್ಲಿ ಬಹುತೇಕವಾಗಿ ಕಾಮಗಾರಿಗಳು ಅಂತಿಮ ಹಂತದಲ್ಲಿ ಬಂದಿವೆ. ಸುಮಾರು 92 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 68 ಕೋಟಿ ರೂಪಾಯಿಗಳು ಖರ್ಚು ಆಗಿದೆ. ಉಳಿದ 32 ಕೋಟಿ ರೂಪಾಯಿಗಳಿಗೂ ಸಹ ಕೆಲಸ ನಡೆಯುತ್ತಿದೆ. ಇಲ್ಲಿ ಒಂದು ಸಣ್ಣ ತಾಂತ್ರಿಕವಾದ ಸಮಸ್ಯೆ ಬಂದಿದೆ. ಅಲ್ಲಿ ಬಂಡೆಗಳು ಬಂದಿದ್ದರಿಂದ Aqueduct ಮಾಡಬೇಕೋ ಅಥವಾ ಬೇಡವೋ ಎನ್ನುವುದರಲ್ಲಿಯೇ ಬಹಳ ಸಮಯವನ್ನು ಕಳೆದಿದ್ದಾರೆ. ಈಗ Aqueduct ಮಾಡಬೇಕೆಂದು ಟೆಂಡರ್ ಪ್ರಕ್ರಿಯೆ ಆಗಿ tender approval ಸಹ ಆಗಿದೆ. Work Order ಅನ್ನು ಕೊಟ್ಟಿದ್ದೇವೆ. ಅವರು ಬೇರೆ ಬೇರೆ ಕಾರಣಗಳಿಗೆ ಸಮಯಕ್ಕೆ ಸರಿಯಾಗಿ ಮಾಡಲಿಲ್ಲ. ಚುನಾವಣೆಯ ನೀತಿ ಸಂಹಿತೆ ಜಾರಿಯಾಗಿದ್ದ ಕಾರಣಕ್ಕಾಗಿ ಅದು ಆಗಿರಲಿಲ್ಲ. ಅದು ಬಹಳ rate enhance ಆಗುತ್ತದೆ ಎನ್ನುವ ಕಾರಣಕ್ಕೆ re-tender ಮಾಡಬೇಕೆಂದು ತೀರ್ಮಾನವಾಗಿದೆ. ಈ ಮಾರ್ಚ್ ತಿಂಗಳಿನ ಬಜೆಟ್‌ನಲ್ಲಿ ಅದನ್ನು ಅಳವಡಿಸಿಕೊಂಡು ಅದನ್ನು ತಕ್ಷಣವೇ ಬೇರೆ ಕಾಮಗಾರಿಗಳು ಪೂರ್ಣಗೊಂಡು ನೀರು ಹರಿಸುವುದಕ್ಕಿಂತ ಮುಂಚೆ ಈ ಕಾಮಗಾರಿಗಳನ್ನು ಮುಗಿಸುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಧನ್ಯವಾದಗಳು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇವತ್ತಿನ 15 ಪ್ರಶ್ನೆಗಳಲ್ಲಿ 2 ಪ್ರಶ್ನೆಗಳಿಗೆ ಉತ್ತರ ಇಲ್ಲ. ಉಳಿದ 13 ಪ್ರಶ್ನೆಗಳಿಗೆ ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಇದು ನಮ್ಮ ಸದನದಲ್ಲಿ ದಾಖಲೆ.

**(ಮುಂದು., )**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(156)04–02–2021(2–20)ಎಂವಿ–ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ: 25**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಇವತ್ತು Home Minister Day ಎಂದು declare ಮಾಡಬೇಕಾಗುತ್ತದೆ. ನನಗೆ ಎರಡು ನಿಮಿಷಕ್ಕಿಂತ ಹೆಚ್ಚುವರಿ ಕಾಲಾವಕಾಶವನ್ನು ಕೊಡಬೇಕೆಂದು ಕೋರುತ್ತೇನೆ. ಏಕೆಂದರೆ, ಇದು ಒಂದು ಪ್ರಮುಖವಾದಂತಹ ಪ್ರಶ್ನೆ. ಕಳೆದ ಎಂಟು ವರ್ಷದ ಹಿಂದೆ ಮಹಿಳೆಯ ಮೇಲೆ ನಡೆದ ಅತ್ಯಾಚಾರದ ದುರ್ಘಟನೆಯಲ್ಲಿ, ಕೇಂದ್ರ ಸರ್ಕಾರ 'ನಿರ್ಭಯ ನಿಧಿ' ಯನ್ನು ಸ್ಥಾಪನೆ ಮಾಡಿದೆ. ಪ್ರಥಮವಾಗಿ non-lapsable dedicated fund ಗೆ ಎಂದು ಒಂದು ಸಾವಿರ ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಈಗ ಅದರಲ್ಲಿ ಮೂರು ಸಾವಿರ ಕೋಟಿ ರೂಪಾಯಿಗಳು ಲಭ್ಯವಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ನೋಡಲ್ ಏಜೆನ್ಸಿಯಾಗಿದೆ. Department of Economics Affairs ಏನಿದೆ, ಅದು ಮಾರ್ಗದರ್ಶನ ಮತ್ತೆ ಹಣವನ್ನು ಕೊಡುತ್ತದೆ. ಆದರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಮಾಹಿತಿ ಅಪೂರ್ಣವೆಂದು ಹೇಳುತ್ತೇನೆ. ಅದನ್ನು ಸುಳ್ಳು ಎಂದು ಹೇಳುವುದಿಲ್ಲ. ಆದರೆ, ಮಾಹಿತಿ ಅಪೂರ್ಣವಾಗಿದೆ. ಏಕೆಂದರೆ, ಅವರು ಒಳಾಡಳಿತ ಇಲಾಖೆ ಹಾಗು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನೀಡಿದ್ದಾರೆ. Actual ಆಗಿ ರಸ್ತೆ ಮತ್ತು ಸಾರಿಗೆ ಇಲಾಖೆಗೆ 33.66 ಕೋಟಿ ರೂಪಾಯಿಗಳು. ನ್ಯಾಯಾಂಗ ಇಲಾಖೆಗೆ ಅಂದರೆ Fast Track Court ಗಳನ್ನು ಮಾಡುವುದಕ್ಕೆ 6.07 ಕೋಟಿ ರೂಪಾಯಿಗಳು. ಮಹಿಳಾ ಪೊಲೀಸ್ ಅಂದರೆ ಸ್ವಯಂಸೇವಕರು ಯೋಜನೆಗೆ 0.56 ಕೋಟಿ ರೂಪಾಯಿಗಳು. One Stop Centre Scheme ನಲ್ಲಿ 12.05 ಕೋಟಿ ರೂಪಾಯಿಗಳು. ನಾನು ಈ ಮಾಹಿತಿಯನ್ನು ಪಾರ್ಲಿಮೆಂಟಿನಲ್ಲಿ ಪ್ರಶ್ನೆಯಾಗಿರುವುದನ್ನು ವೆಬ್‌ಸೈಟ್‌ನಿಂದ ತೆಗೆದುಕೊಂಡಿದ್ದೇನೆ. ಬಹುಶಃ ಮಾಹಿತಿ ತಪ್ಪಾಗಬಾರದು ಎಂಬುದು ನನ್ನ ಭಾವನೆ. ಒಂದು ವೇಳೆ ಈ ಮಾಹಿತಿ ತಪ್ಪಾಗಿದ್ದರೆ ಮಾನ್ಯ ಸಚಿವರು ತಿಳಿಸಲಿ. ಈಗ ಇಲ್ಲಿಯವರೆ ಒಟ್ಟು 197.02 ಕೋಟಿ ರೂಪಾಯಿಗಳನ್ನು ಬಿಡುಗೆ ಮಾಡಿದ್ದಾರೆ. ಆದರೆ, ಇಲ್ಲಿಯವರೆಗೆ ಖರ್ಚು ಮಾಡಿರುವುದು 13.62 ಕೋಟಿ ರೂಪಾಯಿಗಳನ್ನು ಮಾತ್ರ. ಇದಕ್ಕೆ ದಯಮಾಡಿ ಸ್ಪಷ್ಟೀಕರಣ ನೀಡಲಿ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ರಾಜ್ಯ ಸರ್ಕಾರ ನಿರ್ಭಯ ನಿಧಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡಿಯಲ್ಲಿ ಬೆಂಗಳೂರು ನಗರದಲ್ಲಿ ಸುರಕ್ಷಾ ನಗರ ಯೋಜನೆ ಅಡಿಯಲ್ಲಿ "Bengaluru Safe City Project" ಮಾಡಿರುವುದಕ್ಕೆ ಮಾಹಿತಿಯನ್ನು ನೀಡಿದ್ದಾರೆ. ಕೇಂದ್ರ ಸರ್ಕಾರದ ನಿರ್ಭಯ ನಿಧಿ ಅಡಿ ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಯೋಜನೆಯ ಅನುಷ್ಠಾನ ಕುರಿತು ಒಟ್ಟು ರೂ.667 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಲ್ಲಿ ಕೇಂದ್ರ ಸರ್ಕಾರದ ಪಾಲು (60%) ರೂ.400.20 ಕೋಟಿಗಳು ಮತ್ತು ರಾಜ್ಯ ಸರ್ಕಾರದ ಪಾಲು (40%) ರೂ.266.80 ಕೊಟಿ ಮಂಜೂರಾಗಿರುತ್ತದೆ. ಆದರೆ, 667 ಕೋಟಿ ರೂಪಾಯಿ ಹಣ ಏನಿದೆ ಅದು ಇದುವರೆಗೂ ಕೂಡ ಖರ್ಚಾಗಿಲ್ಲ. ಈ ಮಧ್ಯೆ ಏನಾಗಿದೆ ಎಂದರೆ, ಅವರು ಏನು Request for Proposal (RFP) ನ್ನು ಮಾಡಿದ್ದಾರೆ. Actual ಆಗಿ ಈ ಯೋಜನೆ 2013ರಲ್ಲಿ ಪ್ರಾರಂಭವಾಗಿದ್ದು, ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಪೊಲೀಸ್ ಇಲಾಖೆಯವರು ಕಳುಹಿಸಿದ್ದಾರೆ, 2018ರಲ್ಲಿ ಅದಕ್ಕೆ ಅನುಮೋದನೆ ದೊರೆಯುತ್ತದೆ. ಆಮೇಲೆ 2019ರಿಂದ ಪುನಃ ಶುರುವಾಗುತ್ತದೆ. ಅವರು ಎರಡು–ಮೂರು ಬಾರಿ ಟೆಂಡರ್ ಕರೆಯುತ್ತಾರೆ, RFP ಕರೆಯುತ್ತಾರೆ, ಅದು ಮುಂದಕ್ಕೆ ಹೋಗುತ್ತದೆ. ಅದಕ್ಕೆ ಮಾನ್ಯ ಸಚಿವರು ಕಾರಣವನ್ನು ಸಹ ನೀಡಿದ್ದಾರೆ. ಈ ಮಧ್ಯೆ "Bengaluru Safe City Project" ನಲ್ಲಿ ರಾಜ್ಯ ಸರ್ಕಾರ ಬೆಂಗಳೂರು ಸುರಕ್ಷಾ ಯೋಜನೆಯಡಿಯಲ್ಲಿ ಮಹಿಳೆಯರ ಸುರಕ್ಷತೆಯ ಸಲುವಾಗಿ Surveillance Camera, Fixed Camera, *Pan–Tilt*–Zoom *Camera* ಹಾಕಬೇಕು ಮತ್ತೆ ಡ್ರೋಣ್ ಕ್ಯಾಮರಾಗಳನ್ನು ಹಾಕಬೇಕೆಂದು ಮಾಡಿದ್ದಾರೆ. ಇದಕ್ಕೆ ಕರೆದಂತಹ Request for Proposal ಎರಡು ಬಾರಿಯಾಗಿದೆ. ಈಗ ಮೂರನೇ ಬಾರಿಗೆ ಕರೆದಿದ್ದಾರೆ. ಈಗ ಕರೆದಿರುವುದರಲ್ಲಿ ಪೊಲೀಸ್ ಇಲಾಖೆಯ ಇಬ್ಬರು ಉನ್ನತ ಅಧಿಕಾರಿಗಳಲ್ಲಿ ಯಾರಿಗೋ ಒಲವು ಮಾಡುವುದರಲ್ಲಿ ಭಿನಾಭಿಪ್ರಾಯ ಬಂದಿದೆ. ಈ ವಿಷಯ ಒಂದು ಬೀದಿ ಕಾಳಗವಾಗಿಬಿಟ್ಟಿದೆ. ಅಂದರೆ, Twitter and Facebook ಮೂಲಕ ಈ ಎಲ್ಲವೂ ಸಹ social media ದಲ್ಲಿ ಬರುತ್ತಿದೆ. ಈ 667 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಸುಮಾರು 75 ಕೋಟಿ ರೂಪಾಯಿಗಳಷ್ಟು ಜಿ.ಎಸ್.ಟಿ ಮೂಲಕ ಸರ್ಕಾರಕ್ಕೆ ತೆರಿಗೆ ಬರುತ್ತಿತ್ತು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಸುದಿರ್ಘವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಇದರಲ್ಲಿ ಎರಡು–ಮೂರು ಇಲಾಖೆಗಳು ಸೇರಿವೆ. ಈಗ ಒಳಾಡಳಿತ ಇಲಾಖೆಯ ಬಗ್ಗೆ ಕೇಳಿದಂತಹ ಸಂದರ್ಭದಲ್ಲಿ ನಮಗೆ ಮೂರು ವರ್ಷದಲ್ಲಿ ಒಟ್ಟು 185

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿ ರೂಪಾಯಿ ಬಂದಿದೆ. ಇದಕ್ಕೆಲ್ಲಾ ಯೋಜನೆಗಳನ್ನು ರೂಪಿಸಿ ಖರ್ಚು ಮಾಡುತ್ತಿದ್ದೇವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 16 ಕೋಟಿ ರೂಪಾಯಿ ಬಂದಿದೆ. ಅವರು ಕೂಡ ಬೇರೆ ಬೇರೆ ರೀತಿಯ ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ. ಇನ್ನು "Safe City Project" ಬಗ್ಗೆ ಹೇಳಬೇಕೆಂದರೆ, ಇದಕ್ಕೆ 2018ರಲ್ಲಿ ಅನುಮೋದನೆ ಸಿಕ್ಕಿದ ಮೇಲೆ, 2019ರವರೆಗೂ ಏನು ಆಗಲಿಲ್ಲ. ಆದರೆ, 2019ರಲ್ಲಿ Project Consultant ಎಂದು ನೇಮಿಸಿದರು. ಅವರು ವರದಿ ಕೊಡುವುದು ತಡವಾಯಿತು. ಮುಂದೆ ಅದಕ್ಕೆ ಅನುಮೋದನೆಯನ್ನು ಸಹ ನೀಡಿದ್ದೇವೆ. ಅದಾದ ಮೇಲೆ ಟೆಂಡರ್ ಅನ್ನು ಸಹ ಕರೆದಿದ್ದೆವು. ಅದರಲ್ಲಿ ಯಾರು Consultant ಏನು RFP ಮಾಡಿದ್ದರು. ಆ ಕಂಡಿಷನ್‌ಗೆ ಯಾರೂ ಕೂಡ eligibility ಬರಲಿಲ್ಲ. Eligibility ಬರದ ಕಾರಣ ಅದನ್ನು ಮುಂದಕ್ಕೆ ಹಾಕಿದೆವು. ಮುಂದೆ ನಾವು ಎರಡನೇ ಬಾರಿಗೆ ಟೆಂಡರ್ ಕರೆದ ಸಂದರ್ಭದಲ್ಲಿ ನಾವು RFP ಯನ್ನು ಒಂದು ತರಹ ಹಾಕಿದ್ದೆವು. ಅದು security ದೃಷ್ಟಿಯಿಂದ ನಾವು ಇಡೀ ದೇಶದಲ್ಲಿ ಚೀನಾ ವಸ್ತುಗಳನ್ನು ತೆಗೆದುಕೊಳ್ಳಬಾರದು ಎಂದು ತೀರ್ಮಾನವಾದ ಮೇಲೆ, ಅದಕ್ಕೆ ಅವರೆಲ್ಲರೂ ಸೇರಿಕೊಂಡು ಹೇಳಿದರು, ಮೊದಲು ನಮಗೆ ಗೊತ್ತಿರಲಿಲ್ಲ ಅದಕ್ಕೆ ಮತ್ತೊಮ್ಮೆ ಅವಕಾಶ ನೀಡಿ ಎಂದಿರುವುದಕ್ಕೆ ಮತ್ತೊಮ್ಮೆ ಟೆಂಡರ್ ಕರೆದಿದ್ದೇವೆ. ಆ ಟೆಂಡರ್ ಪ್ರಕ್ರಿಯೆ ಇದೆ. As per rules ಆ ಪ್ರಕ್ರಿಯೆ ಮುಗಿಯುತ್ತದೆ. ಇನ್ನು ಪೊಲೀಸ್ ಠಾಣೆಯಲ್ಲಿ ಮಹಿಳಾ ಡೆಸ್ಕ್ ಸ್ಥಾಪನೆಗೆ 7 ಕೋಟಿ ರೂಪಾಯಿ ಬಂದಿತ್ತು. ಅದರಲ್ಲಿ 6.77 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮತ್ತೊಂದು ಎಂದರೆ, Anti-Human Trafficking Units ಗೆ ಸುಮಾರು 3.88 ಕೋಟಿ ರೂಪಾಯಿ ಬಂದಿತ್ತು. ಅದರಲ್ಲಿ 3.66 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದರಲ್ಲೂ ಕೂಡ FSL ಅಡಿಯಲ್ಲಿ ನಮಗೆ ಕಳೆದ ತಿಂಗಳು 6.98 ಕೋಟಿ ರೂಪಾಯಿ ಬಂದಿದೆ. ನಾವು ಅದಕ್ಕೆ ಯೋಜನೆಗಳನ್ನು ರೂಪಿಸುತ್ತಿದ್ದೇವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಬೇರೆ ಬೇರೆ ರೀತಿಯ ಯೋಜನೆಗಳನ್ನು ರೂಪಿಸುತ್ತಿದ್ದೇವೆ. ಇನ್ನು ಅಧಿಕಾರಿಗಳ ಬಗ್ಗೆ ಹೇಳಿದ್ದಾರೆ. ಆ ವಿಷಯ ನಮ್ಮ ಗಮನಕ್ಕೆ ಬಂದಿದ್ದು, ಈ ಇಬ್ಬರು ಅಧಿಕಾರಿಗಳನ್ನು ಅವರು ಇದ್ದಂತಹ ಸ್ಥಳಗಳಿಂದ ವರ್ಗಾವಣೆ ಮಾಡಿದ್ದೇವೆ. ಈಗ ಯಾವುದೇ ರೀತಿಯ ಗೊಂದಲವಿಲ್ಲ. ಟೆಂಡರ್ ಪ್ರಕ್ರಿಯೇ ಮಾನ್ಯ ಮುಖ್ಯಕಾರ್ಯದರ್ಶಿಗಳ ನೇತೃತ್ವದಲ್ಲಿರುವಂತಹ ಸಮಿತಿ ಅದನ್ನು ಗಮನಿಸುತ್ತಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಯೋಜನೆ ಹಳಿ ತಪ್ಪಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಿರ್ಭಯ ಯೋಜನೆಯ ಅಡಿಯಲ್ಲಿ ಇಷ್ಟು ದೊಡ್ಡ ಪ್ರಮಾಣದ ಮೊತ್ತವನ್ನು ಸರ್ಕಾರ ಕೊಟ್ಟಿದೆ. ಅದಕ್ಕೆ ನಾನು ವಿನಂತಿ ಮಾಡುವುದೇನೆಂದರೆ, ಕನಿಷ್ಠ ಪಕ್ಷ ಆ ಸಖಿ ಸೆಂಟರ್‌ಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ಪ್ರಾರಂಭ ಮಾಡುವಂತೆ ಆಗಬೇಕು. ಕೇವಲ ಕೆಲವು ಜಿಲ್ಲೆಗಳಲ್ಲಿ ಮಾತ್ರ ಆ ಸಖಿ ಸೆಂಟರ್‌ಗಳನ್ನು ತೆರೆದಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅದನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ನೋಡಿಕೊಳ್ಳುತ್ತಾರೆ. ಆ ಸಖಿ ಸೆಂಟರ್‌ಗಳನ್ನು ಎಲ್ಲಾ ಕಡೆ ಅನುದಾನದ ಲಭ್ಯತೆಯ ಆಧಾರದ ಮೇರೆಗೆ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ದಿನಾಂಕ 04 ಫೆಬ್ರವರಿ, 2021 ಸಮೂಹ 4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 83 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## (2) ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:** "ಸರ್ಕಾರದ ಕಣ್ಗಾವಲಿನಲ್ಲಿ ಖಾಸಗಿ ದೇವಸ್ಥಾನಗಳು" ಕುರಿತು

---

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 03.02.2021ರ ಹೊಸದಿಂಗತ ದಿನ ಪತ್ರಿಕೆಯಲ್ಲಿ, "ಸರ್ಕಾರಧ ಕಣ್ಗಾವಲಿನಲ್ಲಿ ಖಾಸಗಿ ದೇವಸ್ಥಾನ" ಎಂಬ ಶೀರ್ಷಿಕೆಯಡಿಯಲ್ಲಿ ಬಂದಿರುವ ವರದಿಯನ್ನು ಇಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಸರ್ಕಾರದಿಂದ ಖಾಸಗಿ ದೇವಸ್ಥಾನಗಳನ್ನು ಒಂದು ತಿಂಗಳ ಒಳಗಾಗಿ ಸ್ವಯಂ ದೇವಸ್ಥಾನದ ಸಮಿತಿಯವರು ಅಥವಾ ಆ ದೇವಸ್ಥಾನಕ್ಕೆ ಸಂಬಂಧಿಸಿದವರು ದೇವಸ್ಥಾನದ ವಿವರ, ಚೆಕ್ಕುಬಂಧಿ ಸಹಿತ ಮಾಹಿತಿಗಳನ್ನು ನೀಡಿ ನೋಂದಣಿ ಮಾಡಿಸುವಂತೆ, ಇಲ್ಲವಾದಲ್ಲಿ ಆಯಾಯ ಗ್ರಾಮ ವ್ಯಾಪ್ತಿಯ ಗ್ರಾಮ ಲೆಕ್ಕಾಧಿಕಾರಿಗಳ ಮೂಲಕ ವಿವರ ಪಡೆದು ಅದರ ಮುಖ್ಯಸ್ಥರಿಗೆ ನೋಟಿಸು ನೀಡಲಾಗುವುದು ಎಂಬುದರ ಬಗ್ಗೆ ಒಂದು ಜಿಲ್ಲೆಯ ಉಪ ವಿಭಾಗಾಧಿಕಾರಿಗಳು ನೀಡಿರುವ ಮಾಹಿತಿಯನ್ನು ಉಲ್ಲೇಖಿಸಲಾಗಿದೆ.

ಇದಕ್ಕೆ ನನ್ನ ವಿರೋಧವಿದೆ. ಕಾರಣ ರಾಜ್ಯದಲ್ಲಿರುವ ಇತರೆ ಸಮುದಾಯಗಳನ್ನು ಬಿಟ್ಟು ಕೇವಲ ಹಿಂದೂಗಳ ದೇವಸ್ಥಾನಗಳಿಗೆ ಮಾತ್ರ ಈ ನೋಂದಣಿ ಕಾರ್ಯ ಮಾಡುತ್ತಿರುವುದು ಸರಿಯಲ್ಲ. ಮಾಡುವುದಾದರೆ ಎಲ್ಲಾ ಧರ್ಮಗಳ ಧಾರ್ಮಿಕ ಕೇಂದ್ರಗಳನ್ನು ಈ ನೋಂದಣಿ ಕಾರ್ಯದಡಿಯಲ್ಲಿ ತರಬೇಕು ಮತ್ತು ಚೆಕ್ಕುಬಂಧಿ ಸಹಿತ ಎನ್ನುವ ವಿಷಯದಲ್ಲಿ ರಾಜ್ಯದ ಹಲವು ದೇವಾಲಯಗಳು ನ್ಯಾಯಾಲಯದ ಮೆಟ್ಟಿಲೇರಿದ್ದು ಚೆಕ್ಕುಬಂಧಿ ನೀಡಲು ಹೇಗೆ ಸಾಧ್ಯ ಹಾಗೂ ಈಗಿನ ದಿನಮಾನಗಳಲ್ಲಿ ದೇವಾಲಯಗಳ ದಿನಚರಿಯನ್ನು ಮಾಡುವುದೇ ಕಷ್ಟವಾಗಿದ್ದು, ಪ್ರತಿ ತಿಂಗಳು ಯಾವ ರೀತಿಯಲ್ಲಿ ದೇವಸ್ಥಾನದ ವರದಿಯನ್ನು ನೀಡಲು ಸಾಧ್ಯ ಎಂಬುದು ನನ್ನ ಪ್ರಸ್ತಾಪ ಇದರ ಬಗ್ಗೆ ಸರ್ಕಾರವು ಪುನಃ ಪರಿಶೀಲಿಸಿ, ಈ ನೋಂದಣಿಯ ಕಾರ್ಯವನ್ನು ಕೈ ಬಿಡುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದು ಧಾರ್ಮಿಕ ಮತ್ತು ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಅದಕ್ಕೆ ಉತ್ತರ ನೀಡುತ್ತಿದ್ದೇನೆ. ಮಾನ್ಯ ಸುನೀಲ್ ಸುಬ್ರಮಣಿಯವರು ಸರ್ಕಾರದ ಕಣ್ಗಾವಲಿನಲ್ಲಿ ಖಾಸಗಿ ದೇವಸ್ಥಾನ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ವಾಸ್ತವಿಕವಾಗಿ ಇದನ್ನು ಈ ವರ್ಷ ಮಾತ್ರ ಕೊಟ್ಟಿರುವುದಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2015ರಲ್ಲಿ ಸರ್ಕಾರದ ಒಂದು ಸುತ್ತೋಲೆ ಮತ್ತು ಆದೇಶವನ್ನು ಹೊರಡಿಸಿ, ಧಾರ್ಮಿಕ ಮತ್ತು ದತ್ತಿ ಇಲಾಖೆಯ ವ್ಯಾಪ್ತಿಯ ಹೊರಗೆ ಇರುವಂತಹ ದೇವಸ್ಥಾನಗಳನ್ನು ನೋಂದಾಯಿಸಬೇಕೆಂದು ಸೂಚನೆಯನ್ನು ನೀಡಿದೆ. ಅಲ್ಲಿ ಆಯಾಯ ಕಂದಾಯ ಇಲಾಖೆಯ ಕಮೀಷನ್‌ರವರಿಗೆ ಅದರ ಜವಾಬ್ದಾರಿಯನ್ನು ಕೊಡಲಾಗಿರುತ್ತದೆ. 2015-16, 2016-17, 2017-18 ಮತ್ತು 2018-19ರವರೆಗೂ ಕೂಡ ಪ್ರತಿ ವರ್ಷ ಅವರಿಗೆ ನೆನಪೋಲೆ ಹೋಗಿ, ಎಷ್ಟು ದೇವಸ್ಥಾನಗಳು ಉಳಿದುಕೊಂಡಿವೆ ಅಂತಹ ದೇವಸ್ಥಾನಗಳನ್ನು ನೋಂದಾಯಿಸಿ ಎನ್ನುವಂತಹ ಸೂಚನೆಯನ್ನು ಕೊಟ್ಟಿದೆ. 2015ಕ್ಕೆ ಅಂದಿನ ಸರ್ಕಾರ ಇದನ್ನು ಕೊಡುವುದಕ್ಕೆ ಏನು ಕಾರಣವೇನೆಂದರೆ, 2011ರಲ್ಲಿರುವಂತಹ ಧಾರ್ಮಿಕ ಮತ್ತು ದತ್ತಿ ಕಾಯ್ದೆಯಲ್ಲಿ ಕಲಂ 53ರಲ್ಲಿ ಖಾಸಗಿ ದೇವಸ್ಥಾನಗಳನ್ನು ಕೂಡ ಕಡ್ಡಾಯವಾಗಿ ನೋಂದಾಯಿಸಬೇಕೆಂಬ ನಿಯಮಗಳಿವೆ. ಕಾಯಿದೆಗಳಿಗನುಗುಣವಾಗಿ ಸರ್ಕಾರ ನಿರಂತರವಾಗಿ ಕೊಡುತ್ತಾ ಬರುತ್ತಿದೆ. ಇವತ್ತು ಮಾಧ್ಯಮದಲ್ಲಿ ಉಲ್ಲೇಖ ಮಾಡಿ ಬಂದಿರುವುದು.

**(ಮುಂದು...)**

(157) 04.02.2021 02.30 LL-MD

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**(ಮುಂದುವರೆದಿದ್ದು...):-

ಯಾವುದೇ ಕಾರಣಕ್ಕೆ ಖಾಸಗಿ ದೇವಸ್ಥಾನದ ಮೇಲೆ ಯಾವುದಾದರು ಕಣ್ಗಾವಲನ್ನು ಸರ್ಕಾರ ಮಾಡುತ್ತದೆಯೇ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಆದರೆ, ಹಿಂದಿನ ಪ್ರಕ್ರಿಯೆಗಳಿಗೆ ಮುಂದುವರಿದ ಭಾಗವಾಗಿ ಮತ್ತೊಂದು ನೆನಪೋಲೆ ಹೋಗಿರುವುದನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕೂ ಕೂಡ ಖಾಸಗಿ ದೇವಸ್ಥಾನದ ಮೇಲೆ ಹಕ್ಕು ಚಲಾಯಿಸುವ ಆಸಕ್ತಿ ಸರ್ಕಾರಕ್ಕೆ ಇರುವುದಿಲ್ಲವೆಂದು ಈ ಮೂಲಕ ತಿಳಿಸುತ್ತೇನೆ. ಮಾನ್ಯ ಸದಸ್ಯರು ತಮ್ಮ ಪ್ರಸ್ತಾವನೆಯ ಕೊನೆಯ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ, ಈ ಸುತ್ತೋಲೆಯನ್ನು ತಡೆಹಿಡಿಯಬೇಕು ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಸದರಿ ಸುತ್ತೋಲೆಯಂತೆ ಏನಾದರೂ ತೊಂದರೆಯಾದರೆ ಅದನ್ನು ಕೂಡ ಪರಿಶೀಲನೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಆ) ವಿಷಯ:- ಲೈಬ್ರರಿ ಪುಸ್ತಕ ಮಾಫಿಯಾ ಕುರಿತು**

– – –

**ಶ್ರೀ ರವಿಕುಮಾರ್ .ಎನ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಗ್ರಂಥಾಲಯ ಇಲಾಖೆಯಲ್ಲಿ ಹಳೇ ಪುಸ್ತಕಗಳ ಹೆಸರು ಬದಲಾಯಿಸಿ, ಇಲಾಖೆ ಅಧಿಕಾರಿಗಳೇ ಬೇನಾಮಿ ಹೆಸರಿನಲ್ಲಿ ಹುಟ್ಟು ಹಾಕಿರುವ ಪ್ರಕಾಶನ ಸಂಸ್ಥೆಗಳ ಮೂಲಕ ಉಪಯೋಗಕ್ಕೆ ಬಾರದ ಸಾವಿರಾರು ಪುಸ್ತಕಗಳನ್ನು ಮುದ್ರಿಸಿ ಲೈಬ್ರರಿಗೆ ಕಳುಹಿಸುವ ಮೂಲಕ ರಾಜ್ಯದ ಪುಸ್ತಕ ಪ್ರಿಯರಿಗೆ ಅನ್ಯಾಯ ಮಾಡುತ್ತಿರುವುದಾಗಿದೆ. ಇದು ಕೋಟ್ಯಂತರ ರೂಪಾಯಿಗಳ ವ್ಯವಹಾರವಾಗಿದ್ದು, ಶೇಕಡ 50 ರಷ್ಟು ಅಧಿಕಾರಿಗಳೇ ಲೂಟಿ ಮಾಡುತ್ತಿರುವುದಾಗಿದೆ. ಅನಗತ್ಯ, ಅನವಶ್ಯಕ, ಉಪಯೋಗವಿಲ್ಲದ ಪುಸ್ತಕಗಳನ್ನು ಲೈಬ್ರರಿಗೆ ಪೂರೈಸುವುದರಿಂದ ಗ್ರಂಥಾಲಯದ ಮಹತ್ವವನ್ನೇ ಕಡೆಗಣಿಸಿದಂತಾಗಿದೆ. ಆಯ್ಕೆ ಸಮಿತಿಯ ಗಮನಕ್ಕೆ ತಾರದೇ ಪುಸ್ತಕ ಖರೀದಿಸಿ ಲೈಬ್ರರಿಗಳಿಗೆ ಕಳುಹಿಸಿ ವಂಚಿಸುವ ಮಾಫಿಯಾದ ಮತ್ತು ಅಕ್ಷರದ ಹೆಸರಿನಲ್ಲಿ ದಂಧೆ ನಡೆಸುತ್ತಿರುವ ಅಧಿಕಾರಿಗಳ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಶೂನ್ಯ ವೇಳೆಯಲ್ಲಿ ಸರಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ರವಿಕುಮಾರ್ ರವರು ಗ್ರಂಥಾಲಯ ಇಲಾಖೆಯಲ್ಲಿ ಪುಸ್ತಕ ಖರೀದಿ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರ ಪ್ರಶ್ನೆಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಂದ ಉತ್ತರ ಒದಗಿಸಲಾಗುವುದು.

**(ಇ) ವಿಷಯ:- ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಇ.ಎಸ್.ಐ.**
**ಆಸ್ಪತ್ರೆಯ ಸಮಸ್ಯೆ ಬಗ್ಗೆ**

– – –

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಭಾ ನಾಯಕರಲ್ಲಿ ನನ್ನ ಕೋರಿಕೆ ಏನೆಂದರೆ, ಕಳೆದ ವಾರ ಮತ್ತು ಈ ವಾರ ನಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಗಳಿಗೆ ಇದುವರೆವಿಗೂ ಉತ್ತರ ಬಂದಿರುವುದಿಲ್ಲ. ಅದನ್ನು ತಾವು ದಯಮಾಡಿ ಗಮನಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಸೂರಿನ ಕೆ.ಆರ್.ಎಸ್.ರಸ್ತೆಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದ್ದು, ವೈದ್ಯರು, ಸಿಬ್ಬಂದಿಗಳು ಮತ್ತು ಕಾರ್ಮಿಕರು ನರಳುತ್ತಿದ್ದಾರೆ. ಈ ಆಸ್ಪತ್ರೆಯು ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಮತ್ತು ಮಡಿಕೇರಿ 5 ಜಿಲ್ಲೆಗಳ ವ್ಯಾಪ್ತಿಗೆ ಬರುತ್ತಿದೆ ಮತ್ತು 1.75 ಲಕ್ಷ ಕಾರ್ಡು ವಿಮಾದಾರರು ಹಾಗೂ 5 ಲಕ್ಷಕ್ಕೂ ಹೆಚ್ಚು ಕುಟುಂಬ ಸದಸ್ಯರು ಈ ಆಸ್ಪತ್ರೆಯ ವ್ಯಾಪ್ತಿಗೆ ಬರುತ್ತಾರೆ. ಇ.ಎಸ್.ಐ. ಆಸ್ಪತ್ರೆಯ ಕಟ್ಟಡವನ್ನು 18 ತಿಂಗಳುಗಳಲ್ಲಿ ಮೇಲ್ದರ್ಜೆಗೇರಿಸುವುದಾಗಿ ಭರವಸೆ ನೀಡುವ ಮೂಲಕ ಸುಭದ್ರವಾಗಿದ್ದ ಕಟ್ಟಡವನ್ನು ಒಡೆದು ಹಾಕಲಾಗಿದ್ದು, ಇದೀಗ 7 ವರ್ಷಗಳು ಕಳೆದರೂ ಹೊಸ ಕಟ್ಟಡದ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಇದರಿಂದ, ಕಾರ್ಮಿಕರು ದನದ ದೊಡ್ಡಿಯಂತಹ ಜಾಗದಲ್ಲಿ ಗುಣಮಟ್ಟದ ಚಿಕಿತ್ಸೆ ಇಲ್ಲದೇ ತೊಂದರೆ ಅನುಭವಿಸುತ್ತಿದ್ದಾರೆ. ಇನ್ನೂ ಹೆರಿಗೆಗೆ ಮಹಿಳಾ ವೈದ್ಯರಾಗಲಿ, ಸ್ಕ್ಯಾನಿಂಗ್‌ಗಳಂತಹ ಯಂತ್ರೋಪಕರಣಗಳು ಇಲ್ಲದೇ ರೋಗಿಗಳು ಪರದಾಡುತ್ತಿದ್ದಾರೆ ಹಾಗೂ ಸರಿಯಾದ ಶೌಚಾಲಯದ ವ್ಯವಸ್ಥೆಯು ಸಹ ಇರುವುದಿಲ್ಲ.

ಅಲ್ಲದೇ, ಸರ್ಕಾರ ಇ.ಎಸ್.ಐ. ವಿಮಾದಾರರಿಗೆ ಹಣ ಕಡಿತಗೊಳಿಸಿದ ದಿನದಿಂದ 90 ದಿನಗಳ ನಂತರ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು. ಆದರೆ, 2017ರಿಂದ ಈ ಸೌಲಭ್ಯವನ್ನು ಕಡಿತಗೊಳಿಸಿ ವಿಮಾದಾರರಿಂದ ಹಣ ಕಡಿತಗೊಂಡ 2 ವರ್ಷಗಳ ನಂತರ ಈ ಸೌಲಭ್ಯ ನೀಡುವುದಾಗಿ ಸರ್ಕಾರ ಹೇಳಿರುತ್ತದೆ. ಇದರಿಂದ ಕಾರ್ಮಿಕರಿಗೆ ತುಂಬಾ ಅನಾನುಕೂಲವಾಗಿರುತ್ತದೆ.

ಆದುದರಿಂದ, ಸರ್ಕಾರ ಈ ಬಗ್ಗೆ ಗಮನಹರಿಸಿ ಶೀಘ್ರದಲ್ಲಿ ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿ ಗುಣಮಟ್ಟದ ಪ್ರಯೋಗಾಲಯ, ಆಂಬ್ಯುಲೆನ್ಸ್, ಹೆರಿಗೆ ಸೌಲಭ್ಯ, ಮಹಿಳಾ ವೈದ್ಯರು ಹಾಗೂ ಮೂಲಭೂತ ಸೌಕರ್ಯವನ್ನು ಒದಗಿಸಬೇಕು ಹಾಗೂ ವಿಮಾದಾರರು ಹಣ ಕಡಿತಗೊಳಿಸಿದ ದಿನದಿಂದ 90 ದಿನಗಳ ನಂತರ ಅವರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಚಿಕಿತ್ಸೆ ಸೌಲಭ್ಯವನ್ನು ನೀಡಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)(ಕಾರ್ಮಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಶ್ರೀಕಂಠೇಗೌಡ ರವರು ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಇ.ಎಸ್.ಐ. ಆಸ್ಪತ್ರೆಯ ಸಮಸ್ಯೆಗಳ ಬಗ್ಗೆ ಉಲ್ಲೇಖ ಮಾಡಿರುತ್ತಾರೆ. ಅವರ ಪ್ರಶ್ನೆಗೆ ಮಾನ್ಯ ಕಾರ್ಮಿಕ ಸಚಿವರಿಂದ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ) ವಿಷಯ:- ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳಿಗೆ ಸಂಬಳ ನೀಡದೇ ಶೋಷಣೆ ಮಾಡುತ್ತಿರುವ ಕುರಿತು**

- - -

**ಶ್ರೀ ಎಸ್.ವ್ಹಿ. ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳಿಗೆ ಸಂಬಳ ನೀಡದೇ ಶೋಷಣೆ ಮಾಡುತ್ತಿರುವ ಕುರಿತು ವಿಜಯ ಕರ್ನಾಟಕ, ವಿಜಯವಾಣಿ ಮುಂತಾದ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ರಾಜ್ಯದಲ್ಲಿ ಸುಮಾರು 85 ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಿದ್ದು, ಒಟ್ಟು 800 ರಿಂದ 1000 ಮಂದಿ ಅರೆಕಾಲಿಕ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿರುವರು. ಈ ಒಂದು ಸಿಬ್ಬಂದಿಗೆ 2019 ರಿಂದಲೇ ವೇತನ ನೀಡದೇ ಇರುವುದರಿಂದ ಅವರು ಸಂಸಾರ ನಿರ್ವಹಣೆ ಮಾಡುವುದು ಬಹಳ ಕಷ್ಟಕರವಾಗಿರುತ್ತದೆ.

ಅರೆಕಾಲಿಕ ಉಪನ್ಯಾಸಕರನ್ನು ದುಡಿಸಿಕೊಂಡು ಸಂಬಳ ನೀಡದಿರುವುದು ಸರ್ಕಾರಕ್ಕೆ ಶೋಭೆ ತರವಂತಹದ್ದಲ್ಲ. ಆದುದರಿಂದ, ಕೂಡಲೇ ಉನ್ನತ ಶಿಕ್ಷಣ ಸಚಿವರು ಮತ್ತು ತಾಂತ್ರಿಕ ಶಿಕ್ಷಣದ ಉನ್ನತ ಅಧಿಕಾರಿಗಳು ಇತ್ತ ಗಮನಹರಿಸಿ ಹಿಂದಿನ ಒಂದು ವರ್ಷದ ಸಂಬಳ ಬಿಡುಗಡೆ ಮಾಡಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರಕ್ಕೆ ಆಗ್ರಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ವ್ಹಿ. ಸಂಕನೂರರವರು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳ ವೇತನದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಉ) ವಿಷಯ:- ಕನ್ನಡ ವಿಶ್ವವಿದ್ಯಾಲಯದಲ್ಲಿ ಕ್ರೋಢಿಕೃತ/ತಾತ್ಕಾಲಿಕ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ವೇತನದ ಬಗ್ಗೆ**

\- - -

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕನ್ನಡ ನಾಡಿನಾದ್ಯಂತ ಕನ್ನಡ ಭಾಷೆ, ಸಂಸ್ಕೃತಿ, ಸ್ಥಳೀಯ ಆಚಾರ-ವಿಚಾರಗಳ ಸಂಶೋಧನೆಗಾಗಿ ಕನ್ನಡ ಭಾಷೆ, ಉಳಿವು ಬೆಳವಣಿಗೆಗೆ, ಕನ್ನಡ ನಾಡಿಗೆ, ಒಂದು ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗಿದೆ. ಕರ್ನಾಟಕ ರಾಜ್ಯದಲ್ಲಿಯೇ ಹಲವು ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಸ್ಥಾನಮಾನ ಪಡೆದಿರುವ, ಕನ್ನಡ ಭಾಷೆಗಾಗಿ ಸ್ಥಾಪಿಸಲ್ಪಟ್ಟ ಏಕೈಕ ಕನ್ನಡ ವಿಶ್ವವಿದ್ಯಾಲಯ ಇದಾಗಿರುತ್ತದೆ.

ಈ ವಿಶ್ವವಿದ್ಯಾಲಯದಲ್ಲಿ ಕಳೆದ 19 ವರ್ಷಗಳಿಂದ ಕ್ರೋಢಿಕೃತ/ತಾತ್ಕಾಲಿಕ ವೇತನದ ಆಧಾರದ ಮೇಲೆ ಸುಮಾರು 103 ಬೋಧಕ/ಬೋಧಕೇತರ ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಇವರುಗಳಿಗೆ ಕಳೆದ 8-9 ತಿಂಗಳುಗಳಿಂದ ವೇತನ ನೀಡಿರುವುದಿಲ್ಲ. ಇದರ ಸಂಬಂಧ, ಕನ್ನಡ ವಿಶ್ವವಿದ್ಯಾಲಯ ಕ್ರೋಢಿಕೃತ ದಿನಗೂಲಿ ನೌಕರರ ಸಂಘ ಅವರು ನನಗೆ ನೀಡಿರುವ ಮನವಿ ಪತ್ರವನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಈ ಸಿಬ್ಬಂದಿಗಳು ಕಳೆದ 8-9 ತಿಂಗಳುಗಳಿಂದ ವೇತನವಿಲ್ಲದೇ ತುಂಬಾ ತೊಂದರೆಗೆ ಸಿಲುಕಿದ್ದು, ಈ ಕೊರೊನಾದಂತಹ ಮಹಾಮಾರಿಯಿಂದಾಗಿ ಜೀವನ ನಡೆಸುವುದೇ ಕಷ್ಟಕರವಾಗಿರುತ್ತದೆ. ಆದುದರಿಂದ, ಈ ಕೂಡಲೇ ಸರ್ಕಾರ ಇವರ ನೆರವಿಗೆ ಧಾವಿಸಿ, ವೇತನವನ್ನು ಪಾವತಿ ಮಾಡಿ, ಅನುಕೂಲ ಮಾಡಿಕೊಡಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು)(ಉಪ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕನ್ನಡ ವಿಶ್ವವಿದ್ಯಾಲಯದ ಬೋಧಕ/ಬೋಧಕೇತರ ಸಿಬ್ಬಂದಿಗಳ ವೇತನ ಬಿಡುಗಡೆ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಅಲ್ಲದೇ, ಇದು ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಹಾಗಾಗಿ, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಾನು ಮಾನ್ಯ ಉಪ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡುತ್ತೇನೆ.

**(ಊ) ವಿಷಯ:– ಪಂಚಮಸಾಲಿ ಸಮುದಾಯವನ್ನು 2(ಎ)ಗೆ ಮತ್ತು ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ**

– – –

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕಾಗಿನೆಲೆ ಪೀಠಾಧ್ಯಕ್ಷರು, ಜಗದ್ಗುರುಗಳಾದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿಗಳು ಹಾಗೂ ಕೂಡಲ ಸಂಗಮದ ಪರಮಪೂಜ್ಯರಾದ ಶ್ರೀ ಜಯ ಮೃತ್ಯುಂಜಯ ಸ್ವಾಮಿಗಳು ಇವರುಗಳ ನೇತೃತ್ವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮೀಸಲಾತಿಗಾಗಿ ತಮ್ಮ ತಮ್ಮ ಸಮುದಾಯಗಳ ಬೇಡಿಕೆಯನ್ನು ಇಟ್ಟುಕೊಂಡು ಹರಿಹರದಿಂದ ಬೆಂಗಳೂರಿನತ್ತ ಪಾದಯಾತ್ರೆಯಿಂದ ಬರುತ್ತಿರುವ ವಿಚಾರವು ಸಾರ್ವಜನಿಕವಾಗಿ ಮಹತ್ವದ ವಿಚಾರವಾಗಿದ್ದು, ಈ ವಿಷಯವನ್ನು ಸದನದಲ್ಲಿ ಶೂನ್ಯ ವೇಳೆಯ ಅವಧಿಯಲ್ಲಿ ಪ್ರಸ್ತಾಪಿಸಲು ಅವಕಾಶವನ್ನು ಕೋರುತ್ತಿದ್ದೇನೆ.

ಈ ಕಾಲ್ನಡಿಗೆಯು ಜನವರಿ 14 ರಿಂದ ಪ್ರಾರಂಭವಾಗಿದ್ದು, ಪಂಚಮಸಾಲಿ ಸಮುದಾಯವನ್ನು 2(ಎ) ಗೆ ಸೇರ್ಪಡೆ ಮಾಡಬೇಕೆಂದು ಆಗ್ರಹಿಸಿ, ಸಮುದಾಯದ ಮಠಾಧೀಶರಾದ ಶ್ರೀ ಶ್ರೀ ಜಯ ಜಯ ಮೃತ್ಯುಂಜಯ ಸ್ವಾಮೀಜಿ, ಕೂಡಲಸಂಗಮ ಇವರ ನೇತೃತ್ವದಲ್ಲಿ ಕೂಡಲಸಂಗಮದಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿರುತ್ತಾರೆ. ಅದೇ ರೀತಿ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕೆಂದು ಆಗ್ರಹಿಸಿ, ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಮತ್ತು ಶ್ರೀ ಈಶ್ವರಾನಂದಪುರಿ ಸ್ವಾಮೀಜಿಯವರ ನೇತೃತ್ವದಲ್ಲಿ ಸಮುದಾಯದ ಪ್ರಮುಖರು ಕಾಗಿನೆಲೆಯಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದು ಈಗಾಗಲೇ ಅವರು ಬೆಂಗಳೂರು ತಲುಪಿದ್ದಾರೆ. ಅದೇ ರೀತಿ ಕೇಂದ್ರ ಸರ್ಕಾರ ಈಗಾಗಲೇ ಪರಿಶಿಷ್ಟ ಪಂಗಡದವರಿಗೆ ಶೇಕಡ 7.5ರಷ್ಟು ಮೀಸಲು ನೀಡಿದ್ದು, ಅದರಂತೆಯೇ ರಾಜ್ಯದಲ್ಲಿಯೂ ಸಹ ಪರಿಶಿಷ್ಟ ಪಂಗಡದವರಿಗೆ ಪ್ರಸ್ತುತ ಇರುವ ಶೇಕಡ 3 ರಿಂದ 7.5ಕ್ಕೆ ಹೆಚ್ಚಿಸಲು ಗೌರವಾನ್ವಿತ ನ್ಯಾಯಮೂರ್ತಿಗಳಾದಂಥ ಶ್ರೀ ನಾಗಮೋಹನ್‌ದಾಸ್‌ರವರು ವರದಿಯನ್ನು ಸಹ ಕೊಟ್ಟಿರುತ್ತಾರೆ ಹಾಗೂ ಅದೇ ರೀತಿ ಗಂಗಮತಸ್ಥ ಜನಾಂಗದವರು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ತೀವ್ರ ಹೋರಾಟ ನಡೆದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ, ಈ ಎಲ್ಲಾ ಸಮುದಾಯಗಳ ಬೇಡಿಕೆಗಳು ಬಹಳ ಮಹತ್ವದ್ದಾಗಿರುವುದರಿಂದ ಈ ಎಲ್ಲಾ ಸಮುದಾಯಗಳ ಮಠಾಧಿಪತಿಗಳು ಮತ್ತು ಮುಖಂಡರೊಂದಿಗೆ ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳುವುದು ಅತಿ ಅವಶ್ಯಕವಾಗಿರುತ್ತದೆ.

ಆದುದರಿಂದ, ಈ ಎಲ್ಲಾ ಸಮುದಾಯದವರ ಬೇಡಿಕೆಗಳನ್ನು ಈಡೇರಿಸುವ ಸಲುವಾಗಿ ಎಲ್ಲಾ ಸಮುದಾಯಗಳ ಮಠಾಧಿಪತಿಗಳು ಮತ್ತು ಮುಖಂಡರೊಂದಿಗೆ ಮಾತುಕತೆಯನ್ನು ತ್ವರಿತವಾಗಿ ನಡೆಸಿ, ಪರಿಹಾರವನ್ನು ಕಂಡುಕೊಳ್ಳುವ ಸಂಬಂಧ ಸರ್ಕಾರವು ತತ್‌ಕ್ಷಣವೇ ಕ್ರಮ ಕೈಗೊಳ್ಳಲು ಸರ್ಕಾರವನ್ನು ಈ ಸದನದ ಮೂಲಕ ಒತ್ತಾಯಿಸುತ್ತಿದ್ದೇನೆ.

ಪಂಚಮಸಾಲಿ ಜನಾಂಗ, ಕುರುಬ ಜನಾಂಗ, ಪರಿಶಿಷ್ಟ ಪಂಗಡದವರು ಮತ್ತು ಗಂಗಮತಸ್ಥ ಜನಾಂಗದವನ್ನು ಒಟ್ಟಾರೆಯಾಗಿ ಕೂಡಿದರೆ ಕೋಟಿ ಜನರಿದ್ದಾರೆ. ಇವರೆಲ್ಲರೂ ತಮ್ಮ ತಮ್ಮ ಮೀಸಲಾತಿಗೆ ಪಾದಯಾತ್ರೆ ಕೈಗೊಂಡಿದ್ದಾರೆ. ರಾಜ್ಯದ ಉದ್ದಗಲಕ್ಕೂ ಹೋರಾಟಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಏನು ಮಾಡದೇ ಇದ್ದರೆ ಹೇಗೆ? ಆ ಸಮುದಾಯದ ಮುಖಂಡರನ್ನು ಅಥವಾ ಸ್ವಾಮೀಜಿಗಳನ್ನು ಕರೆದು ಚರ್ಚೆ ಮಾಡಿ, ಇದಕ್ಕೆ ಒಂದು ಇತ್ಯರ್ಥ ಕಂಡುಕೊಳ್ಳಬೇಕು. ಹಾಗೆಯೇ ಸರ್ಕಾರ ಪಾದಯಾತ್ರೆ ಮಾಡುವವರು ಮಾಡಲಿ ಅಥವಾ ಹೋರಾಟ ಮಾಡುವವರು ಮಾಡಲಿ ಎಂದು ಸುಮ್ಮನೆ ಕುಳಿತುಕೊಳ್ಳುವುದು ಸರಿಯಾದುದಲ್ಲ ಹಾಗೂ ನಾಗರಿಕ ಸರ್ಕಾರದ ಲಕ್ಷಣವಲ್ಲ. ಹಾಗಾಗಿ, ಅವರನ್ನು ಕರೆದು ಅವರ ಜೊತೆ ಚರ್ಚೆ ಮಾಡಿ, ಈ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕು.

(...ಮುಂದುವರೆದಿದೆ)

(158) 04.02.2021 2.40 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಪರಿಹಾರಕ್ಕೆ ಸಮಂಜಸವಾದ ಉತ್ತರವನ್ನು ಸರ್ಕಾರ ನೀಡಬೇಕು. ಜೊತೆಗೆ ಇದಕ್ಕೆ ಪರಿಹಾರವನ್ನು ಸಹ ಕಲ್ಪಿಸಬೇಕಾಗಿದೆ. ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ ಇದನ್ನು ಅರ್ಧ ಗಂಟೆ ನಿಯಮ ಅಡಿ ಚರ್ಚೆಗೆ ಅವಕಾಶ ಕಲ್ಪಿಸಬೇಕು.

**ಸಭಾಪತಿಯವರು:-** ಆಯಿತು. ಒಂದು ಪತ್ರವನ್ನು ಕಳುಹಿಸಿಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖ) ವಿಷಯ:- ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಪರ ನಿರ್ದೇಶಕರ ಕಛೇರಿ ವಿಜಯಪುರದಲ್ಲಿ ಎರಡು ವರ್ಷಗಳಿಂದ ಪ್ರಾರಂಭ ಆಗದಿರುವ ಬಗ್ಗೆ.**

****

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಟೇಕ್ ಆಫ್ ಆಗದ ಎ.ಡಿ. ಕಛೇರಿ, ಎಂಬ ಶೀರ್ಷಿಕೆಯಡಿ ದಿನಾಂಕ: 03.02.2021 ರಂದು ವಿಜಯವಾಣಿ ದಿನಪತ್ರಿಕೆಯಲ್ಲಿ ಅಪರ ನಿರ್ದೇಶಕರ ಕಛೇರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯಪುರ ಈ ಕಛೇರಿಯ ಕುರಿತು ವರದಿಯಾಗಿದೆ. ಉತ್ತರ ಕರ್ನಾಟಕ ಭಾಗದ 13 ಜಿಲ್ಲೆಗಳಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಮಂಜೂರಾದ ಉತ್ತರ ಕರ್ನಾಟಕ ಅಪರ ನಿರ್ದೇಶಕರ ಕಛೇರಿ (ಎಡಿ) ಎರಡು ವರ್ಷಗಳಿಂದ ಪಾಳು ಬಿದ್ದಿರುವುದು, ಉತ್ತರ ಕರ್ನಾಟಕದ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಹಾಗೂ ಆರೋಗ್ಯ ಕ್ಷೇತ್ರದಲ್ಲೂ ಅಸಮಾನತೆಯನ್ನು ತೋರುವ ಕ್ರಮವಾಗಿದೆ. ಕಲ್ಯಾಣ ಕರ್ನಾಟಕ (ಕಲಬುರಗಿ ವಿಭಾಗ) ಹಾಗೂ ಬೆಳಗಾವಿ ವಿಭಾಗದ ಜಿಲ್ಲೆಗಳು ಆರೋಗ್ಯ ಸೇವೆಯಿಂದ ಸಾಕಷ್ಟು ವಂಚಿತರಾಗಿರುವುದನ್ನು ಕಂಡು 2016-17ರ ಆರೋಗ್ಯ ಇಲಾಖೆ ಪ್ರೊಫೈಲ್‌ನಲ್ಲಿ ನಮೂದಿಸಿದ ಅಂಕಿ-ಅಂಶಗಳ ಪ್ರಕಾರ ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದಾಗ ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳ ಜನತೆ ಆರೋಗ್ಯ ಸೇವೆಯಿಂದ ವಂಚಿತರಾಗಿದ್ದು ಗಮನಕ್ಕೆ ಬಂದ ಹಿನ್ನಲೆಯಲ್ಲಿ ಅಂದಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ಉತ್ತಮಪಡಿಸಲು ಮತ್ತು ಎಲ್ಲ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಹಾಗೂ ಭೌಗೋಳಿಕ ಸಮಾನತೆ ಹೊಂದಲು ಬೆಳಗಾವಿ ಮತ್ತು ಕಲಬುರಗಿಯಲ್ಲಿ ವಿಭಾಗೀಯ ಕಛೇರಿಗಳನ್ನು ಸ್ಥಾಪಿಸಿದ್ದರು ಹಾಗೂ ಈ ಎರಡೂ ವಿಭಾಗಗಳ ಮೇಲುಸ್ತುವಾರಿ ನೋಡಿಕೊಳ್ಳಲು ವಿಜಯಪುರದಲ್ಲಿ ಅಪರ ನಿರ್ದೇಶಕರ ಕಛೇರಿಯನ್ನು ಸ್ಥಾಪಿಸಿದ್ದರು.

ಪ್ರಸ್ತುತ ಇಲ್ಲಿಯವರೆಗೂ ಸದರಿ ಕಛೇರಿ ಅಗತ್ಯ ಸಿಬ್ಬಂದಿಗಳಿಲ್ಲದೇ ಟೇಕ್ ಆಫ್ ಆಗದೇ ಪಾಳು ಬಿದ್ದಂತಾಗಿದೆ. ಈ ಕಛೇರಿಯನ್ನು ಮೂಲ ಸೌಕರ್ಯದ ನೆಪವೊಡ್ಡಿ ಧಾರವಾಡಕ್ಕೆ ಸ್ಥಳಾಂತರ ಮಾಡಲು ಹುನ್ನಾರ ನಡೆದಿದೆ ಎಂದು ಆರೋಪಿಸಲಾಗಿದೆ. ಕಾರಣ ಆರೋಗ್ಯ ಕಾರ್ಯಕ್ರಮಗಳನ್ನು ಉತ್ತಮ ಪಡಿಸಲು ಮತ್ತು ಎಲ್ಲ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಹಾಗೂ ಭೌಗೋಳಿಕ ಸಮಾನತೆ ಕಾಪಾಡುವ ನಿಟ್ಟಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಾಪಿತವಾದ ಈ ಕಛೇರಿಗೆ ಕೂಡಲೇ ಅಗತ್ಯ ಹಾಗೂ ಮಂಜೂರಾದ ಸಿಬ್ಬಂದಿಗಳನ್ನು ನೇಮಕ ಮಾಡಿ ಕಛೇರಿಯನ್ನು ಪ್ರಾರಂಭಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಗೆ ಅಪರೂಪವಾಗಿ ಕಛೇರಿ ನೀಡಿದ್ದಾರೆ. ಮೂಲಭೂತ ಸೌಲಭ್ಯವನ್ನು ನೀಡುವುದಿಲ್ಲವೆಂದರೆ ಮತ್ತೇ ಧಾರವಾಡಕ್ಕೋ ಬೇರೆ ಎಲ್ಲಿಗೋ ಸ್ಥಳಾಂತರಗೊಳಿಸಲು,... ಹಾಗಾಗಿ ಸರ್ಕಾರ ಇದರ ಕಡೆ ಗಮನಹರಿಸಬೇಕು. ಮೂಲಭೂತ ಸೌಲಭ್ಯವನ್ನು ನೀಡಬೇಕು. ಈ ಕಛೇರಿಗಳು ಬೇರೆ ಕಡೆ ವರ್ಗಾವಣೆಗೊಂಡರೆ, ಅಲ್ಲಿ ಸಹ ಮೂಲಭೂತ ಸೌಲಭ್ಯ ಒದಗಿಸಬೇಕಾಗುತ್ತದೆ. ಅದಕ್ಕಾಗಿ ವಿಜಯಪುರ ಜಿಲ್ಲೆಗೆ ಮೂಲಭೂತ ಸೌಲಭ್ಯವನ್ನು ಒದಗಿಸಿ, ಪ್ರಾರಂಭಿಸುವ ವಿಚಾರದಲ್ಲಿ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಅರುಣ ಶಹಾಪೂರರವರು ಕೇಳಿರುವ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಮತ್ತು ವಿರೋಧ ಪಕ್ಷದ ನಾಯಕರು ನೀಡಿರುವ ಸಲಹೆಯನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಸಭಾನಾಯಕರಾಗಿದ್ದಾರೆ. He is part of the Government. ಹಾಗಾಗಿ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಏನಾದರೂ ಉತ್ತರವನ್ನು ಹೇಳಲಿ. ಅವರು ಎಷ್ಟು ಮಹತ್ವವಾದ ವಿಚಾರವನ್ನು ಕೇಳಿದ್ದಾರೆ. ಇದರಲ್ಲಿ ಸಭಾನಾಯಕರ ಮಹತ್ವವೂ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಬಹಳ ಸಮಸ್ಯೆಗಳಿವೆ. ಬೇರೆ-ಬೇರೆ ಕಡೆ ಕಛೇರಿಗಳನ್ನು ಸ್ಥಳಾಂತರಿಸಿರುವುದು ಹಾಗೂ ವರ್ಗಾವಣೆಗೊಂಡಿರುವುದೆಲ್ಲಾ ಸಂಬಂಧಪಟ್ಟಿದೆ. ಹಾಗಾಗಿ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸುತ್ತೇನೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಗಂಭೀರತೆ ಸರ್ಕಾರಕ್ಕೆ ಅರ್ಥವಾಗಿದೆ. ಈ ಮಹತ್ವದ ವಿಚಾರಕ್ಕೆ ಸಂಬಂಧಪಟ್ಟ ಸಚಿವರಿಂದಲೇ ಉತ್ತರ ಒದಗಿಸುತ್ತೇನೆ. ಉತ್ತರ ನೀಡುವ ಸಂದರ್ಭದಲ್ಲಿ ಈ ಸಮಸ್ಯೆಯನ್ನು ಪರಿಹರಿಸುವುದು ಸಹ ಸೇರಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಶೂನ್ಯ ವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಇದುವರೆವಿಗೂ ನನಗೆ ಉತ್ತರ ಬಂದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ದಿನಾಂಕ: 28.01.2021 ರಂದು ಅಧಿವೇಶನ ಪ್ರಾರಂಭಗೊಂಡಿದೆ, ಅಲ್ಲಿಂದ ಶೂನ್ಯ ವೇಳೆಯ ಪ್ರಶ್ನೆಗಳು ನನ್ನ ಹತ್ತಿರ ಬಂದಿದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಕಳೆದ ಅಧಿವೇಶನಕ್ಕೆ ಸಂಬಂಧಿಸಿದಂತೆ ಕೇಳುತ್ತಿದ್ದೇನೆ. ಈಗ ಸಭಾನಾಯಕರಿಗೆ ಸಂಬಂಧಿಸಿದಂಥ ಇಲಾಖೆಯಾಗಿದೆ. ಬೇರೆಯವರಿಗೆ ಸಂಬಂಧಿಸಿದ ಇಲಾಖೆಯಾಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಗೆ ಸಂಬಂಧಿಸಿದೇ ಆದರೆ ನಾನು ಇಲ್ಲಿಯೇ ಉತ್ತರವನ್ನು ಒದಗಿಸುತ್ತೇನೆ. ಏಕೆಂದರೆ, ನಾನು ಇಲ್ಲಿಯೇ ಇರುತ್ತೇನೆ. ಲಿಖಿತವಾದಂಥ ಉತ್ತರವನ್ನು ಒದಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ನಿಯಮ 68ರ ಚರ್ಚೆಯನ್ನು ಪ್ರಾರಂಭ ಮಾಡುತ್ತೀರಾ?

**ಶ್ರೀ ಎಂ.ನಾರಾಯಣಸ್ವಾಮಿ:–** ಬೇಡ.

**ಸಭಾಪತಿಯವರು:–** ಈಗ ಸದನವನ್ನು 4.00 ಗಂಟೆಯವರೆಗೂ ಮುಂದೂಡಲಾಗುವುದು.

**(ಭೋಜನ ವಿರಾಮಕ್ಕಾಗಿ ಸದನವು 2 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಸಂಜೆ 4.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(159)04.02.2021/4.10/ಎಂ.ಎಂ–ಆರ್.ಎನ್

**(ಭೋಜನ ವಿರಾಮದ ನಂತರ ಸದನವು ಪುನಃ ಸಂಜೆ 04 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಪತಿಯವರಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**(3) ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಕಾರ್ಯದರ್ಶಿ, ಕ.ವಿ.ಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020
2. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020
3. ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕ, 2020

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4) ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## ಅ) ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕ, 2020

### ಪರ್ಯಾಲೋಚನಾ ಪ್ರಸ್ತಾವ

**ಡಾ: ಕೆ. ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಡಾ: ಕೆ. ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಸರಳವಾಗಿರುವ ಒಂದು ತಿದ್ದುಪಡಿಯಾಗಿದೆ. ವಿಶೇಷವಾಗಿ ಸಾಂಕ್ರಾಮಿಕ ರೋಗಗಳು ಬಂದಂತಹ ಸಂದರ್ಭದಲ್ಲಿ ಕೆಲವು ನಿಯಮಾವಳಿಗಳನ್ನು, ಮಾರ್ಗಸೂಚಿಗಳನ್ನು ಸರ್ಕಾರಗಳು ಆಗಿಂದಾಗ್ಗೆ ಮಾಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಉದಾಹರಣೆಗೆ ಕೋವಿಡ್ ಬಂದ ಸಂದರ್ಭದಲ್ಲಿ ಕೆಲವು ನಿಯಮಗಳನ್ನು ಯಾರು ಗಾಳಿಗೆ ತೂರುತ್ತಾರೆ, ನಿಯಮ ಉಲ್ಲಂಘನೆಯಾಗುತ್ತದೆ ಅಂತಹ ಸಂದರ್ಭದಲ್ಲಿ ದಂಡ ವಿಧಿಸುವ ಅವಶ್ಯಕತೆ ಇದೆ. ದಂಡ ವಿಧಿಸುವುದಕ್ಕೆ ಮೂಲ ಕಾಯಿದೆಯಲ್ಲಿ ಅವಕಾಶ ಇರಲಿಲ್ಲ. ಹಾಗಾಗಿ ಇದು ಆ ಕಾಯಿದೆಗೆ ಒಂದು ಸಣ್ಣ ತಿದ್ದುಪಡಿಯನ್ನು ತಂದಿರುವ ಬಿಲ್ ಆಗಿದೆ. ದಯವಿಟ್ಟು ಎಲ್ಲಾ ಸದಸ್ಯರೂ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಪಾಸ್ ಮಾಡುವುದಕ್ಕೆ ಅಡ್ಡಿ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ: ಕೆ. ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, 2020ರ ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಸಾಂಕ್ರಾಮಿಕ ರೋಗಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.ಸ

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ 2015ನೇ ಇಸವಿಯಲ್ಲಿ ಕಾನೂನಿಗೆ ಒಂದು ತಿದ್ದುಪಡಿ ತಂದಿತು. ಅದೇನೆಂದರೆ “Combined Harvesting” ಅನ್ನು introduce ಮಾಡಿದರು. ಅದರಲ್ಲಿ Construction Equipment Vehicle ಎಲ್ಲವೂ ಸೇರಿಕೊಂಡಿದ್ದವು.

(ಮುಂದು)

(160) 04–02–2021/ 04–20/ ಕೆಹೆಚ್–ಆರ್ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು):–**

ಆದರೆ ನಮ್ಮ ಕರ್ನಾಟಕದಲ್ಲಿ ಹೊಸದಾಗಿ Cane Harvesting Machine ಗಳು ಏನು ಬಂದಿವೆ? ಇದಕ್ಕೆ ನಿರ್ದಿಷ್ಟವಾಗಿ ಪರಿಚಯ ಆಗಿರಲಿಲ್ಲ. ಇದನ್ನು ನಾವು ಇವತ್ತಿನ ದಿವಸ ಪರಿಚಯ ಮಾಡಿ Cane Harvesting Machine ಎಷ್ಟು tax ನಿಗದಿ ಮಾಡಬೇಕೆಂದು ತೀರ್ಮಾನ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡು ಆರ್ಥಿಕ ಇಲಾಖೆಯವರ ಜೊತೆ ಚರ್ಚೆ ಮಾಡಿಕೊಂಡು, ಆರ್ಥಿಕ ಇಲಾಖೆಯವರು ಇದಕ್ಕೆ ಪ್ರತ್ಯೇಕವಾಗಿರುವಂತಹ ಶೇಕಡಾ 6 ರಷ್ಟು ತೆರಿಗೆ ಹಾಕಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿದ್ದರು. ಪುನಃ ಇದರ ಬಗ್ಗೆ ಚರ್ಚೆ ಮಾಡಿ ಶೇಕಡಾ 6 ರಷ್ಟು ತೆರಿಗೆಯಾದರೆ ಜಾಸ್ತಿಯಾಗುತ್ತದೆ. ಅದನ್ನು ಶೇಕಡಾ 3 ರಷ್ಟಕ್ಕೆ ತರಬೇಕೆಂದು Combined Harvesting ಅನ್ನು ಹೊರತುಪಡಿಸಿ, Cane Harvesting Machine ಎಂದು ತಿಳಿದುಕೊಂಡು, ಇದಕ್ಕೆ ಈ ಒಂದು ವಿಧೇಯಕವನ್ನು introduce ಮಾಡಿಕೊಂಡು, ಇವತ್ತಿನ ದಿವಸ ಈ ವಿಧೇಯಕವನ್ನು amendment ಮಾಡುತ್ತಿದ್ದೇವೆ. ಬಹುತೇಕವಾಗಿ ರಾಜ್ಯದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳು ಇರಬಹುದು, ದೊಡ್ಡ ದೊಡ್ಡ ರೈತರು ಇರಬಹುದು, ಕಬ್ಬು ಬೆಳೆಗಾರರು ಇರಬಹುದು, ಇವತ್ತಿನ ದಿವಸ ಇವರೆಲ್ಲರೂ ಕೂಡ Cane Harvesting ಎಂದರೆ ಕಬ್ಬು ಕಡಿತ ಯಂತ್ರಗಳನ್ನು ಏನು ಖರೀದಿ ಮಾಡುತ್ತಿದ್ದಾರೆ? ಇದರ ಬೆಲೆ ಸುಮಾರು 1 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಈ ಯಂತ್ರಗಳನ್ನು ಅನೇಕ ಕಾರ್ಖಾನೆಯವರು ತೆಗೆದುಕೊಂಡಿದ್ದಾರೆ ಮತ್ತು ದೊಡ್ಡ ದೊಡ್ಡ ರೈತರು ತೆಗೆದುಕೊಂಡಿದ್ದಾರೆ. ಅನೇಕ ಕಡೆಗಳಲ್ಲಿ ಇವತ್ತಿನವರೆಗೂ ಕೂಡ ನೋಂದಣಿಯಾಗದೇ ಬಹಳ ದಿವಸಗಳಿಂದ ಬಾಕಿ ಇರುವಂತಹದ್ದು ಆಗಿದೆ. ಬೇರೆ ಪಕ್ಕದ ರಾಜ್ಯದಲ್ಲಿ ತೆರಿಗೆ ಕಡಿಮೆ ಇರುವುದರಿಂದ, ಅನೇಕ ಕಾರ್ಖಾನೆಯ ಮಾಲೀಕರು ಕೂಡ ಬೇರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ತೆರಿಗೆ ಕಡಿಮೆ ಇರುವುದರಿಂದ, ಅಲ್ಲಿ ನೊಂದಣಿ ಮಾಡಿಸುವಂತಹ ಪರಿಪಾಠ ನಮ್ಮ ಕರ್ನಾಟಕದಲ್ಲಿ ಇದೆ. ಕಾರು, ಜೀಪು, medium vehicles ಇರಬಹುದು. ಮಹಾರಾಷ್ಟ್ರದಲ್ಲಿ ಮೋಟಾರು ವಾಹನಗಳ ತೆರಿಗೆ ಕಡಿಮೆ ಇರುವುದರಿಂದ, ಅಲ್ಲಿಗೆ ಹೋಗಿ tax registration ಮಾಡುವಂತಹದ್ದು ಇದೆ. ಇವತ್ತಿನ ದಿವಸ ಅದನ್ನು ತೆಗೆದು ಶೇಕಡಾ 3 ರಷ್ಟಕ್ಕೆ ಇಳಿಸಿ, ಸುಮಾರು 3 ಲಕ್ಷ ರೂಪಾಯಿಗಳ road tax ಅನ್ನು ಕಟ್ಟಿ, ವಾಹನಗಳಿಗೆ ನೊಂದಣಿಯಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದೇವೆ. ಅನೇಕ ಸಕ್ಕರೆ ಕಾರ್ಖಾನೆಗಳ ಮಾಲೀಕರು ಒಂದೊಂದು ಕಾರ್ಖಾನೆಗೆ ಮೂರರಿಂದ ನಾಲ್ಕು machinery ಗಳನ್ನು ಕೊಂಡುಕೊಂಡಿದ್ದಾರೆ. ಇತ್ತೀಚಿನ ದಿನಮಾನಗಳಲ್ಲಿ ದೊಡ್ಡ ದೊಡ್ಡ ರೈತರು ಕೂಡ ಈ ರೀತಿಯ machinery ಗಳನ್ನು ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನೊಂದಣಿಯಾಗದೇ ಇರುವಂತಹದ್ದನ್ನು ಗಮನದಲ್ಲಿಟ್ಟುಕೊಂಡು ರೈತ ಮುಖಂಡರುಗಳು ಮತ್ತು ಕಬ್ಬು ಬೆಳೆಗಾರರ ಜೊತೆಯಲ್ಲಿ ನಾವು ಚರ್ಚೆ ಮಾಡಿ, ಈ ಹೊಸ ವಿಧೇಯಕವನ್ನು ತಂದು, ಅವರಿಗೆ ನೊಂದಣಿ ಮಾಡಿಕೊಂಡು ಅಧಿಕೃತವಾಗಿ ಆ ಒಂದು ವಾಹನಕ್ಕೆ ನಂಬರ್‌ಗಳನ್ನು ಕೊಡುವಂತಹ ಕೆಲಸವನ್ನು ನಾವು

ಮಾಡುತ್ತಿದ್ದೇವೆ. ಮೊದಲು ಏನಾಗುತ್ತಿತ್ತೆಂದರೆ, construction machinery ಗಳು ಏನು ಇರುತ್ತಿತ್ತು. ಅವುಗಳಿಗೆ registration ಮಾಡುವಂತಹದ್ದು; ಇದು ಮೊದಲೆಲ್ಲಾ ಬರುತ್ತಿರಲಿಲ್ಲ. ಅದಕ್ಕಾಗಿ ಅದನ್ನು ಬೇರ್ಪಡಿಸಿ ಇದನ್ನು Cane Harvesting machine ಗಳಿಗೆ ನೊಂದಣಿ ಮಾಡಿಸುವುದಕ್ಕೆ ಅವಕಾಶ ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಅದಕ್ಕಾಗಿ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020 ಅನ್ನು ಸ್ವಾಗತಿಸುತ್ತಾ, ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಇರುವಂತಹ ಸಕ್ಕರೆ ಕಾರ್ಖಾನೆಗಳು ಮತ್ತು ಕಬ್ಬು ಬೆಳೆಗಾರರಿಗೆ ಇದರಿಂದ ಬಹಳಷ್ಟು ಲಾಭ ಆಗಲಿದೆ. ಏಕೆಂದರೆ, ಇವತ್ತಿನ ದಿವಸ ಬೆಳಗಾವಿಯಲ್ಲಿ ಸುಮಾರು 20 ರಿಂದ 25 ಸಕ್ಕರೆ ಕಾರ್ಖಾನೆಗಳು, ಬಾಗಲಕೋಟೆಯಲ್ಲಿ ಸುಮಾರು 25 ಸಕ್ಕರೆ ಕಾರ್ಖಾನೆಗಳು ಮತ್ತು ಕರ್ನಾಟಕದಲ್ಲಿ ಒಟ್ಟು ಸುಮಾರು 100 ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಸರ್ಕಾರಿ ವಲಯದಲ್ಲಿ ಇರಬಹುದು, ಇವತ್ತಿನ ದಿವಸ ಖಾಸಗಿ ವಲಯದಲ್ಲಿ ಕೆಲಸ ಮಾಡುವಂತಹವರು ಇರಬಹುದು. ಕಳೆದ ಹಲವಾರು ವರ್ಷಗಳಿಂದ ಈ ಕಾರ್ಮಿಕರ ಮೇಲೆ ಅವಲಂಬಿಸುವಂತಹ ಒಂದು ಸಂದರ್ಭ ಉದ್ಭವವಾಗಿದೆ. ಆದರೆ, ಇವತ್ತಿನ ದಿವಸ ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯ ಕಬ್ಬಿನ ಬೆಳೆ ಉತ್ಪಾದನೆಯಲ್ಲಿ ಎರಡನೇ ಅತಿ ದೊಡ್ಡ ರಾಜ್ಯವಾಗಿ ಹೊರಹೊಮ್ಮಿದೆ. ಕಬ್ಬಿನ ಕ್ಷೇತ್ರ ಹೆಚ್ಚಾಗಿದೆ. ಕಬ್ಬಿನ ಇಳುವರಿ ಕೂಡ ಹೆಚ್ಚಾಗಿದೆ ಮತ್ತು ಇವತ್ತಿನ ದಿವಸ ಲಾಭದಾಯಕವಾಗಿರುವಂತಹ ಬೆಳೆ ಎಂದು ರೈತ ತೀರ್ಮಾನ ಮಾಡಿ, ಇವತ್ತಿನ ದಿವಸ ಕರ್ನಾಟಕದಾದ್ಯಂತ ಅತಿ ಹೆಚ್ಚು ಕಬ್ಬು ಬೆಳೆಯುವಂತಹ ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗುಲ್ಬರ್ಗಾ, ಬೀದರ್ ಮತ್ತು ಪಕ್ಕದಲ್ಲಿರುವಂತಹ ದಾವಣಗೆರೆ ಇರಬಹುದು, ಹಾವೇರಿ ಇರಬಹುದು, ಮಂಡ್ಯ ಮತ್ತು ಹಾಸನ ಇರಬಹುದು. ಇವತ್ತಿನ ದಿವಸ ಬಹಳಷ್ಟು ಜಿಲ್ಲೆಗಳು ಕಬ್ಬು ಬೆಳೆಯುವಂತಹ ಸಂದರ್ಭದಲ್ಲಿ ಕಬ್ಬನ್ನು harvest ಮಾಡುವಂತಹದ್ದು ಎಂದರೆ, ಕಬ್ಬನ್ನು ಕಟಾವು ಮಾಡುವಂತಹ ಸಂದರ್ಭದಲ್ಲಿ ರೈತರು, ಅದರಲ್ಲಿಯೂ ವಿಶೇಷವಾಗಿ ಸಕ್ಕರೆ ಕಾರ್ಖಾನೆಗಳು harvesting gang ಮೇಲೆ ಅವಲಂಬಿತವಾಗಿರುವಂತಹ ಸಂದರ್ಭಗಳನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಬಾಗಲಕೋಟೆ ಭಾಗದಿಂದ ಬಂದವರಾಗಿದ್ದು, ಇದರ ಬಗ್ಗೆ ಅವರಿಗೆ ಗೊತ್ತಿದೆ. ಇವತ್ತಿನ ದಿವಸ ಬಹಳಷ್ಟು ರೈತರು ಮತ್ತು ಸಕ್ಕರೆ ಕಾರ್ಖಾನೆಗಳು ಪಕ್ಕದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೆರೆಯ ಮಹಾರಾಷ್ಟ್ರ ರಾಜ್ಯದ ಬೀಡ್‌ನಿಂದ ಬರುವಂತಹ ಕಾರ್ಮಿಕರ ಮೇಲೆ ಅವಲಂಬಿತವಾಗಿರುವಂತಹದ್ದು ಆಗಿದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಸಕ್ಕರೆ ಕಾರ್ಖಾನೆಗಳು ಮತ್ತು ರೈತರು ಅಲ್ಲಿಯ ಕಾರ್ಮಿಕರಿಗೆ ಅಡ್ವಾನ್ಸ್ ಅನ್ನು ಕೊಟ್ಟು, ಅವರನ್ನು ಕಾರ್ಖಾನೆಗಳಿಗೆ ಕರೆದುಕೊಂಡು ಬಂದು, ಅವರಿಂದ ಈ ಸಕ್ಕರೆ ಕಾರ್ಖಾನೆಗಳ season ಪ್ರಾರಂಭ ಮಾಡುವಂತಹ ಪರಿಸ್ಥಿತಿ ಇದೆ. ಅಂದರೆ, ಶೇಕಡಾ 75 ರಷ್ಟು ಕಾರ್ಮಿಕರು, ಪಕ್ಕದ ಮಹಾರಾಷ್ಟ್ರ ರಾಜ್ಯದ ಬೀಡ್, ಸೊಲ್ಲಾಪೂರ ಈ ಭಾಗಗಳಿಂದ ಕಾರ್ಮಿಕರು ಬರುವಂತಹ ಸಂದರ್ಭ ಉದ್ಭವವಾಗಿದೆ. ಇದರಿಂದ, ಬಹಳಷ್ಟು ಸಂದರ್ಭಗಳಲ್ಲಿ strike ಆಯಿತು, ಕಾರ್ಮಿಕರ ತೊಂದರೆಯಾದಾಗ ನಾವು ಕಾರ್ಖಾನೆಗಳನ್ನು ಪ್ರಾರಂಭ ಮಾಡದೇ ಇರುವಂತಹ ಅನೇಕ ಸಂದರ್ಭಗಳನ್ನು ಅನೇಕ ವರ್ಷಗಳಿಂದ ನೋಡಿದ್ದೇವೆ. ವಿಶೇಷವಾಗಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ನುರಿಸುವುದನ್ನು ನಾವು mechanized ಮಾಡಬೇಕು. ವಿದೇಶಗಳಲ್ಲಿ ಕಬ್ಬು ಕಟಾವು ಮಾಡುವಂತಹ ಹೊಸ ವಿನ್ಯಾಸವನ್ನು ಹೊಂದಿರುವಂತಹ ಮಷಿನರಿಗಳು ಇವೆ. ಕಬ್ಬು ಕಟಾವು ಮಾಡುವಂತಹ ಮಷಿನ್‌ಗಳು ವಿದೇಶದಲ್ಲಿ ಒಂದು ದಿನಕ್ಕೆ ಹೆಚ್ಚು harvesting ಮಾಡುವಂತಹ ಸಾಮರ್ಥ್ಯವನ್ನು ಮಷಿನ್‌ಗಳು ಹೊಂದಿವೆ. ವಿಶೇಷವಾಗಿ ಐಲ್ಯಾಂಡ್‌ನಲ್ಲಿ ನೋಡಬಹುದು, ಬ್ರೆಜಿಲ್‌ನಲ್ಲಿ ನೋಡಬಹುದು. ಅಂತಹ ಉಪಕರಣಗಳನ್ನು ಕಾರ್ಮಿಕರ ಮೇಲೆ ಅವಲಂಬಿತವಾಗಿರುವಂತಹ ಕಡೆ ನಾವು ಉಪಯೋಗಿಸಿಕೊಂಡರೆ ಒಳ್ಳೆಯದು. ಇವತ್ತಿನ ದಿವಸ ಇಂತಹ ಉಪಕರಣಗಳನ್ನು ಉಪಯೋಗಿಸಿಕೊಂಡಿರುವುದರಿಂದ, ಸಕ್ಕರೆ ಉತ್ಪಾದನೆಯಲ್ಲಿ ಮತ್ತು ಕಬ್ಬು ಅರೆಯುವ ಉತ್ಪಾದನೆಯಲ್ಲಿ ಸಕ್ಕರೆ ಕಾರ್ಖಾನೆಗಳು ಹೆಚ್ಚು ಗುರಿಯನ್ನು ತಲುಪುವುದಕ್ಕೆ ಸಾಧ್ಯವಾಗಿದೆ. ಇಡೀ ದೇಶದಲ್ಲಿ ಕರ್ನಾಟಕ 3ನೇ ಸ್ಥಾನ ಮತ್ತು 4ನೇ ಸ್ಥಾನದಲ್ಲಿ ಇದೆ. ಇವತ್ತಿನ ದಿವಸ ಕರ್ನಾಟಕ ಭಾರತ ದೇಶದಲ್ಲಿ ಎರಡನೇ ದೊಡ್ಡ ರಾಜ್ಯವಾಗಿ ಹೊರಹೊಮ್ಮಿದೆ. ಇವತ್ತಿನ ದಿವಸ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಶೇಕಡಾ 70 ರಷ್ಟು ರೈತರು ಕಬ್ಬನ್ನು ಬೆಳೆಯುತ್ತಿದ್ದಾರೆ ಮತ್ತು ಅತ್ಯುತ್ತಮವಾದಂತಹ ಬೆಲೆಯನ್ನು ಪಡೆಯುವಂತಹ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಗಳು ಇವತ್ತು ಪಕ್ಕದ ಮಹಾರಾಷ್ಟ್ರ ರಾಜ್ಯದ ಬೀಡ್‌ನಿಂದ ಬರುವಂತಹ ಕಾರ್ಮಿಕರ ಮೇಲೆ ಅವಲಂಬಿತರಾಗದೇ ಇವತ್ತಿನ ದಿವಸ ರೈತರು ಕೂಡ ಮಷಿನರಿಗಳನ್ನು ಖರೀದಿ ಮಾಡಿದ್ದಾರೆ. ಇದಕ್ಕೆ ಕಾರ್ಖಾನೆಗಳು ಗ್ಯಾರಂಟಿಯಾಗಿವೆ. ಇದ್ದರಿಂದ tripartite agreement ಮಾಡಿಕೊಂಡು, ಕಾರ್ಖಾನೆ, ರೈತ ಮತ್ತು ಅಲ್ಲಿರುವಂತಹ ಒಂದು ಹಣಕಾಸಿನ ಸಂಸ್ಥೆಯು ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಹಣವನ್ನು ಕೊಡುವುದರಿಂದ, ಇವತ್ತಿನ ದಿವಸ ಕಾರ್ಖಾನೆಗಳು ಮಹಾರಾಷ್ಟ್ರ ರಾಜ್ಯದ ಕಾರ್ಮಿಕರ ಮೇಲೆ ಅವಲಂಬಿತರಾಗದೇ, ತಮ್ಮದೇ ಆದಂತಹ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಅನುವು ಮಾಡಲಾಗಿದೆ. ಮಾನ್ಯ ಸಚಿವರು ಆ ಭಾಗದಿಂದ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಂದವರು ಮತ್ತು ಸಕ್ಕರೆ ಕಾರ್ಖಾನೆಯ ನಾಯಕತ್ವವನ್ನು ಮಾಡುವಂತಹವರು ಆಗಿದ್ದಾರೆ. ಈ ವಿಚಾರವಾಗಿ ಹಲವಾರು ಬಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ರೈತರು ಮಾನ್ಯ ಸಚಿವರನ್ನು ಭೇಟಿಯಾಗಿದ್ದಾರೆ. ಇವತ್ತಿನ ದಿವಸ ಸದನದ ಸದಸ್ಯರುಗಳ ಗಮನಕ್ಕೆ ತರುವುದೇನೆಂದರೆ, this machine only moves in the fields. ಇದು ರಸ್ತೆಯಲ್ಲಿ ಓಡಾಡುವಂತಹ ವಾಹನ ಅಲ್ಲ. ಇದಕ್ಕೆ ತೆರಿಗೆ ಹಾಕಬಾರದು. ಸಂಪೂರ್ಣವಾಗಿ ರೈತರ ಜಮೀನುಗಳಲ್ಲಿ ಕಬ್ಬನ್ನು ಕಡಿಯುವಂತಹ ಮತ್ತು ಅದನ್ನು ಲೋಡ್ ಮಾಡುವಂತಹ ಮಷಿನ್ ಆಗಿರುವುದರಿಂದ, ಇದಕ್ಕೆ ತೆರಿಗೆ ಕಡಿಮೆ ಮಾಡಬೇಕು. ಇದರಿಂದ ರೈತರಿಗೆ ಲಾಭವಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಸಾರಿಗೆ ಸಚಿವರಿಗೆ ಹಲವಾರು ಬಾರಿ ಆ ಭಾಗದ ರೈತರು, ಸಕ್ಕರೆ ಕಾರ್ಖಾನೆಯ ಮಾಲೀಕರು ಇದರ ಬಗ್ಗೆ ವಿನಂತಿ ಮಾಡಿದ್ದೇವೆ. ಇದಕ್ಕೆ ಸರ್ಕಾರ ಸ್ಪಂದಿಸಿ, ಈ ತೆರಿಗೆಯನ್ನು ಕಡಿಮೆ ಮಾಡುವಂತಹ ವಿಚಾರವನ್ನು ಮುಂದಿಟ್ಟುಕೊಂಡು ಕಬ್ಬನ್ನು ಬೆಳೆಯುವಂತಹ ರೈತರ ಸಹಾಯಕ್ಕಾಗಿ ಈ ವಿಧೇಯಕ ಬಂದಿದೆ. ಅದಕ್ಕಾಗಿ ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ, ಇದರಿಂದ ರೈತರಿಗೆ ಬರುವಂತಹ ದಿನಮಾನಗಳಲ್ಲಿ ಅತಿ ಹೆಚ್ಚು ಕಬ್ಬನ್ನು ಬೆಳೆಯುವಂತಹ ರಾಜ್ಯವಾಗಲಿದೆ. ಆದ್ದರಿಂದ, ಈ ವಿಧೇಯಕವನ್ನು ಸ್ವಾಗತ ಮಾಡುತ್ತಿದ್ದೇನೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020 ಅನ್ನು ಮಾನ್ಯ ಸಾರಿಗೆ ಸಚಿವರು ತಂದಿರುವಂತಹದ್ದು ಬಹಳ ಸ್ವಾಗತಾರ್ಹವಾಗಿದೆ. ಈಗಾಗಲೇ ಆಡಳಿತ ಪಕ್ಷದ ಮುಖ್ಯ ಸಚೇತಕರು ಇದರ ಬಗ್ಗೆ ವಿವರಣೆ ನೀಡಿದ್ದಾರೆ. ನಾನು ಕೂಡ ಕಬ್ಬಿನ ಸಂಯುಕ್ತ ಕೊಯಿಲು ವಾಹನ ತೆರಿಗೆಯನ್ನು ಶೇಕಡಾ 6 ರಿಂದ ಶೇಕಡಾ 3 ರಷ್ಟಕ್ಕೆ ಇಳಿಸಿದ್ದೀರಿ. ರೈತರಿಗೆ ಯಾವುದೇ ರೀತಿಯ ತೆರಿಗೆ ಹಾಕಬೇಡಿ. ಈಗಾಗಲೇ ಪಕ್ಕದ ರಾಜ್ಯವಾದ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಮಾತ್ರ ಅಲ್ಲ, ರೈತರು ಉಪಯೋಗ ಮಾಡುವಂತಹ ಎಲ್ಲಾ ಯಂತ್ರೋಪಕರಣಗಳಿಗೆ ಅಲ್ಲಿ ತೆರಿಗೆ ಕಡಿಮೆ ಮಾಡಿದ್ದಾರೆ. ಎಲ್ಲಿಯೂ ಯಂತ್ರೋಪಕರಣಗಳಿಗೆ ತೆರಿಗೆಯೇ ಇಲ್ಲ. ಕೃಷಿ ಇಲಾಖೆಯಿಂದ ರೈತರು ಉಪಯೋಗಿಸುವ ಸಬ್ಸಿಡಿ ಒಂದು ದರದಲ್ಲಿ ಕೊಡುತ್ತಿದ್ದಾರೆ. ಈ ವಿಚಾರ ಇದಕ್ಕೆ ಸಂಬಂಧ ಇಲ್ಲದೇ ಇದ್ದರೂ ಕೂಡ related. ಬೇರೆ ಬೇರೆ ಖಾಸಗಿ ಏಜೆನ್ಸಿಗಳಿಗೆ ಕೊಟ್ಟಿದ್ದೀರಿ. ಅವರ್ಯಾರು ಕೂಡ ಯಂತ್ರೋಪಕರಣಗಳನ್ನು ರೈತರಿಗೆ ಕೊಡುತ್ತಿಲ್ಲ. ಇದರ ಬಗ್ಗೆ ಇದೇ ಸದನದಲ್ಲಿ ಮಾನ್ಯ ಗೃಹ ಸಚಿವರಿಗೆ ಎರಡು–ಮೂರು ಸದನದಲ್ಲಿಯೂ ಪ್ರಸ್ತಾಪ ಮಾಡಿದ್ದೇನೆ. ಒಂದು VST ಎನ್ನುವ ಕಂಪನಿಗೆ ಕೊಟ್ಟಿದ್ದೀರಿ. ಅವರೆಲ್ಲರೂ ಕೂಡ ನಮ್ಮ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಿರುವುದಾದರೆ, ಹೋಬಳಿಗೊಂದು ಯಂತ್ರೋಪಕರಣಗಳ ದಾಸ್ತಾನು ಇದೆ. ಅಲ್ಲಿಗೆ ಬೀಗ ಹಾಕಿ ಹೋದವರೂ ಇವತ್ತಿಗೂ ಕೂಡ ಯಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದಿರುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ನಾನು ನೋಡಿರುವಂತಹ ಪ್ರತ್ಯಕ್ಷ ಸಾಕ್ಷಿಯಾಗಿದೆ. ಹಾಗಾಗಿ ಮಾನ್ಯ ಸಭಾಪತಿಯವರ ಮುಖಾಂತರ ತಾವು ಒಳ್ಳೆಯ ವಿಧೇಯಕವನ್ನು ತಂದಿದ್ದೀರಿ. ಇದರ ಜೊತೆ ಜೊತೆಯಲ್ಲಿ ಟ್ರ್ಯಾಕ್ಟರ್‌ಗಳು ಕೂಡ ತೆಗೆದುಕೊಳ್ಳುವಂತಹವರು ಇದ್ದಾರೆ.

(ಮುಂದು)

**(161) 04/02/2021/ಎಸ್‌ಪಿಆರ್/ಬಿಎನ್‌ಎಸ್/4:30**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ಅಪ್ಪಾಜಿಗೌಡ(ಮುಂದು):-**
ಬಡ ಮತ್ತು ಮಧ್ಯಮ ವರ್ಗದ ರೈತರು ಟ್ರ್ಯಾಕ್ಟರ್‌ಗಳನ್ನು ಖರೀದಿಸುತ್ತಾರೆ. ಅದಕ್ಕೂ ಸಹ ತೆರಿಗೆಯನ್ನು ವಿಧಿಸಲಾಗಿದ್ದು, ಅದನ್ನು ಕಡಿಮೆ ಮಾಡಿ. ಇದರ ಜೊತೆಯಲ್ಲಿ ರೈತರು ಉಪಯೋಗಿಸುವ ಎಲ್ಲಾ ರೀತಿಯ ಯಂತ್ರೋಪಕರಣಗಳ ಮೇಲಿನ ತೆರಿಗೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡಬೇಕೆಂದು ಕೇಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ವಿಧೇಯಕದ ಪರಿಭಾಷೆಯಲ್ಲಿ ತಿಳಿಸಿರುವ 'combined harvesting' ಇದರ ವ್ಯಾಖ್ಯಾನವನ್ನು ಮಾಡಿಲ್ಲ. Ministry of Road, Transport and Highways ಇದರ ನಿಯಮಗಳನ್ನೇ ಅಳವಡಿಸಿಕೊಳ್ಳುತ್ತಿದ್ದೀರಾ? ಏಕೆಂದರೆ ಇದರ ವ್ಯಾಖ್ಯಾನವನ್ನು ಸರಿಯಾಗಿ ಮಾಡದಿದ್ದರೆ, ನಾಳೆಯ ದಿನ ಸಾರಿಗೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯವರು ರೈತರಿಗೆ ತೊಂದರೆ ಮಾಡಬಹುದು. ಹೀಗ್ಗಾಗಿ ಸರ್ಕಾರವು ಇದನ್ನು ಅಳವಡಿಸಿಕೊಳ್ಳಬೇಕು. ಪ್ರಸ್ತುತ ವಿಧೇಯಕದಲ್ಲಿ ಹೆಚ್ಚಿನ financial implication ಗಳಿಲ್ಲ. ಸಚಿವರು ತಿಳಿಸಿದಂತೆ ಇದು ಸುಮಾರು 5-6 ಕೋಟಿ ರೂಪಾಯಿಗಳಾಗಬಹುದು. ಸರ್ಕಾರವು ಇಲ್ಲಿನ ವ್ಯಾಖ್ಯಾನವನ್ನು ಸ್ಪಷ್ಟಪಡಿಸಬೇಕು ಮತ್ತು ಮುಂದಿನ ದಿನಗಳಲ್ಲಿ ರೈತರಿಗೆ ತೊಂದರೆಯಾಗಬಾರದು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2020ನ್ನು ಸಾರಿಗೆ ಸಚಿವರು ಮಂಡಿಸಿದ್ದು, ಅದನ್ನು ನಾನು ಸ್ವಾಗತಿಸುತ್ತೇನೆ. ಇಲ್ಲಿಯವರೆಗೆ ನೆರೆಯ ಮಹಾರಾಷ್ಟ್ರ ರಾಜ್ಯದಿಂದ ಬರುವ ಕೂಲಿಕಾರರ ಗುಂಪುಗಳ ಮೇಲೆ ಶೇಕಡಾ ನೂರರಷ್ಟು ಕಬ್ಬು ಕಟಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದನ್ನು ಅವಲಂಬಿಸಿದೆ. ಒಂದು ವೇಳೆ ಮಹಾರಾಷ್ಟ್ರ ರಾಜ್ಯದಲ್ಲಿ ಸತ್ಯಾಗ್ರಹ, ಮತ್ತು ಇನ್ನಿತರೆ ಬೆಲೆ ಹೆಚ್ಚಳಕ್ಕೆ ಸಂಬಂಧಪಟ್ಟಂತೆ ಯಾವುದಾದರೂ movement ಪ್ರಾರಂಭವಾದರೆ, ಕೂಲಿಕಾರರು ಸರಿಯಾದ ಸಮಯಕ್ಕೆ ಬರುತ್ತಿರಲಿಲ್ಲ. ಇದರಿಂದಾಗಿ ಸಕ್ಕರೆ ಕಾರ್ಖಾನೆಯು ನಿಗದಿತ ವೇಳೆಯಲ್ಲಿ ಪ್ರಾರಂಭವಾಗದಂತಹ ದುಸ್ಥಿತಿಯು ನಿರ್ಮಾಣವಾಗಿತ್ತು. ಪಾರಂಪರಿಕವಾದ ಹಾಗೂ ಆಧುನಿಕ ಕೃಷಿಗಳಲ್ಲಿ ವ್ಯತ್ಯಾಸಗಳಿವೆ. ಈಗಾಗಲೇ ನಾವು mechanized farming ನತ್ತ ಮುನ್ನಡೆಯುತ್ತಿದ್ದೇವೆ. ಉಳಿದೆಲ್ಲಾ ಕೃಷಿ ಬೆಳೆಗಳನ್ನು harvesting machineಗಳ ಮುಖಾಂತರ ಕಟಾವು ಮಾಡುತ್ತಿದ್ದೇವೆ. ಆದರೆ ಕಬ್ಬನ್ನು ಕಟಾವು ಮಾಡುವ ಯಂತ್ರಗಳು ಅಂದರೆ, sugarcane harvesting machines ಇವೆ. ಮಾನ್ಯ ಸಚಿವರು ಪ್ರಸ್ತಾಪಿಸಿದಂತೆ, ಇವತ್ತಿನ ದಿವಸ ಬಹಳಷ್ಟು ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯವರು ಮತ್ತು ದೊಡ್ಡ ದೊಡ್ಡ ರೈತರು ಈ ಯಂತ್ರಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲಿನ ವ್ಯವಸ್ಥೆಗಳು ಹೇಗಿವೆ ಎಂದರೆ, ಒಂದು ಕೂಲಿಕಾರರ ಗುಂಪಿಗೆ ಸುಮಾರು 6-8 ಲಕ್ಷ ರೂಪಾಯಿಗಳಷ್ಟು ಮುಂಗಡ ಹಣವನ್ನು ನಮ್ಮ ರೈತರು ಪಾವತಿಸುತ್ತಾರೆ. ನಂತರದಲ್ಲಿ ಕೋಯ್ಲು ಸಮಯದಲ್ಲಿ ಅವರುಗಳು ಕೈಯನ್ನು ಕೊಡುತ್ತಾರೆ. ಇದರಿಂದಾಗಿ ಒಬ್ಬ ರೈತನಿಗೆ ಸುಮಾರು 7-8 ಲಕ್ಷ ರೂಪಾಯಿಗಳಷ್ಟು ಹಣ ನಷ್ಟವಾದರೆ, ಆತನು ಬಹಳ ದೊಡ್ಡ ಪ್ರಮಾಣದ ಹಾನಿಯನ್ನು ಅನುಭವಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕೋಯ್ಲು ಯಂತ್ರವು ಬಹಳ ಒಳ್ಳೆಯದಾಗಿದೆ. ಮತ್ತೊಂದು ವಿಚಾರವೇನೆಂದರೆ, ಕೋಯ್ಲು ಯಂತ್ರದ ಮುಖಾಂತರ ಕಬ್ಬನ್ನು ಕಟಾಯಿಸುವ ಸಮಯದಲ್ಲಿ ಯಂತ್ರವು ನೆಲದ ಸಮಕ್ಕೆ ಸರಿಯಾಗಿ ಕಬ್ಬನ್ನು ಕತ್ತರಿಸುತ್ತದೆ. ಸಾಮಾನ್ಯವಾಗಿ ಕಬ್ಬಿನ ಬೆಳೆಯಲ್ಲಿ ಸಕ್ಕರೆಯ ಅಂಶವು ಕಬ್ಬಿನ ಬುಡದಲ್ಲಿ ಹೆಚ್ಚಾಗಿರುತ್ತದೆ ವಿನಾ ಕಬ್ಬಿನ ಮೇಲ್ಭಾಗದಲ್ಲಿರುವುದಿಲ್ಲ. ಕಬ್ಬಿನ ಮೇಲ್ಭಾಗವನ್ನು ನಾವು 'ಸ್ವಾಗಿ' ಎಂದು ಕರೆಯುತ್ತೇವೆ. ಇದಕ್ಕೆ ನೀವು ಏನೆಂದು ಹೇಳುತ್ತೀರಿ? ಕೂಲಿಕಾರರು ಕಬ್ಬನ್ನು ಮೇಲ್ಭಾಗದಿಂದ ಹಾಗೂ ಬುಡದಿಂದ ಒಂದು, ಒಂದೂವರೆ ಅಡಿಗಳಷ್ಟು ಬಿಟ್ಟು, ಎರಡೂ ಕಡೆಗಳಿಂದಲೂ ಕಟಾವು ಮಾಡುತ್ತಾರೆ. ಇದರಿಂದ ರೈತರಿಗೆ ಕಬ್ಬಿನ ತೂಕವು ಕಡಿಮೆಯಾಗುತ್ತದೆ ಹಾಗೂ ಸಕ್ಕರೆ ಕಾರ್ಖಾನೆಗೆ ಸಕ್ಕರೆಯ ಇಳುವರಿಯು ಕಡಿಮೆಯಾಗುತ್ತದೆ. ಇದರಿಂದ ಹೊರಬರುವ ನಿಟ್ಟಿನಲ್ಲಿ ಇವತ್ತಿನ ದಿವಸ ಯಂತ್ರಗಳು ಬಹಳಷ್ಟು ಉಪಯೋಗವಾಗುತ್ತಿವೆ. ಇದರ Cost- Benefit ಅನುಪಾತವನ್ನು ಗಮನಿಸಿದಾಗ, ಯಂತ್ರವು ಬಹಳ ದುಬಾರಿಯಾಗುತ್ತದೆ. ಅವರದ್ದೂ ಸಕ್ಕರೆ ಕಾರ್ಖಾನೆ ಇದ್ದು, ಅದರ ಆಡಳಿತ ಮಂಡಳಿಯಲ್ಲಿ ಅವರಿದ್ದಾರೆ. ಮಹಾರಾಷ್ಟ್ರ ರಾಜ್ಯದ ಬೀಡ್ ಜಿಲ್ಲೆಯಿಂದ ಬಂದ ಕೂಲಿಕಾರರ ಗುಂಪಿಗೆ ಕೊಡುವ ಹಣ ಮತ್ತು ಕಟಾವು ಯಂತ್ರಕ್ಕೆ ಕೊಡುವ ಹಣ ಇವುಗಳನ್ನು ತುಲನಾತ್ಮಕವಾಗಿ ನೋಡಿದಾಗ, ಇಲ್ಲಿ per ton harvesting will

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

be more than the labour cost. ಅವರುಗಳು ಯಾವ ರೀತಿಯಾಗಿ ಕೋಯ್ಲು ಮಾಡುತ್ತಾರೆ? ಒಂದು ವೇಳೆ ಕೂಲಿಕಾರರು ದೊರೆಯದಿದ್ದರೆ, ಅವರಿಗೆ ಕಟಾವು ಯಂತ್ರವು ಅನಿವಾರ್ಯವಾಗಿರುತ್ತದೆ. We should depend on the harvesting machine. ಹೀಗಾಗಿ ಸಚಿವರು ಮಂಡಿಸಿರುವ ವಿಧೇಯಕವು ಒಳ್ಳೆಯದ್ದಾಗಿದೆ. ರೈತರ ಮತ್ತು ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿಗಳು ಸಚಿವರಿಗೆ ತಿಳಿದಿದೆ. ಬೇರೆ ಬೇರೆ ಕಡೆಗಳಲ್ಲಿ ವಾಹನದ ನೋಂದಣಿಯನ್ನು ಮಾಡುವುದನ್ನು ತಡೆದು, ನಮ್ಮ ರಾಜ್ಯದಲ್ಲಿಯೇ ವಾಹನದ ನೋಂದಣಿ ಮಾಡಲಿ ಎನ್ನುವ ಉದ್ದೇಶದಿಂದ ಪ್ರಸ್ತುತ ವಿಧೇಯಕವನ್ನು ಮಂಡಿಸುತ್ತಾ, ಇದನ್ನು ಕಾನೂನಿನ ಚೌಕಟ್ಟಿನೊಳಗೆ ತರಲಾಗಿದೆ. ಇದು ಒಳ್ಳೆಯದಾಗಿದ್ದು, ಅದನ್ನು ನಾವು ಸ್ವಾಗತಿಸುತ್ತೇವೆ. ಹೊಸ ವಾಹನದ ನೋಂದಣಿ ಸಮಯದಲ್ಲಿ ವಾಹನದ ಬೆಲೆಯ ಶೇಕಡಾ 3 ರಷ್ಟು ತೆರಿಗೆಯನ್ನು ವಿಧಿಸಲಾಗಿದ್ದು, ಅದನ್ನು ಮತ್ತಷ್ಟು ಕಡಿಮೆ ಮಾಡಲು ಸಾಧ್ಯವಿಲ್ಲವೇ? ಶ್ರೀ ಅಪ್ಪಾಜಿಗೌಡರು ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿದರು. ನೆರೆಯ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಕೃಷಿ ಉಪಕರಣಗಳ ಮೇಲೆ ತೆರಿಗೆ ವಿಧಿಸುವುದಿಲ್ಲ. ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ 25 ಸಕ್ಕರೆ ಕಾರ್ಖಾನೆಗಳಿದ್ದು, ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ 13-14 ಸಕ್ಕರೆ ಕಾರ್ಖಾನೆಗಳಿವೆ. ವಿಜಯಪುರ ಜಿಲ್ಲೆಯಲ್ಲಿಯೂ ಸಹ 7-8 ಸಕ್ಕರೆ ಕಾರ್ಖಾನೆಗಳಿದ್ದು, ಅವುಗಳ ಸಂಖ್ಯೆಯು ಜಾಸ್ತಿಯಾಗಿವೆ. ಈ ನಾಡು ಸಕ್ಕರೆ ನಾಡು ಆಗಿ ಪರಿವರ್ತನೆಯಾಗುತ್ತಿದೆ. ಈ ಹಿಂದೆ ಒಂದು ಕಾಲದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ಕಬ್ಬನ್ನು ಬೆಳೆಯುತ್ತಿದ್ದರು. ಹೀಗಾಗಿ ಅದು ಸಕ್ಕರೆಯ ನಾಡಾಗಿತ್ತು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ.ವಿಶ್ವೇಶ್ವರಯ್ಯನವರುಗಳ ಸಹಾಯದಿಂದ ಕನ್ನಂಬಾಡಿ ಆಣೆಕಟ್ಟನ್ನು ನಿರ್ಮಿಸಲಾಯಿತು. ದೇಶಕ್ಕೆ ಸ್ವತಂತ್ರ ಬರುವ ಪೂರ್ವದಲ್ಲಿಯೇ ಜಲಾಶಯ ನಿರ್ಮಾಣವಾಗಿದ್ದರಿಂದ ಆಗಲೇ ಕಬ್ಬಿನ ಬೆಳೆಯನ್ನು ಪ್ರಾರಂಭಿಸಲಾಗಿತ್ತು. ನಮ್ಮ ಭಾಗದ ಜಲಾಶಯಕ್ಕೆ 1960 ನೇ ಸಾಲಿನಲ್ಲಿ ಅಡಿಗಲ್ಲನ್ನು ಹಾಕಿದ್ದು, ಈಗ್ಗೆ 56 ವರ್ಷಗಳು ಕಳೆದಿದ್ದು ಇನ್ನು ಯೋಜನೆಯು ಪೂರ್ಣಗೊಂಡಿರುವುದಿಲ್ಲ. ಇದರಿಂದ ವಿಷಯಾಂತರವಾಗುವುದು ಬೇಡ. ಪ್ರಸ್ತುತ ವಿಧೇಯಕದಿಂದಾಗಿ ಎಲ್ಲಾ ರೀತಿಯ ವಾಹನಗಳನ್ನು ಕಾನೂನು ಕಕ್ಷೆಗೆ ತರುವುದರಿಂದ ಯಾರೋ ಎಲ್ಲಿಂದಲೋ ವಾಹನ ತರುವುದರಿಂದ ಕೆಲವರಿಗೆ ತೊಂದರೆಯಾಗುತ್ತದೆ. ಹೊಸ ವಾಹನದ ನೋಂದಣಿ ಸಮಯದಲ್ಲಿ ವಾಹನದ ಬೆಲೆಯ ಶೇಕಡಾ 3 ರಷ್ಟು ತೆರಿಗೆಯನ್ನು ವಿಧಿಸಲಾಗಿದ್ದು, ನೆರೆಯ ರಾಜ್ಯದಲ್ಲಿ ಇದು ಶೇಕಡಾ 6 ರಷ್ಟಿದೆ. ಅದನ್ನು ಮತ್ತಷ್ಟು ಕಡಿಮೆ ಮಾಡಿ ಎಂದು ನಾನು ಹೇಳುತ್ತೇನೆ. ಅದನ್ನು ಸಂಪೂರ್ಣವಾಗಿ ತೆರಿಗೆರಹಿತ ಮಾಡಿ ಎಂದು ನಾನು ಹೇಳುವುದಿಲ್ಲ; ಅದರ ಬದಲಾಗಿ ಕನಿಷ್ಠ ಶೇಕಡಾ 1 ರಷ್ಟು ಮಾಡಿ. ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾಗತಾರ್ಹವಾದುದು. ಸಚಿವರೂ ಸಹ ಕಬ್ಬಿನ ನಾಡಿನಿಂದ ಬಂದವರಾಗಿದ್ದು, ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನಡೆಸುವವರಾಗಿದ್ದಾರೆ. ಹೀಗಾಗಿ ಅವರಿಗೆ ರೈತರ ಕಷ್ಟ ಹಾಗೂ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿ ಎಲ್ಲವೂ ತಿಳಿದಿವೆ. Harvesting machine is comparatively little costlier than the cost of labour. ಪ್ರತಿ ಟನ್‌ಗೆ ಹೋಲಿಸಿದಾಗ, ಕೂಲಿಕಾರರು ಕಟಾವು ಮಾಡುವ ವೆಚ್ಚವು ಸ್ವಲ್ಪ ಕಡಿಮೆ ಪ್ರಮಾಣದಲ್ಲಿದ್ದು, ಯಂತ್ರದ ವೆಚ್ಚವು ದುಬಾರಿಯಾಗುತ್ತದೆ. ಹೆಚ್ಚೆಂದರೆ, ಒಂದು ಯಂತ್ರದಿಂದ ಪ್ರತಿ ದಿನಕ್ಕೆ ನೂರು ಟನ್‌ನಷ್ಟು ಕಬ್ಬನ್ನು ಕಟಾವು ಮಾಡಬಹುದು. 120 tons are maximum. ನನ್ನ ಸಕ್ಕರೆ ಕಾರ್ಖಾನೆಯಲ್ಲಿ ಆ ರೀತಿಯ 8 ಯಂತ್ರಗಳಿವೆ. ನನ್ನ ಅನುಭವದ ಪ್ರಕಾರ ಯಂತ್ರ ಮತ್ತು ಅದರ ಬಿಡಿ ಭಾಗಗಳು ಎರಡೂ ಸಹ ಬಹಳ ದುಬಾರಿಯಾಗಿವೆ. It will be over burden to the farmers or to the management of the sugar factory. ಪ್ರಸ್ತುತ ವಿಧೇಯಕವನ್ನು ನಾವು ಸ್ವಾಗತಿಸುತ್ತೇವೆ. ಈ ದೃಷ್ಟಿಯಿಂದ ಹಾಲಿ ಇರುವ ಶೇಕಡಾ 3 ರಷ್ಟು ತೆರಿಗೆಯನ್ನು ಶೇಕಡಾ 1 ರಷ್ಟಕ್ಕೆ ಇಳಿಸಬೇಕೆಂದು ತಮ್ಮ ಮುಖಾಂತರ ವಿನಂತಿಸುತ್ತೇನೆ. ಇದರಿಂದಾಗಿ ಕಬ್ಬು ಬೆಳೆಗಾರರು ಅದರಲ್ಲೂ ವಿಶೇಷವಾಗಿ ದೊಡ್ಡ ದೊಡ್ಡ ಬೆಳೆಗಾರರು ಕೂಲಿ ಕಾರ್ಮಿಕರ ಮೇಲೆ ಅವಲಂಬಿಸುವುದಿಲ್ಲ. ಅವರುಗಳು ತಾವೇ ಸ್ವಂತವಾಗಿ ಯಂತ್ರವನ್ನಿಟ್ಟುಕೊಂಡು ಕಬ್ಬು ಕಾರ್ಖಾನೆಯ ಕೆಲಸಗಳನ್ನು ಮಾಡಿಕೊಳ್ಳುವ ವಿಚಾರವನ್ನಿಟ್ಟುಕೊಂಡು ಯಂತ್ರವನ್ನು ಖರೀದಿಸುತ್ತಾರೆ. ಇದರಿಂದಾಗಿ ರೈತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಸಕ್ಕರೆ ಕಾರ್ಖಾನೆಯ ಮಾಲೀಕರಾದ ಶ್ರೀ ಶ್ರೀಮಂತ ಬಾಳಾ ಸಾಹೇಬ್ ಪಾಟೀಲ್‌ರವರು ಪ್ರಸ್ತುತ ನಮ್ಮ ಎದುರಿಗೆ ಕುಳಿತುಕೊಂಡಿದ್ದಾರೆ. ತೆರಿಗೆಯನ್ನು ಶೇಕಡಾ 1 ರಷ್ಟು ಕಡಿಮೆ ಮಾಡಲು ಅಡ್ಡಿಯಿಲ್ಲವೇ?

**ಶ್ರೀ ಶ್ರೀಮಂತ ಬಾಳಾ ಸಾಹೇಬ್ ಪಾಟೀಲ:-** ಮಾನ್ಯ ಸಭಾಪತಿಯವರೇ, ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿ ವಾಹನದ ಮೇಲಿನ ತೆರಿಗೆಯು ಬಹಳಷ್ಟು ಕಡಿಮೆ ಪ್ರಮಾಣದಲ್ಲಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾವು ಸಚಿವರನ್ನು ಕೇಳಿದ್ದು ಲಾಭದಾಯಕವಾಯಿತು. ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿ ವಾಹನದ ಮೇಲಿನ ತೆರಿಗೆಯು ಬಹಳಷ್ಟು ಕಡಿಮೆ ಪ್ರಮಾಣದಲ್ಲಿದೆ. ಸಚಿವರೂ ಸಹ ಇದನ್ನೇ ಹೇಳುತ್ತಾರೆ. ಸರ್ಕಾರವು ತೆರಿಗೆ ರಹಿತ ಎಂದು ಮಾಡುವುದು ಬೇಡ. ಉಚಿತವಾಗಿ ನೀಡಿದ್ದಲ್ಲಿ ಅದಕ್ಕೆ ಯಾವಾಗಲೂ ಬೆಲೆಯಿರುವುದಿಲ್ಲ. ಪುಕ್ಕಟೆಯಾಗಿ ಏನಾ ಬೇಕಾದರೂ ಮಾಡಿದರೂ ಸಹ ಯಾರೂ ಅದಕ್ಕೆ ಬೆಲೆ ನೀಡುವುದಿಲ್ಲ ಹಾಗೂ ಅದರ ಪಾವಿತ್ರತೆಯು ಉಳಿಯುವುದಿಲ್ಲ. ಹೀಗಾಗಿ ಸರ್ಕಾರವು ಶೇಕಡಾ 3 ರ ಬದಲಾಗಿ ಶೇಕಡಾ 1

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಮಾಡಲಿ. ವಾಹನವು ಒಂದು ಕೋಟಿ ಮೌಲ್ಯದ್ದಾಗಿದ್ದರೆ, ಅದರ ತೆರಿಗೆ ಮೊತ್ತವು 1 ಲಕ್ಷ ರೂಪಾಯಿಗಳಾಗಲಿ. At the time of registration, ಇದು ಒಂದು ಬಾರಿಯ ತೆರಿಗೆಯಾಗಿದೆ. ಹೀಗಾಗಿ ಇದನ್ನು ಒಂದು ಲಕ್ಷ ರೂಪಾಯಿಗಳಿಗೆ ಸೀಮಿತಗೊಳಿಸಿ. ಇದರಿಂದಾಗಿ ರೈತರಿಗೆ ದೊಡ್ಡ ಕೊಡುಗೆಯನ್ನು ನೀಡಿದಂತಾಗುತ್ತದೆ ಹಾಗೂ ರೈತರು ಸರ್ಕಾರವನ್ನು ನೆನೆಸಿಕೊಳ್ಳುತ್ತಾರೆ. ಈ ದೃಷ್ಟಿಯಿಂದ ಪ್ರಸ್ತುತ ವಿಧೇಯಕವನ್ನು ಸ್ವಾಗತಿಸಿ ತೆರಿಗೆ ಮೊತ್ತವನ್ನು ಕಡಿಮೆ ಮಾಡುವುದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್, ಮತ್ತಿತರೆ ಅನೇಕ ಹಿರಿಯ ಸದಸ್ಯರುಗಳು ಕೆಲವೊಂದು ಸಂಶಯ ಹಾಗೂ ವ್ಯಾಖ್ಯಾನಗಳ ಬಗ್ಗೆ ಕೇಳಿದ್ದಾರೆ. ಕೇಂದ್ರ ಸರ್ಕಾರವು 2015 ನೇ ಸಾಲಿನಲ್ಲಿ ಜಾರಿಗೆ ತಂದ ಕಾನೂನಿನನ್ವಯ ವ್ಯಾಖ್ಯಾನವನ್ನು 'ಕಬ್ಬಿನ ಸಂಯೋಜಿತ ಕೊಯ್ಲು' ಎಂದು ವ್ಯಾಖ್ಯಾನಿಸಲಾಗಿದೆ. ಅದರಲ್ಲಿ ನಾವು 'ಸಂಯೋಜಿತ ಕೊಯ್ಲು' ಎಂದು ಹೇಳುತ್ತೇವೆ; building construction ನಲ್ಲಿ construction machinery ಗಳಿವೆ, ಅವುಗಳೆಲ್ಲವೂ ಅದರಡಿ ಬರುತ್ತವೆ. ಮೊದಲು ಇದೂ ಸಹ ಅದರಡಿ ಬರುತ್ತಿತ್ತು. ಹೀಗಾಗಿ ಇದನ್ನು ನಾವು ಪ್ರತ್ಯೇಕಿಸಿ, ಇದನ್ನು 'ಕಬ್ಬಿನ ಸಂಯೋಜಿತ ಕೊಯ್ಲು' ಎಂದು ಪರಿಚಯಿಸಿ, ಪ್ರಸ್ತುತ ವಿಧೇಯಕವನ್ನು ಮಂಡಿಸಲಾಗಿದೆ. ನಾಳೆಯ ದಿನ ಇಲಾಖೆಯ ಅಧಿಕಾರಿಗಳು ಹೋಗಿ ರೈತರಿಗೆ ತೊಂದರೆ ಕೊಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

**(ಮುಂದು)**

(162)04-02-2021(04-40)ಬಿಎಸ್‌ಡಿ-ಬಿಎನ್‌ಎಸ್

**ಶ್ರೀ ಲಕ್ಷ್ಮಣ ಸವದಿ (ಮುಂದು)**

ಮಾನ್ಯ ಸದಸ್ಯರ ಸಂಶಯಕ್ಕೆ ಆಸ್ಪದ ಬರುವುದಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಮಾನ್ಯ ಅಪ್ಪಾಜಿಗೌಡರು ನಾವು ತಂದಿರುವ ವಿಧೇಯಕವು ಸರಿಯಿದ್ದು, ಬೇರೆ ಬೇರೆ ರಾಜ್ಯಗಳಲ್ಲಿ ಣಚಿಥ ಕಡಿಮೆ ಇದೆ ಎಂದು ಹೇಳಿದರು. ನನ್ನ ಕಡೆ ಬೇರೆ ಬೇರೆ ರಾಜ್ಯಗಳ ಮಾಹಿತಿ ಸಹ ಇದೆ. ಆಂಧ್ರ ಪ್ರದೇಶದಲ್ಲಿ 7.5%, ತೆಲಂಗಾಣದಲ್ಲಿ 7.5% ಹಾಗೂ ಕೇರಳದಲ್ಲಿ 6% ಇದ್ದು, ನಮ್ಮಲ್ಲಿಯೂ 6% ಇದೆ. ಆದರೆ ತಮಿಳುನಾಡಿನಲ್ಲಿ ರೂ.10 ಸಾವಿರ ಹಾಗೂ ಮಹಾರಾಷ್ಟ್ರದಲ್ಲಿ ರೂ.50 ಸಾವಿರ ಇದೆ. ಎಲ್ಲಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಗಳಗಿಂತ ಇವೆರಡು ರಾಜ್ಯಗಳಲ್ಲಿ ಕಡಿಮೆ ಇದೆ. ರೈತರು ಖರೀದಿಸುವ tractor ಮತ್ತು trailer ಗಳಿಗೆ ಈಗಾಗಲೇ ನಮ್ಮ ರಾಜ್ಯದಲ್ಲಿ exemption ಇದೆ. ಅದಕ್ಕೆ road tax ಇರುವುದಿಲ್ಲ. ರೈತರು ಖರೀದಿಸುವ equipment ಗಳಿಗೆ road tax ಇಲ್ಲ. Road tax ಇದೊಂದಕ್ಕೆ ಮಾತ್ರ implement ಆಗುತ್ತಿದೆ. ಮಾನ್ಯ ಸದಸ್ಯರು 1% ಮಾಡುವ ಬಗ್ಗೆ ಹೇಳಿದ್ದು, Tractor ಗಳಿಗೆ 0% tax ಇರುವಂತೆ ನನಗೂ ಮಾಡಬೇಕೆಂದು ಆಸೆ ಇತ್ತು. ಆದರೆ harvesting machine ಗಳನ್ನು ಖರೀದಿಸುವ ರೈತರಿಗೆ ರಾಜ್ಯ ಸರ್ಕಾರದಿಂದ ಈಗಾಗಲೇ ಸುಮಾರು ರೂ.30 ಲಕ್ಷ subsidy ಕೊಡುತ್ತಿದ್ದೇವೆ. ಅದು ಅವರಿಗೆ impress ಆಗಿ ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಅದಕ್ಕೆ nominal rate ಎಂದು discussion ಮಾಡಿ, ಏಕೆಂದರೆ ಒಬ್ಬೊಬ್ಬ ರೈತರಿಗೆ Agriculture Department ನಿಂದ ರೂ.30 ಲಕ್ಷಗಳ subsidy ಕೊಡುತ್ತಿದ್ದೇವೆ. ಆದ್ದರಿಂದ ಇದೇನು ಬಹಳ ದೊಡ್ಡದಾಗುವುದಿಲ್ಲ. ರೈತರ ದೃಷ್ಟಿಯಿಂದ ನಾವು zero ಅಥವಾ 1% ಮಾಡಿದರೆ ಕಾರ್ಖಾನೆ ಮಾಲೀಕರು ಇದ್ದಾರೆ. ಮಾನ್ಯ ಎಸ್.ಆರ್. ಪಾಟೀಲರು, ಮಾನ್ಯ ಕವಟಗಿಮಠ ರಂತಹವರಿಗೆ ರೈತರು ಎಂದು consider ಮಾಡಬೇಕಾಗುತ್ತದೆ. ಇದು ಬೇಡ ಎಂದುಕೊಂಡು 6% ಬದಲಿಗೆ 3% ಮಾಡಿದ್ದೇವೆ. ರೈತರಿಗೆ ಇದರಿಂದ ಏನೂ ತೊಂದರೆಯಾಗುವುದಿಲ್ಲ, ಏಕೆಂದರೆ ರೂ.33 ಲಕ್ಷಗಳವರೆಗೆ subsidy ಕೊಡುತ್ತಿದ್ದೇವೆ. ಆ ರೂ.33 ಲಕ್ಷಗಳ subsidy ಯಲ್ಲಿ ರೂ.3 ಲಕ್ಷಗಳನ್ನು ಸರ್ಕಾರಕ್ಕೆ ಕೊಡುವುದರಿಂದ ತೊಂದರೆ ಎನಿಸುವುದಿಲ್ಲ. ಆದರೆ ರೈತರ ಹೆಸರಿನಲ್ಲಿ ಶ್ರೀ ಶ್ರೀಮಂತ ಪಾಟೀಲರು, ಶ್ರೀ ಮಹಾಂತೇಶ ಪಾಟೀಲರು, ಶ್ರೀ ಎಸ್.ಆರ್. ಪಾಟೀಲರಂತಹವರಿಗೆ ಲಾಭ ಸಿಗಬಾರದು. ಆದ್ದರಿಂದ ಈ ವಿಧೇಯಕವನ್ನು ದಯವಿಟ್ಟು ಒಪ್ಪಬೇಕೆಂದು ಕೋರುತ್ತೇನೆ.

**ಸಭಾಪತಿಯವರು**: ಪ್ರಸ್ತಾವ ಏನೆಂದರೆ;

" ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು "

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

***ಖಂಡ 2ರಿಂದ 4ರವರೆಗೆ***

**ಸಭಾಪತಿಯವರು**: " ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

(ಖಂಡ 2ನ್ನು ಅಥವಾ ಖಂಡ 2ರಿಂದ 4ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

***ಖಂಡ 1 ಇತ್ಯಾದಿ***

**ಸಭಾಪತಿಯವರು**: ಪ್ರಸ್ತಾವ ಏನೆಂದರೆ;

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ''

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಲಕ್ಷ್ಮಣ ಸವದಿ__(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ)**:- ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು**: ಪ್ರಸ್ತಾವ ಏನೆಂದರೆ;

" ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು***

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## (ಇ) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಕೆ. ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ಇದು ಕಾಲಾಂತರದಲ್ಲಿ ಬದಲಾಯಿಸಿರುವ ಪರಿಸ್ಥಿತಿಗಳು ಮತ್ತು ಸದ್ಯದಲ್ಲಿ ಆಗಿರುವ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಣೆ ಮಾಡಬೇಕೆಂದು ಹಿಂದೆ ಇದ್ದ ಅಧಿನಿಯಮ 2004 ಅನ್ನು 2020ಕ್ಕೆ ಜಾರಿಗೆ ತರಲು ಸಣ್ಣ ತಿದ್ದುಪಡಿ ತಂದಿದ್ದೇವೆ. ದೇಶದ ಇತರ ರಾಜ್ಯಗಳಲ್ಲಿ ಒಳಗೊಂಡಿರುವ ಉತ್ತಮವಾದ ಅಂಶಗಳನ್ನು ಹಾಗೂ ತಿದ್ದುಪಡಿಗಳನ್ನು ಇದರಲ್ಲಿ ಅಳವಡಿಸಿಕೊಂಡಿದ್ದೇವೆ. ಅದೇರೀತಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ, 2019 ರಲ್ಲಿನ ಮಹತ್ವದ ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡು, ಈ ತಿದ್ದುಪಡಿ ವಿಧೇಯಕವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಉದಾಹರಣೆಗೆ ಈಗ 6 ವರ್ಷಗಳ ಜೈಲು ಶಿಕ್ಷೆಯನ್ನು 7 ವರ್ಷಗಳಿಗೆ ವಿಸ್ತರಣೆ ಮಾಡಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್ಃ–** ಯಾವ ಕಾರಣಕ್ಕಾಗಿ ವಿಸ್ತರಣೆ ಮಾಡಲಾಗಿದೆ?

**ಶ್ರೀ ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ಠೇವಣಿದಾರರ ಹಣವನ್ನು ಸರಿಯಾದ ಉದ್ದೇಶಗಳಿಗೆ ಬಳಸದೇ ಅನ್ಯಾಯ ಮಾಡಿರುತ್ತಾರೆ, ಅಂತಹ ಠೇವಣಿದಾರರ ಬೆಳವಣಿಗೆ ಮತ್ತು ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ. ನಾವು ಇತ್ತೀಚಿನ ದಿನಗಳಲ್ಲಿ ಐಎಂಎ ಎಂಬ ಒಂದು ಸಂಸ್ಥೆ ಬಗ್ಗೆ ನೋಡಿದ್ದೇವೆ. ಹೀಗೆ financing ನಡೆಸುವ ಅನೇಕ ಸಂಸ್ಥೆಗಳು ಠೇವಣಿದಾರರ ಹಣವನ್ನು ಮನಸೋ ಇಚ್ಛೆ ಖರ್ಚು ಮಾಡಿ ಅನ್ಯಾಯ ಮಾಡಿರುವ ಹಲವಾರು ಪ್ರಕರಣಗಳು ರಾಜ್ಯದಲ್ಲಿ ಇವೆ. ಆ ಕಾರಣಕ್ಕೆ ದಂಡದ ಮೊತ್ತ ಪ್ರಾರಂಭದಲ್ಲಿ ಇದ್ದ ರೂ. 5 ಲಕ್ಷವನ್ನು ರೂ. 10 ಲಕ್ಷಗಳಿಗೆ ಏರಿಸಿದ್ದೇವೆ. ಪುನರಾವರ್ತಿತ ಅಪರಾಧಿಗಳಿಗೆ ಕನಿಷ್ಠ 5 ವರ್ಷಗಳು ಕಡಿಮೆ ಇಲ್ಲದಂತೆ 7

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಗಳವರೆಗೂ ಶಿಕ್ಷೆ ವಿಧಿಸಲು ಶಿಫಾರಸ್ಸು ಮಾಡಲಾಗಿದೆ. ಪುನರಾವರ್ತಿತ ಅಪರಾಧಿಗಳಿಗೆ ದಂಡದ ಮೊತ್ತವನ್ನು ಕನಿಷ್ಠ ರೂ.10 ಲಕ್ಷಗಳಂತ ರೂ.50 ಕೋಟಿವರೆಗೂ ವಿಸ್ತರಣೆ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಅದೇರೀತಿ ಈ ಅರ್ಜಿಯನ್ನು ಸ್ವೀಕಾರ ಮಾಡಿದ ದಿನದಿಂದ 180 ದಿನಗಳೊಳಗಾಗಿ ಆದೇಶವನ್ನು ಹೊರಡಿಸಲು ಅವಕಾಶದ ಪ್ರಸ್ತಾವನೆಯನ್ನು ಮಾಡಲಾಗಿದೆ. ಮೊದಲು ಸದರಿ ಅವಧಿಯು ಒಂದು ವರ್ಷ ಇತ್ತು. ಒಂದು ವರ್ಷದಿಂದ 6 ತಿಂಗಳಿಗೆ ಇಳಿಸಿದ್ದೇವೆ. ಇದು ಕೇವಲ ಠೇವಣಿದಾರರ ಹಿತಾಸಕ್ತಿಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ. ಇದಕ್ಕೆ ಎಲ್ಲಾ ಸದಸ್ಯರು ಅನುವು ಮಾಡಿಕೊಡಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ)**:– ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ The Karnataka Protection of Interest of Depositors in Financial Establishments (Amendment) Bill, 2020 ಎನ್ನುವ ಒಂದು Bill ಅನ್ನು ತಂದಿದ್ದಾರೆ, ಮಾನ್ಯ ಸಚಿವರು IMA ಎಂಬ ಉದಾಹರಣೆಯನ್ನು ಕೊಟ್ಟರು. ಈ depositor ಗಳಿಗೆ ಅನ್ಯಾಯವಾಗುತ್ತಿರುವುದು ಕರ್ನಾಟಕ ಅಥವಾ ದೇಶದಲ್ಲಿ ಹೊಸದಲ್ಲ. ಕಾಲಕಾಲಕ್ಕೆ Society ಹೆಸರಲ್ಲಿ ಬಹಳಷ್ಟು deposits ತೆಗೆದುಕೊಂಡು, ಆ Society ಗಳು ಮುಳುಗಿರುವುದನ್ನು ಬಹಳ ನೋಡಿದ್ದೇವೆ. ಆ ಸಮಯಕ್ಕೆ ತಕ್ಕಂತೆ ಕೆಲವು ಕಾನೂನುಗಳನ್ನು ಬದಲಾವಣೆಗಳನ್ನು ಮಾಡಲು Bill ತಂದು ಕಾನೂನು ಮಾಡುತ್ತಾರೆ. ಜನ ಸಾಮಾನ್ಯರಿಗೆ ಮೋಸ ಆಗುವುದಂತೂ ತಪ್ಪಿಲ್ಲ!. ಕೇವಲ Bill ಮಾತ್ರವಲ್ಲ, ಬೆಂಗಳೂರಿನಲ್ಲಿ Sri Guru Raghavendra Co-operative Bank ಬಗ್ಗೆ ಅವರು ಮರೆತು ಹೋಗಿರಬಹುದು, ಇಂತಹ ಹಲವಾರು Bank ಗಳಿವೆ. ಅದರಲ್ಲಿ depositors ಯಾರಿರುತ್ತಾರೆಂದರೆ, ಪಾಪ ನಿವೃತ್ತಿ ಹೊಂದಿದವರು, ನಿವೃತ್ತಿ ಸಮಯದಲ್ಲಿ ಬಂದ ಹಣವನ್ನು ತೆಗೆದುಕೊಂಡು ಹೋಗಿ deposit ಮಾಡಿರುತ್ತಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(163)/04.02.2021/4.50/ಹೆಚ್‌ವಿ:ಜಿಆರ್**

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ಅವರು ಕೂಡಿಟ್ಟಿರುವ ಹಣ ಇಲ್ಲಿ ಠೇವಣಿ ಇಟ್ಟು ಮುಳುಗಿ ಹೋದಾಗ, ಕೊನೆ ಕಾಲದಲ್ಲಿ ಅವರಿಗೆ ತಿನ್ನುವುದಕ್ಕೆ ಗತಿ ಇಲ್ಲದೇ ಇರುವಂತಹ ಸ್ಥಿತಿಗೆ ಇಂತಹ ಹಣಕಾಸು ಸಂಸ್ಥೆಗಳು ತಂದುಬಿಡುತ್ತವೆ. ಕಾನೂನಿನಿಂದ ಇದನ್ನು ತಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ದಿನೇದಿನೇ ಇಂತಹ fraudulent societies or financial institutions ಗಳು ಅಸ್ತಿತ್ವಕ್ಕೆ ಬರುತ್ತಿವೆ. ಇವುಗಳನ್ನು ಯಾವ ರೀತಿಯಲ್ಲಿ ನಿಯಂತ್ರಣ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಇಂತಹ ಸಂಸ್ಥೆಗಳಿಗೆ ದೊಡ್ಡದೊಡ್ಡ ಹೆಸರುಗಳನ್ನು ಇಡುತ್ತಾರೆ. ಸಾಮಾನ್ಯ ಜನರು ಈ ಹೆಸರುಗಳನ್ನು ನೋಡಿಯೇ ಮಾರುಹೋಗಿ ಅಲ್ಲಿ ಠೇವಣಿ ಇಡುತ್ತಾರೆ. ಒಂದು ಅಥವಾ ಒಂದೂವರೆ ವರ್ಷಗಳ ಕಾಲ ಬಡ್ಡಿಯನ್ನು ಸರಿಯಾಗಿ ಕೊಡುತ್ತಾರೆ. ಉದಾಹರಣೆಗೆ ಹೇಳಬೇಕಾದರೆ, ಐ.ಎಂ.ಎ., ಸಂಸ್ಥೆಯನ್ನು ತೆಗೆದುಕೊಂಡರೆ, ಈ ಪ್ರಕರಣದಲ್ಲಿ ರಾಜಕೀಯ ನಾಯಕರಿದ್ದಾರೆ ಎಂದು ಬಹಳಷ್ಟು ಅಬ್ಬರವಾಯಿತು. ಕೊನೆಗೆ ತಣ್ಣಗಾಯಿತು. ಲಕ್ಷಾಂತರ ಬಡ ಜನರು ಈ ಸಂಸ್ಥೆಯಲ್ಲಿ ಠೇವಣಿ ಇಟ್ಟಿದ್ದರು. ಅವರುಗಳು ಇವತ್ತು ತಮ್ಮ ಠೇವಣಿ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಒದ್ದಾಡುತ್ತಿದ್ದಾರೆ. ಇದಕ್ಕೆ ಪೊಲೀಸರ ಅಥವಾ ಸಹಕಾರ ಸಂಘಗಳ ನಿಬಂಧಕರ ಸಹಕಾರ ಸಿಗುವುದಿಲ್ಲ. ಬಡ ಜನರು ದುಡ್ಡು ಕಳೆದುಕೊಳ್ಳುತ್ತಾರೆ. ಇಂತಹ ಬ್ಯಾಂಕ್‌ಗಳನ್ನು ನಡೆಸುವವರು ಬಹಳ ಬುದ್ಧಿವಂತರಾಗಿರುತ್ತಾರೆ. ಬಡವರ ಪರವಾಗಿ ಮಾತನಾಡುವುದಕ್ಕೆ ಇಲ್ಲಿ ಯಾವ ಸದಸ್ಯರೂ ಇರುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಒಂದು ಹಣಕಾಸು ಸಂಸ್ಥೆಯನ್ನು ಪ್ರಾರಂಭ ಮಾಡಿದ್ದಾರೆಂದರೆ, ನಾಲ್ಕು ಜನ ಮಾತನಾಡುವವರು ಇರುತ್ತಾರೆ. ಈ ರೀತಿಯ ಠೇವಣಿ ಯೋಜನೆಗಳಲ್ಲಿ ವಂಚನೆಗೊಳಗಾಗುವವರ ಪರ ಮಾತನಾಡುವವರು ಯಾರೂ ಇರುವುದಿಲ್ಲ. ಎಲ್ಲರೂ ದುಡ್ಡು ಕಳೆದುಕೊಂಡಿರುವವರೇ ಇರುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಈ ರೀತಿ ವಂಚಿಸುವ ಹಣಕಾಸು ಸಂಸ್ಥೆಯ ಮುಖ್ಯಸ್ಥರಿಗೆ ವಿಧಿಸುವ ಶಿಕ್ಷೆಯ ಅವಧಿಯನ್ನು 6 ವರ್ಷದಿಂದ 7 ವರ್ಷಕ್ಕೆ ಏರಿಸುವುದರಿಂದ ಅಥವಾ ದಂಡದ ಪ್ರಮಾಣವನ್ನು ಹೆಚ್ಚು ಮಾಡುವುದರಿಂದ ವಂಚನೆ ಮಾಡುವವರ ಸಂಖ್ಯೆ ಕಡಿಮೆಯಾಗುತ್ತದೆ ಎನ್ನುವ ಭರವಸೆ ಸರ್ಕಾರಕ್ಕಿದೆಯೇ? ಇದು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಇದಕ್ಕೆ ಕಡಿವಾಣ ಹಾಕುವುದಕ್ಕೆ ಯಾವ ಸರ್ಕಾರದಿಂದಲೂ ಸಾಧ್ಯವಾಗಿಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಆಗಲಿಲ್ಲ, ಈಗಲೂ ಆಗುತ್ತಿಲ್ಲ. ಇಡೀ ದೇಶದಲ್ಲಿ ದೊಡ್ಡದೊಡ್ಡ ಪ್ರಮಾಣದಲ್ಲಿ ಹಣ ವಂಚನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣಗಳು ನಡೆದಿವೆ. ಇವೆಲ್ಲವೂ ಸಿ.ಬಿ.ಐ., ಮುಂದೆ ಬಂದು ನಿಂತಿದೆ. ಏನಾದರೂ ಕೆಲಸ ತೆಗೆದುಕೊಳ್ಳಬೇಕಾದರೆ ಮಾತ್ರ ಸಿ.ಬಿ.ಐ., ಎಚ್ಚೆತ್ತುಕೊಳ್ಳುತ್ತದೆ, ಇಲ್ಲದಿದ್ದರೆ ಸುಮ್ಮನಿರುತ್ತದೆ. ರಾಜಕೀಯ ಕಾರಣಕ್ಕೂ ಇಂತಹವುಗಳು ನಡೆಯುತ್ತವೆ. ಆದ್ದರಿಂದ ಈ ರೀತಿ ವಿಧೇಯಕಗಳನ್ನು ತರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕೊನೆಗೆ ಬಡವರಿಗೆ ಠೇವಣಿ ಸಹ ವಾಪಸ್ಸು ಬರುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳಬೇಕಾದರೆ, ಯಾರೋ ಒಬ್ಬರು ತಮ್ಮ ಆಸ್ತಿಪಾಸ್ತಿ ಮಾರಿ ಸುಮಾರು 5 ಕೋಟಿ ರೂಪಾಯಿಗಳನ್ನು ಪಡೆದುಕೊಂಡಿದ್ದರು. ಇಂತಹ ವಂಚಕ ಹಣಕಾಸು ಸಂಸ್ಥೆಯೊಂದು ಅವರನ್ನು ಒಪ್ಪಿಸಿ ಅಷ್ಟೂ ಹಣವನ್ನು ತಮ್ಮ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿಕೊಂಡರು. ವಿದೇಶದಲ್ಲಿದ್ದ ಅವರು ಈಗ ವಾಪಸ್ಸು ಬಂದು ಹಣ ಕೇಳಿದರೆ, ಅವರಿಗೆ 5 ಕೋಟಿ ರೂಪಾಯಿಗಳನ್ನು ಕೊಡುವುದಿರಲಿ, ಐವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿಲ್ಲ. ಠೇವಣಿ ಇಟ್ಟವರು ಇವತ್ತು ರಸ್ತೆಗೆ ಬಿದ್ದಿದ್ದಾರೆ. ಇಂತಹ ಪ್ರಕರಣಗಳು ಬೆಂಗಳೂರಿನಲ್ಲಿ ಬಹಳಷ್ಟಿವೆ. ಸರ್ಕಾರ ಈ ವಿಧೇಯಕವನ್ನು ತಂದಿರುವುದರಿಂದ ಠೇವಣಿದಾರರಿಗೆ ಯಾವ ರೀತಿಯಲ್ಲಿ ಅನುಕೂಲವಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗಿದೆ. ಶಿಕ್ಷೆಯ ಅವಧಿಯನ್ನು 6 ವರ್ಷದಿಂದ 7 ವರ್ಷಕ್ಕೆ ಏರಿಸುವುದರಿಂದ ವಂಚಕರ ಪ್ರಮಾಣ ಕಡಿಮೆಯಾಗುತ್ತದೆಯೇ? ಠೇವಣಿದಾರರಿಗೇನಾದರೂ ಅನುಕೂಲವಾಗುತ್ತದೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ. ಶಿವಾಜಿನಗರ, ಬಸವನಗುಡಿ ಅಥವಾ ಚಾಮರಾಜನಗರಕ್ಕೆ ಹೋದರೆ, ಅಲ್ಲಿ ಐ.ಎಂ.ಎ., ಮತ್ತು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಿಂದ ವಂಚನೆಗೊಳಗಾದರೇ ಬಂದು ನಿಲ್ಲುತ್ತಾರೆ. ತಮ್ಮ ಠೇವಣಿಯನ್ನು ವಾಪಸ್ಸು ಪಡೆದುಕೊಳ್ಳುವುದಕ್ಕಾಗಿ ಅವರುಗಳು ಸತ್ಯಾಗ್ರಹ, ಅಮರಣಾಂತ ಸತ್ಯಾಗ್ರಹಗಳನ್ನು ಮಾಡಿ ಕೊನೆಗೆ ಏನೂ ಪ್ರತಿಫಲ ಸಿಗದೇ ತಮ್ಮತಮ್ಮ ಮನೆಗಳಲ್ಲಿ ಕುಳಿತುಕೊಂಡಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಇಂತಹ ಠೇವಣಿದಾರರಿಗೆ ಯಾವ ರೀತಿಯ ಭರವಸೆ ಕೊಡುತ್ತಾರೆನ್ನುವುದು ನನ್ನ ಪ್ರಶ್ನೆಯಾಗಿದೆ. ಐ.ಎಂ.ಎ., ಮತ್ತು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ಗಳಿಂದ ವಂಚನೆಗೊಳಗಾದವರಿಗೆ ಯಾವ ರೀತಿಯ ಪರಿಹಾರ ಸಿಗುತ್ತದೆನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗಿದೆ.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020 ಅನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಮಂಡಿಸುತ್ತಿದ್ದಾರೆ. ಹಿಂದೆ ಇದ್ದಂತಹ ವಿಧೇಯಕಕ್ಕೆ ತಿದ್ದುಪಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿರುವುದನ್ನು ನಾನು ಸ್ವಾಗತಿಸುತ್ತಿದ್ದೇನೆ. ಠೇವಣಿದಾರರ unorganised sector ನಲ್ಲಿ ಯಾರು ಪ್ರಾರಂಭ ಮಾಡುತ್ತಾರೆ ಅವರಿಗೆ ಇಂತಿಷ್ಟು ಎಫ್.ಡಿ., ಇಡಬೇಕೆನ್ನುವ ನಿಬಂಧನೆಯನ್ನು ವಿಧಿಸಬೇಕಾಗುತ್ತದೆ. ಉದಾಹರಣೆಗೆ ಒಂದು ಶಾಲೆ ಅಥವಾ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಇಷ್ಟು ಎಕರೆ ಜಾಗ ಇರಬೇಕು, ಇಷ್ಟು ಮೊತ್ತದ ಹಣವನ್ನು ಆ ಟ್ರಸ್ಟ್ ಅಥವಾ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ಠೇವಣಿ ಇಡಬೇಕೆಂದು ಇದೆ. ಯಾವುದೋ ದೇಶದವರು ಯಾವುದೋ ರಾಜ್ಯದವರು ಒಟ್ಟಾಗಿ 4-5 ಜನರು ಇಲ್ಲಿಗೆ ಬಂದು, ಒಂದು ಸಂಸ್ಥೆಯನ್ನು ಕಟ್ಟಿಕೊಂಡು ಒಂದು ಸುಂದರವಾಗಿರುವ ಕಟ್ಟಡದಲ್ಲಿ ಕಛೇರಿಯನ್ನು ತೆರೆಯುತ್ತಾರೆ. ಅವರು ಎಲ್ಲಿಯವರು ಎನ್ನುವುದು ಯಾರಿಗೂ ಗೊತ್ತಿರುವುದಿಲ್ಲ. ಎಂ.ಬಿ.ಎ., ಬಿ.ಬಿ.ಎ., ವ್ಯಾಸಂಗ ಮಾಡಿರುವ ಅಮಾಯಕ ಸ್ಥಳೀಯ ಯುವಕರನ್ನು ನೇಮಕ ಮಾಡಿಕೊಳ್ಳುತ್ತಾರೆ, ಅವರ ಮುಖಾಂತರ ಚಂದ ಎತ್ತಿಸುತ್ತಾರೆ. ಅವರು ನೀಡುವ ಆಕರ್ಷಕ ಬಡ್ಡಿ ದರಕ್ಕೆ ಮಾರುಹೋಗಿ, ಬಡವರು ಮತ್ತು ಅಮಾಯಕರು ಅಲ್ಲಿ ಠೇವಣಿ ಇಡುತ್ತಾರೆ. ಒಂದು ವರ್ಷ ಮಾತ್ರ ಬಡ್ಡಿಯನ್ನು ಸರಿಯಾಗಿ ಕೊಡುತ್ತಾರೆ. ನಂತರ ಆ ಸಂಸ್ಥೆಯೇ ಇರುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳಬೇಕಾದರೆ, ಐ.ಎಂ.ಎ., ಅಗ್ರಿ ಗೋಲ್ಡ್ ಮತ್ತು ವಿನಿವಿಂಕ್ ಮುಂತಾದ ಹಣಕಾಸು ಸಂಸ್ಥೆಗಳು ಭಾರಿ ಸಂಚಲವನ್ನುಂಟು ಮಾಡಿದವು. ವಿನಿವಿಂಕ್ ಕಂಪನಿಯವರು ಆಯಾಯ ಧರ್ಮೀಯರ ಭಾವನೆಗಳಿಗೆ ಅನುಗುಣವಾಗಿ ಪೂಜೆಯ ನೆಪದಲ್ಲಿ ಜನರನ್ನು ಸೇರಿಸಿ, ಹಣ ಸಂಗ್ರಹ ಮಾಡುತ್ತಿದ್ದರು. ಸರ್ಕಾರ ಮತ್ತು ಜನಪ್ರತಿನಿಧಿಗಳು ಎಷ್ಟೇ ಎಚ್ಚರಿಕೆ ಕೊಟ್ಟರೂ ಸಹ ಜನ ಹಣದಾಸೆಗೆ ತಮ್ಮ ದುಡ್ಡನ್ನು ಕಳೆದುಕೊಳ್ಳುತ್ತಿರುವುದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಚಿಟ್ ಫಂಡ್ ಮತ್ತು ಫೈನ್ಯಾನ್ಸ್‌ನಲ್ಲಿ ಹಣ ಕಳೆದುಕೊಂಡಿರುವವರ ಪೈಕಿ ವಿಶೇಷವಾಗಿ ಮಹಿಳೆಯರ ಪ್ರಮಾಣ ಅಧಿಕವಾಗಿದೆ. ಶೇಕಡಾ 99ರಷ್ಟು ಮಹಿಳೆಯರು ವಂಚನೆಗೊಳಗಾಗಿದ್ದಾರೆ. ಇದು ಎಲ್ಲಾ ಜನಪ್ರತಿನಿಧಿಗಳಿಗೆ ಗೊತ್ತಿರುವ ವಿಚಾರವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಹಣಕಾಸು ಸಂಸ್ಥೆಯನ್ನು ಯಾರು ಬೇಕಾದರೂ ಪ್ರಾರಂಭ ಮಾಡಲಿ ಆದರೆ, ಅವರು ಹಣ ಸಂಗ್ರಹ ಮಾಡುವ ಸಾಮರ್ಥ್ಯ ಎಷ್ಟಿದೆ ಅಷ್ಟು ಮೊತ್ತವನ್ನು ಅವರಿಂದ ಠೇವಣಿ ಇರಿಸಿಕೊಂಡರೆ, ಈ ಸಂಸ್ಥೆಯಲ್ಲಿ ಠೇವಣಿ ಇಡುವಂತಹ ಬಡಜನರಿಗೆ ಸೆಕ್ಯುರಿಟಿ ಇರುತ್ತದೆ. ಇಲ್ಲದಿದ್ದರೆ ಇವತ್ತು ಆಫೀಸ್ ಪ್ರಾರಂಭ ಮಾಡುತ್ತಾರೆ, ನಾಳೆ ಅಲ್ಲಿ ಆಫೀಸ್ ಇರುವುದೇ ಇಲ್ಲ. ಆದ್ದರಿಂದ ಈ ವಿಧೇಯಕಕ್ಕೆ ಇನ್ನೂ ಒಳ್ಳೆಯ ಅಂಶಗಳನ್ನು ಸೇರಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020 ಅನ್ನು ಸ್ವಾಗತಿಸುತ್ತಾ, ಕೆಲವು ಸ್ಪಷ್ಟೀಕರಣಗಳನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತಿದ್ದೇನೆ. ಹಣಕಾಸು ಸಂಸ್ಥೆಗಳ ವ್ಯಾಪ್ತಿಗೆ ಸಹಕಾರ ಸಂಸ್ಥೆಗಳು ಬರುತ್ತವೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಉಲ್ಲೇಖ ಮಾಡಿದಂತೆ ಬೆಂಗಳೂರು ಮಹಾನಗರದಲ್ಲಿ, ಕರ್ನಾಟಕ ರಾಜ್ಯದಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಇಡೀ ದೇಶದಲ್ಲಿ ಅನೇಕ ಹಣಕಾಸು ಸಂಸ್ಥೆಗಳನ್ನು ಹುಟ್ಟು ಹಾಕಿ, ಕೆಲವೇ ದಿನಗಳಲ್ಲಿ ಮುಚ್ಚಿಕೊಂಡು ಹೋಗುತ್ತಿದೆ. ಬಡವರು ತಮ್ಮ ಇಡೀ ಜೀವಮಾನದ ಅವಧಿಯಲ್ಲಿ ಉಳಿತಾಯ ಮಾಡಿದಂತಹ ಹಣವನ್ನು ಇಂತಹ ಸಂಸ್ಥೆಗಳಲ್ಲಿ ಹೂಡಿಕೆ ಮಾಡುತ್ತಾರೆ. Because of the rate of interest, ಹೆಚ್ಚು ಲಾಭ ಬರುತ್ತದೆನ್ನುವ ದೃಷ್ಟಿಯಿಂದ ಬಡವರು ಇಂತಹ ಸಂಸ್ಥೆಗಳಲ್ಲಿ ತಮ್ಮ ಹಣವನ್ನು ಹೂಡಿಕೆ ಮಾಡುತ್ತಾರೆ. ಆದರೆ, ಅನೇಕ ಸಂದರ್ಭಗಳಲ್ಲಿ ಅವರು ಹೂಡಿಕೆ ಮಾಡಿದಂತಹ ಹಣ ಅವರಿಗೆ ವಾಪಸ್ಸು ಬರುವುದಿಲ್ಲ. ಅವರುಗಳು ವಂಚನೆಗೊಳಗಾಗಿರುವುದನ್ನು ಇಡೀ ದೇಶದಲ್ಲಿ ನಾವು ನೋಡಿದ್ದೇವೆ. ಆದ್ದರಿಂದ ಸಹಕಾರಿ ಸಂಸ್ಥೆಗಳನ್ನು ಇದರಲ್ಲಿ ಕವರ್ ಮಾಡಲಾಗಿದೆಯೇ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, whether these institutions are governed by the R.B.I.,? ಈ ಸಂಸ್ಥೆಗಳು ಆರ್.ಬಿ.ಐ., ಅಡಿಯಲ್ಲಿ ಕಟ್ಟುನಿಟ್ಟಿನ ನಿಯಮಗಳಿರುವುದರಿಂದ ಅವುಗಳನ್ನು ಪಾಲನೆ ಮಾಡುವುದಕ್ಕೆ ಸಂಬಂಧಪಟ್ಟ ನಿಯಮಗಳನ್ನು ಈ ವಿಧೇಯಕದಲ್ಲಿ ತರಲಾಗಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸರ್ಕಾರ ಒಳ್ಳೆಯ ಕಾನೂನನ್ನು ತಂದಿದೆ, ಆ ಕಾನೂನನ್ನು ಗಟ್ಟಿಗೊಳಿಸುವಂತಹ ಕೆಲಸವಾಗಬೇಕಾಗಿದೆ. Because, these people will read in between the lines. ಯಾವಾಗಲೂ ಇಂತಹ ಸಂಸ್ಥೆಗಳು ನಡುವಿನ ಹಾದಿಯನ್ನು ಹುಡುಕುವಂತಹ ಕೆಲಸವನ್ನು ಮಾಡುತ್ತವೆ ಆದ್ದರಿಂದ ಇವುಗಳು ಆರ್.ಬಿ.ಐ., ನಿಯಮಾವಳಿಗಳ ಅಡಿಯಲ್ಲಿ ಬರುತ್ತವೆಯೇ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು)ಃ–** ಸನ್ಮಾನ್ಯ ಸಭಾಪತಿಯವರೇ, non-banking financial institutionsನ ಠೇವಣಿದಾರರ ಹಿತರಕ್ಷಣೆಗಾಗಿ ಸರ್ಕಾರ ಈ ವಿಧೇಯಕವನ್ನು ತಂದಿದೆಯೆಂದು ನಾನು ಭಾವಿಸಿದ್ದೇನೆ. Non-banking financial institutions ಗಳಲ್ಲಿ ಠೇವಣಿ ಇಡುವುದರ ಬಗ್ಗೆ ಕೇಂದ್ರ ಸರ್ಕಾರದ ವಿತ್ತ ಸಚಿವಾಲಯ ಮತ್ತು ಆರ್.ಬಿ.ಐ., ಮಾರ್ಗಸೂಚಿಗಳನ್ನು ಘೋಷಣೆ ಮಾಡಿವೆ. ಈಗ ತಂದಿರುವಂತಹ ವಿಧೇಯಕದಲ್ಲಿ misappropriation, embezzlement, misapplication ಆಗಿ ದಿವಾಳಿ ಆಗಿರುವಂತಹ ಹಣಕಾಸಿನ ಸಂಸ್ಥೆಗಳಲ್ಲಿ ಹೂಡಿಕೆ ಮಾಡಿರುವಂತಹ ಠೇವಣಿಯನ್ನು ಯಾವ ರೀತಿಯಲ್ಲಿ ರಿಕವರಿ ಮಾಡಿಕೊಳ್ಳಬೇಕೆನ್ನುವ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತರಲಾಗಿದೆಯೆಂದು ನಾನು ಭಾವಿಸಿದ್ದೇನೆ. ಇದರಲ್ಲಿ ಸಾಕಷ್ಟು ಕೇಂದ್ರ ಸರ್ಕಾರದ ಏಜೆನ್ಸಿಗಳ ಪಾಲ್ಗೊಳ್ಳುವಿಕೆಯನ್ನು ಮತ್ತು ಸಹಕಾರವನ್ನು ಕೇಳಲಾಗುತ್ತಿದೆ. Official liquidator appointed by the Central Government under the Companies Act ಅವರಿಂದ ಮಾಹಿತಿ ಬೇಕು ಅವರ ಸೇವೆಯನ್ನು ಪಡೆದುಕೊಳ್ಳಲಾಗುತ್ತಿದೆಯೆಂದು ಹೇಳಲಾಗಿದೆ. ಅದೇ ರೀತಿಯಲ್ಲಿ Security Exchange Board of India ಅವರ ಸಹಕಾರವನ್ನು ಕೇಳಲಾಗುತ್ತಿದೆ. ಅದೇ ರೀತಿ Valuers approved by any National Bank ಅವರ ಸಹಕಾರವನ್ನೂ ಕೇಳಲಾಗುತ್ತಿದೆ. ಈ ಆಕ್ಟ್ ಅನ್ನು ಜಾರಿಗೊಳಿಸಬೇಕಾದರೆ ರೂಲ್ಸ್ ಮಾಡುವುದು ಅವಶ್ಯಕವಾಗಿರುತ್ತದೆ. ಅದನ್ನು ಮಾಡಿರಬಹುದೆಂದು ನಾನು ಭಾವಿಸುತ್ತೇನೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಎಸ್.ಡಿ.ಎಂ., ಅವರಿಗೆ ಅಧಿಕಾರವನ್ನು ಕೊಟ್ಟರೇ ಅವರು ವಿನಾ ಕಾರಣ ನೋಟಿಸ್ ಕೊಡಬಾರದು. ಇವರಿಗೆ ಯಾರೂ ಸಹಕಾರ ಕೊಡುವುದಿಲ್ಲ ಏಕೆಂದರೆ, ಇವರೆಲ್ಲ ಭಾರತ ಸರ್ಕಾರದ ನಿಯಂತ್ರಣಕ್ಕೆ ಬರುವುದರಿಂದ ಈ ಎಲ್ಲ ವಿವರಗಳನ್ನು ಒಳಗೊಂಡಂತಹ ತಿದ್ದುಪಡಿ ವಿಧೇಯಕವನ್ನು ತರಬೇಕೆನ್ನುವುದು ನನ್ನ ಸಲಹೆಯಾಗಿದೆ.

(ಮುಂದುವರಿದಿದೆ)

(164) 4.2.2021 5.00 ಪಿಕೆ:ಜಿಆರ್

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಆರೋಗ್ಯ ಸಚಿವರು, "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ)ವಿಧೇಯಕ 2020 ಅನ್ನು ತಂದಿದ್ದಾರೆ. ರಾಜ್ಯದಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಠೇವಣಿದಾರರ ಹಿತಾಸಕ್ತಿ ಕಾಪಾಡುವ ಸಲುವಾಗಿ ಈ ಒಂದು ತಿದ್ದುಪಡಿ ವಿಧೇಯಕವನ್ನು ತರಲಾಗಿದೆ. ಇದು ಬಹಳ ಅವಶ್ಯಕತೆ ಕೂಡ ಇದೆ. ಮಾನ್ಯ ಹರಿಪ್ರಸಾದ್‌ರವರು ಮಾತನಾಡುತ್ತಾ, ಕೇವಲ ಜೈಲು ಶಿಕ್ಷೆಯ ಅವಧಿ ಹೆಚ್ಚು ಮಾಡುವುದರಿಂದ, ದಂಡದ ಮೊತ್ತವನ್ನು ಹೆಚ್ಚು ಮಾಡುವುದರಿಂದ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಸಾಧ್ಯವಿದೆಯೋ ಇಲ್ಲವೋ? ಬೇರೆ ರೀತಿಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಬೇರೆ ರೀತಿಯ ವ್ಯವಸ್ಥೆಯನ್ನು ಮಾಡಬಹುದು ಎನ್ನುವ ವಿಚಾರವನ್ನು ಹೇಳಿದ್ದಾರೆ ಮತ್ತು ಅದು ಸ್ವಾಗತಾರ್ಹವಾದ ವಿಚಾರವಾಗಿದೆ. ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಮತ್ತು ಬೇರೆ ಬೇರೆ ರೂಪದಲ್ಲಿ ಬೇರೆ ಬೇರೆ ಕಾನೂನುಗಳನ್ನು ತರುವುದಕ್ಕೆ ಸರ್ಕಾರ ಮುಕ್ತವಾಗಿದೆ. ಸರ್ಕಾರ ಕಾನೂನುಗಳನ್ನು ತರಬಹುದು. ಮಾನ್ಯ ಸಭಾಪತಿಯವರೇ, ಸಹಕಾರಿ ಸಂಸ್ಥೆಗಳಲ್ಲಿ ಠೇವಣಿದಾರರ ಪೂರ್ತಿ ಹಣವನ್ನು ಮುಳುಗಿಸಿದಂತಹ ಉದಾಹರಣೆಗಳಿವೆ. ಆಗ ಠೇವಣಿದಾರರು ಏನು ಮಾಡಬೇಕು? ನನ್ನ ಅನುಭವದಲ್ಲಿ ಹೇಳುವುದಾದರೆ, ಠೇವಣಿದಾರರು ಹಣಕಾಸು ಸಂಸ್ಥೆಗೆ ಬಂದು ಹಣ ಇಡಬೇಕಾದರೆ, ಆ ವಿಚಾರವನ್ನು ಸ್ವಂತ ಅಣ್ಣತಮ್ಮಂದಿರುಗಳಿಗೂ ಹೇಳಿರುವುದಿಲ್ಲ, ಈ ವಿಚಾರವನ್ನು ಅವರಲ್ಲಿ ಹೇಳಿದರೆ, ಅವರು ನನಗೆ ಸ್ವಲ್ಪ ತೊಂದರೆ ಇದೆ ಆ ಹಣವನ್ನು ಕೊಟ್ಟರು, ನಂತರ ಡಿಪಾಸಿಟ್ ಇಡು ಎಂದು ಹೇಳುತ್ತಾರೆ. ಅಷ್ಟೇ ಅಲ್ಲ, ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೂ ಸಹ ತಾವು ಡಿಪಾಸಿಟ್ ಇಡುವುದನ್ನು ಠೇವಣಿದಾರರು ಹೇಳುವುದಿಲ್ಲ. ಮಕ್ಕಳಿಗೆ ಗೊತ್ತಾದರೆ, ಆ ಹಣದಲ್ಲಿ ಕಾರು ತೆಗೆದುಕೊಳ್ಳುತ್ತೇನೆ, ಬೈಕ್ ತೆಗೆದುಕೊಳ್ಳುತ್ತೇನೆ, ಮತ್ತೊಂದು ತೆಗೆದುಕೊಳ್ಳುತ್ತೇನೆ ಎಂದು ಕೇಳುತ್ತಾರೆ ಎನ್ನುವ ಅನುಮಾನ ಇರುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ತಾವು ಡಿಪಾಸಿಟ್ ಇಡುವುದನ್ನು ತಮ್ಮ ಧರ್ಮಪತ್ನಿಗೂ ಹೇಳಿರುವುದಿಲ್ಲ. ಏಕೆಂದರೆ, ಆಕೆಗೆ ಗೊತ್ತಾದರೆ ಆ ಹಣದಲ್ಲಿ ಬಂಗಾರ ತೆಗೆದುಕೊಳ್ಳುತ್ತೇನೆ ಎಂದು ಹೇಳಬಹುದು ಎಂದು ಭಾವಿಸುತ್ತಾರೆ. ಈ ರೀತಿ ಠೇವಣಿದಾರರು ತಮ್ಮ ಕುಟುಂಬ ವರ್ಗದವರಿಗಿಂತಲೂ ಹಣಕಾಸು ಸಂಸ್ಥೆ ಮೇಲೆ ಹೆಚ್ಚು ನಂಬಿಕೆಯನ್ನು ಇಟ್ಟಿರುತ್ತಾರೆ. ಇಲ್ಲಿ ಹಣ ಸುರಕ್ಷಿತವಾಗಿರುತ್ತದೆ, ಆಪತ್ಕಾಲದಲ್ಲಿ, ಮಕ್ಕಳ ವಿದ್ಯಾಭ್ಯಾಸಕ್ಕೆ, ಆಸ್ಪತ್ರೆ ವೆಚ್ಚಕ್ಕೆ ಮತ್ತು ಇನ್ನಿತರ ಅನಿರೀಕ್ಷಿತ ಘಟನೆ ನಡೆದು ಹಣದ ಅವಶ್ಯಕತೆ ಬಿದ್ದಾಗ ಉಪಯೋಗವಾಗಲಿ ಎಂದು ಹಣವನ್ನು ಡಿಪಾಸಿಟ್ ಇಡುತ್ತಾರೆ. ನೀವು ದಂಡವನ್ನು ರೂ. 5 ಲಕ್ಷ ದಿಂದ ರೂ.10 ಲಕ್ಷಕ್ಕೆ ಏರಿಸಿದ್ದೀರಿ. ಜೈಲು ಶಿಕ್ಷೆಯನ್ನು 5 ವರ್ಷದಿಂದ 6 ವರ್ಷಕ್ಕೆ ಅಂದರೆ, 1 ವರ್ಷ ಹೆಚ್ಚು ಮಾಡಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಕೆ.ಸುಧಾಕರ್:–** ಅಷ್ಟೇ ಅಲ್ಲದೇ ಜುಲ್ಮಾನೆ ಮೊತ್ತವನ್ನು ರೂ. 10 ಲಕ್ಷದಿಂದ ರೂ. 50 ಕೋಟಿಗಳಷ್ಟು ಹಾಕಬಹುದಾಗಿದೆ. ಜೈಲು ಶಿಕ್ಷೆಯನ್ನು 5 ವರ್ಷದಿಂದ 7 ವರ್ಷಗಳವರೆಗೆ ವಿಸ್ತರಿಸಬಹುದಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, habitual offenders ಅವರಿಗೆ ದಂಡವನ್ನು ರೂ 10 ಲಕ್ಷದಿಂದ ರೂ. 50 ಕೋಟಿಯವರೆಗೆ ವಿಸ್ತರಿಸಿದ್ದಾರೆ. ಇದು ದೊಡ್ಡ ಮೊತ್ತವೇ ಆಗಿದೆ. ಮಾನ್ಯ ಸಭಾಪತಿಯವರೇ, ಇಂತಹ ಸಂಸ್ಥೆಯನ್ನು ನಡೆಸುವವರು ಚಾರ್ಲ್ಸ್ ಶೋಭ್‌ರಾಜ್ ಮಾದರಿಯಲ್ಲಿ ಇರುತ್ತಾರೆ. ಠೇವಣಿದಾರರ ಹಿತಾಸಕ್ತಿ ಕಾಪಾಡುವುದು ನಮ್ಮ ಕರ್ತವ್ಯವಾಗಿದೆ. ಸರ್ಕಾರದ ಮುಖ್ಯ ಸಚೇತಕರು ಮಾತನಾಡುತ್ತಾ, ಇದು ಸಹಕಾರಿ ಸಂಸ್ಥೆಗಳಿಗೆ ಅಪ್ಲೆ ಆಗುತ್ತದೆಯೋ, ರಾಷ್ಟ್ರೀಕೃತ ಬ್ಯಾಂಕುಗಳಿಗೆ ಇದು ಅಪ್ಲೆ ಆಗುತ್ತದೆಯೋ ಎಂದು ಕೇಳಿದರು. ಭಾರತೀಯ ರಿಸರ್ವ್ ಬ್ಯಾಂಕ್‌ನವರು ಈ ಹಣಕಾಸು ಸಂಸ್ಥೆಗಳಿಗೆ ಲೈಸೆನ್ಸ್ ಕೊಟ್ಟಿರುವುದಿಲ್ಲ. ಉದಾಹರಣೆಗೆ, ಅರ್ಬನ್ ಬ್ಯಾಂಕ್ ಅಥವಾ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಇವರಿಗೆ ಆರ್.ಬಿ.ಐ., ನವರು ಲೈಸೆನ್ಸ್ ಕೊಟ್ಟಿರುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, all sector Banks ಅಂದರೆ, nationalised banks, private banks and co-operative sector banks ಇರಬಹುದು, they are guided by the R.B.I., ಅವು through ಆರ್.ಬಿ.ಐ., ಕಂಟ್ರೋಲ್ ಇರುತ್ತದೆ. ಇದು non-banking financial institutions ಗಳಿಗೆ ಸಂಬಂಧಪಡುತ್ತದೆ. ಅಲ್ಲಿನ ಠೇವಣಿದಾರರ ಹಿತವನ್ನು ಕಾಪಾಡುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಅಂದರೆ, these institutions will not come under the clutches of Reserve Bank of India. ಅವರು ಇವರಿಗೆ ಲೈಸೆನ್ಸ್ ಕೊಟ್ಟಿರುವುದಿಲ್ಲ, ಅವರ clutches ನಲ್ಲಿ ಇರುವುದಿಲ್ಲ, ಅವರ over all supervision ಕೂಡ ಇರುವುದಿಲ್ಲ. ಇವುಗಳು ಆರ್.ಬಿ.ಐ., ವ್ಯಾಪ್ತಿಗೆ ಬರದಂತಹ, ಲಂಗು–ಲಗಾಮು ಇಲ್ಲದಂತಹ ಸಂಸ್ಥೆಗಳಾಗಿರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ N.B.F.C., ಇವು ಆರ್.ಬಿ.ಐ., ವ್ಯಾಪ್ತಿಗೆ ಬರುತ್ತವೆ. L.L.P., ಅಂದರೆ Low Liability Partnership ಎಂದೇನಿದೆ, ಆ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಬಿಗಿಯಾದ ಕಾನೂನಿನ ಅವಶ್ಯಕತೆ ಇದೆ. ಉದಾಹರಣೆಗೆ I.M.A., comes under the L.L.P., ಇವು Partnership Firms ಆಗಿರುತ್ತವೆ. ಅವುಗಳ depositors control ಮಾಡುವುದಕ್ಕೆ 2004ರಿಂದ ಕಾನೂನು ಇದೆ. ಆದರೆ, ಅದರಲ್ಲಿ ಬಹಳಷ್ಟು lacunas ಇತ್ತು. ಅದನ್ನು ತುಂಬಿಕೊಳ್ಳುವ ಸಲುವಾಗಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಉದಾಹರಣೆಗೆ, ಇಂತಹ ಸಂಸ್ಥೆಗಳ ಶಾಖೆಗಳು ಹಲವಾರು ಜಿಲ್ಲೆಗಳಲ್ಲಿ ಇರುತ್ತವೆ. ಅಲ್ಲಲ್ಲೇ ಕೇಸ್‌ಗಳಾಗುತ್ತವೆ. ಆಗ ಯಾವ ಜಿಲ್ಲೆಯ ವ್ಯಾಪ್ತಿಯಲ್ಲಿ ತನಿಖೆ ಮಾಡಬೇಕು ಎನ್ನುವುದರ ಬಗ್ಗೆ ಗೊಂದಲ ಇರುತ್ತದೆ. ಯಾವುದಾದರೂ ಒಂದು ಸಂಸ್ಥೆ 10 ಕಡೆ ಬ್ರಾಂಚ್ ಮಾಡಿ ಅವ್ಯವಹಾರ ಮಾಡಿದರೂ ಕೂಡ, ಯಾವುದಾದರೂ ಒಂದು ನೋಡಲ್ ಜಿಲ್ಲೆಗೆ restrict ಮಾಡಿ, ಎಲ್ಲಾ ಇನ್‌ವೆಸ್ಟಿಗೇಷನ್ ಅಲ್ಲೇ ಮಾಡಬಹುದು. ಅವು interconnected transactions ಇರುತ್ತವೆ. ಅಂತಹ ಸಂಸ್ಥೆಗಳದ್ದು ಯಾವುದಾದರೂ ಒಂದು nodal district ಮಾಡಿ, ತನಿಖೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಅದಲ್ಲದೇ, Investigating Officers ಗಳು District Magistrate ಇರಬಹುದು, Revenue Officers ಇರಬಹುದು, ಯಾರು ತನಿಖಾಧಿಕಾರಿಗಳಾಗಿರುತ್ತಾರೋ ಅವರಿಗೆ Civil Court powers ಕೊಟ್ಟಿದ್ದೇವೆ. ಹಾಗೆ ಮಾಡದೇ ಇದ್ದರೆ, ಅವರಿಗೆ ವಾರೆಂಟ್ ಕೊಡುವುದಕ್ಕಾಗಾಲಿ, ಜಪ್ತಿ ಮಾಡುವುದಕ್ಕಾಗಲಿ ಪ್ರತಿಯೊಂದಕ್ಕೂ ಕೋರ್ಟ್‌ನ ಮುಂದೆ ಹೋಗಿ ನಿಲ್ಲಬೇಕಾಗುತ್ತಿತ್ತು. ಇಂತಹ ಪರಿಸ್ಥಿತಿ ಮಧ್ಯೆ ಟೈಮಿಂಗ್ ಇರುತ್ತದೆ ಎಂದು ಅವರು advantage ತೆಗೆದುಕೊಳ್ಳುತ್ತಿದ್ದರು. ಆ ರೀತಿ ಆಗಬಾರದು ಎಂದು Civil Court powers ಅನ್ನೇ Investigation Officers ಗೆ ಕೊಟಿದ್ದೇವೆ. We are empowering them.

**ಶ್ರೀ ಬಿ.ಕೆ.ಹರಿಪ್ರಸಾದ್:-** ಇದರ ಒಳಗೆ ಚಿಟ್‌ಫಂಡ್ಸ್ ಬರುತ್ತದೆಯೇ?

**ಶ್ರೀ ಬಸವರಾಜ ಬೊಮ್ಮಾಯಿ:-** ಹೌದು, ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಭಾರತೀಯ ರಿಸರ್ವ್ ಬ್ಯಾಂಕ್‌ನ clutches ಒಳಗೆ ಬರುವಂತಹ ಸಂಸ್ಥೆಯೊಳಗೆ ಕೆಲವು ಪ್ರಕರಣಗಳು ಆಗಿವೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದಾಗ big bull ಹರ್ಷದ್ ಮೆಹ್ತಾನ ಹೆಸರು ಬರುತ್ತದೆ. ಇವನ ಹೆಸರನ್ನು ಬಹಳ ಜನ ಕೇಳಿರುತ್ತಾರೆ. ರೂ. 10000 ಕೋಟಿ swindle ಮಾಡಿದ್ದ. ಆತ ಜೈಲ್‌ನಲ್ಲೇ ಸತ್ತು ಹೋದ. ಅದೇ ಸರ್ಕಾರಿ ಸಂಸ್ಥೆಗಳಲ್ಲಿ ಪಿಗ್ಮಿ ಕಲೆಕ್ಟ್ ಮಾಡುವವರು ದುಡ್ಡು ಕಟ್ಟುವಾಗ ರೂ. 500 ಹೆಚ್ಚು ಕಡಿಮೆ ಇದ್ದರೆ ಡಿಪಾಸಿಟ್ ಮಾಡಲು ಆಗುವುದಿಲ್ಲ. ಆದರೆ ಹರ್ಷದ್ ಮೆಹ್ತಾ ರೂ. 10000 ಕೋಟಿ swindle ಮಾಡಿದ. ಆಗಿನ ಕಾಲಕ್ಕೆ ರೂ. 10000 ಕೋಟಿ ಎಂದರೆ ಅದರ ಮೌಲ್ಯ ಎಷ್ಟಾಗಿರುತ್ತಿತ್ತು ಎಂದು ಲೆಕ್ಕ ಹಾಕಬಹುದು. State Bank of India is a mother Bank of our nation. ದೊಡ್ಡ ಬ್ಯಾಂಕ್ ಆಗಿದೆ, ಸ್ಟೇಟ್ ಬ್ಯಾಂಕ್ ಎಂದರೆ ಒಳಗೆ ಹೋಗುವುದಕ್ಕೆ ನಾವು ಅಂಜುತ್ತೇವೆ. ಇಂತಹ ದೊಡ್ಡ ಬ್ಯಾಂಕ್‌ನಲ್ಲಿ ಈ ರೀತಿಯ ಪ್ರಕರಣ ನಡೆದು ಹೋಯಿತು. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ಆರ್‌ಬಿಐನವರು ಲೈಸೆನ್ಸ್ ಕೊಟ್ಟಿರುತ್ತಾರೆ. ಮಾನ್ಯ ಗೃಹ ಮಂತ್ರಿಗಳ ಜಿಲ್ಲೆಯಲ್ಲಿರುವ, ಮಾದರಿ ಬ್ಯಾಂಕ್ ಕೆ.ಸಿ.ಸಿ., ಬ್ಯಾಂಕ್‌ನ ಪರಿಸ್ಥಿತಿ ಏನಾಗಿದೆ ಎಂದು ಗೊತ್ತಿದೆ. ಅದನ್ನು ನೋಡಿಯೇ ನಾವೆಲ್ಲ ಬ್ಯಾಂಕ್ ಮಾಡಿದ್ದೆವು. ಅನೇಕ ಅರ್ಬನ್ ಬ್ಯಾಂಕುಗಳು ಈ ರೀತಿಯಾಗಿ swindle ಆಗಿರುವ ಉದಾಹರಣೆಗಳು ಸಾಕಷ್ಟಿವೆ. ನಮ್ಮ ಜಿಲ್ಲೆಯಲ್ಲಿ ಭಜಂತ್ರಿ ಎಂಬ ವ್ಯಕ್ತಿ ಇದ್ದ, ಈಗಿಲ್ಲ, ಸತ್ತು ಹೋಗಿದ್ದಾರೆ. ಆತ ಒಂದು financial institute ಮಾಡಿ ಮೊತ್ತವನ್ನು 3 ತಿಂಗಳಿಗೆ ಡಬಲ್ ಮಾಡುತ್ತಿದ್ದ. ನೀವು ರೂ. 10 ಲಕ್ಷಗಳನ್ನು ಕೊಟ್ಟರೆ 3 ತಿಂಗಳ ನಂತರ ರೂ. 20 ಲಕ್ಷ ಕೊಡುತ್ತಿದ್ದ. ಆತನ ಹತ್ತಿರ ದೊಡ್ಡ ದೊಡ್ಡ ರಾಜಕಾರಣಿಗಳು ಮತ್ತು ಐ.ಪಿ.ಎಸ್., ಅಧಿಕಾರಿಗಳು ರೊಕ್ಕ ಇಟ್ಟಿದ್ದರು. ಮಠಾಧೀಶರು ಇಟ್ಟ ಮೊತ್ತಕ್ಕೆ ಲೆಕ್ಕವೇ ಇರಲಿಲ್ಲ. ನಾನು ಕೈ ಮುಗಿಯುತ್ತೇನೆ, ನನ್ನದು ರೂ. 10 ಲಕ್ಷ ಇಟ್ಟುಕೊಂಡು ಪುಣ್ಯವನ್ನು ಕಟ್ಟಿಕೋ ಎಂದು ಹೇಳಿದಂತಹ ಬಹಳಷ್ಟು ಜನ ರಾಜಕಾರಣಿಗಳನ್ನು ನಾವು ನೋಡಿದ್ದೇವೆ, ಮಂತ್ರಿಗಳನ್ನು ನೋಡಿದ್ದೇವೆ, ಅವರಿಂದ ಒಂದು ಪೈಸೆ ಕೂಡ ಲಾಭವಾಗಲಿಲ್ಲ, ನಿನ್ನಿಂದ ಲಾಭ ಆಗುತ್ತದೆ, ನಿಜವಾಗಲೂ ನೀನು ಭಗವಂತನಂತಿರುವೇ, ಹಣವನ್ನು ಇಟ್ಟುಕೊಳ್ಳದೇ ಇದ್ದರೂ ಹಣ ಇಟ್ಟಿರುವ ಸೂಟ್ ಕೇಸ್ ಆದರೂ ಒಂದು ಸಲ ಮುಟ್ಟು, ಟಚ್ ಮಾಡು ಸಾಕು ಎಂದು ಆತನ ಬೆನ್ನು ಹತ್ತಿರುವ ಉದಾಹರಣೆಗಳೂ ಇವೆ. ಚುನಾವಣೆ ಒಂದು ವರ್ಷ ಇದೆ ಎನ್ನುವಾಗ ಎಷ್ಟೋ ಮಂದಿ ರಾಜಕಾರಣಿಗಳು ತಮ್ಮ ಹತ್ತಿರ ಇರುವ ದುಡ್ಡನ್ನು ಇಟ್ಟು, ಅದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡರಷ್ಟಾದರೆ ಚುನಾವಣೆಯ ವೆಚ್ಚ ಮಕ್ಕಟ್ಟೆಯಲ್ಲಿ ಮುಗಿದು ಹೋಗುತ್ತದೆ ಎಂದು ಯೋಚಿಸಿದವರೂ ಇದ್ದಾರೆ.

(ಮುಂದು . . .)

(165)4–2–2021/5.10/ಡಿಎಸ್–ಎಂಡಿ

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

So many Police Officers, IAS Officers, ದೊಡ್ಡವರು ಇದ್ದರು. You can't imagine, ಇಂಥವರು ಹೋಗಿ ಇಂತಹ ಕಡೆ ಹಣ ಇಟ್ಟು ಕೈಸುಟ್ಟಿಕೊಂಡಿದ್ದಾರೆಂದರೆ, ನೀವು ನಂಬುವುದಿಲ್ಲ. ಪಾಟೀಲ್‌ರವರೇ ನೀವು ಎಷ್ಟು ಸುಳ್ಳು ಹೇಳುತ್ತೀರಿ ಎಂದು ಹೇಳುತ್ತಾರೆ. ಅಂಥವರಿಗೆಲ್ಲಾ ಏನಾಯಿತು, ಬಜೆಂತ್ರಿ ಒಂದು ದಿವಸ ಸತ್ತು ಹೋಗಿಬಿಟ್ಟ. ಇಂತಹ ಸಂಸ್ಥೆಯಲ್ಲಿ ದಂಡ ವಿಧಿಸುವುದಲ್ಲದೆ, since its inception, ಅಂದರೆ ಶುರು ಪ್ರಾರಂಭವಾಗದೇ ಇರುವ ಹಾಗೆ ಕಾನೂನನ್ನು ತರಬೇಕು. ಇಂತಹ ಸಂಸ್ಥೆಗಳ ಮೇಲೆ ಸುಲಭವಾಗಿ ಜನರು ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಮೂರು ತಿಂಗಳಲ್ಲಿ ಡಬಲ್ ಆಗುತ್ತದೆ, ಆರು ತಿಂಗಳಲ್ಲಿ ಡಬಲ್ ಆಗುತ್ತದೆಂದರೆ ಜನರು ಸುಲಭವಾಗಿ ಆಕರ್ಷಣೆಗೆ ಒಳಗಾಗುತ್ತಾರೆ. ಇದು ನಮ್ಮ ಜಿಲ್ಲೆಯಲ್ಲಾಗಿದೆ. ಅವನು ಸತ್ತು ಹೋದ ಮೇಲೆ ಅವರ ಹತ್ತಿರ ಯಾರ್‍ಯಾರು ಠೇವಣಿಯನ್ನಿಟ್ಟಿದ್ದಾರೋ ಅವರೆಲ್ಲಾ ಆತ್ಮಹತ್ಯೆ ಮಾಡಿಕೊಂಡು ಸತ್ತು ಹೋದರು. ಅದರಲ್ಲಿ ಸಾಕಷ್ಟು ಪ್ರೊಫೇಸರ್‌ಗಳಿದ್ದರು. ಐದು ಪರ್ಸೆಂಟ್ ಕಮೀಷನ್ ಸಿಗುತ್ತದೆಂದು ಅವರ ಹತ್ತಿರ ಠೇವಣಿಯನ್ನು ಇಟ್ಟಿದ್ದರು. ಅವರ ಮನೆ ಮುಂದೆ ಹೋಗಿ ಕುಳಿತುಕೊಂಡಿದ್ದರು. ಪ್ರೊಫೇಸರ್ ಗಂಡ ಹೆಂಡತಿ ಸತ್ತು ಹೋದರು. ಈ ರೀತಿ ಅನಾಹುತಗಳಾಗುತ್ತಿವೆ. ಇಂತಹ ಸಂಸ್ಥೆಗಳು ಹುಟ್ಟಿನಿಂದ ಇವರು ಮೋಸ ಮಾಡುವಂತಹವು. ಇಂತಹ ಸಂಸ್ಥೆಗಳನ್ನು, you have to nip it in the bud itself. ಅಂತಹ ಕಾನೂನನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು. ಇಂತಹ ಸಂಸ್ಥೆಗಳು ಹುಟ್ಟಲೇಬಾರದು. ಹೀಗೆ ಆಕರ್ಷಿಸುವ ಸಂಸ್ಥೆಗಳಿಗೆ ಹೋಗುವುದಕ್ಕೆ ಜನರು ತುದಿಗಾಲಿನಲ್ಲಿ ನಿಂತಿರುತ್ತಾರೆ. ದೊಡ್ಡ ಠೇವಣಿದಾರರು ಎಂದರೆ ಮಹಿಳೆಯರು. ಎಕಾನಮಿಕ್ಸ್ ಸರಿಯಾಗಿ ಗೊತ್ತಿರುವುದೇ ಮಹಿಳೆಯರಿಗೆ, ನಮಗೇನು ಗೊತ್ತಿರುವುದಿಲ್ಲ. ಅವರು ಹಣದ ವಹಿವಾಟನ್ನು ಚೆನ್ನಾಗಿ ಮಾಡುತ್ತಾರೆ. ನೋಟು ರದ್ದಾದ ನಂತರ ಅವರಿಗೂ ಸಹ ಬಹಳ ದೊಡ್ಡ ಪ್ರಮಾಣದಲ್ಲಿ ಪಜೀತಿ ಆಗಿಬಿಟ್ಟಿದೆ. ಮಾನ್ಯ ಭಾರತಿಶೆಟ್ಟಿಯವರು ಅದನ್ನು ಒಪ್ಪುವುದಿಲ್ಲವೆಂದು ಕಾಣುತ್ತದೆ. ನಮ್ಮ ಕಡೆ ಇರುವುದನ್ನು ನಾನು ಹೇಳುತ್ತಿದ್ದೇನೆ. ಒಟ್ಟಾರೆ ಈ ಕಾನೂನನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಇಂತಹ ಸಂಸ್ಥೆಗಳು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಿಸರ್ವ್ ಬ್ಯಾಂಕಿನ ವ್ಯಾಪ್ತಿಗೆ ಒಳಪಡದಿರುವಂತಹ ಈ ಹಣಕಾಸಿನ ಸಂಸ್ಥೆಗಳ ಹುಟ್ಟಿನ ಬಗ್ಗೆ ಇವರು ಕೆಲಸ ಪ್ರಾರಂಭ ಮಾಡುತ್ತಾರಲ್ಲಾ ಆಗಲೇ curb ಮಾಡಲಿಕ್ಕೆ, ಅಶಿಸ್ತಿನಲ್ಲಿ ಬರಲಾಗದ ಹಾಗೆ ಬಿಗಿಯಾದಂತಹ ಕಾನೂನುಗಳನ್ನು ಮಾಡಿದರೆ ನಾವು ಠೇವಣಿದಾರರ ಹಿತಾಸಕ್ತಿ ಕಾಪಾಡಿದಂತಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕವನ್ನು ತಂದಿರುವುದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಈ ಎಲ್ಲಾ ಶಾಸಕರ ಅಭಿಪ್ರಾಯವೇನೆಂದರೆ, any Financial Institution covered under Reserve Bank of India is safe. ಆದರೆ ಇಲ್ಲಿ ಏನಾಗಿದೆ ಎಂದರೆ, Taluk level, Village level, District level small Financial Institutes ಬಂದು ಬಿಡುತ್ತವೆ. ಅವರು ಯಾವುದೋ ಕೇಳಲಾರದ ಹೆಸರನ್ನಿಟ್ಟುಕೊಂಡಿರುತ್ತಾರೆ, ತಮಿಳು ನಾಡಿನ ಹೆಸರು ಇಟ್ಟುಕೊಂಡು ಇಲ್ಲಿ ಹೇಳುತ್ತಿರುತ್ತಾರೆ. Modus *operandi* ಹೇಗೆ ಇರುತ್ತದೆಂದರೆ, ಸ್ಥಳೀಯದಲ್ಲಿ ಒಳ್ಳೆಯ ಮನೆತನದ ಹುಡುಗರು ಎಂಬಿಎ ಪದವೀಧರರಾಗಿರುವವರನ್ನು ನೇಮಕ ಮಾಡಿಕೊಳ್ಳುತ್ತಾರೆ. ನೂರು ರೂಪಾಯಿಗೆ ನಿನಗೆ 15-20 ರೂಪಾಯಿ ಕಮೀಷನ್ ಕೊಡುತ್ತೇನೆಂದು ಹೇಳುತ್ತಾರೆ. ಅವರು ಎಲ್ಲೆಲ್ಲಿ ಸಾಹುಕಾರರು ಇರುತ್ತಾರೆ ಅಲ್ಲಿ ಹೋಗಿ ಒಂದು ಲಕ್ಷ ರೂಪಾಯಿಗಳನ್ನು ತಂದರೆ ಹದಿನೈದು ಸಾವಿರ ರೂಪಾಯಿ ನಿನಗೆ ಕೊಡುತ್ತೇನೆಂದು ಹೇಳುತ್ತಾರೆ. ಇಂತಹ ವ್ಯವಹಾರ ಮಾಡಿದರೆ ಯಾವುದು ಸಂಸ್ಥೆಗಳಾಗುವುದಿಲ್ಲ. ಹಣ ಸಂಗ್ರಹ ಮಾಡಿಕೊಂಡು ಹೊರಟು ಹೋಗುತ್ತಾರೆ. ಇಂತಹ ಪ್ರಕರಣಗಳಲ್ಲಿ ಇವೆಲ್ಲಾ fail ಆದ ಮೇಲೆ District Magistrate ಗೆ ಹೋಗುತ್ತದೆ, ಆನಂತರ penalty ಹಾಕುತ್ತಾರೆ. ಆದರೆ ಇದನ್ನು ಹೇಗೆ avoid ಮಾಡುತ್ತಾರೆ? ಈಗಾಗಲೇ ಹೇಳಿದ ಹಾಗೆ ಬಹಳಷ್ಟು ಸಂಸ್ಥೆಗಳು ಮೋಸ ಮಾಡುತ್ತಿದ್ದಾರೆ, ಲಕ್ಷಾಂತರ ರೂಪಾಯಿಗಳನ್ನು, ಕೋಟ್ಯಾಂತರ ರೂಪಾಯಿಗಳನ್ನು ಕಟ್ಟುಬಿಟ್ಟಿದ್ದಾರೆ. ಅದರಲ್ಲೂ ಮಧ್ಯಮ ವರ್ಗದವರು ಠೇವಣಿಯನ್ನಿಟ್ಟಿದ್ದಾರೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದ ಹಾಗೆ ಯಾರಿಗೂ ಗೊತ್ತಾಗದ ಹಾಗೆ ಠೇವಣಿ ಇಡುವಂಥವರು ಬಹಳಷ್ಟು ಜನರು ಇದ್ದಾರೆ. ಹಣ ಕಳೆದುಕೊಂಡಾದ ಮೇಲೆ ನಮ್ಮ ಹತ್ತಿರ ಬರುತ್ತಾರೆ, ಸಾರ್ ಒಂದು ಕೆಲಸ ಆಗಬೇಕಾಗಿದೆ ಎಂದು ಹೇಳುತ್ತಾರೆ, ಏನಪ್ಪಾ ಎಂದು ಕೇಳಿದಾಗ, ನಿಮ್ಮ ಜೊತೆಯಲ್ಲಿ ಗುಪ್ತವಾಗಿ ಮಾತನಾಡಬೇಕೆಂದು ಹೇಳುತ್ತಾರೆ. ಸಾರ್, ನಾನು ಯಾರಿಗೂ ಹೇಳದ ಹಾಗೆ ಆ ಸಂಸ್ಥೆಯಲ್ಲಿ ಹಣವನ್ನು ಇಟ್ಟಿದ್ದೆ ಅವರು ಹೋಗಿಬಿಟ್ಟಿದ್ದಾರೆ ಎಂದು ಹೇಳುತ್ತಾರೆ. It will be too late. ಅದಕ್ಕೆ ನಾವೇನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕಾಗುತ್ತದೆ? ಅದಕ್ಕೆ ಇದನ್ನು avoid ಮಾಡುವುದಕ್ಕೆ ಯಾವುದಾದರೂ Financial Institute register ಮಾಡುತ್ತಾರೆಂದರೆ, ಅವರಲ್ಲಿ sufficient finance ಅಲ್ಲಿದ್ದರೆ to little extent deposit ಮಾಡಬೇಕು. ಇಲ್ಲದಿದ್ದರೆ ಮಾಡಬಾರದೆಂದು ಸರ್ಕಾರ ಲಗಾಮು ಹಾಕಿದರೆ ಮಾತ್ರ not only Institutions, ಜನರು ಉಳಿದುಕೊಳ್ಳುತ್ತಾರೆ. ಇದರ ಬಗ್ಗೆ ಮಾನ್ಯ ಸಚಿವರು ಆಲೋಚನೆ ಮಾಡಿ ಮಾಡಬೇಕು.

**ಶ್ರೀ ನಸೀರ್ ಅಹಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಚರ್ಚೆ ಮಾಡಿ ಈ ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ. ಅದರ ಜೊತೆಗೆ ನಾನು ನೋಡಿದಾಗ, patient is dead. ಈಗ ಒಂದು ರೀತಿಯಲ್ಲಿ ನಾವು post-mortem ಮಾಡುತ್ತಿದ್ದೇವೆ. ಆದಮೇಲೆ ಏನೇನು ಮಾಡಬೇಕೆಂದು ಈಗ ಯೋಚನೆ ಮಾಡುತ್ತಿದ್ದೇವೆ. ಈಗ ನಮ್ಮ ಕಣ್ಣೆದುರಿಗೆ ನಡೆಯುತ್ತಿದೆ. ಒಂದು ಕಡೆ nationally banking system fail ಆಗುತ್ತಿದೆ. It is not viable ಎನ್ನುವ ಕಾರಣಕ್ಕಾಗಿ ಸಾಕಷ್ಟು ಬ್ಯಾಂಕ್‌ಗಳನ್ನು merge ಮಾಡುತ್ತಿದ್ದೇವೆ. ಮತ್ತೊಂದು ಕಡೆ ನೋಡಿದರೆ ಮುತ್ತೂಟ್ ಫೈನಾನ್ಸ್ ಇಡೀ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ತಲುಪಿಬಿಟ್ಟಿದ್ದಾರೆ. What is their rate of interest, how are they successful? Micro financing ಎನ್ನುವ ಹೆಸರಿನಲ್ಲಿ ಎಲ್ಲಾ ರೈತರಿಗೆ ಇವತ್ತಿನ ದಿವಸ torture ಮಾಡುತ್ತಿದ್ದಾರೆ. ಅದರ ಬಗ್ಗೆ ನಾವು ಗಮನ ಕೊಡುತ್ತಿಲ್ಲ. ಅದೇ ರೀತಿ ನಾವು ಇವತ್ತಿನ ದಿವಸ cooperative sector ನಲ್ಲಿರುವಂತಹ ಬ್ಯಾಂಕ್‌ಗಳು. ಮೊನ್ನೆ ನಡೆದಿರುವಂತಹ ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿರುವಂತಹ ಸಿ.ಇ.ಓ. ರವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಘಟನೆಗಳೆಲ್ಲಾ ಆಗಿದೆ. ಇದರ ಬಗ್ಗೆ ಸರ್ಕಾರ ಗಮನಕೊಡಬೇಕು. There are certain norms and guidelines of RBI. The Government should follow these at the inception itself. ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕವಾದ RBI guidelines ಗಳಿವೆ. ಅದೇ ರೀತಿ Micro Finance ಗೆ ಪ್ರತ್ಯೇಕವಾದ guidelines ಗಳಿವೆ. ನಮ್ಮ ರಾಜ್ಯದಲ್ಲಿರುವಂತಹ ಸಂಸ್ಥೆಗಳ ಬಗ್ಗೆ ಯೋಚನೆ ಮಾಡಬೇಕು. You come out with some guidelines. You should also take permission from finance sector or cooperative sector to run these kinds of Financial Institutions. ಇವತ್ತಿನ ದಿವಸ ಯಾವುದೇ ನ್ಯೂಸ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಾನಲ್‌ನ್ನು ಹಾಕಿ Attica Gold Company, Hindustan Gold Company ಈ ಕಂಪನಿ, ಆ ಕಂಪನಿ ಎಂದು ಸಾಕಷ್ಟು ಜಾಹೀರಾತುಗಳು ಬರುತ್ತಿರುತ್ತವೆ. We don't know what is going to happen. ಅವರ ಜಾಹೀರಾತನ್ನು ನೋಡಿದಾಗ ನಿಜವಾಗಿಯೂ ಅದರಲ್ಲಿ ಕೋಟ್ಯಾಂತರ ರೂಪಾಯಿ ವ್ಯವಹಾರಗಳು ನಡೆಯುತ್ತಿರಬಹುದು. Nobody knows tomorrow what is going to happen. ಅದರ ಬಗ್ಗೆ regulate ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆಗೆ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಇದೊಂದು ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಆದರೆ ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ RBI ಗೂ ಟೋಪಿ ಹಾಕಿರುವಂತಹ ಬಹಳ ಜನರು ಇದ್ದಾರೆ. RBI ಗೂ ಟೋಪಿ ಹಾಕಿದ್ದಾರೆ, ಎಲ್ಲರಿಗೂ ಟೋಪಿ ಹಾಕುತ್ತಾರೆ. ಆದರೆ ಮಾನ್ಯ ನಸೀರ್ ಅಹಮದ್ ರವರು ಹೇಳಿದ ಹಾಗೆ, ದೊಡ್ಡ ಪ್ರಮಾಣದ, ಮಧ್ಯಮ ಪ್ರಮಾಣದ, ಸಣ್ಣ ಪ್ರಮಾಣದ ಎಲ್ಲಾ ಹಣಕಾಸು ಸಂಸ್ಥೆಗಳ ನಿರ್ವಹಣೆಗೆ ಏನೇನು ಇರಬೇಕೆಂದು RBI ಮಾರ್ಗಸೂಚಿಗಳಿವೆ. ಇವೆಲ್ಲಾ ನಾಯಿಕೊಡೆಯ ಹಾಗೆ ತಾಲ್ಲೂಕಿನಿಂದ ಪಟ್ಟಣದವರೆಗೂ ಹುಟ್ಟಿಕೊಂಡಿರುವಂತಹ ಸಂಸ್ಥೆಗಳಿವೆ. ಇದರಿಂದ ಬಹಳಷ್ಟು ಸಾರ್ವಜನಿಕರು ಮೋಸ ಹೋಗಿದ್ದಾರೆ. ಎಷ್ಟೇ ಪ್ರಚಾರ ಕೊಟ್ಟು ಸರ್ಕಾರಗಳು ಏನೆಲ್ಲಾ ತಿಳಿಸಿದರೂ ಕೂಡ ಹಣದ ಆಸೆಗೋಸ್ಕರ, ಹೆಚ್ಚಿನ ಬಡ್ಡಿ ಆಸೆಗೋಸ್ಕರ ಇಂತಹ ಸಂಸ್ಥೆಗಳಲ್ಲಿ ಹಣ ಇಡುವುದಕ್ಕೆ ಕೆಲವು ಸ್ಥಳೀಯ ನಂಬಿಕಸ್ಥರ ಮುಖಾಂತರ ಹೋಗುತ್ತಾರೆ. ಬಹಳ ವಂಚನೆಗೆ ಒಳಗಾಗಿದ್ದಾರೆ. ಮಾನ್ಯ ಸಚಿವರು ಇದಕ್ಕೆ penalty ಜಾಸ್ತಿ ಮಾಡಿದ್ದಾರೆ. 50 ಕೋಟಿ ಅಲ್ಲಾ 100 ಕೋಟಿ ಮಾಡಿಕೊಳ್ಳಿ ನನ್ನ ಹತ್ತಿರ ಹಣವಿದ್ದರೆ ತಾನೇ ಎಂದು ಜೈಲಿನಲ್ಲಿ ಹೋಗಿ ಊಟ ತಿನ್ನುತ್ತಾ ಕುಳಿತುಕೊಳ್ಳುತ್ತಾರೆ. ಯಾವ ಇಲಾಖೆಯಲ್ಲಿ ಈ ಸಂಸ್ಥೆ ನೋಂದಣಿಯಾಗುತ್ತದೆ ಆ ಸಂಸ್ಥೆಯಲ್ಲಿ RBI ಮಾರ್ಗಸೂಚಿಗಳೇನಿವೆ ಆ ಪ್ರಕಾರ ನೀವು ಇದನ್ನು ಪ್ರಾರಂಭ ಮಾಡಬೇಕೆಂದರೆ ನಿನ್ನ ವ್ಯಾಪ್ತಿ ಯಾವುದು, ತಾಲ್ಲೂಕು ಮಟ್ಟವೇ, ಜಿಲ್ಲಾ ಮಟ್ಟವೇ, ರಾಜ್ಯ ಮಟ್ಟದ್ದೇ ಎಂದು ನೀವು ಪರಿಶೀಲನೆ ಮಾಡಬೇಕಾಗುತ್ತದೆ. ಈ ಸಂಸ್ಥೆಯನ್ನು ಪ್ರಾರಂಭ ಮಾಡಬೇಕಾದರೆ ನೀವು ಇಷ್ಟು ಠೇವಣಿ ಹಣವನ್ನು ತೋರಿಸಬೇಕು ಎಂದು ಅವರಿಗೆ ಹೇಳಬೇಕಾಗಿದೆ. ಇವರು ಆರು ವರ್ಷ, ಹತ್ತು ವರ್ಷಕ್ಕೆ ಮೋಸ ಮಾಡುವಂಥವರಲ್ಲ. ಇವರು ಮೂರೇ ತಿಂಗಳಿಗೆ ಕೋಟ್ಯಾಂತರ ರೂಪಾಯಿಯನ್ನು ಮೋಸ ಮಾಡುತ್ತಾರೆ. ಈಗ ಅಂಗಡಿ ತೆರೆಯುತ್ತಾರೆ, ಮೂರೇ ತಿಂಗಳಲ್ಲಿ ಅಂಗಡಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಚ್ಚಿಕೊಂಡು ಹೋಗುತ್ತಾರೆ. ಇಂತಹ ಗಿರಾಕಿಗಳು ಬಹಳ ಜಾಸ್ತಿ ಇದ್ದಾರೆ. ಅವರು ಮತ್ತೆ ಇನ್ನೊಂದು ಕಡೆ ತೆಗೆಯುತ್ತಾರೆ. ಈ ತರಹದ ಗಿರಾಕಿಗಳು ಜಾಸ್ತಿ. ಆದ್ದರಿಂದ ಇವೆಲ್ಲಾ ನೋಂದಣಿಯನ್ನು ಕಂದಾಯ ಇಲಾಖೆಯಲ್ಲಿ ಮಾಡುತ್ತಾರೆಯೋ ಏನು ಗೊತ್ತಿಲ್ಲ. ಕಂದಾಯ ಇಲಾಖಾಧಿಕಾರಿಗಳಿಗೆ ಕೆಲವು ಜವಾಬ್ದಾರಿಗಳನ್ನು ಕೊಡಬೇಕಾಗುತ್ತದೆ. ಒಂದು ತಿಂಗಳಿಗೊಮ್ಮೆಯಾದರೂ ಕೂಡ ಎಲ್ಲಾ ಆಡಳಿತ ವ್ಯವಹಾರ, ಲೆಕ್ಕಪತ್ರಗಳು, ಆ ವರ್ಷದಲ್ಲಿ ವಹಿವಾಟುಗಳು ಏನೇನು ನಡೆದಿದೆ, ಠೇವಣಿದಾರರಿಗೆ ಪಾವತಿ ಆಗಿದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳನ್ನು ಇಡಬೇಕು. ಆ ಸಂದರ್ಭದಲ್ಲಿ ನಮ್ಮ ಇಲಾಖಾಧಿಕಾರಿಗಳೇನಾದರೂ ವಂಚನೆ ಮಾಡಿದ್ದರೆ ಅವರಿಗೂ ಕೂಡ penal clause ನಲ್ಲಿ ಸೇರಿಸಬೇಕು. ಇಲ್ಲದಿದ್ದರೆ ಇಂಥವುಗಳು ನಡೆಯುತ್ತಲೇ ಇರುತ್ತವೆ. ಯಾವ ಸಂಸ್ಥೆ ಕಂದಾಯ ಇಲಾಖೆಯಲ್ಲೋ ಮತ್ತೊಂದು ಇಲಾಖೆಯಲ್ಲೋ ನೋಂದಣಿ ಮಾಡಿರುತ್ತಾರೆಯೋ ಅಲ್ಲಿನ ಅಧಿಕಾರಿಗಳು ವರ್ಷಕ್ಕೊಮ್ಮೆಯಾದರೂ ಆ ಸಂಸ್ಥೆಯ ಆಗುಹೋಗುಗಳನ್ನು ಗಮನಿಸಬೇಕು.

(ಮುಂದು)

166/4-2-2021/5-20 ಬಿಕೆಪಿ-ಎಂಡಿ

**ಶ್ರೀ ಮರಿತಿಬ್ಬೇಗೌಡ(ಮುಂದು)**

ಒಂದು ವರ್ಷಕ್ಕೆ ಕಡ್ಡಾಯವಾಗಿ renewal ಆಗಬೇಕು. ಆ renewal ಮಾಡುವಂತಹ ಎಲ್ಲಾ ಠೇವಣಿದಾರರ ಹಿತಾಸಕ್ತಿ ಕಾಪಾಡಿದ್ದಾರೆಯೇ, ಎಲ್ಲಿಯಾದರೂ ವಂಚನೆ ಮಾಡಿದ್ದಾರೆಯೇ, ಮೋಸ ಮಾಡಿದ್ದಾರೆಯೇ ಎನ್ನುವುದನ್ನು ನೋಡಲಿಕ್ಕೂ ಕೂಡ ನೀವು ಅವಕಾಶವನ್ನು ಕಲ್ಪಿಸಿ, ಇದರಲ್ಲಿ ಅಂತಹ ಅಧಿಕಾರಿಗಳು ಯಾರಾದರೂ ವಂಚನೆ ಮಾಡಿದ್ದರೆ ಆ ಅಧಿಕಾರಿಗಳ ಮೇಲೆಯೂ ಕೂಡ ಕ್ರಮ ತೆಗೆದುಕೊಳ್ಳುವಂತಹದ್ದನ್ನು ಇದರಲ್ಲಿ ದಯವಿಟ್ಟು ತೆಗೆದುಕೊಳ್ಳಿ. ಇದು ಒಂದು ಒಳ್ಳೆಯ ವಿಧೇಯಕವಾಗಿದ್ದು, ಇದನ್ನು ಇನ್ನೂ ಕೂಡ ಶಕ್ತಿಯುತವಾಗಿ ಶಾಸನಬದ್ಧವಾಗಿ ಮಾಡಬೇಕಾದಂತಹ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ. ಇದನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪುರ್ (ವಿಧಾನಸಭಾಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಇದು ಒಳ್ಳೆಯ ವಿಧೇಯಕ ಏನೋ ಹೌದು. ಅದರ ಜೊತೆ ಜೊತೆಗೆ ಹುಟ್ಟುವಾಗಲೇ ಅದನ್ನು ಎಷ್ಟು ಸಾಧ್ಯತೆಯೋ ಅಷ್ಟು ಅಲ್ಲಿ ಹುಟ್ಟಲಾರದ ರೀತಿಯಲ್ಲಿ ನೋಡುವುದೇ ಉತ್ತಮ ಎನ್ನುವಂತಹ ವಾತಾವರಣ ಇವತ್ತು ಹೊರಗಡೆಗೆ ನೋಡಿದಾಗ ಅನಿಸುತ್ತದೆ. ಒಂದು ವರ್ಷವಾದ ಮೇಲೆ ಮೂರು ತಿಂಗಳಿಗೊಮ್ಮೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಗಡಿಗೆ ಚಾಲು ಮಾಡಿ ಬಂದ್ ಮಾಡುವವರಿಗೆ ಒಂದು ವರ್ಷದವರೆಗೆ ನೀವು ಕಾಯ್ದರೆ ಮತ್ತೆ ಏನಾಗುತ್ತದೆ? ನೀವು ತಪ್ಪು ಮಾಡಿದವರಿಗೆ ಶಿಕ್ಷೆ ಏನು ಮಾಡಬೇಕೆಂದು ಹೇಳಿದ್ದೀರಿ. ತಪ್ಪೇ ಮಾಡಲಿಕ್ಕೆ ಆಗದಂತೆ ನೀವು ಏನೇನು ಮಾಡುತ್ತೀರಿ? ಆ ವ್ಯವಹಾರಗಳ ಮೇಲೆ ನೀವು ಕಣ್ಣು ಇಡದೇ ಹೋದರೆ ಅವರು ತಿಂಗಳಿಗೆ ಏನು ಮಾಡಿದರು, ಯಾವ ಉದ್ದೇಶಕ್ಕೆ ಹಣ ಹಿಡಿತ ಮಾಡಿದರು, ಎಷ್ಟು ಠೇವಣಿ ಬಂತು? ಹೀಗೆ every day ನೀವು ವರದಿ ತರಿಸತಕ್ಕಂತಹ ಅವಕಾಶಗಳು ಇವೆ. ಇವತ್ತು ಇಂತಿಷ್ಟು deposit ಬಂತು, ನಾವು ಇಂತಹ ಉದ್ದೇಶಕ್ಕೆ ಉಪಯೋಗ ಮಾಡಿಕೊಂಡೆವು, ಅದಕ್ಕೆ ಉಪಯೋಗ ಮಾಡಿಕೊಂಡೆವು ಎಂದು ತಿಳಿಸಬಹುದು. ಆದರೆ, ಮತ್ತೆ ಮುಂದೆ ಆ ಸಂಸ್ಥೆಯ ವ್ಯವಹಾರಗಳೆಲ್ಲಾ ಹೊರಗೆ ಬರುತ್ತದೆ ಅದು ಇದು ಎಂದು ಅದನ್ನು ತಾವು ಯೋಚನೆ ಮಾಡಿಕೊಳ್ಳಿ. ನನಗೆ ತಿಳಿದ ಹಾಗೆ ಎಷ್ಟೋ ಒಳ್ಳೆಯ ಹಾಗೂ ಕೆಟ್ಟ ಸಂಸ್ಥೆಗಳೂ ಸಹಿತ ಇವೆ. ಈ ಕೆಟ್ಟ ಸಂಸ್ಥೆಗಳು ಅಲ್ಲಿ ಒಂದು ಇಲ್ಲಿ ಒಂದು, ಹುಟ್ಟಿಕೊಂಡು ಒಳ್ಳೆಯ ಸಂಸ್ಥೆಗಳ ಮೇಲೆ ಕೆಟ್ಟ ಹೆಸರೂ ಬಂದಿದೆ. ನಾನು ಇಷ್ಟೇ ಹೇಳುವುದು, ಅವರ ವ್ಯವಹಾರ, ಉದ್ದೇಶದ ಮೇಲೆ ನೀವು ಏನೇ ಕಣ್ಣಿಟ್ಟರೂ ಮೊದಲೇ ಕಣ್ಣಿಡಬೇಕೇ ವಿನ: ತಪ್ಪು ಮಾಡಿದ ನಂತರ ಶಿಕ್ಷೆ ಕೊಡುವುದಕ್ಕಿಂತ ಹೆಚ್ಚಿನದಾಗಿ ಆ ಕಡೆಗೆ ಗಮನ ಕೊಡಿ ಎಂದು ನಾನು ಹೇಳುತ್ತೇನೆ.

**ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು, ಸಾರಿಗೆ ಸಚಿವರು):** ಮಾನ್ಯ ಅಧ್ಯಕ್ಷರೆ, ಎಲ್ಲಾ ನಮ್ಮ ಅನೇಕರು ಅನುಭವಿಗಳೆಲ್ಲರೂ ಹೇಳಿದ್ದಾರೆ. ತಪ್ಪು ಆದಮೇಲೆ ಶಿಕ್ಷೆಯಾಗಬೇಕು ಎನ್ನುವಂತಹದ್ದು ಸ್ವಾಗತಾರ್ಹ, ತಪ್ಪು ಆಗಲಾರದ ಹಾಗೆ ಏನೇನು ಎಂದು ಸ್ವಲ್ಪ ನಮಗೆ ಸಲಹೆ ಕೊಟ್ಟರೆ ಒಳ್ಳೆಯದಾಗುತ್ತದೆ. ಇಲ್ಲಿ ಏನೇನು ಮಾಡಬೇಕೆಂಬ ಸಲಹೆ ಕೊಡಬೇಕಲ್ಲವೇ? ಏನು ಮಾಡಿದರೆ ಸರಿ ಹೋಗುತ್ತದೆ ಎಂಬ ಬಗ್ಗೆ ಸಲಹೆ ಕೊಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ತಪ್ಪು ಆಗದ ರೀತಿಯಲ್ಲಿ ಏನಾದರೂ ಸಲಹೆ ಕೊಡಬೇಕು ಎನ್ನುವುದು ಇದ್ದರೆ ನೋಡಿ. ಇಂತಹ ಸಂಸ್ಥೆಗಳನ್ನು ಅವರು ಎಲ್ಲಿಯೂ ಕೂಡ ಪ್ರಾರಂಭವನ್ನೇ ಮಾಡಬಾರದು, ಅಂಗಡಿಯನ್ನೇ ತೆರೆಯಬಾರದು, ಆ ರೀತಿ ಮಾಡಿದರೆ ನೋಡಪ್ಪ ಇದು ಆಗುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:** ಮಾನ್ಯ ಸಭಾಪತಿಯವರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸದಸ್ಯರಾದ ಶ್ರೀ ಹರಿಪ್ರಸಾದ್‌ರವರವರು ಒಂದು ನಿಮಿಷ ಗಮನಿಸಬೇಕು. ಮಂಡ್ಯ ಜಿಲ್ಲೆಯಲ್ಲಿ ಮೊನ್ನೆ ಒಂದು ದೊಡ್ಡ ಹಗರಣ ನಡೆಯಿತು. ಒಬ್ಬ ಬ್ಯಾಂಕ್ Sales Officer ಹಾಗೂ ಒಬ್ಬ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Valuator ಸೇರಿಕೊಂಡು 40-50 ಹೆಣ್ಣುಮಕ್ಕಳು ಅಂದರೆ ತಾಯಂದಿರ ಬಳಿ ಚಿನ್ನ ತೆಗೆದುಕೊಂಡು ಹೋಗಿ ನಿಮಗೆ ಹೆಚ್ಚಿನ ಬಡ್ಡಿ ಕೊಡಿಸುತ್ತೇನೆಂದು ಕೆ.ಜಿ.ಗಟ್ಟಲೆ ಚಿನ್ನ ತೆಗೆದುಕೊಂಡು ಹೋಗಿ ಬ್ಯಾಂಕ್‌ನಲ್ಲಿಟ್ಟು, ಬ್ಯಾಂಕ್ ಆಫೀಸರ್ ಜೊತೆಗೆ ತೆಗೆದುಕೊಂಡು ಹೋಗಿ sale ಮಾಡುವುದು, ನೀವು ಕೇವಲ ಸಂಸ್ಥೆಗಳು ಬ್ಯಾಂಕು ನೋಂದಣಿ ಮಾಡಿಕೊಂಡು ಮೋಸ ಮಾಡುತ್ತಿರುವುದನ್ನು ಅಷ್ಟನ್ನೇ ನೋಡುತ್ತಿದ್ದೀರಿ. Individual ಆಗಿಯೂ ಮೋಸ ಮಾಡುತ್ತಿದ್ದಾರೆ, ಅವರನ್ನು ಶಿಕ್ಷೆ ಮಾಡುವುದಕ್ಕೆ ನಿಮ್ಮ ಬಳಿ ಈಗ ಕಾನೂನಿಲ್ಲ, ಅವನು ಆರಾಮಾಗಿ ತಿರುಗಾಡಿಕೊಂಡಿದ್ದಾನೆ. ಕೋಟಿಗಟ್ಟಲೆ ರೂಪಾಯಿಗಳನ್ನು ಹತ್ತಾರು ಅಮಾಯಕರಿಗೆ ಮೋಸ ಮಾಡಿ ಅವನು ಬಹಳ ರಾಜಾರೋಷವಾಗಿ ತಿರುಗಾಡಿಕೊಂಡಿದ್ದಾನೆ. ನಿಮ್ಮ ಹತ್ತಿರ ಇವರನ್ನು punishment ಮಾಡುವುದಕ್ಕೆ ಕಾನೂನು ಎಲ್ಲಿದೆ? ದಯಮಾಡಿ ಇಂತಹ ಸಂಸ್ಥೆಗಳೂ ಕೂಡ ಒಂದು ಕಡೆಗೆ ಹುಟ್ಟಬಾರದು, ಇನ್ನೊ ಒಂದು ಕಡೆಯಲ್ಲಿ ಯಾವುದೇ individual ಬರುತ್ತಾನೆ, ಬಂದು 6 ತಿಂಗಳುಗಳು ಇರುತ್ತಾನೆ, ಬಹಳ ದಾರಾಳವಾಗಿ ಇರುತ್ತಾನೆ, ಒಂದು ಚೀಟಿ ಶುರು ಮಾಡುತ್ತಾನೆ, ಎಲ್ಲರ ಬಳಿ ಚೀಟಿ ಹಣ ಕಟ್ಟಿಸಿಕೊಳ್ಳುತ್ತಾನೆ. ಒಂದು ವರ್ಷ ಬಿಟ್ಟು ದುಡ್ಡು ಹೊತ್ತುಕೊಂಡು ಓಡಿ ಹೋಗುತ್ತಾನೆ. ಇಂತಹ ದಂಧೆಗಳು ಆರಾಮಾಗಿರುತ್ತದೆ. ಹಾಗಾಗಿ ವೈಯುಕ್ತಿಕವಾಗಿರಲಿ ಅಥವಾ ಹಣಕಾಸು ಸಂಸ್ಥೆಗಳಿರಲಿ ಇಂತಹ ಮೋಸ ಮಾಡುವವರಿಗೆ ದೊಡ್ಡ punishment ಆಗಬೇಕು ಮತ್ತು ಇಂತಹವುಗಳು ಆಗದ ರೀತಿಯಲ್ಲಿ ನೋಡಿಕೊಳ್ಳುವುದು ಎಲ್ಲರ ದೃಷ್ಟಿಯಿಂದ ಒಳ್ಳೆಯದು.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ನಾನು ಒಂದು ಪದ ಹೇಳಬಹುದಾ? ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು, ಅದಕ್ಕೋಸ್ಕರ ಹೇಳುತ್ತಿದ್ದೇನೆ. ಪ್ರತಿ 3-6 ತಿಂಗಳಿಗೆ ಇಂತಹ ಕಂಪನಿಗಳು ಬರುತ್ತಿರುತ್ತದೆ, ಹೋಗುತ್ತಿರುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಟಿ.ವಿ. ಜಾಹೀರಾತು ಬರುತ್ತಿರುತ್ತದೆ. ಮತ್ತೆ ನಾವು ಕೆಲವು ರಾಜಕಾರಣಿಗಳೂ ಸಹಿತ ಹೋಗಿ ನಿಂತುಕೊಂಡು ಬಿಟ್ಟಿರುತ್ತೇವೆ, pose ಕೊಡುತ್ತೇವೆ, ಟಿ.ವಿ.ಗಳಲ್ಲಿ ಅವರು ಹೋಗಿದ್ದಾರಪ್ಪ, ನಾನು ಹಾಗೆ ಆಗಬಹುದು ಎಂದು ಆ ರೀತಿ ಮಾಡುತ್ತೇವೆ. ಇವುಗಳಿಗೆಲ್ಲಾ ಕಡಿವಾಣ ಹಾಕಬೇಕೆಂದರೆ ಜಾಹಿರಾತು ಕೊಡುವಾಗ ಆ ಟಿ.ವಿ.ಚಾನಲ್‌ನವರಿಗೂ ಕೂಡ ನೀವು ಜವಾಬ್ದಾರಿ ಹೊರೆಸಬೇಕಾಗುತ್ತದೆ. ಇದರಲ್ಲಿ ಯಾರೂ ಕೂಡ, ಮಾನ್ಯ ಪಾಟೀಲ್ ಸಾಹೇಬರು ಹೇಳಿದರು, ಸ್ವಾಮಿಗಳು, ದೊಡ್ಡವರು ಎಲ್ಲರೂ ಕೊಟ್ಟರು ಎಂದು ಹೇಳಿದರು, The Saradha Chit Fund case, West Bengal or Odisha, ಯಾವುದೇ ಕೇಸ್ ತೆಗೆದುಕೊಳ್ಳಿ, 20,000-23,000 ಕೋಟಿ ರೂಪಾಯಿಗಳಷ್ಟು ಬಡವರ ಹಣವಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದಕ್ಕೆ ಅವರು ಎಲ್ಲೋ ಒಂದು ಜೀವನ ನಡೆಸಬೇಕು, ಎಲ್ಲೋ ಒಂದು ಕಡೆ ಜೀವನಕ್ಕೆ ಅನುಕೂಲವಾಗುತ್ತದೆ ಎಂದು ಮಾಡುತ್ತಾರೆ. ಅದಕ್ಕೆ ಸರ್ಕಾರದವರು ಇವತ್ತು ಕೆಲವು ನಿಯಂತ್ರಣಗಳನ್ನು ಹಾಕಿ ಈ Chit Fund ಗಳು ನಾಯಿ ಕೊಡೆಗಳ ರೀತಿ ಇರುತ್ತದೆ, ಅದನ್ನು ನಿಯಂತ್ರಣ ಮಾಡಿದರೆ ಇದಕ್ಕೆಲ್ಲಾ ನಿಯಂತ್ರಣ ಸಿಗುತ್ತದೆ, ಅದನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಕಾರಣಾಂತರದಿಂದ ಅದು ನಿಯಂತ್ರಣವಾಗುತ್ತಿಲ್ಲ, ಅದು ಏಕೆ ಎಂದು ನಾವೆಲ್ಲರೂ ಸಹಿತ ಕುಳಿತು ಯೋಚ್ಚನೆ ಮಾಡಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೇ, ಒಟ್ಟು ಎಲ್ಲಾ ಸದಸ್ಯರ ಭಾವನೆ ಏನು ಎಂದರೆ, ಇದು ಒಳ್ಳೆಯ ವಿಧೇಯಕವಾಗಿದೆ. ಆದರೆ, ಅಪರಾಧಿಯಾದಮೇಲೆ ಶಿಕ್ಷೆಯ ಬಗ್ಗೆ ಇದೆ. ಅಪರಾಧವನ್ನು ಹೇಗೆ prevent ಮಾಡಬೇಕು ಎನ್ನುವುದರ ಬಗ್ಗೆ ಇದೆ. ನಾನು ಈಗಾಗಲೇ ಹೇಳಿದ್ದೆ. ಅಪರಾಧವಾದ ಮೇಲೆಯೂ ಕೂಡ ನಾವು ಕೆಲವು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಯಾಯಿತು. ಉದಾಹರಣೆಗೆ recovery process ಗೆ ಬಹಳ ತೊಂದರೆಯಾಯಿತು. ಆಮೇಲೆ recovery ಯಾದುದನ್ನು ಹೇಗೆ ಅಕೌಂಟ್ ಮಾಡಬೇಕು, ಹೇಗೆ ಕೊಡಬೇಕು ಎನ್ನುವುದೂ ಕೂಡ ಇತ್ತು. ಅವೆಲ್ಲವನ್ನೂ ಕೂಡ ಸರಳೀಗೊಳಿಸುವುದಕ್ಕೆ ನಾವು ಇದನ್ನು ಮಾಡಿದ್ದೇವೆ. ಈಗ ಮುಖ್ಯ ಪ್ರಶ್ನೆ ಎಂದರೆ ಅದನ್ನು ಹೇಗೆ prevent ಮಾಡಬೇಕು? ಇದುವರೆಗೂ ರಾಜ್ಯದಲ್ಲಿ 2004ನೇ ಸಾಲಿನಲ್ಲಿ ಕಾನೂನಿತ್ತು. ಈಗ ಮೊನ್ನೆ 2019ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ BUDS (Banning of Unregulated Deposit Schemes Act) ಎನ್ನುವಂತಹ ಕಾನೂನು ಬಂದಿದೆ. ತಾವು ಏನು ಹೇಳಿದ್ದೀರಿ, ಹಲವಾರು ವರ್ಷಗಳಲ್ಲಿ ನಾವು ಒಂದು pattern ನೋಡುತ್ತಿದ್ದೇವೆ. AgriGold ಎಂದರೆ, ಕೃಷಿ ಮೇಲೆ ಸ್ಕೀಂ ಮಾಡುವುದು, deposits ಮೇಲೆ ಸ್ಕೀಂ ಮಾಡುವುದು, Teak Wood ಬೆಳೆದ 20 ವರ್ಷಗಳಿಗೆ ಇಂತಿಷ್ಟು ಹಣ ಕೊಡುತ್ತೇವೆ ಎಂದು ಸ್ಕೀಂ ಮಾಡುವುದು, ಈಗ ಗೋಲ್ಡ್ ಮೇಲೆ ಸ್ಕೀಂ ಇದೆ, ಇವೆಲ್ಲವನ್ನೂ ನಿಯಂತ್ರಣ ಮಾಡುವಂತಹ ಮತ್ತು ಕೆಲವು category ಗಳನ್ನು ban ಮಾಡುವಂತಹ ಎಲ್ಲೆಲ್ಲಿ ಹೆಚ್ಚು ಮೋಸವಾಗಿದೆ, ಅಂತಹ category ಗಳನ್ನು ಬ್ಯಾನ್ ಮಾಡುವಂತಹ ಅವಕಾಶ BUDS ನಲ್ಲಿದೆ. ಅದನ್ನು ನಾವು ಇನ್ನು ಮುಂದಿನ ಎಲ್ಲಾ registration ಮಾಡುವಾಗಲೂ ಕೂಡ ಬಹಳಷ್ಟು restrictions ಇದೆ. Registration ಸುಮ್ಮನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಿಲ್ಲ. ಬಹಳಷ್ಟು restrictions and regulation ಸಹ BUDS ನಲ್ಲಿ ಇದೆ. ಮತ್ತೆ ಜಾಹಿರಾತು ಏನು ಮಾಡುತ್ತಾರೆಂದರೆ, ಅವುಗಳು ಕಂಡು ಬಂದರೆ ಕೂಡಲೇ ಅದನ್ನು retract ಮಾಡಿಸುವಂಥಾದ್ದು ಅಥವಾ ಅದನ್ನು ಬಂದ್ ಮಾಡಿಸುವಂತಹದ್ದನ್ನೂ ಕೂಡ ಈಗ ಈ BUDS ನಲ್ಲಿ ಅಧಿಕಾರ ಬಂದಿದೆ. ಇದನ್ನು ಬಳಕೆ ಮಾಡಬೇಕು. ಇದೂ ಅಲ್ಲದೆ ಬಹಳ ಏಜೆಂಟ್‌ಗಳು ಮೋಸ ಮಾಡುವುದು ಇನ್ನೊಂದು ಮಾಡುವುದು ಇದೆ. ಏಜೆಂಟ್‌ಗಳಿಗೂ ಕೂಡ ಜವಾಬ್ದಾರಿ fix ಮಾಡುವಂತಹದ್ದು BUDS ನಲ್ಲಿ ಕೂಡ ಇದೆ. ಆದ್ದರಿಂದ, ಹಲವಾರು ಅನುಭವಗಳಿಂದ ಈಗ restrictions ಬಂದಿದೆ. ಅವುಗಳನ್ನು ನಾವು ಬರುವಂತಹ ದಿನಗಳಲ್ಲಿ ಈ ಒಂದು Act ಅನ್ನು ಕೂಡ ಬಳಕೆ ಮಾಡುತ್ತೇವೆ. ಮತ್ತೆ ಇದನ್ನು cognizable offence ಎಂದು ಕೂಡ ಈಗ BUDS ನಲ್ಲಿ ತಂದಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ರೆವಿನ್ಯೂ ಇಲಾಖೆಯಲ್ಲಿಯೂ ಕೂಡ intelligence ಇರುತ್ತದೆ. ಅದರ failure ಇದಕ್ಕೆಲ್ಲಾ ಕಾರಣ.

**ಶ್ರೀ ಬಸವರಾಜ ಬೊಮ್ಮಾಯಿ:–**ಮಾನ್ಯ ಸಭಾಪತಿಯವರೆ, ಎಲ್ಲಿಯವರೆಗೂ ಜನ ಅಮಾಯಕರಿದ್ದಾರೆ, ವಿಶೇಷವಾಗಿ ಬಡವರು ಇದಕ್ಕೆ ತುಂಬುವಂತಹದ್ದು, ಇಷ್ಟೇ ಅಲ್ಲ. ಈ micro finance ಬಗ್ಗೆ ಹೇಳಿರುವಂತಹದ್ದು ಬಹಳ ಸತ್ಯವಿದೆ. ದಿನನಿತ್ಯ ಕೂಲಿ ಮಾಡುವವರು micro finance ನಲ್ಲಿ ಹಣ ತೊಡಗಿಸುತ್ತಾರೆ. Part of their earning ಅನ್ನು ಪ್ರತಿ ದಿವಸ ಬ್ಯಾಂಕ್‌ಗೆ ಕಟ್ಟುವಂತಹ ಒಂದು ವ್ಯವಸ್ಥೆಯಿದೆ. ಅದಕ್ಕಿಂತ ದೊಡ್ಡ ಮೋಸ ಬೇರೆ ಯಾವುದೂ ಇಲ್ಲ. Micro Finance ನಲ್ಲಿ 36% ನಿಂದ 50% ಬಡ್ಡಿ ವಸೂಲಿ ಮಾಡುತ್ತಾರೆ. ಹೀಗಾಗಿ ಅಮಾಯಕರೇ ಜಾಸ್ತಿ ಇರುವುದರಿಂದ ಇದನ್ನು ನಾವು ಖಂಡಿತವಾಗಿಯೂ regulate ಮಾಡಬೇಕು, ಇದರಲ್ಲಿ ಸರ್ಕಾರದ ಪಾತ್ರವಿದೆ ಮತ್ತು ಸೊಸೈಟಿಯ ಪಾತ್ರವೂ ಇದೆ. ಆದ್ದರಿಂದ, ಇದು BUDS ಏನಿದೆ, ಇದನ್ನು ಕೂಡ ನಾವು ಬಳಕೆ ಮಾಡುತ್ತೇವೆ. ಈಗ ಏನು lacuna ಇದೆ, ಇದನ್ನು ನಾವು ಸರಿಪಡಿಸಿದ್ದೇವೆ. ಇವೆರಡೂ ಸೇರಿಸಿ ಮುಂದಿನ ದಿನಗಳಲ್ಲಿ ಎಷ್ಟು ಸಾಧ್ಯವಿದೆ ಅದನ್ನು ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕನಿಷ್ಠ prevention ಗಾದರೂ ಪ್ರಯತ್ನ ಮಾಡುತ್ತೇವೆ. ಮತ್ತೆ ಒಂದು ಸರ್ವವಿದಾತ ಇವತ್ತಿನದಲ್ಲ, ಮೊದಲಿನಿಂದಲೂ ಕೂಡ .. .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri B.K.HARIPRASAD:-** Prevention is better than cure.

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಸಭಾಪತಿಯವರೆ, ಅದರ ಜೊತೆಗೆ ನಿಮಗೆಲ್ಲಾ ಗೊತ್ತಿದೆ. ಈ crime ನಲ್ಲಿ ಬಗ್ಗೆ ಪ್ರತಿಯೊಂದು ಹೊಸ ಹೊಸ ವಿಧಾನಗಳು will lead to new laws. ಈಗ 10 ವರ್ಷಗಳ ಹಿಂದೆ Cyber Crime or Cyber Act ಎನ್ನುವ ಪ್ರಶ್ನೆಯೇ ಇರಲಿಲ್ಲ. Technology ಬೆಳೆದ ಹಾಗೆ method of criminal activity ಬೇರೆಯಾಗುತ್ತದೆ. ಅದಕ್ಕೆ ತಕ್ಕ ಹಾಗೆ ಮತ್ತೆ ಕಾನೂನನ್ನೂ ಕೂಡ ತರುವಂತಹದ್ದು. ಇವತ್ತು ನಮ್ಮ ಅನುಭವದಿಂದ ಈ ಕಾನೂನನ್ನು ತಂದಿದ್ದೇವೆ. Depositor ರಕ್ಷಣೆ ಮಾಡುವಂತಹದ್ದು, ಈಗ ನೋಡಿ ನಮಗೆ ಎಷ್ಟು ಕಷ್ಟವಾಗಿದೆ ಎಂದರೆ ಈ IMA (I Monitory Advisory) case ನಲ್ಲಿ ನಾವು ಸುಮಾರು 475 ಕೋಟಿ ರೂಪಾಯಿಗಳನ್ನು recover ಮಾಡಿದ್ದೇವೆ. 2700 ಕೋಟಿ, ಇದು ಇದ್ದರೂ ಕೂಡ ನಾವು depositors ಗೆ ಕೊಡುವುದಕ್ಕೆ ಬಹಳ ಕಾನೂನಿನ . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಇದರಲ್ಲಿ balance ಎಷ್ಟಿದೆ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೆ, 2700 ಕೋಟಿಗಳು ಇದೆ. ಅಂದರೆ atleast ಒಬ್ಬರು Commissioner ಹಾಕಿ sincere ಆಗಿ ಸುಮಾರು 475 ಕೋಟಿ ರೂಪಾಯಿಗಳು recover ಆಗಿದೆ. Because of so many impediments, we are unable to give it to the depositors. ಆದ್ದರಿಂದ, ಇವೆಲ್ಲವನ್ನೂ ಕೂಡ ಅನುಭವದಿಂದ ತಂದಿರುವಂತಹದ್ದು. ಇದಕ್ಕೆ ಅನುಮತಿಯನ್ನು ಕೊಡಿ BUDS ನಲ್ಲಿ ಏನಾಗುತ್ತದೆ ಎಂದು ನೋಡೋಣ. ಮತ್ತೆ ಇನ್ನಷ್ಟು ಬಿಗಿ ಕಾನೂನು ಬೇಕಾದರೆ ಅದನ್ನು ತರುವುದಕ್ಕೆ ನಮ್ಮ ಸರ್ಕಾರ ಸಿದ್ಧವಿದೆ. ನಿಮ್ಮ ಸಲಹೆ ತೆಗೆದುಕೊಂಡು ನಾನು ಮಾಡುತ್ತೇನೆ.

(ಮುಂದು . . . )

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(167) 04.02.2021 05.30 ಎಸ್‌ವಿ–ಎಕೆ**

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):–**

ಆದುದರಿಂದ ಇವೆಲ್ಲವನ್ನೂ ಕೂಡ ಅದರ ಅನುಭವದಿಂದ ತರಲಾಗಿದೆ. ಇದಕ್ಕೆ ಈ ಸದನವು ಅನುಮತಿಯನ್ನು ಕೊಡಬೇಕು. BUDS (Banning of Unregulated Deposit Scheme) ಅಲ್ಲಿ ಏನಾಗುತ್ತದೆ ಎನ್ನುವುದನ್ನು ನೋಡೋಣ. ಇನ್ನಷ್ಟು ಬಿಗಿಯಾದ ಕಾನೂನನ್ನು ತರಲು ನಮ್ಮ ಸರ್ಕಾರ ಸಿದ್ಧವಿದೆ. ನಿಮ್ಮ ಸಲಹೆಯನ್ನು ತೆಗೆದುಕೊಂಡು ಮಾಡಲಾಗುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ಯಾರೂ ವಿರೋಧವನ್ನು ಮಾಡುತ್ತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಇಲ್ಲಿ ವಿರೋಧ ಎನ್ನುವ ಪ್ರಶ್ನೆ ಅಲ್ಲ. ಕೆಲವು ಸ್ಪಷ್ಟೀಕರಣಗಳನ್ನು ನೀಡಿದ್ದೇನೆ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇಂದು ಸರ್ಕಾರ ತಂದಿರುವ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. Unauthorized ಆಗುವುದರ ಜೊತೆಯಲ್ಲಿ authorized ಆಗಿರುವ ಕೆಲವು financial institutions, establishment ಗಳು ಇವೆ. ಹಿಂದೆ ಆಗಿರುವ ನಿದರ್ಶನಗಳನ್ನು ಗಮನಿಸಿದಾಗ ವಿನಿವಿಂಕ್ ಶಾಸ್ತ್ರಿ ಎನ್ನುವವನು ಹೀಗೆ ಜನರಿಗೆ ಮೋಸ ಮಾಡಿದ್ದನು. ಈ ರೀತಿಯ ಬಹಳಷ್ಟು ಸಂಸ್ಥೆಗಳಿವೆ. Depositors ನೀಡಿದಂತಹ principal amount ಗೆ valuation ಮಾಡಿದಾಗ ಶೇ.50 ಒಬ್ಬೊಬ್ಬರಿಗೆ ಹೋಗುವುದಿಲ್ಲ. ರೂ.1 ಲಕ್ಷ ಕೊಟ್ಟರೆ ರೂ.50,000/–ಗಳೂ ತಲುಪುವುದಿಲ್ಲ. Recovery ಮಾಡಬೇಕಾದರೆ ಬೇನಾಮಿ ಹೆಸರಿನಲ್ಲಿ ಅವರ ಸ್ವತ್ತು ಮತ್ತು investment ಗಳು ಬಹಳಷ್ಟು ಇರುತ್ತವೆ. ಬೇನಾಮಿಯನ್ನು ಈ ಒಂದು ಕಾಯಿದೆಯಲ್ಲಿ ತರುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು. ಬೇನಾಮಿ ಕಾಯಿದೆ ಇದೆ. ಬೇನಾಮಿಯನ್ನು ನಿಷೇಧ ಮಾಡುವ, ಆ ಕಾಯಿದೆಯಡಿಯಲ್ಲಿ ಬರುವ provisions ಇದಕ್ಕೆ attract ಮಾಡುವ ರೀತಿಯಲ್ಲಿ ಈ ವಿಧೇಯಕದಲ್ಲಿ ಏಕೆ ಮಾಡಿರುವುದಿಲ್ಲ. ಏಕೆಂದರೆ ಪ್ರಸ್ತುತ ಬೇನಾಮಿ ಎಂಬುದು ಗೊತ್ತಾಗುವುದಿಲ್ಲ. ನನ್ನ ಹೆಸರಿನಲ್ಲಿ ಬೇರೆ ಯಾರೋ ಮಾಡಬಹುದು. ಏನು ಬೇಕಾದರೂ ಆಗಬಹುದು. ಆದರೆ ಕಂಪನಿಯ ಹೆಸರಿನಲ್ಲಿರುವುದನ್ನು ಮಾತ್ರ attach ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇನಾಮಿ ಕಾಯಿದೆಯಲ್ಲಿರುವುದನ್ನು ಆ ರೀತಿ ಮಾಡುವುದಕ್ಕಾಗುವುದಿಲ್ಲ. Recovery ಬರುವುದಿಲ್ಲ. ಎರಡನೆಯದಾಗಿ ತಕ್ಷಣವೇ provisions ನ್ನು immediate action ಮಾಡುವುದಕ್ಕೆ authorities ಅನ್ನು ಸೃಜಿಸಲಾಗುತ್ತಿದೆ. ರೆವೆನ್ಯೂ authorities ಹಾಗೂ ಪೋಲೀಸ್‌ಗೂ ನೀಡಲಾಗುತ್ತಿದೆ. ಹಿಂದೆ ಇಂತಹ ಕೆಲವು ಪ್ರಕರಣಗಳಲ್ಲಿ recovery ಆಗಿದೆ. ಕೆಲವು ಪ್ರಕರಣಗಳಲ್ಲಿ ಆಗಿರುವುದಿಲ್ಲ. ಆ ಪ್ರಕ್ರಿಯೆಯು ಬಹಳ lengthy ಆಗುತ್ತದೆ ಎಂದು ಸರ್ಕಾರ close-up ಆಗಿ ತರುತ್ತಿದೆ. ಇದನ್ನು ಮಾಡಬೇಕಾದರೆ ಪರಿಣಾಮಕಾರಿಯಾಗಿರಬೇಕು. ಶೇ.100ರಷ್ಟು ಬರುವಂತಿರಬೇಕು. ಇಲ್ಲಿ Code of Civil Procedure, 1908 ಅನ್ನು ಮಾತ್ರ ನೀಡಲಾಗಿದೆ. ಪೊಲೀಸ್ ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ಕೊಡಬೇಕಾದರೆ Cr.P.C., Indian Penal Code ಅನ್ನು ಕೊಡಬೇಕು. ಅದನ್ನು ಈ ವಿಧೇಯಕದಲ್ಲಿ provision ಮಾಡಿರುವುದಿಲ್ಲ. The Government has not made any provision in this particular enactment.

**ಶ್ರೀ ಬಸವರಾಜ ಬೊಮ್ಮಾಯಿ:–** ಈಗಾಗಲೇ 2019ರಲ್ಲಿ ಭಾರತ ಸರ್ಕಾರದಿಂದ ಬಂದಿದ್ದು, ಅದಕ್ಕೆ cognizable offence ಮಾಡಲಾಗಿದೆ. ಅದರಲ್ಲಿ Cr.P.C., Indian Penal Code ಎಲ್ಲಾ ಬರುತ್ತದೆ. ಅದರಲ್ಲಿ police action ಆಗುತ್ತದೆ, ಬೇನಾಮಿ investigation ಮಾಡುವುದಕ್ಕೂ provisions ಇದೆ. ಹೊಸ ಕಾನೂನಿನಲ್ಲಿ ಅದು ಸೇರಿದ್ದು, ಅದನ್ನು ನಾವು ಬಳಕೆ ಮಾಡುತ್ತೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020" ಅನ್ನು ಪರ್ಯಾಲೋಚಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2ರಿಂದ 11ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಡಾ:ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020" ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ: "ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2020" ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(5) ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ವಿಷಯ:-ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಗ್ರಾಮವೊಂದರ ಕ್ರಷರ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವ ಘಟನೆಯ ಕುರಿತು.**

***

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತೇನೆ. ನಾನು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದು, ಇದನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚೆಗೆ ತೆಗೆದುಕೊಂಡಿರುವ ಸದರಿ ವಿಷಯವು ಅತ್ಯಂತ ಗಂಭೀರವಾದುದಾಗಿದೆ.

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಕಂಚೆಬೈಲು ಗ್ರಾಮದ ಸಮೀಪವಿರುವ ಗೊಂಚುವಳ್ಳಿ ಗ್ರಾಮದ ಪಕ್ಕದಲ್ಲಿರುವ ಒಂದು ಕ್ರಷರ್‌ನಲ್ಲಿ 15 ವರ್ಷದ ಅಪ್ರಾಪ್ತ ಬಾಲಕಿ ಕೆಲಸ ಮಾಡುತ್ತಿರುತ್ತಾಳೆ. ಅಲ್ಲಿರತಕ್ಕಂತಹ ಒಬ್ಬ ಯುವಕ ಆಕೆಯ ಮೇಲೆ ಅತ್ಯಾಚಾರವನ್ನು ಮಾಡುತ್ತಾನೆ. ಅತ್ಯಾಚಾರವನ್ನೆಸಗಿ "ನೀನು ಯಾರಿಗಾದರೂ ಹೇಳಿದರೆ ನಾನು ವೀಡಿಯೋ ಮಾಡಿರುವುದನ್ನು ಸೋಷಿಯಲ್ ಮೀಡಿಯಾದಲ್ಲಿ ಬಿಡುಗಡೆ ಮಾಡುತ್ತೇನೆ" ಎಂದು ಆಕೆಯನ್ನು ಹೆದರಿಸುತ್ತಾನೆ. ಈ ರೀತಿ ಆಕೆಯನ್ನು ಹೆದರಿಸಿ ದೂರು ಕೊಡುವುದಕ್ಕೂ ಅವಕಾಶವನ್ನು ಕೊಡುವುದಿಲ್ಲ. ಇದರಿಂದ ಧೈರ್ಯಗೊಂಡು ಆತನ ಎಲ್ಲಾ ಸ್ನೇಹಿತರು ಸುಮಾರು ನಾಲ್ಕು ತಿಂಗಳ ಕಾಲ ಆಕೆಯ ಮೇಲೆ ನಿರಂತರವಾಗಿ ಅತ್ಯಾಚಾರವನ್ನು ಮಾಡುತ್ತಾರೆ.

ನಿಜವಾಗಿಯೂ ಆತಂಕ ಎನಿಸುತ್ತದೆ. ಆದಿಶಂಕರಾಚಾರ್ಯರು ಮೊಟ್ಟಮೊದಲು ಸ್ಥಾಪಿಸಿದಂತಹ ದಕ್ಷಿಣಾಮ್ನಾಯ ಪೀಠವಾದ ಶ್ರೀ ಶಾರದಾಂಬೆಯು ನೆಲೆಸಿರುವಂತಹ ಶೃಂಗೇರಿಯಂತಹ ಪವಿತ್ರವಾದ ಒಂದು ಸ್ಥಳದಲ್ಲಿ ಇಂತಹ ಒಂದು ಕೃತ್ಯವಾಗುತ್ತದೆಯೆಂದರೆ ಇಡೀ ನಮ್ಮ ರಾಜ್ಯ ತಲೆತಗ್ಗಿಸಬೇಕಾಗುತ್ತದೆ. ಅದೇ ರೀತಿಯಾಗಿ ಶೃಂಗೇರಿಯ ಕು.ಸ್ವಾತಿ ಭಟ್ ಎನ್ನುವ ಕಾಲೇಜು ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿದಂತಹ ಕರಾಳ ನೆನಪು ನಮ್ಮ ಮನಸ್ಸಿನಿಂದ ಮಾಸಿಲ್ಲ. ಈಗ ಮತ್ತೊಮ್ಮೆ ಅದೇ ಜಿಲ್ಲೆಯಲ್ಲಿ ಇಂತಹ ಒಂದು ದುರ್ಘಟನೆ ನಡೆದಿದ್ದು, ಅದನ್ನು ಯಾರೂ ಕ್ಷಮಿಸುವುದಕ್ಕಾಗುವುದಿಲ್ಲ. ಆದರೆ ದುರಂತವೇನೆಂದರೆ ಈ ಘಟನೆಯಲ್ಲಿ ಆಕೆ ಹೇಳುವ ಪ್ರಕಾರ ಸುಮಾರು 35 ರಿಂದ 40 ಜನರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನ ಮೇಲೆ ಅತ್ಯಾಚಾರವೆಸಗಿದ್ದು, ಅದರಲ್ಲಿ 17 ಜನರನ್ನು ಆಕೆ ಗುರುತಿಸಿ ಅವರ ಹೆಸರನ್ನು ಹೇಳುತ್ತಾಳೆ. ದೂರನ್ನು ತೆಗೆದುಕೊಳ್ಳಬೇಕಾದವರೇ ದೂರನ್ನು ತೆಗೆದುಕೊಳ್ಳುವುದಿಲ್ಲ.

ಆದರೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದಂತಹ ಶ್ರೀ ಸುಬ್ರಮಣ್ಯ ಅವರು ದೂರನ್ನು ದಾಖಲಿಸುತ್ತಾರೆ. ಅವರು ದೂರನ್ನು ಕೊಟ್ಟಂತಹ ಸಂದರ್ಭದಲ್ಲಿ ದೂರು ತೆಗೆದುಕೊಳ್ಳಲು ಪೊಲೀಸರು ಮೀನ ಮೇಷವನ್ನು ಎಣಿಸುತ್ತಾರೆ. ದೂರನ್ನು ದಾಖಲಿಸಿಕೊಳ್ಳುವುದಿಲ್ಲ. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಟಯ ಅಧ್ಯಕ್ಷರು ಹೋಗಿ ದೂರನ್ನು ನೀಡಿದರೂ ಸಹ ಪೊಲೀಸರು ಮೀನ ಮೇಷ ಎಣಿಸಿ ಮೂರ್ನಾಲ್ಕು ದಿನಗಳ ನಂತರ ಈ ಪ್ರಕರಣದಲ್ಲಿ ದೂರನ್ನು ದಾಖಲಿಸಿಕೊಳ್ಳುತ್ತಾರೆ. ಇದು POCSO (Protection of Children from Sexual Offences) ಕಾಯಿದೆಯಡಿಯಲ್ಲಿ ಗಂಭೀರವಾದ ಪ್ರಕರಣವಾಗಿದ್ದರೂ ಕೂಡ ಪೊಲೀಸರು ದೂರು ದಾಖಲಿಸಿಕೊಳ್ಳಲು ಏಕಿಷ್ಟು ತಡ ಮಾಡಿದರು? ಇದರ ಹಿಂದೆ ಯಾರದ್ದೋ ಕಾಣದ ಕೈಗಳಿವೆ ಎನ್ನುವ ಆತಂಕ ನಮಗಿದೆ.

**(...ಮುಂದು)**

(168) 04.02.2021, 5.40. KG.AK **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು.,):-**

ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಮಾನ್ಯ ಪ್ರಧಾನ ಮಂತ್ರಿಗಳು "ಬೇಟಿ ಪಡಾವೋ, ಬೇಟಿ ಬಚಾವೋ" ಎನ್ನುವಂತಹ ಒಂದು ಸಂದೇಶವನ್ನು ಈ ನಾಡಿಗೆ ಕೊಟ್ಟಿದ್ದಾರೆ. ಇದೇನಾ "ಬೇಟಿ ಪಡಾವೋ? ಇದೇನಾ ಭೇಟಿ ಬಚಾವೋ? ನಿಜವಾಗಲೂ ಸಹ, ನಾವು ಆತಂಕ ಪಡಬೇಕು. ಯಾವುದೇ ಒಬ್ಬ ರಾಜಕೀಯ ಪಕ್ಷದವರ ಮೇಲೆ ಗೂಬೆ ಕೂರಿಸುವ ಕೆಲಸವಲ್ಲ. ಅವರು ಯಾರೇ ಆಗಿರಬಹುದು. ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಏಕೆ ನಾವು ಮೀನಾಮೇಷ ಎಣಿಸಬೇಕಾಗಿದೆ. FIR ನಲ್ಲಿ 17 ಜನರ ಹೆಸರುಗಳನ್ನು ಹೆಸರಿಸಿ, ಅದರಲ್ಲಿ ಕೇವಲ 7 ಜನರನ್ನು ಮಾತ್ರ arrest ಮಾಡುವುದಕ್ಕೆ ಆಯಿತು. ಈ 17 ಜನರು ಯಾರೆಂದು ಎಲ್ಲರಿಗೂ ಗೊತ್ತಿದೆ. ಈ ಪ್ರಕರಣದಲ್ಲಿ 1ನೇ ಆರೋಪಿಯಾಗಿರುವವನು ಸಂಘ ಪರಿವಾರದಲ್ಲಿ ಗುರುತಿಸಿಕೊಂಡಿರುವಂತಹ ವ್ಯಕ್ತಿ. 2ನೇ ಆರೋಪಿ ಬಿ.ಜೆ.ಪಿ.,ಯ ಯುವ ಮೋರ್ಚಾದ ಪದಾಧಿಕಾರಿ. ಇನ್ನೊಬ್ಬ ಅಲ್ಲಿನ ಜಿಲ್ಲಾ ಪಂಚಾಯಿತಿಯ ಸದಸ್ಯ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಈತ ಬಿ.ಜೆ.ಪಿ., ಪಕ್ಷದ ಸದಸ್ಯನ ಕುಟುಂಬಕ್ಕೆ ಸಂಬಂಧಪಟ್ಟವನು. ಈ ಪ್ರಕರಣದಲ್ಲಿರುವಂತಹ ಸುಮಾರು 7 ರಿಂದ 8 ಜನರು ಸಂಘ ಪರಿವಾರಗಳಿಗೆ ಸಂಬಂಧಪಟ್ಟವರು.

ಮಾನ್ಯ ಸಭಾಪತಿಯವರೇ, ತಾವು ಈ ಫೋಟೋವನ್ನು ನೋಡಬಹುದು. ಜಿಲ್ಲಾ ಯುವ ಮೋರ್ಚಾ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಎಂದು ಒಂದು ಸಮಾರಂಭವನ್ನು ಮಾಡಿದ್ದಾರೆ. ಆ ಕಾರ್ಯಕ್ರಮದ ಮುಖ ಪುಟದಲ್ಲಿ ಅವರ ಫೋಟೋಗಳು ಬಂದಿವೆ. ಇದನ್ನೆಲ್ಲಾ ತಾವುಗಳು ನೋಡಬಹುದು.

**(ಈ ಹಂತದಲ್ಲಿ ಜಿಲ್ಲಾ ಯುವ ಮೋರ್ಚಾ ಕಾರ್ಯಕ್ರಮದ ಫೋಟೋವನ್ನು ಸದನದಲ್ಲಿ ಪ್ರದರ್ಶಿಸಿದರು)**

ಇಂತಹ ವ್ಯಕ್ತಿಗಳು ನೇರವಾಗಿ ಈ ಘಟನೆಯಲ್ಲಿ ಭಾಗವಹಿಸಿರುವುದರಿಂದ ಏತಕ್ಕಾಗಿ ಅವರನ್ನು ದಸ್ತಗಿರಿ ಮಾಡುತ್ತಿಲ್ಲ? ಆಕೆ 15 ವರ್ಷಗಳ ಬಾಲಕಿ. ಆಕೆ ಹಾವೇರಿ ಜಿಲ್ಲೆಯಿಂದ ಬಂದಂತಹವರು. ಆಕೆಗೆ ತಾಯಿ ಇಲ್ಲ. ತಾಯಿ ತೀರಿಕೊಂಡಿದ್ದಾರೆ. ತಂದೆ ಬೇರೆಯವರನ್ನು ಮದುವೆಯಾಗಿದ್ದಾರೆ. ಆಕೆಯನ್ನು ನೋಡಿಕೊಳ್ಳುವವರು ಯಾರು ಇಲ್ಲ. ಆಕೆ ಅನಾಥೆ. ಆಕೆಯ ತಾಯಿಯ ತಂಗಿ, ಅಂದರೆ, ಆಕೆಯ ಚಿಕ್ಕಮ್ಮ ಆಕೆಯನ್ನು ಹಾವೇರಿಯಿಂದ ಕರೆದುಕೊಂಡು ಒಂದು crusher ನಲ್ಲಿ ಕೆಲಸಕ್ಕೆ ಸೇರಿಸುತ್ತಾಳೆ. ಇಲ್ಲಿ ದುರ್ದೈವ ಎಂದರೆ, ಈ ಘಟನೆಗೆ ಆಕೆಯ ಚಿಕ್ಕಮ್ಮನೇ ಸಹಕಾರ ಕೊಡುತ್ತಾಳೆಂದರೆ, ಇಂತಹ ಘೋರವಾದಂತಹ ವಿಷಯವನ್ನು ಎಲ್ಲಿಯೂ ಸಹ ಕೇಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಕಾನೂನು ಏನಾಯಿತು? ನಾವು ಏಕೆ ಇನ್ನೂ ಮೀನಾಮೇಷ ಎಣಿಸುತ್ತಿದ್ದೇವೆ? ಇಷ್ಟೊಂದು ಸಾಕ್ಷಿಗಳು ನಮ್ಮ ಕಣ್ಮುಂದೆ ಕಾಣಿಸುತ್ತಿದ್ದರೂ ಸಹ, ಏತಕ್ಕಾಗಿ ಅವರನ್ನು arrest ಮಾಡದೇ ಅವರಿಗೆ ಶಿಕ್ಷೆಯನ್ನು ಕೊಡದೇ ನಾವು ಏಕೆ ಕಾಲವನ್ನು ಕಳೆಯುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ, ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ದಿನಾಂಕ 16.02.2016 ರಂದು ಇದೇ ಶೃಂಗೇರಿ ತಾಲ್ಲೂಕಿನ ವೈಕುಂಠಪುರ ಗ್ರಾಮದ ಹೊಸಕೆರೆ site ನ ಆರೋಪಿಯೊಬ್ಬ ಮೆಣಸೆ-ಹೊಸಕೆರೆ site ನ ಕಾಲುದಾರಿಯಲ್ಲಿ ತನ್ನ ಗೆಳೆಯನ ಜೊತೆ ಸೇರಿಕೊಂಡು ಸ್ವಾತಿ ಎಂಬ ಹುಡುಗಿಯ ಮೇಲೆ ಅತ್ಯಾಚಾರ ಮಾಡಿ, ಆಕೆಯ ಮೇಲಿದ್ದ ಬಂಗಾರದ ಆಭರಣಗಳನ್ನು ಕಿತ್ತುಕೊಂಡು ಆಕೆಯನ್ನು ಬಾವಿಗೆ ತಳ್ಳಿ ಹೋಗುತ್ತಾನೆ. ನಂತರ ಆತನನ್ನು arrest ಮಾಡಿ ಚಿಕ್ಕಮಗಳೂರಿನ ಜೈಲಿಗೆ ಕಳುಹಿಸಿಕೊಟ್ಟ ಮೇಲೆ, ಚಿಕ್ಕಮಗಳೂರಿನ ಜಿಲ್ಲಾ ನ್ಯಾಯಾಲಯ ಆರೋಪಿಗೆ ಗಲ್ಲು ಶಿಕ್ಷೆ ಕೊಡುತ್ತದೆ. ಇದೇ ತಾಲ್ಲೂಕಿನಲ್ಲಿ ಆದಂತಹ ಘಟನೆಗೆ ಇದೇ ಜಿಲ್ಲೆಯ ನ್ಯಾಯಾಧೀಶರು ಆರೋಪಿಗೆ ಗಲ್ಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಕ್ಷೆಯನ್ನು ನೀಡುತ್ತಾರೆ. ಆದರೆ, ಅದಕ್ಕಿಂತಲೂ ಘೋರವಾದಂತಹ ಅಪರಾಧವಾಗಿರುವಂತಹ ಈ ಪ್ರಕರಣದಲ್ಲಿ ಇನ್ನೂ ಏಕೆ ಎಲ್ಲರನ್ನು arrest ಮಾಡುವುದಕ್ಕೆ ಆಗುತ್ತಿಲ್ಲ. ಇದು ನಮ್ಮ ಆತಂಕವಾಗುತ್ತಿದೆ. ಅವತ್ತು ನಮ್ಮ ರಾಜ್ಯದ ಜನತೆ ಆ ಹೆಣ್ಣು ಮಗಳಿಗೆ ಆದಂತಹ ಅನ್ಯಾಯವನ್ನು ಖಂಡಿಸಿದೆ. ಆ ಪ್ರಕರಣದಲ್ಲಿ ಆರೋಪಿಗೆ ಗಲ್ಲು ಶಿಕ್ಷೆ ಕೊಟ್ಟಿದ್ದನ್ನು ನಮ್ಮ ರಾಜ್ಯ ಸ್ವಾಗತಿಸಿತ್ತು. ಈಕೆ 15 ವರ್ಷಗಳ ಬಾಲಕಿ, ಆಕೆಗೆ ಏನೂ ಗೊತ್ತಿಲ್ಲ. ಆಕೆಯ ಮೇಲೆ ನಿರಂತರವಾಗಿ ಎಷ್ಟೋ ಬ್ಟಾರಿ ಅತ್ಯಾಚಾರವಾಗಿದೆ ಎಂದರೆ, ಆ ಬಾಲಕಿ ಆ ವಿಷಯವನ್ನು ಯಾರ ಬಳಿಯೂ ಸಹ ಹೇಳಿಕೊಳ್ಳುವುದಕ್ಕೆ ಆಗಲಿಲ್ಲ. ಆಕೆಯ ಸ್ವಂತ ಚಿಕ್ಕಮ್ಮ ಇದಕ್ಕೆ ಕೈ ಜೋಡಿಸಿರುವುದರಿಂದ ನನ್ನ ಪ್ರಾಣಕ್ಕೆ ಹಲ್ಲೆ ಕುತ್ತು ಬರುತ್ತದೆಂದು ತಿಳಿದುಕೊಂಡು ಆ ಬಾಲಕಿ ಎಲ್ಲಿಯೂ ಸಹ ದೂರು ನೀಡುವುದಿಲ್ಲ. ಈ ಘಟನೆ ಗೊತ್ತಾದ ಮೇಲೆ ಅಧಿಕಾರಿಗಳೆ ಹೋಗಿ ಆಕೆಯನ್ನು ಕರೆದುಕೊಂಡು ಬಂದು ಬಾಲಕಿಯ ಕೇಂದ್ರದಲ್ಲಿಟ್ಟು ನಂತರ ಪೊಲೀಸರಿಗೆ ದೂರು ಕೊಡುವಂತಹ ಕೆಲಸವಾಗಿದೆ. ಈ ಘಟನೆಯಲ್ಲಿ ಭಾಗಿಯಾಗಿರುವಂತಹ ಆರೋಪಿಗಳಿಗೆ ಇದು ಮೊದಲನೇ ಕೃತ್ಯವಲ್ಲ. ಇವರು ಹಲವಾರು ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ. ಅತ್ಯಾಚಾರದಂತಹ ಪ್ರಕರಣಗಳ ಜೊತೆಗೆ ಬೇರೆಲ್ಲಾ criminal activities ಏನೇನು ಮಾಡಬೇಕೋ, ಅದೆಲ್ಲವನ್ನೂ ಮಾಡಿದ್ದಾರೆ. ಇದು ಅವರ ಮೊದಲನೇ ಕೆಲಸವಲ್ಲ. ಮಾನ್ಯ ಗೌರವಾನ್ವಿತ ಗೃಹ ಸಚಿವರು ಸದನದಲ್ಲಿ ಇದ್ದಾರೆ. ಪೋಲಿಸ್ ಇಲಾಖೆ ಏನು ಮಾಡುತ್ತಿದೆ? ಏತಕ್ಕಾಗಿ ಕೆಲಸ ಮಾಡುತ್ತಿಲ್ಲ? 15 ವರ್ಷದ ಬಾಲಕಿ ಕ್ರಷರ್‌ನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವೇ? ಈ ಬಾಲಕಿ ಕೆಲಸ ಮಾಡುತ್ತಿದ್ದ M.G.R. ಕ್ರಷರ್‌ನ ಮಾಲೀಕರ ವಿರುದ್ಧ ಕೇಸ್‌ನ್ನು ದಾಖಲಿಸಬಹುದಾಗಿತ್ತು. ಈ ಕ್ರಷರ್‌ನ ಮಾಲೀಕನನ್ನು ಸಹ arrest ಮಾಡಬಹುದಾಗಿತ್ತು. ಕೂಲಿ ಕಾರ್ಮಿಕರು ಕ್ರಷರ್‌ನಲ್ಲಿಯಾಗಲಿ, ಕ್ವಾರಿಯಲ್ಲಿಯಾಗಲಿ ಅಥವಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರಲಿ ಅವರಿಗೆ ಸೂಕ್ತವಾದಂತಹ ಒಂದು ಬೆಂಬಲವನ್ನು ಕೊಡದೇ ಹೋಗಿದ್ದರೆ, ಆಕೆಗೆ ಆಗಿರುವಂತಹ ಅನ್ಯಾಯಕ್ಕೆ ಅವರು ಸಹ ಹೊಣೆಯಾಗುತ್ತಾರೆ ಅಲ್ಲವೇ? ಈ ಕೆಲಸವನ್ನು ಕ್ರಷರ್‌ನವರು ಮಾಡಬೇಕಾಗಿತ್ತು. ಆದರೆ, ಮಾಡಿಲ್ಲ. ಇದರ ಮಾಲೀಕರ ವಿರುದ್ಧವು ಸಹ ನಿರ್ದಾಕ್ಷಿಣ್ಯವಾಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಕೊನೆಗೆ ಇದು ಎಲ್ಲೋ ಒಂದು ಕಡೆ, ಯಾರೋ ಕಾಣದ ಕೈಗಳು ಅವರಿಗೆ ಬೆಂಬಲ ಕೊಡುವುದರ ಮುಖಾಂತರವಾಗಿ, ಈ ಕೇಸ್ ಎಲ್ಲಿ ಮುಚ್ಚಿ ಹೋಗುತ್ತದೆಯೋ ಎನ್ನುವಂತಹ ಆತಂಕ ನಮಗಿದೆ. ಮಾನ್ಯ ಸಭಾಪತಿಯವರೇ, ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದು ತಮ್ಮ ಜಿಲ್ಲೆಯಾಗಿರುವುದರಿಂದ ನಾನು ಇದನ್ನು ಇಷ್ಟೊಂದು ಒತ್ತಿ ಒತ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿದ್ದೇನೆ. ಈ ಹಿಂದೆ ಇದೇ ಶೃಂಗೇರಿಯಲ್ಲಿ ಶ್ರೀ ಶಂಕರಾಚಾರ್ಯರ ಪ್ರತಿಮೆಗೆ ಯಾರೋ ಹಸಿರು ಧ್ವಜವನ್ನು ಹಾಕಿದ್ದಾರೆ. ಹಸಿರು ಧ್ವಜವನ್ನು ಹಾಕಿದ ತಕ್ಷಣ ಮಾಧ್ಯಮಗಳಲ್ಲಿ ಯಾರೋ ಅಲ್ಪಸಂಖ್ಯಾತರು ಬಂದು ಪಾಕಿಸ್ಥಾನದ ಭಾವುಟವನ್ನು ಅಲ್ಲಿ ಹಾಕಿ ಹೋಗಿದ್ದಾರೆಂದು ಹಾಗೂ ಅಂತಹವರ ವಿರುದ್ಧ ತೀಕ್ಷಣವಾದಂತಹ ತನಿಖೆಯಾಗಬೇಕೆಂದು ಮತ್ತು ಅವರಿಗೆ ಶಿಕ್ಷೆಯಾಗಬೇಕೆಂದು ಹೇಳಿ ಸುಮಾರು ಐದಾರು ದಿವಸಗಳ ಪ್ರಚಾರ ಮಾಡಿದರು. ಯಾವ ಟಿವಿ ಮಾಧ್ಯಮವನ್ನು ನೋಡಿದರೂ ಸಹ, ಎಲ್ಲಿ ನೋಡಿದರೂ ಸಹ ಅದು ಪ್ರಚಾರವಾಯಿತು. ಯಾರೋ ಅಲ್ಪಸಂಖ್ಯಾತರು ಬಂದು ಶ್ರೀ ಶಂಕರಾಚಾರ್ಯರ ಪ್ರತಿಮೆಗೆ ಹಸಿರು ಶಾಲನ್ನು ಮುಚ್ಚಿ ಹೋಗಿದ್ದಾರೆಂದು ಪ್ರಚಾರವಾಯಿತು. ಅದು ಇಡೀ ನಮ್ಮ ರಾಜ್ಯಾದ್ಯಂತ ಮತ್ತೊಂದು ಕೋಮು ಗಲಭೆಗೆ ಕಾರಣವಾಗುತ್ತಿತ್ತೋ ಏನೋ; ಅದನ್ನು ಆ ಮಟ್ಟಕ್ಕೆ ಪ್ರಚಾರವನ್ನು ಕೊಟ್ಟರು. ನಂತರ ಅಕ್ಕಪಕ್ಕ ಇದ್ದಂತಹ ಸಿ.ಸಿ.ಟಿವಿ ಕ್ಯಾಮರಾಗಳನ್ನು ಪರಿಶೀಲನೆ ಮಾಡಿದಂತಹ ಸಂದರ್ಭದಲ್ಲಿ ಆ ಹಸಿರು ಶಾಲನ್ನು ಹಾಕಿದವರು ಸಹ ಸಂಘ ಪರಿವಾರಕ್ಕೆ ಸೇರಿದವನೆಂದು ತಿಳಿದು ಬಂತು. ಆ ಸಂದರ್ಭದಲ್ಲಿ ಆತನ ವಿರುದ್ಧ ಯಾವುದೇ ಕೇಸ್ ದಾಖಲು ಆಗಲಿಲ್ಲ. ಎಷ್ಟು ಅಪಪ್ರಚಾರವಾಗಿತ್ತೋ, ಅದು ಅಷ್ಟಕ್ಕೆ ನಿಂತು ಹೋಯಿತು. ಒಂದು ವೇಳೆ, ಅಲ್ಪಸಂಖ್ಯಾತರೆ ಆ ಹಸಿರು ಶಾಲನ್ನು ಹಾಕಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು? ಆಗ ಕೋಮುಗಲಭೆಗೆ ಕಾರಣವಾಗುತ್ತಿರಲಿಲ್ಲವೇ? ಆಗ ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾನಿಯಾಗುತ್ತಿರಲಿಲ್ಲವೇ? ಆ ಕೇಸ್ ಯಾವ ರೀತಿ ಮುಚ್ಚಿ ಹೋಯಿತೋ, ಅದೇ ರೀತಿ ಈ ಕೇಸ್ ಸಹ ಎಲ್ಲಿ ಮುಚ್ಚಿ ಹೋಗುತ್ತದೆಯೋ ಎಂಬ ಆತಂಕ ನಮಗಿದೆ. ಅದಕ್ಕಾಗಿ, ಈ ಪ್ರಕರಣ ಹಳ್ಳ ಹಿಡಿಯುವುದಕ್ಕೂ ಮೊದಲೇ ಮಾನ್ಯ ಗೃಹ ಸಚಿವರು ಎಚ್ಚೆತ್ತುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಆ ಭಾಗದ ಸಂಸತ್ ಸದಸ್ಯರು. ಅವರು ಒಂದು ಸಣ್ಣ ಪುಟ್ಟ ಗಲಾಟೆಯಾದರೆ, ಯಾರಾದರೂ ರಸ್ತೆಗಳಲ್ಲಿ ಪಟಾಕಿಗಳನ್ನು ಹಚ್ಚಿದರೆ ಬಂದು ರಸ್ತೆಯಲ್ಲಿ ನಿಂತುಕೊಂಡುಬಿಡುತ್ತಾರೆ. ನಾನೇ ಅವರೆನ್ನೆಲ್ಲಾ ಕಾಪಾಡುವವಳು ಎಂದು ಅವರು ಕೂಗಾಡುತ್ತಾರೆ. ಅವರು ಮಾಧ್ಯಮಗಳಲ್ಲಿ ಎಲ್ಲಿ ನೋಡಿದರೂ ಸಹ, ಪ್ರಚಾರವನ್ನು ಗಿಟ್ಟಿಸಿಕೊಳ್ಳುತ್ತಿರುತ್ತಾರೆ. ಇವತ್ತು ಅವರ ಲೋಕಸಭಾ ಕ್ಷೇತ್ರದಲ್ಲಿ ಆಗಿರುವಂತಹ ಒಂದು ಹೀನವಾದಂತಹ ಕೃತ್ಯಕ್ಕೆ ಒಂದು ಹೇಳಿಕೆಯಾದರೂ ಅವರಿಂದ ಬೇಡವೇ?

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಮತ್ತು ಕಾನೂನು ಸಂಸಂದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಪ್ರಕರಣದ ಬಗ್ಗೆ ಮಾತನಾಡಲಿ. ಆದರೆ, ಆ ಭಾಗದ ಸಂಸತ್ ಸದಸ್ಯರಾಗಲಿ, ಶಾಸಕರಾಗಲಿ ಯಾರು ಸಹ ಈ ಸದನದಲ್ಲಿ ಇಲ್ಲ. ಹಾಗಾಗಿ, ನಾವು defend

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಪ್ರಕರಣಕ್ಕೆ ಅವರ ಹೇಳಿಕೆಗೆ ಏನೂ ಸಂಬಂಧವಿಲ್ಲ. ಇಲ್ಲಿ ಅಂತಹ ವಿಷಯವನ್ನು ಪ್ರಸ್ತಾಪ ಮಾಡಿ, ಅವರು ಇಲ್ಲಿ ಏನು defend ಮಾಡುವುದಕ್ಕೆ ಆಗದವರ ಹೆಸರುಗಳನ್ನು indirect ಆಗಿ direct ಆಗಿ ಅವರ ಹೆಸರುಗಳನ್ನು ತೆಗೆದುಕೊಳ್ಳುವುದು ಎಷ್ಟರಮಟ್ಟಿಗೆ ಸರಿ? ಹಾಗಾಗಿ, ತಾವು ಇದನ್ನು ನಿಯಂತ್ರಣ ಮಾಡಬೇಕಾಗುತ್ತದೆ.

(ಮುಂದು..)

(169)04-02-2021(5-50)ಎಂವಿ-ಆರ್‌ಎನ್

**(ಉಪ ಸಭಾಪತಿಯವರ ಉಪಸ್ಥಿತಿ)**

**ಉಪ ಸಭಾಪತಿಯವರು:-** ಸದನದಲ್ಲಿ ಇಲ್ಲದೇ ಇರುವವರ ಬಗ್ಗೆ ಪ್ರಸ್ತಾಪ ಮಾಡುವುದು ಅಷ್ಟು ಸೂಕ್ತವಲ್ಲ. ಮಾನ್ಯ ಎಂ.ನಾರಾಯಣಸ್ವಾಮಿಯವರೆ ಆದಷ್ಟು ಬೇಗ ತಮ್ಮ ಮಾತನ್ನು ಮುಗಿಸಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾನು ಅವರನ್ನು ದೂಷಣೆ ಮಾಡುತ್ತಾ ಹೋಗುತ್ತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಎಲ್ಲೂ ಈ ವಿಷಯದ ಬಗ್ಗೆ ಹೇಳಿಲ್ಲ. ಅವರು ಏನೆಲ್ಲಾ ಹೇಳಿದರು ಅದನ್ನು ಕೇಳಿಕೊಂಡು ಸುಮ್ಮನೆ ಕುಳಿತುಕೊಂಡಿದ್ದೆವು. ಇಲ್ಲಿ ಯಾರು defend ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಮತ್ತು ಅವರು ಇನ್ನೊಂದು ಸದನದ ಸದಸ್ಯರಾಗಿದ್ದರೆ ಅವರ ಹೆಸರನ್ನು ಪ್ರಸ್ತಾಪ ಮಾಡಬಾರದು ಎಂದು ಒಂದು ನಿಯಮವಿದೆ. ಮಿಕ್ಕ ವಿಷಯದ ಬಗ್ಗೆ ನನಗೆ ಗೊತ್ತಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಪ್ರಕರಣದಲ್ಲಿ ಯಾರನ್ನು ಕೂಡ ಸಮರ್ಥನೆ ಮಾಡಿಕೊಳ್ಳುವುದಾಗಲಿ ಮತ್ತು ದೂಷಣೆ ಮಾಡತಕ್ಕಂಥದ್ದಲ್ಲ. ಜವಾಬ್ದಾರಿಯುತ ಗೃಹ ಸಚಿವರು ನಾನು ಹೇಳುವುದೆಲ್ಲವನ್ನು ಕೇಳಿಕೊಂಡು ಅದಕ್ಕೆ ಸರಿಯಾದ ರೀತಿಯಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕು. ಮಾನ್ಯ ಗೃಹ ಸಚಿವರು ಏನು ಮನಸ್ಸು ಮಾಡಿದ್ದಾರೆ, ಅದೇ ರೀತಿ ಜನಪ್ರತಿನಿಧಿಗಳಾದಂತಹ ನಮ್ಮ ಮತ್ತು ನಿಮ್ಮಗಳ ಕರ್ತವ್ಯವಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಆರೋಪಿಗಳು ಸಿಗದೆ ಇರುವುದರ ಬಗ್ಗೆ ನಿನ್ನೆ ಕೂಡ ಚಿಂತನೆ ಮಾಡಿದ್ದೇವೆ. ನಾವು ಅವರ ಮೇಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನು ಕ್ರಮವನ್ನು ಕೈಗೊಳ್ಳುತ್ತೇವೆ. ಆದರೆ, ವಿಷಯವನ್ನು ಗಮನದಲ್ಲಿಟ್ಟುಕೊಂಡು ಎಲ್ಲರನ್ನು ಉಲ್ಲೇಖ ಮಾಡಿ ಪ್ರಚಾರ ಮಾಡುವುದು ಸರಿಯಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಸುಳ್ಳಾ? ನಾನು ಸುಳ್ಳು ಹೇಳುತ್ತಿದ್ದೇನೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ಸುಳ್ಳು ಎಂದು ಹೇಳುತ್ತಿಲ್ಲ. ಅವರು ಅದನ್ನು ವಿಷಯಕ್ಕೆ ಸೀಮಿತಗೊಳಿಸಲಿ ಎಂದು ಹೇಳಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತಿದ್ದೇನೆಂದರೆ, ಆ ಭಾಗದ ಸಂಸತ್ ಸದಸ್ಯರಾಗಿರಲಿ ಅಥವಾ ಶಾಸಕರಾಗಿರಲಿ, ಜನಪ್ರತಿನಿಧಿಗಳು ಯಾರೇ ಆಗಿರಲಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಷಯದ ಬಗ್ಗೆ ಯಾರ್‍ಯಾರು ಇದ್ದಾರೆ ಮತ್ತು ಏನೆಂದು ಎಲ್ಲವನ್ನು ಸಹ ಹೇಳಿದ್ದಾರೆ. ಅದರ ಬಗ್ಗೆ ತನಿಖೆ ಕೂಡ ಆಗುತ್ತಿದೆ. ಈಗಾಗಲೇ ಕೆಲವರನ್ನು ಬಂಧಿಸಿದ್ದೇವೆ. ನಾವು ನಾಲ್ಕು ತಂಡಗಳನ್ನು ಮಾಡಿಕೊಂಡು, ಉಳಿದವರನ್ನು ಖಂಡಿತವಾಗಿ ಬಂಧಿಸುತ್ತೇವೆ. ಆ ಹೆಣ್ಣು ಮಗು ಏನು ಹದಿನೇಳು ಜನರ ಹೆಸರನ್ನು ಹೇಳಿದೆ ಅವರನ್ನು ಖಂಡಿವಾಗಿ ಬಂಧಿಸುತ್ತೇವೆ. ಇಷ್ಟೆ ಅಲ್ಲ, ಅವರು ಯಾರೆ ಆಗಿರಲಿ ಅವರಿಗೆ ಗಲ್ಲು ಶಿಕ್ಷೆ ಆಗುವ ರೀತಿಯಲ್ಲಿ ತನಿಖೆ ಮಾಡಿ ಸಂಬಂಧಪಟ್ಟಂತಹ ಸೆಕ್ಷನ್‌ಗಳಡಿಯಲ್ಲಿ ಅವರನ್ನು ಕೋರ್ಟ್‌ಗೆ ಹಾಜರುಪಡಿಸುತ್ತೇವೆ. ಖಂಡಿತವಾಗಿ ಅದರ ಬಗ್ಗೆ ಅನುಮಾನವೇ ಬೇಡ. ಈ ಮಾತನ್ನು ಕೆಳಮನೆ ಮತ್ತು ಮೇಲ್ಮನೆ ಎರಡರಲ್ಲೂ ಸಹ ಹೇಳಿದ್ದೇನೆ. ನಾವು ಈ ಪ್ರಕರಣವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಇದರಲ್ಲಿ ಯಾವುದೇ ಪಕ್ಷ ಎಂದು ನೋಡುವುದಿಲ್ಲ. ತಪ್ಪು ಮಾಡಿದರೆ ಅದು ತಪ್ಪೆ. ಅದು ಯಾವುದೇ ಪಕ್ಷ ಅಥವಾ ಯಾವುದೇ ಪದಾಧಿಕಾರಿಗಳು ಇರಲಿ. ನಾವು ಅವರಿಗೆ ಗಲ್ಲು ಶಿಕ್ಷೆಯಾಗುವ ರೀತಿಯಲ್ಲಿ ತನಿಖೆ ಮಾಡಿ, ಬುಕ್ ಮಾಡಿ, we will book them to justice. ಮತ್ತೆ ಯಾವುದು ಹಿಂದಿನ ಪ್ರಕರಣದಲ್ಲಿ ಅದೇ ಜಿಲ್ಲೆಯಲ್ಲಿ ಗಲ್ಲು ಶಿಕ್ಷೆಯಾಗಿದೆ. ಅದೇ ಪ್ರಕರಣದಲ್ಲಿ ಹಾಕಲಾದ ಸೆಕ್ಷನ್‌ಗಳನ್ನು ಹಾಕುತ್ತೇವೆ. ನಾವು ಇದನ್ನು ಕೂಡ ಅದೇ ರೀತಿಯ ಗಂಭೀರತೆಯಲ್ಲಿ ಕೆಲಸ ಮಾಡುತ್ತೇವೆ. ಅದರಲ್ಲಿ ಏನು ಅನುಮಾನ ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಈ ಮಾತನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಅವರ ಮೇಲೆ ಆಪಾದನೆ ಮಾಡುತ್ತಿಲ್ಲ. ಯಾರು ಜನಪ್ರತಿನಿಧಿಗಳಾಗಿದ್ದಾರೆ. ನಮ್ಮನ್ನು ಏನು ಜನ ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಇವತ್ತಿನ ದಿವಸ ಇಂತಹ ಘಟನೆಗಳು ಆದರೂ ಸಹ ಜನಪ್ರತಿನಿಧಿಗಳು ಏನು ಮಾಡುತ್ತಿದ್ದಾರೆಂದು ನಮ್ಮನ್ನು ಕರ್ನಾಟಕದ ಜನರು ನೋಡುತ್ತಿದ್ದಾರೆ. ಮಾನ್ಯ ಗೃಹ ಸಚಿವರೆ, ನಾನು ಒಂದು ಉದಾಹರಣೆ ಹೇಳುತ್ತೇನೆ. ತಾವು ಉತ್ತರ ಕೊಡುವಾಗ ಅದನ್ನು ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಇಲ್ಲಿ ಒಂದು ಸಷ್ಟವಾದ ನಿಯಮವಿದೆ. ಅವರು ಆ ಚೌಕಟ್ಟಿನೊಳಗೆ ಏನು ಬೇಕಾದರು ಮಾತನಾಡಲಿ. ಏಕೆಂದರೆ, ಬೇರೆ ಮನೆಯ ಸದಸ್ಯರು ಇಲ್ಲಿಗೆ ಬಂದು ಸಮರ್ಥಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಪರೋಕ್ಷವಾಗಿ ಅವರ ಹೆಸರನ್ನು ತೆಗೆದುಕೊಳ್ಳುವುದರಿಂದ ನಮಗೆ ಅವರು ಸಂಸತ್ ಸದಸ್ಯರೆಂದು ಗೊತ್ತಾಗುವುದಿಲ್ಲವೇ?

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮತ್ತೆ ಅವರು ಹಗುರವಾಗಿ ಉಲ್ಲೇಖ ಮಾಡಿದ್ದಾರೆ. ಅಂದರೆ, ಆ ಯಮ್ಮ ಬಂದರು, ಆ ಯಮ್ಮ ಬಂತು ಎಂದು. ಹಾಗಾದರೆ ಯಾವ ಅಮ್ಮ. ಇದೇ ರೀತಿಯೆ ಹೆಣ್ಣು ಮಕ್ಕಳ ಬಗ್ಗೆ ಹಗುರವಾಗಿ ಮಾತನಾಡುವುದು.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಗರುವಾಗಿ ಮಾತನಾಡುತ್ತಾರೆಂದು ಹೇಳುತ್ತಿದ್ದಾರಲ್ಲ... ಅದು ಯಾವ ರೀತಿ ಇತ್ತು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸದಸ್ಯರು ಒಬ್ಬ ಮಹಿಳೆಯಾಗಿ, ಅಪ್ರಾಪ್ತ ಬಾಲಕಿಗೆ ಅತ್ಯಾಚಾರವಾದಾಗ ಅವರು ಈ ರೀತಿ ಮಾತನಾಡುವುದು ಸರಿ ಕಾಣಿಸುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡಿದವರನ್ನು ಗಲ್ಲು ಶಿಕ್ಷೆಗೆ ಹಾಕಿಸಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಂಸತ್ ಸದಸ್ಯರಾಗಿರುವ ಆ ಹೆಣ್ಣು ಮಗಳ ಬಗ್ಗೆ ಗೌರವಯುತವಾಗಿ ಮಾತನಾಡಲಿ. ಸಂಸದರು ಆ ಅಮ್ಮ, ಈ ಅಮ್ಮ, ಅವರು ಯಾವ ಅಮ್ಮ? ಯಾರ ಅಮ್ಮ? ಮಾನ್ಯ ಸದಸ್ಯರು ತಮ್ಮ ಭಾಷೆಗೆ ಒಂದು ಮಿತಿ ಇಟ್ಟುಕೊಳ್ಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್‌ರವರೆ, ಶಿವಮೊಗ್ಗ ಕನ್ನಡ ಮತ್ತು ಬೆಂಗಳೂರು ಕನ್ನಡಕ್ಕೆ ಬಹಳ ವ್ಯತ್ಯಾಸವಿದೆ. ಎಲ್ಲರೂ ಕೂಡ ಸಾಹಿತ್ಯಿಕವಾಗಿ ಮಾತನಾಡುವುದಿಲ್ಲ. ಶಿವಮೊಗ್ಗ ಮಲೆನಾಡು ಕನ್ನಡ, ಬಯಲುಸೀಮೆಯ ಬೆಂಗಳೂರು ಕನ್ನಡಕ್ಕೂ ವ್ಯತ್ಯಾಸವಿದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಶೃಂಗೇರಿ ಕ್ಷೇತ್ರದ ಶಾಸಕರು ಅವರ ಪಕ್ಷದ ಸದಸ್ಯರು ಅದಕ್ಕೆ ಅವರ ಹೆಸರನ್ನು ತೆಗೆದುಕೊಳ್ಳುತ್ತಿಲ್ಲವೇ? ಅವರು ಸಂಸತ್ ಸದಸ್ಯರ ಹೆಸರನ್ನು ಹೇಳಿದರು. ಈಗ ಶೃಂಗೇರಿ ಕ್ಷೇತ್ರದ ಶಾಸಕರು ಯಾರು ಮತ್ತು ಯಾವ ಪಕ್ಷದವರು? ಅವರು ಶೃಂಗೇರಿ ಕ್ಷೇತ್ರದ ಶಾಸಕರು ಎಂದು ಹೇಳಲಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಏನು ಭಜನೆ ಮಾಡುತ್ತಿದ್ದರೆ?

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಜನಪ್ರತಿನಿಧಿಗಳು ಎಂದು ಹೇಳುತ್ತಿದ್ದೇನೆ. ಪ್ರಕರಣ ದಾಖಲಾದ ತಕ್ಷಣ ಅಲ್ಲಿನ ಶಾಸಕರು ಅದರ ಬಗ್ಗೆ ಮಾತನಾಡಿ, ಅವರು ಹೋರಾಟ ಮಾಡಿದ್ದಾರೆ. ಅವರು ಈ ವಿಷಯವನ್ನು ಕೆಳಮನೆಯಲ್ಲಿ ಪ್ರಸ್ತಾಪ ಮಾಡಿರುವುದಕ್ಕೆ, ಮಾನ್ಯ ಗೃಹ ಸಚಿವರು ಅದಕ್ಕೆ ಉತ್ತರವನ್ನು ಸಹ ನೀಡಿದ್ದಾರೆ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಆ ಘಟನೆಯನ್ನು ಯಾರೂ ಸಮರ್ಥನೆ ಮಾಡುತ್ತಿಲ್ಲ. ರಾಜಕೀಯದ ಭಾಷಣ ಮಾಡಿಕೊಂಡು, ಅವರು ಅತ್ಯಾಚಾರದಲ್ಲೂ ರಾಜಕೀಯ ಭಾಷಣ ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ರಾಜಕೀಯ ಭಾಷಣ ಮಾಡುತ್ತಿಲ್ಲ. ಆ ಹೆಣ್ಣು ಮಗಳಿಗೆ ಆಗಿರುವಂತಹ ಅನ್ಯಾಯದ ವಿರುದ್ಧ ಮಾತನಾಡುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇಂತಹ ರಾಜಕೀಯ ಭಾಷಣಕ್ಕೆ ನಾಚಿಕೆಯಾಗಬೇಕು. ಒಂದು ಬಾಲಕಿಯ ಅತ್ಯಾಚಾರದಲ್ಲೂ ರಾಜಕಾರಣವೇ?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ರಾಜಕಾರಣ ಮಾಡುತ್ತಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ಅವರು ಇನ್ನೇನು ಮಾಡುತ್ತಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ರಾಜಕೀಯ ಮಾಡುತ್ತಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅತ್ಯಾಚಾರ ಕುರಿತಂತೆ ಮಾಡುವ ರಾಜಕಾರಣ, ಕೀಳು ಮಟ್ಟದ ರಾಜಕಾರಣ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಅವರಷ್ಟು ಕೀಳುಮಟ್ಟಕ್ಕೆ ಹೋಗುವುದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರೆ, ಈಗ ವಿಚಾರಕ್ಕೆ ಬನ್ನಿ. ಮಾತನಾಡಲು ಇನ್ನು ತುಂಬಾ ಜನ ಸದಸ್ಯರಿದ್ದಾರೆ. ನಿಮ್ಮ ವಿಚಾರವನ್ನು ಆದಷ್ಟು ಬೇಗ ಮುಗಿಸಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅವರು ಅದನ್ನೇ ಮಾಡುತ್ತಿರುವುದು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಆ ಮಗುವಿಗೆ ಆಗಿರುವ ಅನ್ಯಾಯದ ಬಗ್ಗೆ ಮಾತನಾಡುತ್ತಿದ್ದೇವೆ. ನಾವು ಅವರಷ್ಟು ರಾಜಕೀಯ ಮಾಡುವುದಕ್ಕೆ ಬಂದಿರುವುದಿಲ್ಲ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅವರು ಆ ಮಗುವಿನ ಹೆಸರಿನಲ್ಲಿ ರಾಜಕೀಯ ಅತ್ಯಾಚಾರ ಮಾಡುತ್ತಿದ್ದಾರೆ. ಅವರು ಮಾತನಾಡುವುದಕ್ಕೆ ಒಂದು ಇತಿಮಿತಿ ಇಟ್ಟುಕೊಳ್ಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಅವರಿಂದ ಹೇಳಿಸಿಕೊಂಡು ಮಾತನಾಡಬೇಕಾಗಿಲ್ಲ. ಅದು ನನಗೂ ಗೊತ್ತಿದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾವು ಇಲ್ಲಿ ಅವರು ಹೇಳಿದ್ದನೆಲ್ಲಾ ಕೇಳುವುದಕ್ಕೆ ಇಲ್ಲ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾವು ಇನ್ನು ಕಾಯುತ್ತೇವೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೀವು ನನ್ನ ಮಾತಿನ ಬಗ್ಗೆ ಏನು ಹೇಳಬೇಕಾಗಿಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವು):–** ಮಾನ್ಯ ಸಭಾಪತಿಯವರೇ, ನಮಗೆ ಏನು ಅನುಮಾನವೆಂದರೆ, ಈ ಘಟನೆಯಾಗಿ ಎಂಟರಿಂದ ಹತ್ತು ದಿನವಾಗಿದೆ. ಗೃಹ ಇಲಾಖೆಯರು ಎಷ್ಟು fast ಆಗಿದ್ದಾರೆಂದರೆ, ಆರರಿಂದ ಹನ್ನೆರಡು ಗಂಟೆಗೆ ಘಟನೆಯಾದರೆ ಐನೂರು ಜನರನ್ನು ಬಂಧಿಸುತ್ತಾರೆ. ಇಲ್ಲಿ statement ಕೊಟ್ಟರೂ ಸಹ...

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿಗೆ ಬಗ್ಗೆ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ಘಟನೆಯೇ ಬೇರೆ, ಈಗ ಹೇಳುತ್ತಿರುವ ಘಟನೆಯೇ ಬೇರೆ. ಮಾನ್ಯ ಆಯನೂರು ಮಂಜುನಾಥರವರು ಮತ್ತು ಶ್ರೀಮತಿ ಭಾರತಿ ಶೆಟ್ಟಿಯವರು ಹೇಳುತ್ತಿರುವ ಉದ್ದೇಶವೇನೆಂದರೆ, ನಾವು ಮಾತನಾಡುವಾಗ ಆ ವಿಷಯದ ಬಗ್ಗೆ ಗಾಂಭೀರ್ಯತೆಯನ್ನು ಇಟ್ಟುಕೊಳ್ಳಬೇಕು. ನಾವು ರಾಜಕಾರಣಕ್ಕೆ ಹೋದರೆ, ಈ ವಿಷಯದ ಗಾಂಭೀರ್ಯತೆ ಹೋಗುತ್ತದೆ. ಅವರಿಗೆ ಈ ವಿಷಯದ ಬಗ್ಗೆ ಗಾಂಭೀರ್ಯತೆ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕಳಕಳಿ ಎಷ್ಟಿದೆ, ನಮಗೂ ಸಹ ಅಷ್ಟೇ ಕಳಕಳಿ ಇದೆ. ಇದರಲ್ಲಿ ನಾವು ಯಾರ ಮುಖ ಮುಲಾಜನ್ನು ನೋಡುವ ಪ್ರಶ್ನೆಯೇ ಇಲ್ಲ. ಮತ್ತೆ ಕೆಲವೇ ದಿನಗಳಲ್ಲಿ ಇದರ ಬಗ್ಗೆ ಏನು ಕ್ರಮವಾಗುತ್ತದೆ ಎಂಬುದನ್ನು ತಾವು ನೋಡುತ್ತೀರಿ. ಈ ವಿಷಯದ ಗಾಂಭೀರ್ಯತೆ ಕಳೆಯುವಂತೆ ಅವರು ಬೇರೆ ವಿಷಯವನ್ನು ಮಾತನಾಡಿದರೆ, ಅವರು ಏನು ಪ್ರಸ್ತಾಪ ಮಾಡಬೇಕು ಎನ್ನುತ್ತಾರೆ ಮತ್ತು ಅವರ ಪ್ರಕಾರ ಯಾರಿಗೆ ಶಿಕ್ಷೆಯಾಗಬೇಕೆಂದು ಅವರ ಉದ್ದೇಶ ಇದೆ. ಆ ಶಿಕ್ಷೆಯನ್ನು ಪ್ರತಿಪಾದಿಸುವಂತಹ ವಾದಕ್ಕೆ ಗಾಂಭೀರ್ಯತೆ ಕಳೆದುಕೊಳ್ಳುತ್ತದೆ. ನಾವು ಆ ದೃಷ್ಟಿಯಿಂದ ಹೇಳುತ್ತಿದ್ದೇವೆ. ಅವರು ರಾಜಕಾರಣ ಮಾಡಬೇಕು ಎಂದರೆ, ಅದಕ್ಕೆ ಬೇರೆ ವೇದಿಕೆ ಇದೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ರಾಜಕಾರಣ ಮಾಡುತ್ತಿಲ್ಲ. ಮಾನ್ಯ ಸಚಿವರು ಆ ಕಡೆಯಿಂದ ರಾಜಕಾರಣ ಮಾಡಿಸುತ್ತಿದ್ದಾರೆ. ನಾನು ಇದುವರೆಗೂ ಸಹ ವಿಷಯದ ಬಗ್ಗೆ ಗಾಂಭೀರ್ಯತೆಯಿಂದ ಮಾತನಾಡಿದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ಮಾನ್ಯ ಸಂಸತ್ ಸದಸ್ಯರ ಹೆಸರನ್ನು ಪ್ರಸ್ತಾಪ ಮಾಡಲಾಗಿ, ಇದು ಶುರುವಾಯಿತು.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಎಷ್ಟು ಗಾಂಭೀರ್ಯತೆಯಿಂದ ಮಾತನಾಡಿಕೊಂಡು ಬರುತ್ತಿದೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರು ಬಿಜೆಪಿ ಪದಾಧಿಕಾರಿಗಳ ಹೆಸರು ಮತ್ತು ಬೇರೆ ಬೇರೆ ಸಂಘಟನೆಗಳ ಹೆಸರನ್ನು ಹೇಳಿದಾಗಲೂ ಸಹ ನಾವು ಸುಮ್ಮನಿದ್ದೆವು. ರಾಜಕಾರಣ ಮಾಡಬೇಕಾಗಿದ್ದರೆ ಆಗಲೇ ಪ್ರಾರಂಭ ಮಾಡುತ್ತಿದೆವು. ಈ ವಿಷಯದ ಗಾಂಭೀರ್ಯತೆ ಕಡಿಮೆಯಾಗಬಾರದು ಎಂಬ ದೃಷ್ಟಿಯಿಂದ ನಾವು ಸುಮ್ಮನಿದ್ದೆವು. ಅವರು ಅದನ್ನು ವಿಸ್ತರಿಸಿಕೊಂಡು ಸಂಘಟನೆ ಮತ್ತು ಸಂಸತ್ ಸದಸ್ಯರು ಎಂದು ಹೇಳಿಕೊಂಡು ಹೋಗುತ್ತಿದಾರೆ. ಅವರು ಬೇರೆ ವಿಷಯಕ್ಕೆ ಏಕೆ ಹೋಗುತ್ತಾರೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳಿರುವುದು ಸುಳ್ಳೇ? ಹಾಗಾದರೆ ಸಂಘಟನೆ ಇಲ್ಲವೇ?

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರು ಮಾನ್ಯ ಸಂಸತ್ ಸದಸ್ಯರೆಂದು ಏಕೆ ಹೇಳುತ್ತಾರೆ? ಅವರು ವಿಷಯದ ಬಗ್ಗೆ ಹೇಳಲಿ. ಅವರು ಎಲ್ಲೆಲ್ಲೋ ಹೋಗುವುದರಿಂದ ಅದು ರಾಜಕಾರಣವಾಗುತ್ತದೆ. ಅವರು ಖಂಡಿತವಾಗಿ ರಾಜಕಾರಣ ಮಾಡುತ್ತಿದ್ದಾರೆ. ನಮಗೆ ಆ ಉದ್ದೇಶವಿಲ್ಲ. ದಯವಿಟ್ಟು ನಮಗೆ ಈ ವಿಷಯ ಗಂಭೀರತೆಯಾಗಬೇಕೆಂದು ನಾವು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಒಂದು ಉದಾಹರಣೆ ಹೇಳುತ್ತೇನೆ. ನಿರ್ಭಯಾ ಎಂಬ ಹೆಣ್ಣು ಮಗಳ ಮೇಲೆ ಆದಂತಹ ಅತ್ಯಾಚಾರದ ಸಮಯದಲ್ಲಿ ಅವರ ನಡವಳಿಕೆಯಲ್ಲಿ ಯಾವರೀತಿ ಇತ್ತು. ಇದನ್ನು ಏಕೆ ಮಾಡುವುದಕ್ಕೆ ಹೋಗುತ್ತಿಲ್ಲ?

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರು ಆ ಹೆಣ್ಣು ಮಗುವಿನ ಬಗ್ಗೆ ಹೋರಾಟ ಮಾಡಲಿ. ಅವರನ್ನು ಯಾರು ಬೇಡವೆಂದು ಹೇಳುವುದಿಲ್ಲ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಇದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೃಂಗೇರಿಯಲ್ಲಿ ಆಗಿರುವ ಘಟನೆಯ ಬಗ್ಗೆ ಹೋರಾಟ ಮಾಡಲಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವತ್ತು ಅವರ ನಿಲುವು ಯಾವರೀತಿ ಇತ್ತು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನಾವು ಹೋರಾಟ ಮಾಡಿದ್ದೇವೆ. ಆದರೆ ರಾಜಕಾರಣ ಮಾಡಿಲ್ಲ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ರಾಜಕಾರಣ ಮಾಡುತ್ತಿದ್ದಾರೆ. ನಾವು ರಾಜಕಾರಣ ಮಾಡುತ್ತಿಲ್ಲ. ನಾನು ಆಗಿರುವ ಅನ್ಯಾಯದ ಬಗ್ಗೆ ಬಹಳ ಗಂಭೀರವಾಗಿ ಮಾತನಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೆ ನಿಮ್ಮ ಮಾತನ್ನು ಬೇಗ ಮುಗಿಸಿ.

**(ಗೊಂದಲ)**

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದರ ಮೇಲೆ ಇನ್ನು ಚರ್ಚೆ ಮಾಡಬೇಕು. ನಾವೆಲ್ಲರೂ ಸಹ ಮಾತನಾಡಬೇಕು.

**ಉಪ ಸಭಾಪತಿಯವರು:-** ಆಮೇಲೆ ಕೊಡಬೇಕಾದಂತಹ ಉತ್ತರವನ್ನು ಮಾನ್ಯ ಗೃಹಮಂತ್ರಿಯವರು ಈಗಲೇ ನೀಡಿದ್ದಾರೆ. ಆರೋಪಿಗಳಿಗೆ ಶಿಕ್ಷೆ ಕೊಡಿಸುತ್ತೇವೆ ಮತ್ತು ಅವರನ್ನು ಗಲ್ಲಿಗೂ ಸಹ ಹಾಕಿಸುತ್ತೇವೆಂದು ಹೇಳಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹಸಚಿವರು ಸರಿಯಾಗಿ ಹೇಳುತ್ತಿದ್ದಾರೆ. ಮಾನ್ಯ ಸಚಿವರು ಹೇಳುತ್ತಿರುವುದು ಮತ್ತು ಅವರಿಗೆ ಎಷ್ಟು ಕಳಕಳಿ ಇದೆ ಎಂದು ನನಗೆ ಅರ್ಥವಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೆ, ಇನ್ನು ಸುಮಾರು ಜನ ನಿಮ್ಮ ಪಕ್ಷದ ಸದಸ್ಯರು ಸಹ ಮಾತನಾಡುವುದಕ್ಕೆ ಇದ್ದಾರೆ. ಆದುದರಿಂದ ನಿಮ್ಮ ಮಾತನ್ನು ಆದಷ್ಟು ಬೇಗ ಮುಗಿಸಿ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನಮಗೆ ಅವಕಾಶ ಸಿಗುತ್ತಿಲ್ಲ. ನಾವು ಸಾಕಷ್ಟು ಮಾತನಾಡುವುದು ಇದೆ.

**ಉಪ ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯಾರವರೆ, ಮಾನ್ಯ ಎಂ.ನಾರಾಯಣಸ್ವಾಮಿಯವರು ತಮ್ಮ ಮಾತನ್ನು ಮುಗಿಸಿದ ಮೇಲೆ ತಮಗೂ ಅವಕಾಶ ನೀಡುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಇದುವರೆಗೂ ಕೂಡ ಬಹಳ ಗಂಭೀರವಾಗಿ, ಆ ಹೆಣ್ಣು ಮಗಳ ಮೇಲೆ ಆಗಿರತಕ್ಕಂತಹ ಅನ್ಯಾಯವನ್ನು ಮತ್ತು ಆಕೆಗೆ ಧ್ವನಿ ಇಲ್ಲದೇ ಇರುವಂತಹ ಈ ಸಂದರ್ಭದಲ್ಲಿ ಯಾವ ರೀತಿ misuse ಆಗುತ್ತಿದೆ. ಆಕೆಯ ಧ್ವನಿಯನ್ನು ಯಾವ ರೀತಿ ಅಡಗಿಸಿದ್ದಾರೆಂದು ಇದರ ಬಗ್ಗೆ ನಾನು ಬಹಳ ಗಂಭೀರವಾಗಿ ಮಾತನಾಡುತ್ತಿದ್ದೆ. ನಾನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜಕೀಯ ಮಾಡುವುದಕ್ಕೆ ಹೋಗುತ್ತಿಲ್ಲ. ನಾನು ಏನು ಮಾತನಾಡಿದ್ದೇನೆ, ಅದಕ್ಕೆ ಅಷ್ಟೇ ಜವಾಬ್ದಾರಿ ಮತ್ತು ಕಳಕಳಿಯಿಂದ ಮಾನ್ಯ ಗೃಹ ಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದರು.

**(ಮುಂದು...)**

(170) 04.02.2021 06.00 LL-RN

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ. ನಾರಾಯಣಸ್ವಾಮಿ(ಮುಂದುವರೆದಿದ್ದು...)**

ಇರಾಜಕೀಯ ಮಾಡುವುದಕ್ಕೆ ಹಿಂದೆ ನಿಂತುಕೊಂಡು ಮಾತನಾಡುವುದಾದರೆ, ನಾವು ಕೂಡ ರಾಜಕೀಯ ಮಾಡಬಹುದು. ಆದರೆ, ನಾವು ರಾಜಕೀಯ ಮಾಡುತ್ತಿಲ್ಲ. ಈ ಘಟನೆಯಲ್ಲಿ ಯಾರು ಭಾಗಿಯಾಗಿದ್ದಾರೆ, ಅದರ ಬಗ್ಗೆ ನಾನು ಹೇಳುತ್ತಾ ಬಂದಿದ್ದೇನೆ. ಕೊನೆಯದಾಗಿ, ಹಿಂದಿನ ಘಟನೆಗಳನ್ನು ಏತಕ್ಕೆ ಇದರಲ್ಲಿ ತೆಗೆದುಕೊಂಡಿದ್ದೇನೆಂದರೆ, ಅವೊತ್ತಿನ ದಿವಸ ಆದಂತಹ ಘಟನೆಗಳಲ್ಲಿನ ತಪ್ಪಿತಸ್ಥರಿಗೆ ಶಿಕ್ಷೆ ಆಗಿರುವುದಿಲ್ಲ. ಆ ರೀತಿ ಈ ಘಟನೆಯಲ್ಲಿ ಎಲ್ಲಿ ಆಗುತ್ತದೆಯೋ ಅನ್ನುವ ಕಾಳಜಿಯಿಂದ ತೆಗೆದುಕೊಂಡಿರುತ್ತೇನೆ. ಹಾಗಾಗಿ, ಈ ಪ್ರಕರಣದಲ್ಲಿ ಸರ್ಕಾರ ತೆಗೆದುಕೊಳ್ಳುವಂತಹ ತೀರ್ಮಾನ ಯಾವ ರೀತಿ ಇರಬೇಕೆಂದರೆ, ಇನ್ನು ಮುಂದೆ ಈ ರಾಜ್ಯದಲ್ಲಿ ಇಂತಹ ಘಟನೆಗಳಿಗೆ ಯಾರು ಕಾರಣರಾಗುತ್ತಾರೋ ಅವರು ಈ ಪ್ರಕರಣದಲ್ಲಿ ಕೊಡತಕ್ಕಂತಹ ಶಿಕ್ಷೆಯನ್ನು ನೋಡಿ ಭಯಪಡಬೇಕು ಹಾಗೂ ಇನ್ನು ಮುಂದೆ ಇಂತಹ ಘಟನೆಗಳಿಗೆ ಯಾರು ಕೂಡ ಮುಂದಾಗಬಾರದು. ಅಂತಹ ಒಂದು ತೀರ್ಮಾನ ಸರ್ಕಾರದಿಂದ ಬರಬೇಕೆಂಬ ಅಪೇಕ್ಷೆಯಿಂದ ನಾನು ಮಾತನಾಡುತ್ತಿದ್ದೇನೆ. ಅದು ಯಾವುದೇ ಸರ್ಕಾರ ಇರಬಹುದು. ಇವೊತ್ತಿನ ದಿವಸ ಈ ಸರ್ಕಾರ ಅಧಿಕಾರದಲ್ಲಿರಬಹುದು, ನಾಳೆಯ ದಿವಸ ನಮ್ಮ ಸರ್ಕಾರ ಅಧಿಕಾರಕ್ಕೆ ಬರಬಹುದು. ನಮಗೆ, ಸರ್ಕಾರ ಮುಖ್ಯ, ರಾಜಕೀಯ ಅಲ್ಲ.

**ಉಪ ಸಭಾಪತಿಯವರು:–** ಆಯಿತು. ಮಾನ್ಯ ನಾರಾಯಣಸ್ವಾಮಿಯವರೇ, ಆದಷ್ಟು ಬೇಗ ತಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಯಾರ ಸಮಯದಲ್ಲಿ ಈ ಘಟನೆ ಆಗಬಾರದಿತ್ತು, ಅದು ಆಗಿ ಹೋಗಿದೆ. ಅದು ಆಗಬೇಕಾಗಿತ್ತು ಎಂದು ಆಸೆ ಪಡುವಂತಹ ಜನ ನಾವಲ್ಲ. ಅದನ್ನು ನಾನು ಹೇಳುವುದಕ್ಕೆ ಇಷ್ಟೊತ್ತು ಪ್ರಯತ್ನಪಟ್ಟಿರುತ್ತೇನೆ. ಅದನ್ನು ಹೊರತುಪಡಿಸಿ, ಯಾರ ಮೇಲೆ ನಾನು ತಪ್ಪು ಆರೋಪವನ್ನು ಹೊರಿಸಬೇಕು ಅಥವಾ ಇನ್ನೊಂದು ಮಾಡುವುದಕ್ಕೆ ಅಲ್ಲ. ಈ ಘಟನೆ ಬಗ್ಗೆ ಸರ್ಕಾರಕ್ಕೆ ಎಷ್ಟು ಕಾಳಜಿ ಇದೆಯೋ, ವಿರೋಧ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷದಲ್ಲಿ ಕುಳಿತಿರುವ ನಮಗೂ ಕೂಡ ಅಷ್ಟೇ ಕಾಳಜಿ ಇದೆ. ಅದಕ್ಕೋಸ್ಕರ ಈ ವಿಷಯದ ಮೇಲೆ ಬೆಳಕು ಚೆಲ್ಲುವ ಉದ್ದೇಶದಿಂದ ನಾನು ಇಷ್ಟು ಮಾತನಾಡಿರುತ್ತೇನೆ. ದಯಮಾಡಿ, ಮಾನ್ಯ ಸಚಿವರು ಇದರಲ್ಲಿ ಯಾವುದೇ ರೀತಿಯ ವ್ಯಕ್ತಿಗಳು ಇದ್ದರೂ ಸಹ, ಅವರು ಎಷ್ಟೇ ದೊಡ್ಡ ವ್ಯಕ್ತಿಗಳಾಗಿದ್ದರೂ ಸಹ, ತಮ್ಮ ಮೇಲೆ ಎಷ್ಟೇ ಒತ್ತಡ ಬಂದರೂ ಸಹ ತಾವು ಯಾವುದಕ್ಕೂ ಮಣಿಯದೇ ಯಾರು ನಿಜವಾದ ಅಪರಾಧಿಗಳು ಇದರಲ್ಲಿ ಭಾಗಿಯಾಗಿದ್ದಾರೆ ಅವರಿಗೆ ಸೂಕ್ತವಾದ ಶಿಕ್ಷೆಯನ್ನು ಕೊಡುವಂತಹ ಕೆಲಸ ತಮ್ಮಿಂದ ಆಗಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ವಾರ ಶೃಂಗೇರಿಯಲ್ಲಿ ವರದಿಯಾದಂತೆ, ಒಂದು ಅಮಾಯಕ, ಅಪ್ರಾಪ್ತ ಬಾಲಕಿಯ ಮೇಲೆ ನಡೆದಿರತಕ್ಕಂತಹ ಅತ್ಯಾಚಾರ ಪ್ರಕರಣ ಮನುಷ್ಯ ಕುಲಕ್ಕೆ ಒಂದು ಅಗೌರವ ಅಥವಾ ತಲೆ ತಗ್ಗಿಸುವಂತಹ ಕೆಲಸ ಆಗಿದೆ. ಜನಸಾಮಾನ್ಯರ ಅಥವಾ ಪ್ರಜಾಪ್ರಭುತ್ವವಾದ ವೇದಿಕೆಯಾಗಿರುವ ಈ ಸದನ ಕೂಡ ತಲೆ ತಗ್ಗಿಸುವಂತಹ ಕೆಲಸ ಶೃಂಗೇರಿಯಲ್ಲಿ ನಡೆದಿರುತ್ತದೆ. ಮಾನ್ಯ ನಾರಾಯಣಸ್ವಾಮಿಯವರು ಆಗಲೇ ಹೇಳಿದ ಹಾಗೆ, ಶೃಂಗೇರಿ ಎಷ್ಟು ಪವಿತ್ರವಾದ ಜಾಗವಾಗಿರುತ್ತದೆ? ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಗೃಹ ಮಂತ್ರಿಗಳು ಸಹ ಈ ಸದನದಲ್ಲಿ ಹಾಜರಿದ್ದಾರೆ. ಇದರಲ್ಲಿ ರಾಜಕಾರಣದ ಪ್ರಶ್ನೆ ಅಲ್ಲ. ನಿರ್ಭಯ ಪ್ರಕರಣ ಆದಮೇಲೆ, ಆ 'ನಿರ್ಭಯ' ಎನ್ನುವುದು ಆ ಸಂತ್ರಸ್ತ ಹೆಣ್ಣುಮಗಳ ಹೆಸರು ಆಗಿರುವುದಿಲ್ಲ. ಯಾರು ಅತ್ಯಾಚಾರಕ್ಕೆ ಒಳಗಾಗುತ್ತಾರೆ, ಅವರ ಹೆಸರು ಎಲ್ಲಿಯೂ ಸಹ ಹೊರಗಡೆ ಬರಬಾರದೆಂದು ಒಂದು ಕಾನೂನು ಆಗಿರುತ್ತದೆ. ಆದರೆ, ದುರದೃಷ್ಟವಶಾತ್ ಅನಾವಶ್ಯಕವಾಗಿ ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳ ಹೆಸರು ಬರುತ್ತಿದೆ. ಅದು ಹಿಂದೆ ಆದಂತಹ ಅತ್ಯಾಚಾರ ಇರಬಹುದು ಅಥವಾ ಕಳೆದ ವಾರ ಆದಂತಹ ಅತ್ಯಾಚಾರ ಇರಬಹುದು. ಹಾಗಾಗಿ ಇಂತಹ ವಿಷಯದಲ್ಲಿ, 'ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳ ಹೆಸರು ಎಲ್ಲಿಯೂ ಸಹ ಬರಬಾರದೆಂದು' ಸಂಬಂಧಪಟ್ಟವರಿಗೆ ಸರಿಯಾದ ಒಂದು ನಿರ್ದೇಶನವನ್ನು ನೀಡಬೇಕು. ಈ ವಿಚಾರ ಮುಗ್ಧ ಬಾಲಕಿ, ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿಗೆ ಸೇರಿದವಳಾಗಿದ್ದು, ಆ ತಾಲ್ಲೂಕು ಮಾನ್ಯ ಗೃಹ ಮಂತ್ರಿಗಳ ಪಕ್ಕದ ತಾಲ್ಲೂಕಿನಲ್ಲಿಯೇ ಇರುತ್ತದೆ. ಆಕೆ ಒಬ್ಬಳು ಅಬಲೆ ಎಂದು ಹೇಳಿದರೆ ಅದು ಬಹಳ decent word, ಅಸಹಾಯಕಿ ಅವಳು. ಆಕೆ ದುಡಿಯುವುದಕ್ಕಾಗಿ ಬಾಲ ಕಾರ್ಮಿಕಳಾಗಿ ಅಲ್ಲಿಗೆ ಬಂದಿರುತ್ತಾಳೆ. ಇದು Child Labour Act ಅಡಿಯಲ್ಲಿ ಬರುತ್ತದೆ. ಹಾಗಾಗಿ, ಆ ಕ್ರಷರ್ ಮಾಲೀಕನನ್ನು ಆತ ಯಾರೇ ಆಗಿದ್ದರೂ ಸಹ ಆತನನ್ನು ಮೊದಲು ಒಳಗಡೆ ಹಾಕಬೇಕು. ಆಗಲೇ UAPA (Unlawful

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Activities Prevention Act) ಎಂಬ ಪ್ರಕರಣದ ಬಗ್ಗೆ ಪ್ರಸ್ತಾಪಿಸಿದ್ದು, ಆ ಪ್ರಕರಣವನ್ನು ಸದರಿ ಕ್ರಷರ್ ಮಾಲೀಕನ ವಿರುದ್ಧ ಹಾಕಬೇಕು. ಅಮಾಯಕರ ಮೇಲೆ UAPA ಹಾಕುವ ಆಗಿರುವುದಿಲ್ಲ. ಆದರೆ, ಈ ಘಟನೆಯಲ್ಲಿ ಕಾನೂನನ್ನು ಕೈಗೆ ತೆಗೆದುಕೊಂಡು, ಇಂತಹ ಅಮಾಯಕ ಹೆಣ್ಣುಮಕ್ಕಳು, ಅದರಲ್ಲಿಯೂ ಸಹ ಆಕೆ ಸಣ್ಣಮಗು. ಆ ಸಣ್ಣ ಮಗುವಿನ ಮೇಲೆ ಆಗಿರತಕ್ಕಂತಹ ಅತ್ಯಾಚಾರದ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ, ನಾವೆಲ್ಲರೂ ಸಹ ಈ ಸದನದಲ್ಲಿ ಕುಳಿತಿರುವುದು ನಿಷ್ಪ್ರಯೋಜಕವಾಗಿರುತ್ತದೆ. ಈ ಸದನದಲ್ಲಿ ಕೇವಲ ಮೂರು ಜನ ಮಹಿಳಾ ಸದಸ್ಯರಿದ್ದು, ಅವರೇ ಈ ವಿಚಾರವನ್ನು ರೈಸ್ ಮಾಡುವುದಿತ್ತೆಂದು ನಾನು ತಿಳಿದುಕೊಂಡಿದ್ದೆನು. ಏಕೆಂದರೆ, ಅವರು ಒಳ್ಳೆಯ ಸಂಸ್ಕೃತಿಯಿಂದ ಬಂದಿರತಕ್ಕಂತಹವರು, **XXX** ಯವರು ಅಲ್ಲ, ಇಲ್ಲವಾದರೆ ನಾನು ಮೊದಲೇ ಎದ್ದು ನಿಂತು ಅವರು ರಾಜೀನಾಮೆ ಕೊಡಬೇಕೆಂದು ಹೇಳುತ್ತಿದ್ದೆನು.

**(ಈ ಹಂತದಲ್ಲಿ ಬಿ.ಜೆ.ಪಿ., ಪಕ್ಷದ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಶ್ರೀ ಬಿ.ಕೆ. ಹರಿಪ್ರಸಾದ್‌ರವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಲಾರಂಭಿಸಿದರು)**

**ಶ್ರೀಮತಿ ಭಾರತಿಶೆಟ್ಟಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, **XXX** ಎಂದರೆ ಏನು?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಚಡ್ಡಿ ಎಂದರೆ ಏನು?

**(ಗೊಂದಲ)**

**ಶ್ರೀ ಎಂ.ಕೆ. ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, **XXX** ಎಂದರೆ ಏನು?

**(ಗೊಂದಲ)**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, **XXX** ಎಂದರೆ ಏನು?

**(ಗೊಂದಲ)**

---

**XXX ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಚಡ್ಡಿ ಎಂದರೆ ಏನು ಎಂದು ನಾನು ಕೇಳುತ್ತಿದ್ದೇನೆ. **(ಗೊಂದಲ)** ಪೊಲೀಸ್‌ನವರು ಸಹ ಚಡ್ಡಿ ಹಾಕುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರು, ಮಾನ್ಯ ಸದಸ್ಯರು ಇಷ್ಟು ಪ್ರಮುಖರಾಗಿ **XXX** ಎಂಬ ಪದ ಬಳಕೆ ಸರಿಯಾದುದಲ್ಲ.

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, **XXX** ಎಂದು ಹೇಳುತ್ತಿದ್ದಾರೆ. ನಾಚಿಕೆ ಆಗಬೇಕು ಇವರಿಗೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪೊಲೀಸರು ಸಹ ಚಡ್ಡಿ ಹಾಕುತ್ತಾರೆ. **(ಗೊಂದಲ)** ಕೆಲವರು ಮಾತ್ರ ಚಡ್ಡಿ ಹಾಕುತ್ತಾರೆಯೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದು ಆ ರೀತಿ ಅಲ್ಲ. ಮಾತನಾಡುವ ಭರದಲ್ಲಿ ವ್ಯಂಗ್ಯವಾದಂತಹ ಮಾತುಗಳು ಸರಿಯಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೆಲವರು ಮಾತ್ರ ಚಡ್ಡಿ ಹಾಕುತ್ತಾರೆಯೇ?

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾಲಿಗೆಯಲ್ಲಿ ಎಲುಬು ಇಲ್ಲದೇ ಇರುವುದರಿಂದ ಅದು ಎಲ್ಲೆಲ್ಲಿಗೋ ಹೋಗುತ್ತಿದೆ.

---

**XXX ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, **XXX** ನಿಮ್ಮದಲ್ಲ ಎಂದು ಹೇಳಿದ್ದರಲ್ಲಾ **(ಗೊಂದಲ)** ಅದು ಸರಿಯಾದುದಲ್ಲ. ಮಾನ್ಯ ಸದಸ್ಯರು ಹಾಗೆಲ್ಲಾ ಮಾತನಾಡಬಾರದು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ತಾವು ಸಭಾನಾಯಕರಿದ್ದೀರಿ, ಚಡ್ಡಿ ಹಾಕುವುದು ಕೆಲವರದ್ದು ಮಾತ್ರ ಗುತ್ತಿಗೆಯೇ? ಬೇರೆ ಯಾರೂ ಹಾಕುವುದಿಲ್ಲವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಹರಿಪ್ರಸಾದ್‌ರವರೇ ಅದು ಆಗಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕುಂಬಳಕಾಯಿ ಕಳ್ಳ ಎಂದರೆ, ಏತಕ್ಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಷ್ಟೊಂದು ಗಂಭೀರವಾದಂತಹ ಚರ್ಚೆ ಎಂದು ಹೇಳುತ್ತಿರುವ ಮಾನ್ಯ ಹರಿಪ್ರಸಾದ್‌ರವರು ಈ ರೀತಿ ಹೇಳಬಹುದೇ?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗತಾನೆ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುತ್ತಾ, ಇದರಲ್ಲಿ ಸಂಘ ಪರಿವಾರದವರು ಅಥವಾ ಪದಾಧಿಕಾರಿಗಳು ಇದ್ದರೆಂದು ಹೇಳಿದರು. ಅವರು ಚಡ್ಡಿ ಹಾಕುವುದಿಲ್ಲವೇ?

---

**XXX ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಚಡ್ಡಿ ಹಾಕುವುದನ್ನು ಇವರಿಗೆ ಗುತ್ತಿಗೆ ಕೊಡಲಾಗಿರುತ್ತದೆಯೇ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ,..

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಹರಿಪ್ರಸಾದ್‌ರವರೇ ತಾವು ಈ ರೀತಿ ಹೇಳಿದ್ದು ನನ್ನ ದೃಷ್ಟಿಯಲ್ಲಿ ಸರಿಯಲ್ಲ. ಈ ವಿಷಯದ ಗಂಭೀರತೆ ಬಗ್ಗೆ ತಾವು ಮಾತನಾಡಿ.

**(ಗೊಂದಲ)**

**ಉಪ ಸಭಾಪತಿಯವರು:–** ಒಂದು ನಿಮಿಷ ಸಭಾನಾಯಕರೇ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ ಹರಿಪ್ರಸಾದ್‌ರವರು ಒಳ್ಳೆಯ ಸಂಸದೀಯ ಪಟು ಆಗಿದ್ದಾರೆ. ಅವರು ಪಾರ್ಲಿಮೆಂಟ್‌ನಲ್ಲಿ ಇದ್ದಂತಹವರು.

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರು ತಾವು ತಮ್ಮ ವಿಚಾರಗಳ ಬಗ್ಗೆ ಮಾತನಾಡಿ. provoke ಮಾಡಿದರೆ ಸುಮ್ಮನೆ ಸಮಯ ಹಾಳಾಗುತ್ತದೆ. **(ಗೊಂದಲ)** ಏತಕ್ಕೆಂದರೆ, ತಾವು ತಮ್ಮ ವಿಚಾರವನ್ನು ಮಂಡಿಸಿ. ಯಾರನ್ನೋ provoke ಮಾಡಿ, ಸಮಯವನ್ನು ಹಾಳು ಮಾಡುವಂತಹ ಪ್ರಯತ್ನಗಳು ಬೇಡ. **(ಗೊಂದಲ)** ತಾವು ವಿಚಾರಗಳ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದೀರಿ. ಅದನ್ನು ಮುಂದುವರೆಸಿ. **(ಗೊಂದಲ)** ಯಾವುದೋ ವಿಚಾರಗಳನ್ನು ಸದನದೊಳಗೆ ತಂದು ಸಮಯ ಹಾಳು ಮಾಡುವಂತಹ ಕೆಲಸ ಮಾಡಬೇಡಿ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು provoke ಮಾಡುವಂತಹ ವಿಚಾರ ಅಲ್ಲ. **(ಗೊಂದಲ)** ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಿದರೆ, ಯಾರ ಮೇಲೂ ಮಾತನಾಡಬಾರದೆಂದು ಹೇಳಿ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಅಮಾಯಕರೊಬ್ಬರಿಗೆ ಅನ್ಯಾಯವಾಗಿದೆ. ಅನ್ಯಾಯ ಮಾಡಿದವರಿಗೆ ಉಗ್ರವಾದ ಶಿಕ್ಷೆ ಕೊಡಬೇಕೆಂದು ಹೇಳುವುದು ಪ್ರತಿಪಕ್ಷದ ಉದ್ದೇಶವಾಗಿದ್ದು, ಅದನ್ನು ಬಿಟ್ಟು **XXX** ಬಗ್ಗೆ ಏತಕ್ಕೆ ಮಾತನಾಡುತ್ತಾರೆ?

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಚಡ್ಡಿ ಹಾಕುವುದನ್ನು ಇವರಿಗೆ ಗುತ್ತಿಗೆ ಕೊಡಲಾಗಿದೆಯೇ?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಚಡ್ಡಿ ಹಾಕುವುದು ಇವರದ್ದೇ ಗುತ್ತಿಗೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪಾರ್ಲಿಮೆಂಟ್‌ನಲ್ಲಿ ಇದ್ದಂತಹವರು. ಗಾಂಭೀರತೆ ಬಗ್ಗೆ ಗೊತ್ತಿರುವಂತಹವರು. ವಿಷಯದ ಆಳ ಏನೆಂದು ಅರಿವು ಇರುವವರು ಈ ರೀತಿ ಮಾತನಾಡುವುದು ಸರಿಯೇ? **(ಗೊಂದಲ)** ಅದು ನಮ್ಮದು ಅಲ್ಲದೇ ಇರಬಹುದು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಹಾಗಾದರೆ ಬಿಡಿ ಮತ್ತೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಾವು ಆ ರೀತಿ ಏತಕ್ಕೆ ಹೇಳುತ್ತೀರಿ?

---

**XXX ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, **XXX** ಅಂದರೆ ಏನು?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ, **XXX** ಎಂದು ಬಳಸಿರುವುದು it is not in good taste. **(ಗೊಂದಲ)** **ಇದು ಕಡತಕ್ಕೆ ಸೇರ್ಪಡೆಯಾಗುವಂಥದ್ದಲ್ಲ.** **(ಗೊಂದಲ)** **ಹಾಗಾಗಿ, ಇದನ್ನು ಕಡತದಿಂದ ತೆಗೆಯುವಂತಹ ಕೆಲಸ ಮಾಡಿ.**

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅತ್ಯಾಚಾರಕ್ಕೊಳಗಾದ ಬಾಲಕಿ ತನ್ನ ಮೇಲೆ ಸುಮಾರು 40 ರಿಂದ 50 ಜನ ಸುಮಾರು 4 ತಿಂಗಳಿನಿಂದ ಅತ್ಯಾಚಾರ ಮಾಡಿದ್ದಾರೆಂದು ಪೊಲೀಸರಿಗೆ ವರದಿ ಕೊಟ್ಟರೂ ಸಹ ಯಾರೂ ಕೂಡ ಅದರ ಮೇಲೆ ಎಫ್.ಐ.ಆರ್. ಮೊದಲು ದಾಖಲು ಮಾಡಿರುವುದಿಲ್ಲ. ಇದು ಮಾಧ್ಯಮಗಳಲ್ಲಿ ಬಂದಿರುವಂಥದ್ದು. ಇದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಇಂತಹ ಪ್ರಕರಣಗಳು ಬೆಳಕಿಗೆ ಬಂದಾಗ, ಮೊಟ್ಟಮೊದಲನೆಯ ಕೆಲಸ ಪೊಲೀಸರು ಮಾಡಬೇಕಾಗಿರುವುದು ಎಫ್.ಐ.ಆರ್. ಮಾಡಬೇಕು. ಆ ಕೆಲಸ ಮಾಡಿರುವುದಿಲ್ಲ. ಆದರೆ, ಪೊಲೀಸರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಸಾಂತ್ವನ ಕೇಂದ್ರ ಇರುತ್ತದೆ... ಈ ಬಗ್ಗೆ ಮಾನ್ಯ ಸಭಾಪತಿಯವರಿಗೆ ಬಹಳ ಚೆನ್ನಾಗಿ ಗೊತ್ತಿರುತ್ತದೆ. ಆ ಸಾಂತ್ವನ ಕೇಂದ್ರಕ್ಕೆ ಆ ಸಂತ್ರಸ್ತ ಹೆಣ್ಣು ಮಗುವನ್ನು ಬಿಡುತ್ತಾರೆ. ಅದಾದ ನಂತರ, ಇದು ನನ್ನ jurisdiction ಬರುವುದಿಲ್ಲವೆಂದು ಹೇಳಿ 2–3 ದಿವಸ ಕಳೆದ ನಂತರ ಅದು ಪೊಲೀಸ್ ಸ್ಟೇಷನ್‌ಗೆ ಹೋಗುತ್ತದೆ. ಆಗಲೂ ಕೂಡ ಸ್ಥಳೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿ ನೀಡುತ್ತಾರೆ. ಈ ಅಧಿಕಾರಿಗಳು ಪೂರ್ಣ ವಿಷಯವನ್ನು ಅರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳಿಗೆ ವಿಷಯ ತಿಳಿಸುತ್ತಾರೆ. ಈ ಅಧಿಕಾರಿ quasi

---

**XXX ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

judicial. ಅವರು ಮೊದಲೇ ಕ್ರಮವನ್ನು ಜರುಗಿಸಬೇಕಾಗಿತ್ತು. ಆ ನಂತರ ದೂರು ದಾಖಲಿಸಿಕೊಳ್ಳುತ್ತಾರಲ್ಲ ಪೊಲೀಸರು, ಇದನ್ನು ಯಾವ ರೀತಿ ಮುಂದೂಡಬಹುದೆಂಬ ಪ್ರಯತ್ನ ಮಾಡುತ್ತಾರೆಯೇ ವಿನಃ ಅಪರಾಧಿಗಳನ್ನು ಅರೆಸ್ಟ್ ಮಾಡುವುದಕ್ಕೆ ಯಾವುದೇ ಪ್ರಯತ್ನ ಮಾಡುವುದಿಲ್ಲ. ಪ್ರಸ್ತುತ ಈಗಾಗಲೇ 17 ಜನ ಆರೋಪಿಗಳನ್ನು ಅರೆಸ್ಟ್ ಮಾಡಿರುತ್ತಾರೆ. ಆ 17 ಜನರಲ್ಲಿ ಮಾನ್ಯ ನಾರಾಯಣಸ್ವಾಮಿಯವರು ಈಗಾಗಲೇ ಹೇಳಿದ ಹಾಗೆ, ಸಂಘ ಪರಿವಾರದ ಕೆಲವು ಪದಾಧಿಕಾರಿಗಳು ಇದ್ದಾರೆ, ಬಿ.ಜೆ.ಪಿ.ಯ ಯುವ ಮೋರ್ಚಾದ ಪದಾಧಿಕಾರಿಗಳು ಇದ್ದಾರೆ. ಆದುದರಿಂದ, ಅದು ಸುಮಾರು 15 ಇರಬಹುದು, 40 ಇರಬಹುದು ಅಥವಾ ಮಾಧ್ಯಮದಲ್ಲಿ ವರದಿಯಾಗಿರುವಂತೆ 40 ಅಥವಾ 50 ಇರಬಹುದು ಅವರು ಪ್ರಭಾವಿ ವ್ಯಕ್ತಿಗಳ ಸಂಬಂಧ ಇಟ್ಟುಕೊಂಡಿರುವುದರಿಂದ, ಅಲ್ಲಿ ಯಾವುದೇ ರೀತಿಯ ಕ್ರಮ ಜರುಗುತ್ತಿಲ್ಲ. ಅಲ್ಲಿರತಕ್ಕಂತಹ ಎ.ಸಿ.ಪಿ ಅಥವಾ ಎಸ್.ಪಿ. ಯವರು ಒಬ್ಬರು ಲೇಡಿ ಇರುತ್ತಾರೆ. ಆ ಮಹಿಳಾ ಅಧಿಕಾರಿ ಇದರಲ್ಲಿ ಸ್ವಲ್ಪ ಕಾಳಜಿ ವಹಿಸುತ್ತಿದ್ದಾರೆ. ಆದುದರಿಂದ, ಈ ವಿಷಯ ಸ್ವಲ್ಪ ಹೊರಗಡೆ ಬರುತ್ತಿದೆ. ಇಲ್ಲವಾದರೆ ಅದು ಸಹ ಬರುತ್ತಿರಲಿಲ್ಲ. ಈ ಅಮಾಯಕ ಹೆಣ್ಣುಮಕ್ಕಳು ಉದ್ಯೋಗವನ್ನು ಅರಿಸಿಕೊಂಡು ಬರುತ್ತಾರಲ್ಲ, ಅವರ ಮೇಲೆ ಈ ರೀತಿಯ ದುರಾಚಾರ ನಡೆಸುವುದನ್ನು ಯಾರೂ ಕೂಡ ಸಹಿಸುವುದಕ್ಕೆ ಆಗುವುದಿಲ್ಲ. ಕಾರಣ ಇಷ್ಟೇ, ಏತಕ್ಕೆಂದರೆ, ಸಂಘ ಪರಿವಾರದವರು ಎಂದರೆ, ಬಜರಂಗದಳದವರು, ವಿ.ಹೆಚ್.ಪಿ.ಯವರು ಸಹ ಬರುತ್ತಾರೆ. ಇವರು ಮಾಡತಕ್ಕಂತಹ ಕೆಲಸಗಳು ಇಂತಹದ್ದೇ ಎಂದು ಜನರಿಗೂ ಸಹ ನಿಧಾನವಾಗಿ ಗೊತ್ತಾಗುತ್ತಿದೆ. ಆದುದರಿಂದ, ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇದರಿಂದ ಕೆಲವರಿಗೆ ಬಹಳ ಮುಳ್ಳು ಚುಚ್ಚಿದ ಹಾಗೆ ಆಗುತ್ತದೆ.

(...ಮುಂದುವರೆದಿದೆ)

(171) 04.02.2021 6.10 ವೈಎಲ್–ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):–**

ಸಮಾಜಘಾತುಕ ಶಕ್ತಿಗಳು ಅಲ್ಲಿ ಸೇರಿಕೊಂಡಿವೆ. ಏಕೆಂದರೆ, ನಾನು ಆಗಾಗ ಚಿಕ್ಕಮಗಳೂರಿಗೆ ಹೋಗುತ್ತಿರುತ್ತೇನೆ. ಅಲ್ಲಿಗೆ ನಮ್ಮ ಎಂ.ಪಿ. ಫಂಡ್‌ನಿಂದ ಬಹಳಷ್ಟು ಹಣ ನೀಡಿದ್ದೇವೆ. ಹಾಗಾಗಿ ಚಿಕ್ಕಮಗಳೂರಿಗೆ ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋದಂಥ ಸಂದರ್ಭದಲ್ಲಿ, ಕಾರ್ಯಕ್ರಮವನ್ನು ಮುಗಿಸಿಕೊಂಡು ಹೊರಗೆ ಬರುವಾಗ 'ಸರ್, ಈ ರಸ್ತೆಗಳು ಹೇಗೆ ಇವೆ ಎಂದು ನೋಡಿದ್ದೀರಾ' ಎಂದು ಮಹಿಳೆಯೊಬ್ಬರು ಕೇಳಿದರು. ಆಗ ನಾನು 'ನೋಡಿದ್ದೇನಮ್ಮ. ನೋಡಿ ಎಲ್ಲೆಲ್ಲೂ ಇದೇ ರೀತಿ ಇದೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗೆ ಇಲ್ಲೆಲ್ಲೂ ಕೆಲಸವಾಗುತ್ತಿಲ್ಲ, ನೀನು ಯಾರಮ್ಮ' ಎಂದು ಕೇಳಿದ್ದೆ. ಆಗ ಆಕೆ 'ನಾವೆಲ್ಲ ನಕ್ಸಲೈಟ್ ಮೂವ್‌ಮೆಂಟ್ ನಲ್ಲಿದ್ದೇವೆ, ಸರ್' ಎಂದು ಹೇಳಿದರು. ಚಿಕ್ಕಮಗಳೂರಿನಲ್ಲಿ ನಕ್ಸಲೈಟ್ ಮೂವ್‌ಮೆಂಟ್ ಬರುತ್ತದೆ ಎಂದರೆ, ಏನಾಗಬೇಕು ಹೇಳಿ. ಆದ್ದರಿಂದ ಇಲ್ಲಿ ಯಾರನ್ನೋ ಕಾಪಾಡುವುದಕೋಸ್ಕರ, ಮಾನ್ಯ ಸಚಿವರು 'ಗಲ್ಲಿಗೆ ಏರಿಸುತ್ತೇವೆ, ಶಿಕ್ಷೆ ನೀಡುತ್ತೇವೆ' ಎಂದು ಹೇಳುವುದು ಸಹಜ, ಇಂತಹ ಘಟನೆಗಳು ಬಹಳಷ್ಟು ನಡೆಯುತ್ತವೆ. ಆದರೆ, ಕೆಲವು ಪ್ರಭಾವಿ ವ್ಯಕ್ತಿಗಳನ್ನು ರಕ್ಷಣೆ ಮಾಡುವುದಕೋಸ್ಕರ ಯಾವುದೇ ರೀತಿಯ ಪೊಲೀಸ್ ಕಾರ್ಯಾಚರಣೆ ಆಗುತ್ತಿಲ್ಲ. 4 ತಿಂಗಳ ಕಾಲ ಒಬ್ಬ ಹೆಣ್ಣು ಮಗಳ ಮೇಲೆ 'ನಿರ್ಭಯಾ' ಕೇಸ್‌ನಲ್ಲಿ ಕೇವಲ 3 ಜನರಿದ್ದರು. ಈ ಪ್ರಕರಣದಲ್ಲಿ ಈಗಾಗಲೇ 17 ಜನರನ್ನು ಬಂಧಿಸಿದ್ದಾರೆ. ಇದಕ್ಕಿಂತ ಪೈಶಾಚಿಕ ಕೃತ್ಯ ಯಾವುದು ಇಲ್ಲ. ಆದ್ದರಿಂದ ಇದೆಲ್ಲವನ್ನೂ ಮಾಡಬೇಕಾದರೆ ಯಾವುದೋ ಅದೃಶ್ಯ ಸಂಘಟನೆ ಇದರ ಹಿಂದೆ ಇದೆ. ಅವರ ಮೇಲೆ ಸರಿಯಾದ ತನಿಖೆ ನಡೆಸಿ, ಎಲ್ಲರ ಮೇಲೆ ಕ್ರಮ ಜರುಗಿಸಬೇಕು ಎಂದು ಹೇಳುತ್ತಾ, ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇಂತಹ ಘಟನೆಗಳು ದೇಶದಲ್ಲಾಗಲಿ, ರಾಜಧಾನಿಯಲ್ಲಾಗಲಿ, ರಾಜ್ಯದಲ್ಲಾಗಲಿ ಆಗೊಮ್ಮೆ, ಈಗೊಮ್ಮೆ ನಡೆಯುತ್ತಲೇ ಇದೆ. ಇದಕ್ಕೆ ಕಡಿವಾಣ ಹಾಕುವುದರಲ್ಲಿ ವಿಫಲರಾಗುತ್ತಲೇ ಇದ್ದೇವೆ. ಈ ಪ್ರಕರಣದಲ್ಲಿ ಸಹ ಪಾಪ ಸಣ್ಣ ಹೆಣ್ಣು ಮಗಳು, ಹಾವೇರಿಯಿಂದ ಅಲ್ಲಿ ದುಡಿಯುವುದಕ್ಕೆ ಬಂದ ಹೆಣ್ಣು ಮಗಳು. ನಿರ್ಭಯಾ ಪ್ರಕರಣದಲ್ಲಿ ಆಕೆ ಸತ್ತೇ ಹೋಗುತ್ತಾಳೆ. ಆದರೆ, ಈ ಪ್ರಕರಣದಲ್ಲಿ ಪಾಪ ಆಕೆ ಬದುಕಿದರೂ ಸತ್ತಂತೆ ಆಗಿದೆ. ನಾಳೆ ಆಕೆಯ ಬದುಕಿನ ಚಿತ್ರಣ ಬಹಳ ದುರ್ಮಯ ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಇಂತಹ ಪ್ರಕರಣವನ್ನು ರಾಜಕೀಯವಾಗಿ ಯಾರ್ಯಾರು ಬಳಸಿಕೊಳ್ಳುತ್ತಾರೆ, ಅವರೆಲ್ಲರ ತಪ್ಪು ಇದೆ. ಮೊದಲು ಆಡಳಿತ ಪಕ್ಷದವರು ಬಳಸಿಕೊಂಡರು ಅಷ್ಟೇ, ಈಗ ನಾವಾಗಲಿ ರಾಜಕೀಯವಾಗಿ ಬಳಸಿಕೊಂಡರೆ, ಅದು ತಪ್ಪಾಗುತ್ತದೆ. ರಾಜಕೀಯವಾಗಿ 'ನಿರ್ಭಯಾ' ಪ್ರಕರಣದಲ್ಲಿ ಏನಾಗಿದೆ? ಹಲವಾರು ಸಂಘ-ಸಂಸ್ಥೆಗಳ ಆರ್ಭಟ ಏನಿತ್ತು, ನಮ್ಮ ರಾಜ್ಯದ ವಿಷಯದಲ್ಲಿ, ಅವರು ನಮ್ಮ ರಾಜ್ಯದ ಹೆಣ್ಣು ಮಕ್ಕಳಾಗಲಿ, ನಮ್ಮ ಹೆಣ್ಣು ಮಕ್ಕಳಾಗಲಿ, ನಾವು ತಲೆತಗ್ಗಿಸುವ ಕೆಲಸ ಆಗುತ್ತದೆ ಅಲ್ಲವೇ? ಹೀಗಿರುವಾಗ ಮಾನ್ಯ ಗೃಹ ಸಚಿವರು ಪ್ರತಿಯೊಂದು ಭಾಗಕ್ಕೂ ಬೀಟ್ ಪೊಲೀಸ್‌ರನ್ನು ಹಳ್ಳಿಗಳಿಗೆ ಕಳುಹಿಸುತ್ತಿದ್ದು, ಆ ಭಾಗದ ಎಲ್ಲಾ ವಿಷಯಗಳನ್ನು ಬೀಟ್ ಪೊಲೀಸ್‌ರವರು ಸಂಗ್ರಹಣೆ ಮಾಡಿ, ಅದನ್ನು ಅವರು ಗೃಹ ಇಲಾಖೆಗೆ ತಿಳಿಸುತ್ತಾರೆ. ಗೃಹ ಇಲಾಖೆಯಲ್ಲಿ Intelligence wing ಇರುತ್ತದೆ. ಒಂದು ಹೆಣ್ಣು ಮಗಳ ಮೇಲೆ ನಾಲ್ಕು ತಿಂಗಳುಗಳಿಂದ ಅತ್ಯಾಚಾರ ನಡೆಯುತ್ತಿರುವಾಗ ಬೀಟ್ ಪೊಲೀಸ್ ಏನು ಮಾಡುತ್ತಿದ್ದ? ಇಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಷಯಗಳು ಏತಕ್ಕೆ ಅವರ ಕಿವಿಗೆ ಬೀಳುತ್ತಿರಲಿಲ್ಲ. ಹೆಚ್ಚು-ಕಡಿಮೆ ಅವರಿಗೆ ವಿಷಯ ಗೊತ್ತಿರುತ್ತದೆ. ಆ ಹಳ್ಳಿಗಳಲ್ಲಿ ಏನಾಗುತ್ತಿದೆ ಎಂಬ ಇಡೀ ಚಿತ್ರಣ ಗೊತ್ತಿರುತ್ತದೆ. ಯಾರು, ಎಂಥವರು, ಎಂತಹ ಜನರಿದ್ದಾರೆ, ಕ್ರಿಮಿನಲ್ಸ್ ಯಾರಿದ್ದಾರೆ, ದೊಡ್ಡವರು ಯಾರಿದ್ದಾರೆ, ಸಣ್ಣವರು ಯಾರಿದ್ದಾರೆ, ಏನೇನು ನಡೆಯುತ್ತಿದೆ ಎಂಬುದೆಲ್ಲಾ ಅವರಿಗೆ ತಿಳಿದಿರುತ್ತದೆ. ಹಾಗಾದರೆ, ಆ ಬೀಟ್ ಪೊಲೀಸ್ ಏನು ಮಾಡುತ್ತಿದ್ದ? ಆದರೆ, ಮೊದಲು ಈ ಪ್ರಕರಣ ಯಾರಿಗೆ ಗೊತ್ತಾಗುತ್ತದೆ? ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರಿಗೆ ಗೊತ್ತಾಗುತ್ತದೆ, ಪೊಲೀಸ್‌ನವರಿಗೆ ಗೊತ್ತಾಗುವುದಿಲ್ಲವೇ? ಪೊಲೀಸ್‌ನವರಿಗೆ ಏತಕ್ಕೆ ಗೊತ್ತಾಗಲಿಲ್ಲ? ಪೊಲೀಸ್‌ನವರು ಏನು ಮಾಡುತ್ತಿದ್ದಾರೆ? ಪಾಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯವರು ಎಫ್.ಐ.ಆರ್. ದಾಖಲಿಸಿ ಎಂದು ಹೇಳಿದರೂ, ಎಫ್.ಐ.ಆರ್. ದಾಖಲಿಸುವುದಿಲ್ಲವೆಂದರೆ, ಎಂತಹ ದುರ್ದೈವ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ? ಬೀಟ್ ಪೊಲೀಸ್‌ನವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಬೀಟ್ ಪೊಲೀಸ್ ಏನು ಮಾಡುತ್ತಿದ್ದರು, Intelligence wing ನವರು ಏನು ಮಾಡುತ್ತಿದ್ದರು? ದಯವಿಟ್ಟು ಇದನ್ನು ಕಟ್ಟುನಿಟ್ಟಾಗಿ ತೆಗೆದುಕೊಳ್ಳಲಿಲ್ಲವೆಂದರೆ, ಇಂತಹ ವಿಚಾರಗಳನ್ನು ಸೂಕ್ಷ್ಮಾತಿಸೂಕ್ಷ್ಮತೆಯಿಂದ ಅಳೆಯದೇ ಇದ್ದರೆ, ಇಂತಹ ಘಟನೆಗಳು ಮರುಕಳಿಸುತ್ತಲೇ ಇರುತ್ತವೆ. ನಿರ್ಭಯಾ ಪ್ರಕರಣದಲ್ಲಿ ಇಡೀ ದೇಶವೇ ನಲುಗಿದೆ. ಇದು ಅನಾಥ ಮಗು, ತಾಯಿ ಇಲ್ಲ, ಆಕೆಯ ಚಿಕ್ಕಮ್ಮ ಅದಕ್ಕೆ ಪ್ರೋತ್ಸಾಹ ನೀಡುತ್ತಾರೆ. ಇಂತಹ ಮಕ್ಕಳಿಗೆ ಸಂಬಂಧಿಸಿದಂತೆ ಇನ್ನೂ ಎಷ್ಟೆಷ್ಟು ಪ್ರಕರಣಗಳು ನಡೆಯುತ್ತಿವೆ ಎಂಬುದು ಗೊತ್ತಿಲ್ಲ. ಏಕೆಂದರೆ, ಇಲಾಖೆಯ Intelligence wing fail ಆದರೆ, ಬೀಟ್ ಪೊಲೀಸ್‌ನವರು ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ, ಇಂತಹ ಪ್ರಕರಣಗಳು ನಡೆಯುತ್ತವೆ. ಇವತ್ತಿನ ದಿವಸ ಸಣ್ಣ ಮಕ್ಕಳನ್ನು ದುಡಿಯುವುದಕ್ಕೆ ಕಳುಹಿಸುತ್ತಿದ್ದಾರೆ, ಕಾರ್ಮಿಕ ಇಲಾಖೆ ಮಲಗಿಕೊಂಡಿದೆಯೇ? ಕಾರ್ಮಿಕ ಇಲಾಖೆಯವರು ಏನು ಕೆಲಸ ಮಾಡಿದರು? ಇನ್ನೂ ಎಷ್ಟು ಮಕ್ಕಳು ಇಂತಹ ಕೃತ್ಯದಲ್ಲಿ ಭಾಗಿಯಾಗಿ ನಲುಗುತ್ತಿದ್ದಾರೆಯೋ ಗೊತ್ತಿಲ್ಲ. ದಯಮಾಡಿ, ಮಾನ್ಯ ಗೃಹ ಸಚಿವರಲ್ಲಿ ವಿನಂತಿಸುವುದೇನೆಂದರೆ, ಯಾರು ಎಫ್.ಐ.ಆರ್. ದಾಖಲಿಸಿಕೊಂಡಿಲ್ಲ ಅವರ ಮೇಲೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ? ಎಫ್.ಐ.ಆರ್. ಏತಕ್ಕೆ ದಾಖಲಿಸಿಕೊಳ್ಳಲಿಲ್ಲ? ಅವರನ್ನು ತಕ್ಷಣ ಅಮಾನತ್ತು ಮಾಡಿದ್ದಾರೆಯೇ? ಬೀಟ್ ಪೊಲೀಸ್‌ನವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ? ಇಂತಹ ಪ್ರಕರಣದಲ್ಲಿ ಇಡೀ ದೇಶವೇ ಮರುಗುತ್ತಿದೆ. ಇಲ್ಲಿ ನಾವೆಲ್ಲರೂ ಇಂತಹ ಘಟನೆಯಿಂದ ನೊಂದುಕೊಳ್ಳುತ್ತಿದ್ದೇವೆ. ಇಲ್ಲಿಯವರೆಗೂ ಇಲಾಖೆಯ ಮೇಲೆ ಏನೇನು ಕ್ರಮ ಕೈಗೊಳ್ಳಲಾಗಿದೆ? ಸಂಬಂಧಪಟ್ಟ ಇಲಾಖೆಯವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ, ಇಂತಹ ಪ್ರಕರಣಗಳು ನಡೆಯುತ್ತಲೇ ಇರುತ್ತವೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತಹ ದುಷ್ಕರ್ಮಿಗಳಿಗೆ ಪ್ರೋತ್ಸಾಹ ಸಿಕ್ಕಿದ ಹಾಗೆ ಆಗುತ್ತದೆ, ಅವರು ಸಹ ಏನು ಗೊತ್ತಿಲ್ಲದ ಹಾಗೆ ಆರಾಮವಾಗಿ ಕುಳಿತುಕೊಂಡಿರುತ್ತಾರೆ. ಪೊಲೀಸ್ ಇಲಾಖೆಯನ್ನು ಈ ರೀತಿ ಬಿಡುತ್ತಾ ಹೋದರೆ ಹೇಗೆ? Failure ಆಗುತ್ತಲೇ ಇದೆ. ಜನಸಾಮಾನ್ಯರನ್ನು ರಕ್ಷಣೆ ಮಾಡುವವರೇ, ಭಕ್ಷಕರಾದರೆ ಬದುಕುವುದು ಹೇಗೆ?

**ಉಪ ಸಭಾಪತಿಯವರು:-** ದಯಮಾಡಿ, ಬೇಗ ತಮ್ಮ ಮಾತನ್ನು ಮುಗಿಸಿ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಇಲ್ಲ. ಯಾರು ಬೀಟ್ ಪೊಲೀಸ್‌ನವರಿದ್ದಾರೆ, ಯಾರು ಎಫ್.ಐ.ಆರ್. ದಾಖಲಿಸಿಲ್ಲ ಅವರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದನ್ನು ಸದನಕ್ಕೆ ಮಾನ್ಯ ಗೃಹ ಸಚಿವರು ತಿಳಿಸಬೇಕಲ್ಲವೇ? ತಕ್ಷಣವೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇದರಿಂದಾಗಿ ನಾವೆಲ್ಲ ತಲೆತಗ್ಗಿಸಬೇಕಾಗಿದೆ. ಮಾನ್ಯ ಗೃಹ ಸಚಿವರು ಸಂಬಂಧಪಟ್ಟವರ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ, ಅಮಾನತುಗೊಳಿಸಿಲ್ಲವೆಂದರೆ, ಅವರ ಮೇಲೆ ನಮಗೆ ಅವಿಶ್ವಾಸ ಏತಕ್ಕೆ ಬರುವುದಿಲ್ಲ ಹೇಳಿ? ಅದರಲ್ಲಿ ಸಂಘ ಪರಿವಾರದ ಸದಸ್ಯರೆಂದು ಹೇಳುತ್ತಾರೆ, ಹೀಗಿದ್ದಾಗ ಅವರ ಮೇಲೆ ಏತಕ್ಕೆ ನಮಗೆ ಅವಿಶ್ವಾಸ ಬರುವುದಿಲ್ಲ. ಒಂದು ಇಲಾಖೆಯ ಮೇಲೆಯು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇನ್ನೂ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದನ್ನು ಹೇಳಲಿ. ಇದು ದುರ್ದೈವದ ಸಂಗತಿ. ಇಂತಹ ಅಧಿಕಾರಿಗಳನ್ನು ರಕ್ಷಣೆ ಮಾಡಿ, ಸಣ್ಣ ಮಕ್ಕಳ ಮೇಲೆ ಅತ್ಯಾಚಾರ ಮಾಡುವುದಕ್ಕೆ ಅವಕಾಶ ನೀಡುವಂಥ ಇಲಾಖೆಯಾಗದೇ, ರಕ್ಷಣೆ ನೀಡುವಂಥ ಇಲಾಖೆಯಾಗಲಿ ಎಂದು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 16.02.2016 ರಂದು ಶೃಂಗೇರಿ ತಾಲ್ಲೂಕು ವೈಕುಂಠಪುರದಲ್ಲಿ ಸ್ವಾತಿ ಎಂಬ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದ್ದಾರೆ. ಅಷ್ಟೇ ಅಲ್ಲ ಆಕೆಯನ್ನು ಕೊಲೆ ಮಾಡಿ, ಮೈ ಮೇಲಿನ ಬಂಗಾರದ ಒಡವೆಯನ್ನೆಲ್ಲಾ ತೆಗೆದುಕೊಂಡು, ಆಕೆಯನ್ನು ಹಾಳು ಬಾವಿಗೆ ಎಸೆದಿದ್ದಾರೆ. ನಾನು ನ್ಯಾಯಾಲಯದ ನಿರ್ಣಯವನ್ನು ಸ್ವಾಗತಿಸುತ್ತೇನೆ. ಅಲ್ಲಿನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಆರೋಪಿಗಳಿಗೆ ಗಲ್ಲು ಶಿಕ್ಷೆಯನ್ನು ವಿಧಿಸಿದ್ದಾರೆ. ಇಡೀ ಸಾರ್ವಜನಿಕರು ಒಕ್ಕೊರಲಿನಿಂದ ನ್ಯಾಯಾಲಯದ ತೀರ್ಪನ್ನು ಸ್ವಾಗತಿಸಿದ್ದಾರೆ. ಆ ಘಟನೆಯು ಇನ್ನೂ ಜನರ ಮನಸ್ಸಿನಲ್ಲಿ ಇರುವಾಗಲೇ, ಈ ಅಪ್ರಾಪ್ತ ವಯಸ್ಸಿನ 15 ವರ್ಷದ ಬಾಲಕಿಯ ಮೇಲೆ ಒಂದು ಸಲ ಮಾತ್ರವಲ್ಲ, ಆ ಬಾಲಕಿಯೇ 17 ಜನರ ಹೆಸರನ್ನು ಹೇಳಿದ್ದಾಳೆ. ಗೊತ್ತಿರುವಂಥ 17 ಜನರ ಹೆಸರನ್ನು ಹೇಳುತ್ತಾಳೆ. ಆದರೆ, 35 ರಿಂದ 40 ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸತತವಾಗಿ ಆ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ್ದಾರೆ. ಸುಮಾರು 4 ತಿಂಗಳು ಅಲ್ಲ 5 ತಿಂಗಳು ದಿನಾಂಕ: 01.09.2020 ರಿಂದ 27.01.2021 ರವರೆಗೂ ಅತ್ಯಾಚಾರವೆಸಗಿದ್ದಾರೆ. ದಿನಾಂಕ: 31.01.2021 ರಂದು ಪ್ರಕರಣ ದಾಖಲಾಗಿದೆ. 5 ತಿಂಗಳುಗಳ ಕಾಲ ಪೂರ್ತಿಯಾಗಿ ಸತತವಾಗಿ ಅತ್ಯಾಚಾರವೆಸಗಿದ್ದಾರೆ. ಯಾರ್‍ಯಾರು ಅತ್ಯಾಚಾರವೆಸಗಿದ್ದಾರೆ ಅವರ ಪೈಕಿ, ಆ ಹೆಣ್ಣು ಮಗಳಿಗೆ ಗುರುತಿರುವವರು 17 ಜನರು. ಆ 17 ಜನರ ಹೆಸರನ್ನು ಆ ಬಾಲಕಿ ಹೇಳಿದ್ದಾಳೆ. ಆ 17 ಜನರ ವಿರುದ್ಧ ಪೊಲೀಸ್‌ನವರು ಪ್ರಕರಣವನ್ನು ದಾಖಲಿಸಿದ್ದಾರೆ. ಅದರಲ್ಲಿಯು ಎರಡು ದಿವಸ ತಡವಾಗಿದೆ. ಪತ್ರಿಕೆಯಲ್ಲಿ ವರದಿಯಾದ ಮೇಲೆ, ದಿನಾಂಕ 31.1.2021ರಂದು ಬಾಲಕಿಯ ಹೇಳಿಕೆ ಪಡೆದು ದೂರು ದಾಖಲಿಸಬೇಕಿದ್ದ ಶೃಂಗೇರಿ ಪೊಲೀಸ್‌ನವರು ಅದರಲ್ಲೂ ಎಡವಟ್ಟು ಮಾಡಿಕೊಂಡು, ದೂರು ದಾಖಲಿಸಿಕೊಳ್ಳುವಂತೆ ಸೂಚಿಸಿದ ಜಿಲ್ಲಾ ಮಕ್ಕಳ ರಕ್ಷಣ ಸಮಿತಿ ಅಧ್ಯಕ್ಷರಾದ ಶ್ರೀ ಜಿ.ಎಸ್.ಸುಬ್ರಮಣ್ಯರವರು ದೂರು ದಾಖಲಿಸಿದ್ದಾರೆ. POCSO (Protection of Children from Sexual Offenses) ದಂತಹ ಗಂಭೀರ ಪ್ರಕರಣದಲ್ಲಿ ಪೊಲೀಸರು ನಿರ್ಲಕ್ಷ್ಯವಹಿಸಿದ್ದೇ ಇದಕ್ಕೆ ಕಾರಣವಾಗಿದೆ. ಇದಕ್ಕೆ ಬಾಲಕಿಯ ಚಿಕ್ಕಮ್ಮ 'ಗೀತಾ' ಎಂಬುವವಳು ಸಹಕಾರ ನೀಡಿದ್ದಾಳೆ. ಕಲಂ 201, 370, 375, 376(3) 376(N) ಐ.ಪಿ.ಸಿ. ಕೆಳಗೆ ಪ್ರಕರಣ ದಾಖಲಿಸಲಾಗಿದೆ.

(ಮುಂದು...)

(172)04.02.2021 /6.20/ಎಸ್‌ಕೆ-ಬಿಎನ್‌ಎಸ್

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್. ಪಾಟೀಲ್ (ಮುಂದು):-**

ಅದರ ಜೊತೆಗೆ, ಬಾಲ ನ್ಯಾಯ ಕಾಯಿದೆ 75 ಕಲಂ 4, 1, 3 ಮತ್ತು 5 POCSO (Protection of Children from Sexual Offenses) ಕಾಯಿದೆ, ITP (Immoral Traffic (Prevention)) ಕಾಯಿದೆ ಕಲಂ 6 ಮತ್ತು ಕ್ರಷರ್ ಮಾಲೀಕನ ವಿರುದ್ಧ ಬಾಲ ಕಾರ್ಮಿಕ ನಿಷೇಧ ಕಾಯಿದೆಯ ಅಡಿಯಲ್ಲಿ ಅವರ ಮೇಲೆ ದೂರು ದಾಖಲಿಸಿದ್ದಾರೆ. ಅಲ್ಲಿರುವ ಜನರಲ್ಲಿ ಎಷ್ಟೊಂದು ಆಕ್ರೋಶವಿದೆ ಎಂದರೆ, ಇವರನ್ನು ಗಲ್ಲಿಗೇರಿಸಬೇಕೆಂದು ಹೇಳುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಆದಂತಹ ರೀತಿಯಲ್ಲಿಯೇ, ಇಂತಹ ದುಷ್ಟರನ್ನು ಬಿಡಬಾರದು encounter ಮಾಡಬೇಕು. ಇಂತಹ ದೊಡ್ಡ ಪ್ರಮಾಣದಲ್ಲಿ ಜನರು ಆಕ್ರೋಶ ಮಾಡಿದರೂ ಕೂಡ ದೂರನ್ನು ದಾಖಲು ಮಾಡುವುದಕ್ಕೆ, ಅಲ್ಲಿ ಎರಡು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿವಸ ವಿಳಂಬ ಮಾಡಿದ್ದಾರೆ. ಮಾನ್ಯ ಗೃಹ ಸಚಿವರಿಗೆ ಕೇಳಬಯಸುವುದೇನೆಂದರೆ, ತಮ್ಮ ಇಲಾಖಾಧಿಕಾರಿಗಳು ಎಫ್.ಐ.ಆರ್. ದಾಖಲೆ ಮಾಡುವುದು ವಿಳಂಬವಾದರೆ, ಅದನ್ನು concocted FIR ಎನ್ನುತ್ತಾರೆ. If there is any delay in filing FIR, ಘಟನೆ ಮತ್ತು ಎಫ್.ಐ.ಆರ್. ಮಧ್ಯೆದಲ್ಲಿ ಅಂತರದಲ್ಲಿ ಸಮಯ ಹೆಚ್ಚಿದ್ದರೆ, ಇದು concocted FIR ಮಾಡಿದ ಪ್ರಕರಣ ಎಂದು ಹೇಳಿ, ಕೋರ್ಟ್‌ನಲ್ಲಿ benefit of doubt will go to the accused. ಆರೋಪಿ ಅದರ ಲಾಭವನ್ನು ಪಡೆಯುತ್ತಾನೆ. Why two days' delay, had they slept? ಇಂತಹ heinous offense and offense involving moral turpitude. ಅಪ್ರಾಪ್ತ ಬಾಲಕಿಯ ಮೇಲೆ ಇಷ್ಟೊಂದು ಹೀನಾ ಕೃತ್ಯ ನಡೆದಾಗ, ಅವಳು ಹಾವೇರಿ ಜಿಲ್ಲೆಯವಳು ಮತ್ತು ತಮ್ಮ ಮತ ಕ್ಷೇತ್ರದ ಬಾಲಕಿ. ಮಾನ್ಯ ಗೃಹ ಸಚಿವರೇ, victim is from your constituency (Shiggaon). ತಾಯಿ ಇಲ್ಲದ ತಬ್ಬಲಿ. ಅವಳು ದುಡಿಯುವುದಕ್ಕೆ ಹೋದವಳು. ತನ್ನ ಚಿಕ್ಕಮ್ಮನ ಜೊತೆ ದುಡಿಯುವುದಕ್ಕೆ ಹೋದವಳು. ಅಲ್ಲಿ ಚಿಕ್ಕಮ್ಮನು ಸಹಕಾರ ಮಾಡಿದ್ದಾಳೆ. ಅವಳಿಗೆ ಇನ್ನೊಬ್ಬರ ಜೊತೆ ಸ್ನೇಹವಾಗಿದೆ. ಅವನು ಅವಳಿಗೆ ಅತ್ಯಾಚಾರ ಮಾಡಿ, ನೀನು ಯಾರಿಗಾದರೂ ಹೇಳಿದೆ ಎಂದರೆ, ಇದನ್ನು ಸಾಮಾಜಿಕ ಜಾಲತಾಣದಲ್ಲಿ ಬಿಡುತ್ತೇನೆ. ಆಮೇಲೆ ನಿನ್ನ ಗೌರವದ ಪ್ರಶ್ನೆ ಬರುತ್ತದೆ ಎಂದು ಹಾಗೇ ಹೀಗೆ ಹೇಳಿದ್ದಾನೆ. ನಂತರ, ತನ್ನ ಗೆಳೆಯರನ್ನು ಕರೆದುಕೊಂಡು ಬಂದು ಅಪ್ರಾಪ್ತೆ ಬಾಲಕಿಯ ಮೇಲೆ ಅತ್ಯಾಚಾರ ಮಾಡಿಸಿದ್ದಾನೆ. ಮಾನ್ಯ ಸಭಾಪತಿಯವರೇ, ಈ ತರಹವಾಗಿರುವುದನ್ನು ನಾವು ಎಲ್ಲಿಯೂ ಕೇಳಿಲ್ಲ. ಈ ರೀತಿ heinous offense ಆದಾಗ; ತಾವು ಗೃಹ ಮಂತ್ರಿ. ಆದರೆ ನನಗೆ ವ್ಯಕ್ತಿಗತವಾಗಿ ತಮ್ಮ ಮೇಲೆ ಗೌರವವಿದೆ. ಆದರೆ ತಮ್ಮ ಇಲಾಖೆಯಲ್ಲಿರುವವರು ಒಳ್ಳೆಯವರಿದ್ದಾರೆಂದು ನಾನು ಈಗ ಹೇಳುವುದಿಲ್ಲ. ಪೊಲೀಸ್‌ನವರು ಎರಡು ದಿವಸ ಏನು ಮಾಡಿದರು? ಅವರು ಪ್ರಕರಣವನ್ನು ಏತಕ್ಕೆ ದಾಖಲಿಸಲಿಲ್ಲ? ಪ್ರಕರಣದಲ್ಲಿರುವ ಆರೋಪಿ ನಂ.1 ಸಂಘ ಪರಿವಾರದಲ್ಲಿ ಗುರುತಿಸಿಕೊಂಡವನು. ಮತ್ತೊಬ್ಬ ಶೃಂಗೇರಿ ತಾಲ್ಲೂಕು ಬಿ.ಜೆ.ಪಿ. ಯುವ ಮೋರ್ಚಾದ ಸದಸ್ಯನಾಗಿದ್ದಾನೆ. ಇನ್ನೊಬ್ಬ ಬಿ.ಜೆ.ಪಿ. ಪಕ್ಷದ ಜಿಲ್ಲಾ ಪಂಚಾಯಿತಿಯ ಸದಸ್ಯರೊಬ್ಬರ ಅತಿ ಸಮೀಪದ ಸಂಬಂಧಿಕ. ಮತ್ತೊಬ್ಬ ಓರ್ವ ಸಂಸ್ಥೆಯ ಸದಸ್ಯನಾಗಿದ್ದಾನೆ.

ಮಾನ್ಯ ಸಭಾಪತಿಯವರೇ, ಆ ಸಂತ್ರಸ್ಥೆ ಏನಿದ್ದಾಳೆ, ಅವಳು ಹದಿನೇಳು ಜನರ ಹೆಸರನ್ನು ಮಾತ್ರ ಹೇಳುತ್ತಾಳೆ. ಅವಳ ಮೇಲೆ ಅಂದಾಜು 35 ರಿಂದ 40 ಜನರು ಅತ್ಯಾಚಾರ ಮಾಡಿದ್ದಾರೆಂದು ಹೇಳುತ್ತಾಳೆ. ಆದರೆ ಹೆಸರು ಹೇಳುವುದಕ್ಕೆ ಆ ಬಾಲಕಿಗೆ ಗುರುತಿಲ್ಲ. ಆದರೆ ತಮ್ಮ ಗೃಹ ಇಲಾಖೆ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತದೆ? ಆ ಬಾಲಕಿ ಹದಿನೇಳು ಜನರ ಹೆಸರನ್ನು ಮಾತ್ರ ಹೇಳಿದ್ದಾಳೆ. ಹದಿನೇಳು ಜನರ ಮೇಲೆ ಪ್ರಕರಣವನ್ನು ದಾಖಲಿಸಿ. ಬಹುತೇಕ ಹದಿನೇಳು ಜನರಲ್ಲಿ ಇನ್ನು ಕೆಲವರು ಅರೆಸ್ಟ್ ಆಗುವವರು ಇದ್ದಾರೆ. ಕೆಲವರು ತಪ್ಪಿಸಿಕೊಂಡು ಹೋಗಿದ್ದಾರೆ. ಆದರೆ ಎಂಟು ಜನರು ಮಾತ್ರ ಅರೆಸ್ಟ್ ಆಗಿದ್ದಾರೆ. ಉಳಿದವರು ಎಲ್ಲಿ ಹೋಗಿದ್ದಾರೆ? ಅಲ್ಲಿರುವ ಜನರು ಸರ್ವೇ ಸಾಮಾನ್ಯವಾಗಿ ಏನು ಮಾತನಾಡುತ್ತಾರೆಂದರೆ, ಈ ಪ್ರಕರಣವನ್ನು ಮುಚ್ಚಿ ಹಾಕುತ್ತಾರೆ. ಈ ಪ್ರಕರಣವನ್ನು ಸರಿಯಾಗಿ ತನಿಖೆ ಮಾಡುವುದಿಲ್ಲ. ಮಾನ್ಯ ಸಚಿವರು, 'we will send them to gallows' ಎಂದು ಹೇಳಿದ್ದನ್ನು ನಾನು appreciate ಮಾಡುತ್ತೇನೆ. ಈಗಾಗಲೇ ಅದೇ ಜಿಲ್ಲೆಯಲ್ಲಿ ಸ್ವಾತಿಯನ್ನು ಅತ್ಯಾಚಾರ ಮಾಡಿದಾಗ, ಗಲ್ಲು ಶಿಕ್ಷೆಯಾಯಿತು. ಅದೇ ರೀತಿ ಈ ಪ್ರಕರಣದಲ್ಲಿಯೂ ಗಲ್ಲು ಶಿಕ್ಷೆಯನ್ನು ಮಾಡುತ್ತೇವೆ. ಎಫ್.ಐ.ಆರ್. ನಲ್ಲಿ 17 accused and others ಎಂದು ದಾಖಲಿಸಿರುತ್ತಾರೆ. ಉಳಿದವರನ್ನು ತನಿಖೆ ಮಾಡಬೇಕಲ್ಲ. ಈಗಾಗಲೇ ಎಂಟು ಆರೋಪಿಗಳನ್ನು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಅವರನ್ನು interrogation ಮಾಡಲಿ ಮತ್ತು investigation ಮಾಡಲಿ. ಆಗ ಮೂವತ್ತೈದು ಜನರಲ್ಲ, ನೂರು ಮಂದಿ ಇದ್ದರೂ ಅವರು ಹೇಳುತ್ತಾರೆ. ತನಿಖೆ ಮಾಡುವ ಸಮಯದಲ್ಲಿ ಏನಾಗುತ್ತದೆಂದರೆ, ಅವರು ದೊಡ್ಡ ದೊಡ್ಡ ವ್ಯಕ್ತಿಗಳ ಸಂಬಂಧಿಕರು,

**ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):-** ಬೀಟ್ ಮಾಡುವ ಪೊಲೀಸ್ ಏನು ಇರುತ್ತಾನಲ್ಲ, ಅವನು ಅವರನ್ನು ಅರೆಸ್ಟ್ ಮಾಡಿ ಕೇಳಿದರೆ ಎಲ್ಲಾ ವಿಚಾರವನ್ನು ಹೇಳುತ್ತಾನೆ. ಆ ಊರಿನಲ್ಲಿ ಏನು ನಡೆಯುತ್ತಿರುತ್ತದೆ ಎಂಬುದರ ಬಗ್ಗೆ ಅವನಿಗೆ ಮಾಹಿತಿ ಇರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಬೀಟ್ ಪೊಲೀಸ್ ಊರಿಗೆ ಹೋದರೆ ತಾನೇ ಏನು ಹೇಳುತ್ತಾನೆಂದು ಗೊತ್ತಾಗುತ್ತದೆ. ಪೊಲೀಸ್ ಅಧಿಕಾರಿಗಳು ಈ ಗ್ರಾಮಕ್ಕೆ ಬೀಟ್ ಮಾಡಲು ಹೋಗಪ್ಪಾ ಎಂದು ಹೇಳುತ್ತಾರೆ. ಅವರು ಹೋಗಿರಬೇಕಲ್ಲವೇ? ಮಾನ್ಯ ತಿಮ್ಮಾಪೂರರವರು ಹೇಳಿದ ಹಾಗೆ ತಾವು ಮಾಹಿತಿಯನ್ನು ತೆಗೆಯಿರಿ. ಅವರ ಬಳಿ ಮಾಹಿತಿ ಇರುತ್ತದೆ. ಮಾಹಿತಿ ಇರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇಂತಹ ಘಟನೆಯಾದಾಗ ಮಾಹಿತಿ ಇದ್ದೇ ಇರುತ್ತದೆ. ಇದು ಒಂದು ದಿವಸದಲ್ಲಿ ಆಗಿರುವಂತಹ ಘಟನೆಯಲ್ಲವಲ್ಲ. ಸತತವಾಗಿ ಐದು ತಿಂಗಳು ಆಗಿದೆ ಎಂದು ಆ ಬಾಲಕಿ ಹೇಳಿದ್ದು. ಕ್ರಷರ್‌ನಲ್ಲಿ ಆ ಬಾಲಕಿ ದುಡಿಯುವುದಕ್ಕೆ ಹೋಗಿದ್ದಳು. ಆ ಎಂ.ಜಿ.ಆರ್. ಕ್ರಷರ್ ಮಾಲೀಕ ಹದಿನೈದು ವರ್ಷದ ಮಕ್ಕಳನ್ನು ಬಾಲಕಾರ್ಮಿಕರನ್ನು ದುಡಿಮೆಗೆ ಇಟ್ಟಿದ್ದಾನೆ. ಮತ್ತೆ ಆಕೆಯ ಎಂತಹ ಚಿಕ್ಕಮ್ಮ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನನ್ನನ್ನು ಕೇಳಿದರೆ, ಅವಳು ರಾಕ್ಷಸಿ. ಆ ರಾಕ್ಷಸಿ ಇದಕ್ಕೆ ಸಹಕಾರ ಮಾಡುತ್ತಾಳೆಂದರೆ, ಅದು ಒಂದು ದಿವಸದ ಘಟನೆಯಲ್ಲ. ಸತತವಾಗಿ ಐದು ತಿಂಗಳವರೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪ್ರಾಪ್ತೆ ಬಾಲಕಿಯ ಮೇಲೆ 30-40 ಜನರು continuous ಆಗಿ ಅತ್ಯಾಚಾರ ಮಾಡಿದರೆ ಆ ಮಗುವಿನ ಪರಿಸ್ಥಿತಿ ಏನಾಗಿರಬಾರದು? ಅದನ್ನು ನೆನಪಿಸಿಕೊಂಡರೆ, ನನಗೆ ನಡುಕ ಬರುತ್ತದೆ. ಈ ತರಹ ಪ್ರಕರಣವಾದಾಗ, ತಮ್ಮ ಇಲಾಖೆಯವರನ್ನು tighten ಮಾಡಬೇಕು. ಇವರೆಲ್ಲಾ ಏನು ಮಾಡುತ್ತಾರೆ? ಸಣ್ಣ-ಪುಟ್ಟ ಜಗಳವಾಗಿರುತ್ತದೆ. Petty offenses ಆಗಿರುತ್ತದೆ. ಆಯಿತು, ಅವರವರನ್ನು ಕರೆದು ಬುದ್ಧಿ ಹೇಳಿ, ಮುಂದೆ ಈ ರೀತಿ ಮಾಡಬಾರದು ಎಂದು ಹೇಳಿ, ಜೋರು ಮಾಡಿ ಕಳುಹಿಸುವಂತಹ ವ್ಯವಸ್ಥೆ ಆಗಿರುತ್ತದೆ. ಇಂತಹ heinous offense ಆಗಿದ್ದು, ಅನಾಥವಾಗಿರುವ ಅಪ್ರಾಪ್ತೆ ಬಾಲಕಿಯು ಮತ್ತೊಂದು ಜಿಲ್ಲೆಗೆ ದುಡಿಯುವುದಕ್ಕೆ ಹೋದಂತಹವಳ ಮೇಲೆ ಸತತವಾಗಿ 35-40 ಜನರು ಅತ್ಯಾಚಾರವನ್ನು ಐದು ತಿಂಗಳವರೆಗೆ ಮಾಡಿದರು. ತಮ್ಮ ಇಲಾಖೆಯಲ್ಲಿರುವ ಪೋಲೀಸ್‌ನವರು ಏನು ನಿದ್ದೆ ಮಾಡುತ್ತಿರೆಯೇ? ನನ್ನ ದೃಷ್ಟಿಯಲ್ಲಿ ಇಲಾಖೆಯ ಮಾನ-ಮಾರ್ಯಾದೆ ಕಳೆದ ಹಾಗೇ. ಆದರೆ ಯಾವುದೋ ಘಟನೆಯಾಗಿದ್ದರೆ ಅದು ಬೇರೆ ವಿಚಾರ. ಒಂದು occurrence ಅಲ್ಲ. ಇದು continuous ಆಗಿರುವಂತಹದ್ದು. ಮಾನ್ಯ ಭಾರತಿ ಶೆಟ್ಟಿಯವರೇ, ಸತತವಾಗಿ ಆಗಿರುವಂತಹದ್ದು...

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. ಒಂದು ಹೆಣ್ಣು ಮಗುವಿನ ಅತ್ಯಾಚಾರದ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಆ ಬಾಲಕಿಗೆ ಆಗಿರುವಂತಹ ಅನ್ಯಾಯದ ಬಗ್ಗೆ ಎಲ್ಲರಿಗೂ ಕನಿಕರವಿದೆ. ಅದನ್ನು ನಾವು ಎಲ್ಲರೂ ಖಂಡಿಸುತ್ತೇವೆ. ಆದರೆ ಎಲ್ಲರಿಗೂ ಜನ್ಮ ಕೊಟ್ಟವಳು ಹೆಣ್ಣು. ಆ ಅತ್ಯಾಚಾರದ ಬಗ್ಗೆ ತಾವು ಎಷ್ಟು ಬಾರಿ ಉಲ್ಲೇಖ ಮಾಡಿದಿರಿ? ಅದನ್ನು ಎಷ್ಟು ಬಾರಿ ಪುನಃ ಹೇಳುತ್ತೀರಿ? ಅಲ್ಲಿ ಈಗಾಗಲೇ ಅತ್ಯಾಚಾರವಾಗಿದೆ. ಯಾರೋ ಪಾಪಿಗಳು ಅತ್ಯಾಚಾರವನ್ನು ಮಾಡಿದ್ದಾರೆ. ಅವರ ಬದುಕಿನ ಅತ್ಯಾಚಾರವನ್ನು ಈ ವೇದಿಕೆಯಲ್ಲಿ ಪದೇ ಪದೇ ಏಕೆ ಹೇಳುತ್ತೀರಾ? **(ಗೊಂದಲ)** ಅದೇ ವಿಷಯವನ್ನು ಎಷ್ಟು ಸಾರಿ ಹೇಳುತ್ತೀರಾ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ನಾವು ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತಿರಬೇಕೆ?

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಆಗಿರುವ ಘಟನೆಯ ಬಗ್ಗೆ ತಾವು ಧ್ವನಿಯನ್ನು ಎತ್ತಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಒಬ್ಬ ಬಾಲಕಿಯ ಮೇಲೆ ಅತ್ಯಾಚಾರವಾಗಿರುವಂತಹದ್ದನ್ನು ತಾವು ಖಂಡಿಸಬೇಕು.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಇದನ್ನು ತಾವು ಮಾತನಾಡಬೇಕಾಗಿತ್ತು.

**(ಗೊಂದಲ)**

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರು ಒಬ್ಬ ಹೆಣ್ಣಾಗಿ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ನಾವು ಏತಕ್ಕೆ ಹೇಳುತ್ತೇವೆಂದರೆ, ಇಲಾಖೆ (ಗೊಂದಲ) ನೋಡಿ. I will not yield now. ಮಾನ್ಯ ಗೃಹ ಸಚಿವರೇ, ಇಲಾಖೆಯ ಮೇಲೆ ಗಮನಹರಿಸಬೇಕು. ಇಂತಹ ಪ್ರಕರಣವಾದಾಗ, ಬಹಳ vigilant ಆಗಿ ಇರಬೇಕು. Investigation should be very fast. ಯಾರೇ culprits ಇರಲಿ, ಎಲ್ಲಿಯೇ ಇರಲಿ, wherever they may be, ಭೂ ಗರ್ಭದಲ್ಲಿಯೇ ಇರಲಿ, ಅವನನ್ನು ಹಿಡಿದು, ಕಸ್ಟಡಿಗೆ ತೆಗೆದುಕೊಳ್ಳಬೇಕು. ಈಗ ಹದಿನೇಳು ಜನರಲ್ಲಿ ಕೆಲವರು ಸಿಕ್ಕಿದ್ದಾರೆ. ಇನ್ನು ಕೆಲವರು ತಪ್ಪಿಸಿಕೊಂಡಿದ್ದಾರೆ. ಪೊಲೀಸ್‌ನವರಿಗೆ ಯಾರನ್ನು ಎಲ್ಲಿ, ಹೇಗೆ ಹಿಡಿಯಬೇಕು ಎಂಬುದು ಗೊತ್ತಿರುತ್ತದೆ. ಅವರು ಮನಸ್ಸು ಮಾಡಿದರೆ, ಏನೂ ಬೇಕಾದರೂ ಮಾಡುತ್ತಾರೆ. ಅವರು interrogation ಮಾಡಿದಾಗ, 17 ಜನರನ್ನು ಸೇರಿಸಿಕೊಂಡು 35 ಜನ ಏನೋ ಇದ್ದಾರಲ್ಲ, ಆ ಮಗುವಿಗೆ ಗೊತ್ತಿರದ ಮೂವತ್ತೈದು-ನಲವತ್ತು ಜನರನ್ನು ಅರೆಸ್ಟ್ ಮಾಡಬೇಕು. They should be booked and they should be brought under all those Sections. ಮಾಡಬೇಕಲ್ಲವೇ? ಎರಡು ದಿವಸ ತಡವಾಗಿದ್ದಕ್ಕೆ, ತಾವು ವಿವರಣೆಯನ್ನು ನೀಡಬೇಕಾಗುತ್ತದೆ. ಪೊಲೀಸ್ ಇಲಾಖೆಯವರು ಪ್ರಕರಣವನ್ನು ದಾಖಲಿಸುವುದಕ್ಕೆ ಎರಡು ದಿನ ತಡ ಮಾಡುತ್ತಾರೆ. ಪತ್ರಿಕೆಯಲ್ಲಿ ವರದಿ ಬಂದ ನಂತರ ಪೊಲೀಸ್‌ನವರು ಪ್ರಕರಣವನ್ನು ದಾಖಲಿಸುತ್ತಾರೆ. ಇದು ಬಹಳ ಆಶ್ಚರ್ಯವಾಗಿದೆ. ಮಾನ್ಯ ಗೃಹ ಸಚಿವರೇ, ತಮ್ಮ ಮತ ಕ್ಷೇತ್ರದಲ್ಲಿ, victim is from your Constituency. ತಮ್ಮ ಮತ ಕ್ಷೇತ್ರದ ಮಗುವಿದು. ತಾವು ನಮ್ಮ ಭಾಗದವರು. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. You tighten the Police Department. ಯಾರು culprit ಇದ್ದಾರೆ ಮತ್ತು ಯಾರು delay ಮಾಡಿದ್ದಾರೆ, to file

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the complaint and to send the FIR, ಇದಕ್ಕೆ whoever is responsible, you suspend them.

(ಮುಂದು)

(173)04.02.2021/6.30/ಎಂ.ಎಂ–ಜಿ.ಆರ್

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್. ಪಾಟೀಲ್ (ಮುಂದು):–**

ಅವರ ಮೇಲೆ ಸರಿಯಾದ ಕ್ರಮ ಜರುಗಿಸಬೇಕು. ಮುಂದೆ ಇಂತಹ heinous and moral turpitude involve ಆಗುವಂತಹ offense ಬಂದಾಗ ತಕ್ಷಣವೇ without delay of a minute, they should take action. A case filed under Section 302, I.P.C., for murder ಗಿಂತ ಬಹಳ heinous case ಇದು. ನಾನು ಬಹಳ ಮಾತನಾಡುವುದಕ್ಕೆ ಹೋಗುವುದಿಲ್ಲ. ಪ್ರಾರಂಭದಲ್ಲಿಯೇ ತಾವು ಯಾರು ತಪ್ಪಿತಸ್ಥರಿದ್ದಾರೆ I will send them to the Gallous ಎಂದು ಹೇಳಿದಿರಿ. ಗಲ್ಲಿಗೆ ಹಾಕಿಸುವುದಕ್ಕೆ ಏನೇನು ಪ್ರಯತ್ನ ಮಾಡಬೇಕು ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಎಂದಿದ್ದನ್ನು ನಾವು ಸ್ವಾಗತ ಮಾಡುತ್ತೇವೆ. ಏಕೆಂದರೆ you are the Complainant now. ಸಂತ್ರಸ್ತೆ ನಿಮ್ಮಲ್ಲಿಯೇ ಇರುವುದರಿಂದ ನೀವೇ Complainant ಇದ್ದು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಮಾಡಿ. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ನೆನಪಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಹೀಗೆ ಒಂದು ಹೆಣ್ಣುಮಗಳ ಮೇಲೆ ಅತ್ಯಾಚಾರವಾದಂತಹ ಸಂದರ್ಭದಲ್ಲಿ ಆಗ ಮಾನ್ಯ ನಿಜಲಿಂಗಪ್ಪನವರ ಮುಖ್ಯಮಂತ್ರಿಯಾಗಿದ್ದರು. ಅದರ ಬಗ್ಗೆ ಬಹಳಷ್ಟು ಸುದೀರ್ಘವಾದಂತಹ ಚರ್ಚೆಯಾಯಿತು. ಚರ್ಚೆಯಾಗಿ ನಾವು ಕ್ರಮ ಜರುಗಿಸುತ್ತೇವೆ, ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ತಪ್ಪಿತಸ್ಥರನ್ನು we will not allow to escape from the clutches of law, we will book them and we will punish them ಎಂದು ಗೃಹ ಮಂತ್ರಿಗಳು ಬಹಳ ಉತ್ತರ ಹೇಳಿದರಂತೆ. ಆಮೇಲೆ ಪ್ರತಿಪಕ್ಷದಲ್ಲಿದ್ದವರು ಆ ಹೆಣ್ಣು ಮಗು ನಿಮ್ಮ ಕುಟುಂಬದ ಸದಸ್ಯರಾಗಿದ್ದರೆ ಏನು ಮಾಡುತ್ತಿದ್ದಿರಿ ಎಂದು ಒಂದು ಮಾತನ್ನು ಕೇಳಿದರಂತೆ. ಆಗ ತಕ್ಷಣವೇ ಗೃಹಮಂತ್ರಿಗಳು ಏನನ್ನೂ ಮಾತನಾಡಲಿಲ್ಲವಂತೆ. ಅಲ್ಲಿಯೇ ಒಂದು ಪೇಪರ್ ತೆಗೆದುಕೊಂಡು ತಮ್ಮ ರಾಜೀನಾಮೆಯನ್ನು ಬರೆದು ಅಲ್ಲಿಯೇ ಇಟ್ಟು ಸದನದಿಂದ ಹೊರಗೆ ಹೋದರಂತೆ. ಅವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತುಮಕೂರಿನ ರಾಮರಾವ್‌ರವರು. ಅವರು ಮುಂದೆ ಅದಕ್ಕೆ ಏನೂ ರಿಪ್ಲೈ ಮಾಡುವುದಕ್ಕೆ ಹೋಗಲಿಲ್ಲ, ಉತ್ತರವನ್ನೂ ಕೊಡಲಿಲ್ಲವಂತೆ. ಒಂದು ಪೇಪರ್ ತೆಗೆದುಕೊಂಡು ತಮ್ಮ ಗೃಹಮಂತ್ರಿ ಸ್ಥಾನಕ್ಕೆ ರಾಜೀನಾಮೆ ಬರೆದು ಮುಖ್ಯಮಂತ್ರಿಯವರ ಕೈನಲ್ಲಿ ಕೊಟ್ಟು ಉತ್ತರ ಹೇಳಲಾರದೇ ಸದನದಿಂದ ಹೊರಗೆ ಹೋದರಂತೆ. ಆ ಮಗು ನಿಮ್ಮ ಕುಟುಂಬದ ಸದಸ್ಯರಾಗಿದ್ದರೆ ಹೇಗೆ ಎಂದು ಪ್ರತಿಪಕ್ಷದಿಂದ ಬಂದ ಒಂದೇ ಒಂದು ಪ್ರಶ್ನೆಗೆ ಆ ರೀತಿ sensitive ಆಗಿ owing to the moral respoinsibility ಅಷ್ಟು ನೋವಿನಿಂದ ಅವರು ರಾಜೀನಾಮೆ ಕೊಟ್ಟು ಹೋದವರು ಪುನಃ ಆ ಸ್ಥಾನಕ್ಕೆ ಬರಲಿಲ್ಲ ಎನ್ನುವಂತಹ ಉದಾಹರಣೆಗಳು ನಮ್ಮ ರಾಜ್ಯದಲ್ಲಿಯೇ ಇವೆ. ಶ್ರೀ ರಾಮರಾವ್ ಎನ್ನುವವರು ಅಂದಿನ ಗೃಹ ಮಂತ್ರಿಗಳು. ಏನೋ ಒಂದೆರಡು ಸಲ ಅತ್ಯಾಚಾರವು ಶಬ್ಧ ಬಳಸಿದರೆ ಏತಕ್ಕೆ ಹೇಳುತ್ತೀರಿ ಎಂದು ಈ ಸದನದ ಸದಸ್ಯರು ನನ್ನ ಮೇಲೆಯೇ ತಿರುಗಿ ಬೀಳುತ್ತಾರೆ. ನೋವಿನಿಂದ ಆ ಮಾತನ್ನು ಹೇಳಿದ್ದೇನೆ. ಆ ಮಗುವಿಗೆ, ಆ ಮಗುವಿನ ಸಂಬಂಧಿಕರಿಗೆ ನೋವು ಮಾಡಬೇಕೆನ್ನುವ ಉದ್ದೇಶ ನನಗಿಲ್ಲ. We have to take it in a good spirit. ಅದರ ಗಂಭೀರತೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅದನ್ನು ಬಿಟ್ಟು ಒಬ್ಬ ಮಹಿಳೆಯಾಗಿ ಈ ರೀತಿ ಮಾತನಾಡುವುದು ನಿಮಗೂ ಕೂಡ ಶೋಭೆಯಲ್ಲ ಎನ್ನುವ ಮಾತನ್ನು ಹೇಳಿ ತಮ್ಮ ಮುಖಾಂತರ ಈ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಾನು ನೇರವಾಗಿ ಹೇಳುತ್ತೇನೆ you don't take it lightly and you should take it very seriously. ಇದರಲ್ಲಿ ಯಾರ್‍ಯಾರು ಪೊಲೀಸ್ ಅಧಿಕಾರಿಗಳು ತಪ್ಪಿತಸ್ಥರಿದ್ದಾರೆ ಅವರ ಮೇಲೆಯೂ ತೀಕ್ಷ್ಣವಾದಂತಹ ಕ್ರಮ ಕೈಗೊಳ್ಳಬೇಕು, ಅದರ ಜೊತೆಗೆ 17 ಜನರಲ್ಲಿ ಕೆಲವು ಜನರನ್ನು ಅರೆಸ್ಟ್ ಮಾಡಿದ್ದಾರೆ ಉಳಿದವರನ್ನು ಬೇಗನೆ within a week ಎಷ್ಟು ಜನರಿದ್ದಾರೆ ಎಲ್ಲರನ್ನೂ ತಂದು ಕಸ್ಟಡಿಯಲ್ಲಿ ಹಾಕಿ. ಚಿಕ್ಕಮಗಳೂರಿನ 'ಸ್ವಾತಿ' ಪ್ರಕರಣದಲ್ಲಿ ಗಲ್ಲು ಶಿಕ್ಷೆಯಾದ ರೀತಿಯಲ್ಲಿ ಗಲ್ಲು ಶಿಕ್ಷೆಯಾದರೆ ಈ ಸದನದ ಎಲ್ಲಾ ಸದಸ್ಯರಿಗೂ ನ್ಯಾಯ ಒದಗಿಸಿದ ಹಾಗೆ ಆಗುತ್ತದೆ ಎನ್ನುವಂತಹ ಮಾತನ್ನು ಹೇಳಿ, ನನಗೆ ನಂಬಿಕೆಯಿದೆ, ವಿಶ್ವಾಸವಿದೆ, ಸಂತ್ರಸ್ತೆ ನಿಮ್ಮ ಮತಕ್ಷೇತ್ರದ ಮಗು ಆಗಿರುವುದರಿಂದ ನೀವು ನಿಶ್ಚಿತವಾಗಿಯೂ ಹಿಂದಿನ ಗೃಹ ಮಂತ್ರಿಯವರ ವಿಚಾರವನ್ನು ನೆನಪಿಸಿಕೊಂಡು ಇಲ್ಲಿ ಕ್ರಮ ಕೈಗೊಳ್ಳುತ್ತೀರೆಂದು ಭಾವಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ: ತೇಜಸ್ವಿನಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕೆ ತಮಗೆ ಧನ್ಯವಾದಗಳು. ಅತ್ಯಂತ ಮಹತ್ವವಾದ ವಿಚಾರವನ್ನು ಪ್ರತಿಪಕ್ಷದಿಂದ ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹೋದ್ಯೋಗಿಗಳು ಎತ್ತಿದ್ದಾರೆ. ಹಾವೇರಿಯಲ್ಲಿ ಒಂದು ಅಪ್ರಾಪ್ತ ಮಗುವಿನ ಮೇಲೆ ನಡೆದಂತಹ ಲೈಂಗಿಕ ದೌರ್ಜನ್ಯ ಮತ್ತೊಂದು ಕಡೆ ಬಾಲ ಕಾರ್ಮಿಕಳದ್ದು, ಮತ್ತೊಂದು ಕಡೆ ರಕ್ಷಣೆ ಕೊಡಬೇಕಾದ ತಾಯಿಯ ಸ್ಥಾನದಲ್ಲಿದ್ದಂತಹ ಮತ್ತೊಂದು ಹೆಣ್ಣೇ ಅಂತಹ ದೌರ್ಜನ್ಯಕ್ಕೆ ದೂಡಿದಂತಹ ದುರಂತವನ್ನು ನಾವು ನೋಡುತ್ತಿದ್ದೇವೆ. ಇದೆಲ್ಲಾ ಮೀರಿದಂತೆ ನಾಲ್ಕನೆಯದು ದೌರ್ಜನ್ಯವನ್ನು ಅನುಭವಿಸಿದ ಮಗು ದೌರ್ಜನ್ಯವಾಗಿದೆಯೆಂದು ರಕ್ಷಣೆ ಕೋರುವುದಕ್ಕೆ ಹೋದರೆ ಅಲ್ಲಿ ಆದಂತಹ ಅನ್ಯಾಯ ಅದು ಮತ್ತೊಂದು ದೌರ್ಜನ್ಯ. ರಾಜಕಾರಣದಲ್ಲಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಇದು ನಾಗರೀಕತೆಯ ವಿರುದ್ಧ ನಡೆದ ಅಪರಾಧವಾಗಿದೆ. ಇದು ಮಾನವೀಯತೆಯ ವಿರುದ್ಧ ಮತ್ತು ಒಂದು ಹೆಣ್ಣಿನ ವ್ಯಕ್ತಿತ್ವ, ರಕ್ಷಣೆ ಏನಿದೆ ಅದರ ವಿರುದ್ಧ ನಡೆದ ದೌರ್ಜನ್ಯವಾದ್ದರಿಂದ ಅತ್ಯಂತ ಕಠೋರವಾದ ಶಬ್ಧದಲ್ಲಿ ನಾವು ಇದನ್ನು ಖಂಡಿಸುತ್ತೇವೆ ಮಾತ್ರವಲ್ಲ ನಮ್ಮ ಸರ್ಕಾರ; ನಾನು ಮೊನ್ನೆಯೇ ಹೇಳಿದ್ದೇನೆ, ಭಯೋತ್ಪಾದನೆ ಕುರಿತು ಹೇಗೆ 'zero tolerance' ಎಂದು ಹೇಳಿದ್ದೇವೆ, ಹೆಣ್ಣಿನ ವಿರುದ್ಧ ಮಾತ್ರವಲ್ಲ ಯಾವುದೇ ಅಪರಾಧದ ಬಗ್ಗೆ 'zero tolerance' ಅನ್ನು ಹೊಂದಿರುವಂತಹ ಸರ್ಕಾರ ಇದಾಗಿದೆ. ನನಗೆ ನಂಬಿಕೆಯಿದೆ, ನಮ್ಮ ಅನೇಕ ಸಹೋದರರು ಕೂಡ ನಮ್ಮ ಬಳಿ ವ್ಯಕ್ತ ಮಾಡುತ್ತಿದ್ದರು ಯಾವ ಕಾರಣಕ್ಕೂ; ದುಃಖವಾಗುವುದು ಯಾರದೋ ಪ್ರಮುಖ ವ್ಯಕ್ತಿಯ ಸಂಬಂಧ; ಅವನು ತಪ್ಪು ಮಾಡಿದರೆ ಅವನು ಯಾರೋ ಒಂದು ಪದವಿಯಲ್ಲಿರುತ್ತಾರೆ ಅವನ ಸಂಬಂಧ, ಯಾವ ಸಂಘ ಪರಿವಾರದವರೂ ಇಂತಹ ಹೇಯ ಕೃತ್ಯಕ್ಕೆ ಬೆಂಬಲಿಸುವುದಿಲ್ಲ ಮೊದಲು ಗಲ್ಲಿಗೆ ಹಾಕಲು ಹೇಳುತ್ತಾರೆಂದು ನಾನು ಭಾವಿಸುತ್ತೇನೆ. ನಾನು ಅಂತಹ ಸಂಸ್ಕೃತಿಯನ್ನು ನೋಡಿದ್ದೇನೆ. ಆ ಮಗುವಿನ ರಕ್ಷಣೆಯ ವಿಚಾರ ಬಂದಾಗ, ನಮ್ಮ ಸಮಾಜದಲ್ಲಿ ಇನ್ನೂ ಸಂಕೋಚದ ಸ್ವಭಾವ ಇದೆ. ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರು ಹೇಳಿದ ಒಂದು ಸಂದರ್ಭ, ಹಿರಿಯರಾದ ಮಾನ್ಯ ಎಸ್.ಆರ್. ಪಾಟೀಲರು ಅತ್ಯಂತ ನೋವಿನಿಂದ ಹೇಳಿದ್ದು, ಆ ಶಬ್ಧ ಕೇಳುವಾಗಲೆಲ್ಲಾ ನಮ್ಮ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತದೆ. ನಮ್ಮ ಕಾನೂನು ಎಷ್ಟು ಚೆನ್ನಾಗಿದೆಯೆಂದರೆ, ಗಂಡ ಹೆಂಡತಿಯ ಸಂಬಂಧದಲ್ಲಿ ಹೆಂಡತಿಯ ಒಪ್ಪಿಗೆಯಿಲ್ಲದೇ ಗಂಡ ಕೂಡುವಂತಿಲ್ಲ. ಹೆಂಡತಿಯ ಮೇಲೆ ತನ್ನ ಬಲಪ್ರಯೋಗ ಮಾಡುವಂತಿಲ್ಲ ಎಂದು ಹೇಳುವ ಕಾನೂನಿನ ರಕ್ಷಣೆ ನಮಗಿದ್ದಾಗ್ಯೂ ಕೂಡ ಎಲ್ಲೋ ಒಂದು ಕಡೆ ಮನುಷ್ಯ ಇನ್ನೂ ತನ್ನ ಕ್ರೌರ್ಯವನ್ನು ಮೆರೆಯುತ್ತಿದ್ದಾನೆ. ಇದರಲ್ಲಿ ಕಾರ್ಮಿಕ ಇಲಾಖೆ ಇರಲಿ, ಕೆಲಸ ಮಾಡುವಂತಹ ಪ್ರದೇಶಗಳಲ್ಲಿ ಆಯಾ ಇಲಾಖೆಗಳು ರಕ್ಷಣೆಯನ್ನು ಕೊಡುವ ರೀತಿ ನೋಡಿಕೊಳ್ಳಬೇಕಾಗುತ್ತದೆ. ಬಾಲಾಪರಾಧವನ್ನು ತಡೆಯುವುದು, ಬಾಲ ಕಾರ್ಮಿಕ ಪದ್ಧತಿಯನ್ನು ತಡೆಯುವಂತಹ ಅನೇಕ ಅಂಶಗಳು ಇಲ್ಲಿದೆ. ಇಂತಹ ಅಪರಾಧಿಗಳಿಗೆ ನಿರ್ದಾಕ್ಷಿಣ್ಯವಾಗಿ ಕಾನೂನಿನ ಚೌಕಟ್ಟಿನಲ್ಲಿ ಬರುವಂತಹ ಎಷ್ಟು ಕಠೋರ ಶಿಕ್ಷೆ ಇದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತಹ ಶಿಕ್ಷೆಯನ್ನು ವಿಧಿಸಬೇಕು. ಗೃಹ ಇಲಾಖೆಯಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿಯವರು ತುಂಬಾ ಸೂಕ್ಷ್ಮಮತಿಗಳಿದ್ದಾರೆ, ಅವರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೇ, ಯಾವ ಪೊಲೀಸ್ ಅಧಿಕಾರಿ ಉದ್ದೇಶಪೂರ್ವಕವಾಗಿ ಇದರಲ್ಲಿ ಕರ್ತವ್ಯ ಲೋಪವನ್ನು ಎಸಗಿದ್ದರೆ ಅವರನ್ನು ಕೂಡ ಕಠಿಣವಾಗಿ ನೀವು ದಂಡಿಸಬೇಕು. ಅಷ್ಟೇ ಅಲ್ಲ, ಮುಂದಿನ ದಿನಗಳಲ್ಲಿ ಇಂತಹ ಕೃತ್ಯವನ್ನು ಚರ್ಚೆ ಮಾಡುವಂತಹ ದೌರ್ಭಾಗ್ಯ, ನೋವಿನ ಸಂದರ್ಭ ಈ ಸದನಕ್ಕೆ ಬಾರದಂತೆ ನಾವು ನೋಡಿಕೊಳ್ಳಬೇಕಾಗಿದೆ. ಇಡೀ ಕರ್ನಾಟಕ ರಾಜ್ಯವನ್ನು ದೌರ್ಜನ್ಯಮುಕ್ತವಾಗಿ, ಮಹಿಳೆಯರಿಗೆ ಸುರಕ್ಷಿತವಾದಂತಹ ಪ್ರದೇಶ, ನಮ್ಮದು ಸುರಕ್ಷಿತ ರಾಜ್ಯ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಖಂಡಿತ ಸುರಕ್ಷಿತ ರಾಜ್ಯವಾಗಿದೆ. ನಾವು ಅದನ್ನು ಮುಂದುವರೆಸಬೇಕಾಗಿದೆ. ಆದ್ದರಿಂದ ಆ ಮಗುವಿನ ಪ್ರಕರಣ ಮರುಕಳಿಸದೇ ಇರಲಿ, ನಾವೆಲ್ಲರೂ ಕೂಡ ಈ ಘಟನೆಯನ್ನು ಒಕ್ಕೊರಲಿನಿಂದ ಖಂಡಿಸೋಣ ಮಾತ್ರವಲ್ಲ ಮುಂದಿನ ದಿನಮಾನಗಳಲ್ಲಿ ಹೆಣ್ಣುಮಕ್ಕಳಿಗೆ ಅದಾವ ಮಗುವಾದರೂ ಆಗಿರಲಿ ಒಬ್ಬ ವೇಶ್ಯಾವಾಟಿಕೆ ನಡೆಸುವ ಹೆಣ್ಣುಮಗುವಾದರೂ ಕೂಡ ಅವಳ ಮೇಲೆಯೂ ದೌರ್ಜನ್ಯ ಮಾಡುವಂತಿಲ್ಲ. ಅದು ಅವಳಿಗಿರುವಂತಹ ಮಾನವ ಹಕ್ಕು. ಆದ್ದರಿಂದ ನಾನು ಈ ಘಟನೆಯನ್ನು ಖಂಡಿಸುತ್ತೇನೆ ಮತ್ತು ಗೃಹ ಇಲಾಖೆ ಅತ್ಯಂತ ತ್ವರಿತವಾಗಿ ತನಿಖೆಯನ್ನು ನಡೆಸಿ ತಪ್ಪಿತಸ್ಥರು ಯಾರೇ ಇರಲಿ ಅವರಿಗೆ ಕಠಿಣವಾದ ಶಿಕ್ಷೆ ಕೊಡಬೇಕೆಂದು ಹೇಳಿ ವಿನಂತಿ ಮಾಡಿಕೊಳ್ಳುತ್ತೇನೆ. ಧನ್ಯವಾದಗಳು.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ಮುಗ್ಧ ಹೆಣ್ಣುಮಗುವಿಗೆ ಆದ ಘೋರ ಅನ್ಯಾಯವನ್ನು ಮಾನ್ಯ ವಿರೋಧಪಕ್ಷದ ಮುಖ್ಯ ಸಚೇತಕರು ಇಲ್ಲಿಗೆ ತಂದಿದ್ದಾರೆ. ಆ ಸಂದರ್ಭದಲ್ಲಿ ಮಾತನಾಡುತ್ತಿರಬೇಕಾದರೆ, ನನಗೇಕೋ ಈ ಕಡೆ ಕುಳಿತಿರುವವರಿಗೆ ಗೊಂದಲ ಇರಬೇಕು ಎಂದೆನಿಸಿತು. ಏಕೆಂದರೆ, ಒಂದು ಹೆಣ್ಣುಮಗುವಿನ ಬಗ್ಗೆ, ಆ ಮಗುವಿಗೆ ಅನ್ಯಾಯವಾದ ಬಗ್ಗೆ ಚರ್ಚೆ ಮಾಡುವಾಗ ಎಲ್ಲರೂ ಮೌನವಾಗಿ ಕೇಳಬೇಕಾಗಿದೆ. ಅದು ಈ ಸದನದ ಗೌರವ ಕೂಡ ಆಗಿದೆ. ಎಲ್ಲೋ ಒಂದು ಕಡೆ ಅವರು ಈ ಕಡೆ ಕುಳಿತಿರುವಾಗ ಯಾವ ರೀತಿ ಇದ್ದರು ಎಂಬುದು ನನಗೆ ಗೊತ್ತಿದೆ. ಅದೇ ರೀತಿ ಆ ಕಡೆ (ಆಡಳಿತ ಪಕ್ಷದ) ಕುಳಿತಾಗ ಅವರಿಗೇಕೆ ಗೊಂದಲ ಬರುತ್ತದೆ ಎನ್ನುವ ಸಂಶಯ ಕೂಡ ನಮಗೆ ಬರುತ್ತದೆ. ಮಾನ್ಯ ನಾರಾಯಣಸ್ವಾಮಿಯವರು ಮತ್ತು ನಮ್ಮ ಎಲ್ಲಾ ಹಿರಿಯರು ಮಾತನಾಡುವಾಗ ಆ ಮಗುವಿಗೆ ಯಾವ ರೀತಿ ಅನ್ಯಾಯವಾಗಿದೆ ಎಂದು ಹೇಳಬೇಕಾದರೆ ತಾಳ್ಮೆಯಿಂದ ಕೇಳಬೇಕು. ಮಾನ್ಯ ಗೃಹ ಸಚಿವರು ಕೂಡ ಇಲ್ಲಿದ್ದಾರೆ. ಒಂದು ಹೆಣ್ಣು ಕುಲಕ್ಕೆ ಅನ್ಯಾಯವಾಗಿರುವಾಗ ಇಲ್ಲಿರುವ ನಾವು ಮೂವರು ಹೆಣ್ಣು ಮಕ್ಕಳು ಅನ್ಯಾಯವಾಗಿರುವುದನ್ನು ವಿರೋಧ ವ್ಯಕ್ತಪಡಿಸಬೇಕು ಜೊತೆಗೆ ಆ ಕುಟುಂಬಕ್ಕೆ ಮತ್ತು ಆ ಮಗುವಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಪರಿಹಾರ ಕೊಡಬೇಕು, ತಪ್ಪಿತಸ್ಥರಿಗೆ ಯಾವ ರೀತಿಯ ಶಿಕ್ಷೆಯಾಗಬೇಕು, ಅವರನ್ನು ಗಲ್ಲಿಗೇರಿಸಬೇಕು ಎನ್ನುವ ಮಾತನ್ನು ಖಂಡಿತವಾಗಿಯೂ ನಾವು ಮಾತನಾಡಬೇಕಾಗುತ್ತದೆ. ಇಂದು ಇಡೀ ಕರ್ನಾಟಕದ ಜನರು ನಮ್ಮನ್ನು ನೋಡುತ್ತಿದ್ದಾರೆ. ಅನೇಕ ಪ್ರಕರಣಗಳು ಸಹ ನಡೆಯುತ್ತಿರುವ ಸಂದರ್ಭದಲ್ಲಿ ಒಂದು ಹೆಣ್ಣು ಮಗುವಿಗೆ ಆದ ಅನ್ಯಾಯ ಜೊತೆಗೆ ಅದು ಇನ್ನೂ ಮೆಜಾರಿಟಿಗೆ ಬರದ ಒಂದು ಹೆಣ್ಣು ಮಗು ಆಗಿದೆ.

(ಮುಂದು)

(174) 04-02-2021/ 06-40/ ಕೆಹೆಚ್-ಜಿಆರ್

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ಮುಂದು):-**

ನಾವು ನಮ್ಮ ಮನೆಯ ಹೆಣ್ಣು ಮಕ್ಕಳ ಬಗ್ಗೆಯೂ ಕೂಡ ಯೋಚನೆ ಮಾಡಬೇಕಾಗುತ್ತದೆ. ಹಾಗಾಗಿ ನಾನು ಎಲ್ಲಾ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುವುದು ಇಷ್ಟೇ. ಇದರಲ್ಲಿ ಖಂಡಿತವಾಗಿಯೂ ಕಾಂಗ್ರೆಸ್ ಪಕ್ಷ, ಬಿಜೆಪಿ ಪಕ್ಷ, ಜೆಡಿ(ಎಸ್) ಪಕ್ಷ ಎಂದು ಬರುವುದು ಬೇಡ. ಈ ರೀತಿಯ ವರ್ತನೆಯನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಹಾಗಾಗಿ ಇವತ್ತಿನ ದಿವಸ ನಾನು ಒಬ್ಬ ತಾಯಿಯಾಗಿ ವಿರೋಧಪಕ್ಷದ ಸದಸ್ಯರುಗಳೇ ಇರಲಿ ಮತ್ತು ಆಡಳಿತ ಪಕ್ಷದ ಸದಸ್ಯರುಗಳೇ ಇರಲಿ, ಬಹುಶಃ ಮಾನ್ಯ ಗೃಹ ಸಚಿವರೇ ಇದರ ಸೂಕ್ಷ್ಮತೆ ಗೊತ್ತಿರುತ್ತದೆ. ಆದರೆ, ಇದರಲ್ಲಿ ರಾಜಕೀಯ ಬರುವುದು ಬೇಡ. ಮಾನ್ಯ ಸಚೇತಕರು ಮಾತನಾಡುತ್ತಾ ಸಂಸದೀಯ ವಿಚಾರವನ್ನು ಎತ್ತಿದರು. ಅದಕ್ಕೆ ಅನೇಕ ಕಾರಣಗಳು ಇವೆ. ಅನೇಕ ಸಂದರ್ಭಗಳಲ್ಲಿ ನಾವು ಏಕೆ ಸಂಸದೀಯ ವಿಚಾರಗಳನ್ನು ಹೇಳುತ್ತಿದ್ದೇವೆ ಎಂದರೆ, ಅದು ಅವರ ಕ್ಷೇತ್ರವಾಗಿದೆ. ಹಾಗಾಗಿ ಈ ವಿಚಾರದ ಬಗ್ಗೆ ಅವರು ಕೂಡ ಎಚ್ಚೆತ್ತುಕೊಳ್ಳಬೇಕಾಗಿತ್ತು. ಅವರು ಈ ವಿಚಾರವಾಗಿ ಎರಡು ಮಾತುಗಳನ್ನಾಡಬೇಕಾಗಿತ್ತು. ಆ ಮಗುವಿಗೆ ಸ್ವಾಂತನ ನೀಡಬೇಕಾಗಿತ್ತು. ಆ ಮಗುವಿಗೆ ನ್ಯಾಯ ಕೊಡಿಸುವಲ್ಲಿ ಅವರು ಇರಬೇಕಾಗಿತ್ತು ಎಂದು ಹೇಳಿದ್ದೇವೆಯೇ ಹೊರತು ಅವರ ಮೇಲೆ ಯಾವುದೇ ಆಪಾದನೆಗಳನ್ನು ಮಾಡಲಿಲ್ಲ. ತಾವು ತಪ್ಪು ತಿಳಿದುಕೊಂಡು ಈ ರೀತಿ ಮಾತನಾಡುವುದು ಸರಿಯಲ್ಲ ಎನ್ನುವುದು ನನ್ನ ಭಾವನೆ. ಹಾಗಾಗಿ, ಇದರ ಬಗ್ಗೆ ಎಲ್ಲಾ ಸದಸ್ಯರುಗಳು ವಿವರವಾಗಿ ಹೇಳಿದ್ದಾರೆ. ಈ ವಿಚಾರವನ್ನು ನಾವು ಆಗಾಗ ಹೇಳಬಾರದು. ಆ ಮಗುವಿನ ಹೆಸರನ್ನು ಸಹ ಉಚ್ಚಾರಣೆ ಮಾಡಬಾರದು. ನಿಜವಾಗಿ ಮಾನ್ಯ ಗೃಹ ಸಚಿವರು ಒಬ್ಬ ಉತ್ತಮ ಗೃಹ ಮಂತ್ರಿಗಳು ಆಗಿದ್ದಾರೆ. ಆದ್ದರಿಂದ, ಅವರು ಆ ಮಗುವಿಗೆ ನ್ಯಾಯ ದೊರಕಿಸಬೇಕು. ಇದನ್ನು ಯಾರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಪ್ಪಿಸುತ್ತಾರೋ, ಅವರಿಗೆ ಖಂಡಿತವಾಗಿಯೂ ಶಿಕ್ಷೆ ಕೊಡಬೇಕು. ಇದರ ಜೊತೆಗೆ ಎಲ್ಲಾ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಗಲ್ಲು ಶಿಕ್ಷೆಯನ್ನು ವಿಧಿಸಬೇಕು. ಹಾಗಾದರೆ ಮಾತ್ರ ಆ ಮಗುವಿಗೆ . . .

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಡಾ|| ವೈ.ಎ.ನಾರಾಯಣಸ್ವಾಮಿಯವರೇ, ದಯಮಾಡಿ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರಿಗೆ ಈ ವಿಚಾರವನ್ನು ಕೇಳುವ ತಾಳ್ಮೆಯೇ ಇಲ್ಲ.

**(ಈ ಹಂತದಲ್ಲಿ ಡಾ|| ವೈ.ಎ.ನಾರಾಯಣಸ್ವಾಮಿಯವರು ಉಪ ಮುಖ್ಯಮಂತ್ರಿಯವರಾದ ಲಕ್ಷ್ಮಣ ಸಂಗಪ್ಪ ಸವದಿಯವರ ಜೊತೆ ಮಾತನಾಡುತ್ತಿದ್ದರು)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮುಖ್ಯವಾದ ವಿಚಾರವನ್ನು ಚರ್ಚೆ ಮಾಡುವಾಗ ಡಾ|| ವೈ.ಎ.ನಾರಾಯಣಸ್ವಾಮಿಯವರು ಎಲ್ಲೆಲ್ಲಿಯೋ ನಿಂತು ಮಾತನಾಡುತ್ತಾರೆ. ಏನಾದರೂ ಇದ್ದರೆ ಹೊರಗೆ ಹೋಗಿ ಮಾತನಾಡಿ.

**ಉಪ ಸಭಾಪತಿಯವರು:–** ಡಾ|| ವೈ.ಎ.ನಾರಾಯಣಸ್ವಾಮಿಯವರೇ, ದಯಮಾಡಿ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಇವರಿಗೆ ಏನು ಗಂಭೀರತೆ ಇಲ್ಲ. ರಾಜಿ ಇಲ್ಲ. ಕಾಕಳಾತಿ ಇಲ್ಲ. ಇವರಿಗೆ ಸದನದ ಬಗ್ಗೆ ಗಾಂಭೀರ್ಯತೆಯಂತೂ ಇಲ್ಲವೇ ಇಲ್ಲ.

**ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ವಿರೋಧಪಕ್ಷದ ನಾಯಕರೇ, ನಮಗೆ ಎಲ್ಲವೂ ಕೂಡ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿಕೊಳ್ಳುತ್ತಾ ಸುಮ್ಮನೆ ಅಡ್ಡಾಡುತ್ತಿದ್ದಾರೆ.

**(ಗೊಂದಲ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಅವರಿಗೆ ತಳಮಳ ಇದೆ ಎಂದು ಆಗಲೇ ಹೇಳಿದೆ.

**ಉಪ ಸಭಾಪತಿಯವರು:–** ಡಾ|| ವೈ.ಎ.ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಮಹಿಳಾ ಸದಸ್ಯರು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳುವುದಕ್ಕೆ ಹೇಳಿ. ಆ ವಿಚಾರಗಳನ್ನು ಅವರು ಕಿವಿಗೆ ಹಾಕಿಕೊಳ್ಳಲಿ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಎಲ್ಲರ ಮನೆಯಲ್ಲಿಯೂ ಹೆಣ್ಣು ಮಕ್ಕಳು ಇರುತ್ತಾರೆ. ಆ ಹೆಣ್ಣು ಮಕ್ಕಳ ಬಗ್ಗೆ ಮಾತನಾಡುವಾಗ ಈ ರೀತಿ ಎಲ್ಲರೂ ಗುಡ್ಡೆಯಾಗಿ ಸೇರಿಕೊಂಡು ಮಾತನಾಡುವುದನ್ನು ನಾನು ಸಹ ಖಂಡಿಸುತ್ತೇನೆ. ಏಕೆಂದರೆ, ನಾನು ಹೇಳುವುದನ್ನು ಕೇಳುವುದಕ್ಕೆ ಆಗುವುದಿಲ್ಲವೆಂದರೆ ಅವರು ಎದ್ದು ಹೊರಗೆ ಹೋಗಬಹುದು. ನಾವು ಮಾನ್ಯ ಸಭಾಪತಿಯವರ ಜೊತೆ ಮಾತನಾಡಿಕೊಳ್ಳುತ್ತೇವೆ. ಸದನದಲ್ಲಿ ಮಾನ್ಯ ಗೃಹ ಸಚಿವರು ಕೂಡ ಇದ್ದಾರೆ. ಇವರು ನಮ್ಮನ್ನು ಏನೆಂದು ತಿಳಿದುಕೊಂಡಿದ್ದಾರೆ? ನಾವು ಅದನ್ನೇ ಆಗಲಿಂದಲೇ ಮಾಡುತ್ತಿದ್ದೇವೆ. ಅದೇನೇ ಇರಲಿ, ಇವತ್ತಿನ ದಿವಸ ಆ ಹೆಣ್ಣು ಮಗುವಿಗೆ ಅನ್ಯಾಯವಾಗಿದೆ. ಈ ಅನ್ಯಾಯ ಮತ್ತೊಮ್ಮೆ ಮರುಕಳಿಸಬಾರದು. ಆದ್ದರಿಂದ, ನಾವೆಲ್ಲರೂ ಒಮ್ಮತದಿಂದ ಈ ರೀತಿಯ ಹೆಣ್ಣು ಮಕ್ಕಳಿಗೆ ಅನ್ಯಾಯವಾಗದೇ ಇರುವ ರೀತಿಯಲ್ಲಿ ನಾವೆಲ್ಲರೂ ನೋಡಿಕೊಳ್ಳಬೇಕಾಗಿದೆ. ಹಾಗಾಗಿ, ಮಾನ್ಯ ಗೃಹ ಸಚಿವರು ಸದನದಲ್ಲಿ ಇದ್ದಾರೆ. ಇವತ್ತಿನ ದಿವಸ ಆ ಮಗುವಿಗೆ ಏನು ಅನ್ಯಾಯವಾಗಿದೆ? ಆ ಅನ್ಯಾಯ ಮಾಡಿರುವಂತಹ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡಬೇಕು. ಇದರ ಜೊತೆಗೆ ಮರಣದಂಡನೆಯನ್ನು ವಿಧಿಸಬೇಕೆಂದು ಹೇಳುತ್ತಾ, ಬಹುಶಃ ಈ ಒಂದು ಪ್ರಕರಣ ಮುಂದೆ ಮರುಕಳಿಸದೇ ಇರುವ ಹಾಗೆ ಸರ್ಕಾರ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಶೃಂಗೇರಿಯಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣು ಮಗುವಿನ ಮೇಲೆ ಆದಂತಹ ಅತ್ಯಾಚಾರವನ್ನು ನಾನು ಖಂಡನೆ ಮಾಡುತ್ತಾ, ಒಬ್ಬ ಮಹಿಳೆ ಎರಡು ಬಾರಿ ಹುಟ್ಟುತ್ತಾಳೆ. ಒಮ್ಮೆ ಅವಳಿಗೆ ಜನ್ಮವಾಗುತ್ತದೆ. ಇನ್ನೊಮ್ಮೆ ಇನ್ನೊಂದು ಜೀವಕ್ಕೆ ಜನ್ಮ ನೀಡುವಾಗ ಸತ್ತು ಮತ್ತೊಮ್ಮೆ ಹುಟ್ಟುತ್ತಾಳೆ. ಈ ಅತ್ಯಾಚಾರಕ್ಕೆ ಒಳಗಾದಂತಹ ಮಹಿಳೆ ಅವಳು ಜೀವನಪರ್ಯಂತ ಸತ್ತ ಹಾಗೆ ಇರುತ್ತಾಳೆ. ಅವಳು ಸತ್ತು ಬದುಕುತ್ತಿರುತ್ತಾಳೆ. ಒಬ್ಬ ಮಹಿಳೆಗೆ ಮಾತ್ರ ಆ ನೋವು ಅರ್ಥವಾಗುತ್ತದೆ. ಇವತ್ತಿನ ದಿವಸ ನಾನು ಮಾತನಾಡುವಾಗ ಆ ರೀತಿ ಏಕೆ ಹೇಳಿದೆ ಎಂದರೆ, ಬಹುಶಃ ಅತ್ಯಾಚಾರವಾದಂತಹ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ. ಈ ರೀತಿಯ ಅನೇಕ ಪ್ರಕರಣಗಳು ನಡೆದಿವೆ. ಅದಕ್ಕೆ ಜೀವಂತ ಸಾಕ್ಷಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ನೋಡಿದ್ದೇನೆ. ನನ್ನ ಹತ್ತಿರ ಅನೇಕ ಹೆಣ್ಣು ಮಕ್ಕಳು ಬಂದಿದ್ದಾರೆ. ಇದನ್ನು ಪ್ರಚಾರ ಮಾಡಬೇಡಿ. ಇದು ನಮ್ಮ ಮಕ್ಕಳ ಭವಿಷ್ಯದ ಪ್ರಶ್ನೆ ಎಂದು ಅವರ ತಾಯಂದಿರು ಬಂದು ಕಾಲನ್ನು ಹಿಡಿಯುತ್ತಾರೆ. ಆದ್ದರಿಂದ, ಇಂತಹ ವಿಚಾರಗಳು ಪ್ರಚಾರಕ್ಕೆ ಬರುವುದಿಲ್ಲ. ಈ ವಿಚಾರ ಪ್ರಚಾರಕ್ಕೆ ಮತ್ತು ಪ್ರಶಂಸೆಗೆ ಬರುವುದಂತಹ ವಿಷಯ ಅಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಉಲ್ಲೇಖ ಮಾಡುವಾಗ ನಾನು ಎದ್ದು ನಿಂತೆ. ನಾನು ತಮ್ಮನ್ನು ಖಂಡನೆ ಮಾಡುವುದಕ್ಕೆ ಎದ್ದು ನಿಂತಿಲ್ಲ. ಇಲ್ಲಿ ಕುಳಿತವರ್ಯಾರು ಕೆ.ಜಿ., ಕ್ಲಾಸಿನ ಮಕ್ಕಳಲ್ಲ. ಈ ಮನೆಯಲ್ಲಿ ಇರುವ ಎಲ್ಲಾ ಮಾನ್ಯ ಸದಸ್ಯರುಗಳು ಪ್ರಬುದ್ಧರು. ಎಲ್ಲರಿಗೂ ಈ ವಿಚಾರದ ಬಗ್ಗೆ ಒಮ್ಮೆ ಹೇಳಿದರೆ ಅರ್ಥವಾಗುತ್ತದೆ. ಎರಡು-ಮೂರು ಬಾರಿ ಹೇಳಿದರೂ ಅರ್ಥವಾಗುತ್ತದೆ. ತಾವು ಲೆಕ್ಕ ಮಾಡಿ. ಇದರ ಬಗ್ಗೆ ಕಡತ ತೆಗೆದು ನೋಡಿ. ಅತ್ಯಾಚಾರ ಎಷ್ಟು ಬಾರಿ ಎಂದು ಹೇಳಿದರೆ ಅಡ್ಡಿಯಿಲ್ಲ. ಆ 15 ವರ್ಷದ ಮಗು ಎಂದು ಹೇಳಿದಾಗ ಅವಳು ಎಷ್ಟು ನೊಂದುಕೊಂಡಿರಬೇಕು? ಇದರ ಬಗ್ಗೆ ಬಹಳ ನೋವಾಗುತ್ತದೆ. ಒಬ್ಬ ಹೆಣ್ಣು ಮಗು ನ್ಯಾಯಾಲಯಕ್ಕೆ ಏಕೆ ಹೋಗುವುದಿಲ್ಲವೆಂದು ತಮಗೇನಾದರೂ ಗೊತ್ತಿದೆಯೇ, ಆ ಹೆಣ್ಣು ಮಗಳ ಅತ್ಯಾಚಾರದ ಪ್ರಕರಣದಲ್ಲಿ ಆ ಲಾಯರ್ ಕೇಳುವ ಪ್ರಶ್ನೆ ಇದೆಯಲ್ಲವೇ, ಅದು ಅವಳಿಗೆ ಇನ್ನೊಮ್ಮೆ ಅತ್ಯಾಚಾರವಾದಂತಾಗುತ್ತದೆ. ಆ ವಿಷಯವನ್ನು ಇಲ್ಲಿ ಉಲ್ಲೇಖ ಮಾಡಬೇಡಿ. ಅದನ್ನು ಪದೇ ಪದೇ ಹೇಳಬೇಡಿ. ಹೊಟ್ಟೆಗೆ ಅನ್ನ ತಿನ್ನುವ ಪ್ರತಿಯೊಬ್ಬ ಮನುಷ್ಯನಿಗೆ ಒಂದು ಅಥವಾ ಎರಡು ಬಾರಿ ಹೇಳಿದರೆ ಅರ್ಥವಾಗುತ್ತದೆ. ನಾವೆಲ್ಲರೂ ಕೂಡ ಹೆಣ್ಣಿನ ಹೊಟ್ಟೆಯಿಂದಲೇ ಬಂದವರು. ಗಂಡು ಮಗುವಾಗಲಿ ಅಥವಾ ಹೆಣ್ಣು ಮಗುವಾಗಲಿ ಅದಕ್ಕೆ ಒಬ್ಬ ಹೆಣ್ಣೇ ಜನ್ಮ ಕೊಡಬೇಕು. ಆದ್ದರಿಂದ, ಆ ವಿಷಯಕ್ಕೆ ಉಲ್ಲೇಖ ಮಾಡಿದ್ದೇನೆ ಎಂದು ಹೇಳಿದ್ದೇನೆ. ಇದಕ್ಕೆ ಯಾವುದೇ ಸಂಘಟನೆಯ ಪ್ರಶ್ನೆ ಬರುವುದಿಲ್ಲ. ಯಾವ ಕುಟುಂಬದವರು, ಯಾವ ಪರಿವಾರ ಈ ಪ್ರಶ್ನೆ ಇಲ್ಲಿ ಬರುವುದಿಲ್ಲ. ಆ ಮನುಷ್ಯ ರೂಪದಲ್ಲಿ ಅತ್ಯಾಚಾರ ಮಾಡಿರುವಂತಹ ರಾಕ್ಷಸನ ಬಗ್ಗೆ ನಾವು ಯೋಚನೆ ಮಾಡಬೇಕು. ಇದರ ಹಿಂದೆ ಸಂಘಟನೆ ಇರುವುದು, ಅದು ಇರುವುದು, ಇದು ಇರುವುದು, ಯಾವ ಸಂಘಟನೆಯೂ ಇಲ್ಲ. ಈ ಭಾರತ ದೇಶದಲ್ಲಿ ಮನುಷ್ಯತ್ವ ಇರುವ ಯಾವ ಸಂಘಟನೆ ಕೂಡ ಇದನ್ನು ಪ್ರೋತ್ಸಾಹ ಮಾಡುವುದಿಲ್ಲ. ಇದೇ ಮನೆಯಲ್ಲಿ ಆ ಕಡೆಯವರು ಒಂದು ರೀತಿ ಮಾತನಾಡುತ್ತಾರೆ. ಈ ಕಡೆಯವರು ಒಂದು ರೀತಿಯಲ್ಲಿ ಮಾತನಾಡುತ್ತಾರೆ. ನಾವು ಹೆಣ್ಣು ಮಕ್ಕಳ ಬಗ್ಗೆ ಬಂದಾಗ ಇದೇ ಮನೆಯಲ್ಲಿ ಕುರ್ಚಿಯಲ್ಲಿ ಕುಳಿತುಕೊಂಡು ಒಂದು ಮಹಿಳೆಯ ಮೇಲೆ ಅತ್ಯಾಚಾರ ಅಲ್ಲ. ಮೈಮೇಲೆ ಕೈ ಹಾಕಿರುವವರು ಯಾರೇ ಆಗಲಿ ಅವರ ಕೈಯನ್ನು ಕತ್ತರಿಸಬೇಕೆಂದು ಹೇಳಿದವರು ನಾವು. ಆ ರೀತಿಯ ಶಿಕ್ಷೆಯನ್ನು ಕೊಡುವುದಕ್ಕೆ ಮಾಜಿ ಗೃಹ ಸಚಿವರಾದ ಅಶೋಕ್‌ರವರು ಈ ಸದನದಲ್ಲಿ ಇದ್ದರು. ಆಗ ಅತ್ಯಾಚಾರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದಂತಹವನ ಮೇಲೆ ಎಲ್ಲಾ ಸೆಕ್ಷನ್‌ಗಳನ್ನು ಹಾಕಿ, ಇವತ್ತಿನ ದಿವಸ ಅವನು ಹೊರಗೆ ಬರದ ರೀತಿಯಲ್ಲಿ ಅವನನ್ನು ಒಳಗೆ ಹಾಕಿದರು. ದಯಮಾಡಿ, ಇದರ ಬಗ್ಗೆ ತಪ್ಪು ಅರ್ಥ ಮಾಡಿಕೊಂಡು ಭಾರತಿ ಶೆಟ್ಟಿಯವರಿಗೆ ಇದರ ಬಗ್ಗೆ ಕಳಕಳಿ ಇಲ್ಲ ಎಂದು ಹೇಳಬೇಡಿ. ಅದಕ್ಕೆ ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ನನಗೆ ಇನ್ನು ಅನೇಕ ವಿಷಯಗಳು ಗೊತ್ತಿದೆ. ಅದನ್ನು ಪ್ರಸ್ತಾಪ ಮಾಡುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಆಗುವಂತಹ ಈ ಘಟನೆಯನ್ನು ನೋಡಿದರೆ, ಆ ಹೆಣ್ಣು ಮಕ್ಕಳ ಚಿಂತನೆಯನ್ನು ಮಾಡಿದರೆ, ಬಹುಶಃ ಈ ರೀತಿಯ ಯಾವುದಾದರೂ ವಿಷಯಗಳು ಪ್ರಕಟಣೆಗೆ ಬಂದಿದೆಯೇ? ಈ ರೀತಿಯ ಯಾವುದಾದರೂ ವಿಷಯ ಪೊಲೀಸ್‌ನವರಿಗೆ ಬಂದಿದೆಯೇ? ಆದ್ದರಿಂದ, ಇದಕ್ಕೆ ಶೀಘ್ರವಾಗಿ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಇವತ್ತಿನ ದಿವಸ ಸದನದಲ್ಲಿ ಮಾನ್ಯ ಗೃಹ ಸಚಿವರು ಇದ್ದಾರೆ. ಅವರಲ್ಲಿ ವಿನಂತಿ ಮಾಡುವುದೇನೆಂದರೆ, ನನಗೆ ಹೆಮ್ಮೆ ಇದೆ. ಇವತ್ತಿನ ದಿವಸ ನಮ್ಮ ದೇಶದ ಪ್ರಧಾನಿಯವರು **"ಬೇಟಿ ಬಚಾವೋ, ಬೇಟಿ ಪಢಾವೋ"** ಎಂದು ಘೋಷಣೆ ಮಾತ್ರ ಮಾಡಲಿಲ್ಲ. ಬೇಟಿಯನ್ನು ಬಚಾವು ಮಾಡಿದರು. ಬೇಟಿಯನ್ನು ಪಢಾವೋ ಮಾಡಿದರು. ಯಾವ ರೀತಿ ಬೇಟಿಯನ್ನು ಬಚಾವು ಮಾಡಿದರು ಎಂದರೆ, ಇಷ್ಟೆಲ್ಲಾ ಇರುವ ಕಾನೂನಿನಲ್ಲಿ ಅತ್ಯಾಚಾರ ಮಾಡಿದ ಯಾರೋ ಒಬ್ಬ ಅತ್ಯಾಚಾರಿಗೆ ಮರಣದಂಡನೆ ಕೊಡುವಂತಹ ಶಿಕ್ಷೆ ಇರಲಿಲ್ಲ. ಇವತ್ತಿನ ದಿವಸ ಒಬ್ಬ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರವಾಗಿದ್ದರೆ, ಅವರಿಗೆ ಗಲ್ಲು ಶಿಕ್ಷೆಯನ್ನು ಕೊಡುವಂತಹ ಕಾನೂನನ್ನು ತಂದಂತಹ ಈ ದೇಶದ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರ ಬಗ್ಗೆ ನನಗೆ ಹೆಮ್ಮೆ ಇದೆ. ಆದ್ದರಿಂದ, ನಾನು ವಿನಂತಿ ಮಾಡುವುದೇನೆಂದರೆ . . .

**(ಈ ಹಂತದಲ್ಲಿ ಮಾನ್ಯ ಸದಸ್ಯರೆಲ್ಲರೂ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಡತದಲ್ಲಿ ಈ ವಿಚಾರ ತಪ್ಪು ಹೋಗಬಾರದು. Indian Penal Code was drafted by Lord Macaulay.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವು yield ಆಗುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, Indian Penal Code was drafted by Lord Macaulay.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವ್ಯಭಿಚಾರ ಮಾಡಿದಾಗ ಅತ್ಯಾಚಾರ ಮಾಡಿದವರು ಒಂದು ವರ್ಷ ಆದ ಮೇಲೆ ಎಫ್.ಐ.ಆರ್., ಮಾಡಲಾಯಿತು.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರುಗಳೇ, ಅವರು ಮಾತನಾಡುವುದಕ್ಕೆ ಬಿಡಿ. ಒಬ್ಬ ಮಹಿಳೆ ಮಾತನಾಡಬೇಕಾದರೆ ಏಕೆ ಅಡ್ಡ ಬರುತ್ತೀರಿ? ನಂತರ ತಾವೆಲ್ಲರೂ ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕುಲದೀಪ್ ಸಿಂಗ್ ಎನ್ನುವ ಬಿ.ಜೆ.ಪಿ., ಎಂ.ಎಲ್.ಎ., ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದ ಒಂದು ವರ್ಷದ ಮೇಲೆ ಎಫ್.ಐ.ಆರ್., ಆಗಿದೆ. ಆಗ ತಾವು ರಾಜಕೀಯ ಮಾಡುವಾಗ ಇದರ ಬಗ್ಗೆ ತಮಗೆ ಅರ್ಥವಾಗಲಿಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:–** ತಾವು ಈ ರೀತಿ ಮಾತನಾಡಿದರೆ, ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಮಾತನಾಡಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಕುಲ್‌ದೀಪ್ ಸಿಂಗ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ ದಯಮಾಡಿ ಕುಳಿತುಕೊಳ್ಳಿ ತಾವು ಹೇಳಿರುವುದ್ಯಾವುದು ಕಡತಕ್ಕೆ ಹೋಗುವುದಿಲ್ಲ. ಈಗ ಯಾವುದೂ ಕಡತಕ್ಕೆ ಹೋಗುವುದಿಲ್ಲ. ಈ ರೀತಿ ಗುಂಪಾಗಿ ನಿಂತು ಮಾತನಾಡಿದರೆ ಯಾವುದನ್ನೂ ಕಡತಕ್ಕೆ ತೆಗೆದುಕೊಳ್ಳಬೇಡಿ. ಒಬ್ಬೊಬ್ಬರೇ ಮಾತನಾಡಿರುವಂತಹದ್ದನ್ನು ಮಾತ್ರ ಕಡತಕ್ಕೆ ತೆಗೆದುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ದೇಶಕ್ಕೆ ಸ್ವಾತಂತ್ರ ಬರುವುದಕ್ಕಿಂತ ಪೂರ್ವದಲ್ಲಿ Lord Macaulay ರವರು Indian Penal Code ಅನ್ನು draft ಮಾಡಿದ್ದಾರೆ. ಅಂದೇ ಅವರು death sentence ಅನ್ನು add ಮಾಡಿದ್ದಾರೆ. ಇದು ಹೊಸದಾಗಿ ಅಲ್ಲ. Rape ಮಾಡಿದವರಿಗೆ death sentence, life imprisonment ಅಂದೆಯೇ ಕೊಟ್ಟಿದ್ದಾರೆ. ಈಗ ಅದನ್ನು ಕೊಟ್ಟಿರುವುದು ಅಲ್ಲ.

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಹಿಳಾ ಸದಸ್ಯರು ನಾನು ಮಾತನಾಡುವುದನ್ನು ಶಾಂತರಾಗಿ ಕೇಳಿ ಎಂದು ಹೇಳುತ್ತಿದ್ದಾರೆ. ಮಹಿಳಾ ಸದಸ್ಯರು ಮಾತನಾಡುವಾಗ ಶಾಂತರಾಗಿ ಕೇಳಿ ಎಂದು ಅವರೇ ಹೇಳಿದ್ದಾರೆ. ಹಾಗೆಯೇ ಈ ಕಡೆಯ ಮಹಿಳಾ ಸದಸ್ಯರು ಮಾತನಾಡುವಾಗ ಶಾಂತರಾಗಿ ಕೇಳಬಾರದೇ?

**ಉಪ ಸಭಾಪತಿಯವರು:–** ಮಾನ್ಯ ಎಸ್.ವ್ಹಿ.ಸಂಕನೂರರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರೇ, ಮಾತನಾಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅವರಿಗೆ ಒಂದು ಕಾನೂನು. ನಮಗೆ ಒಂದು ಕಾನೂನು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಭಾರತಿ ಶೆಟ್ಟಿಯವರೇ, ತಾವು ಮಾತನಾಡಿ. ಮಾನ್ಯ ಸದಸ್ಯರಾದ ವೈ.ಎ.ನಾರಾಯಣಸ್ವಾಮಿಯವರೇ ಕುಳಿತುಕೊಳ್ಳಿ.

(ಮುಂದು)

**(175) 04/02/2021/ಎಸ್‌ಪಿಆರ್/ಎಂಡಿ/6:50**

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ನನಗೆ ರಾಜಕೀಯ ಮಾಡುವುದಕ್ಕೆ ಬರುವುದಿಲ್ಲ; ಆ ಉದ್ದೇಶವೂ ಸಹ ನನಗೆ ಇಲ್ಲ ಮತ್ತು ನನ್ನ ಸಂಘಟನೆಯು ನನಗೆ ಅದನ್ನು ಕಲಿಸಿಲ್ಲ. ಆ ರೀತಿಯಾಗಿ ನಾವು ಬೆಳೆದು ಬಂದವರಾಗಿದ್ದೇವೆ. ನನಗೆ ತಿಳಿದಂತೆ, ಸಾಗರ ತಾಲ್ಲೂಕಿನಲ್ಲಿ ಈಗ್ಗೆ 15–20 ವರ್ಷಗಳ ಹಿಂದೆ ಒಂದು ಹೆಣ್ಣು ಮಗಳನ್ನು ತುಂಡು ತುಂಡಾಗಿ ಕತ್ತರಿಸಿ ಬಿಸಾಡಿದ್ದ ಸದರಿ ಆರೋಪಿಯನ್ನು ನ್ಯಾಯಾಲಯಕ್ಕೆ ಎಳೆದುಕೊಂಡು ಹೋಗಲಾಗಿತ್ತು ಹಾಗೂ ಅವನಿಗೆ ಶಿಕ್ಷೆಯೂ ಸಹ ಆಗಿತ್ತು. ಅವರು ರೈಲಿನಲ್ಲಿ ಪ್ರಯಾಣಿಸುವಾಗ, ಅವನನ್ನು ಹಾರಿಸಿ, ತಪ್ಪಿಸಿಕೊಂಡು ಗಲ್ಫ್ ದೇಶಕ್ಕೆ ಹೋಗಿರುವುದು ನನಗೆ ತಿಳಿದಿದೆ ಹಾಗೂ ಅದನ್ನು ನಾವೂ ಸಹ ನೋಡಿದ್ದೇವೆ. ವಿರೋಧ ಪಕ್ಷದವರು ಇದರ ಬಗ್ಗೆ ಬೆಳಕನ್ನು ಚೆಲ್ಲಲು ಹೋಗುವುದು ಬೇಡ ಹಾಗೂ ಆ ವಿಷಯದ ಬಗ್ಗೆ ನಾವು ಮಾತನಾಡುವುದಕ್ಕಾಗುವುದಿಲ್ಲ.

ಇವತ್ತಿನ ದಿವಸ ನಡೆದ ಘಟನೆಯ ಬಗ್ಗೆ ನಾನು ಗೃಹ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ಅವರಿಗೆ ಶಿಕ್ಷೆ ಕೊಡುವ ಅಧಿಕಾರವಿಲ್ಲ; ಆದರೆ ಆ ಪಾಪಿಗೆ ಪಾಶಿ ಶಿಕ್ಷೆಯಾಗುವ ರೀತಿಯಲ್ಲಿ ಕಾನೂನಿನಲ್ಲಿರುವ ಎಲ್ಲಾ ಕಲಂಗಳನ್ನು ವಿಧಿಸಿ, ಆರೋಪಿಯು ಪ್ರಕರಣದಿಂದ ಹೊರಗೆ ಬರದ ಹಾಗೆ ನೋಡಿಕೊಳ್ಳುವ ಕೆಲಸವನ್ನು ಸರ್ಕಾರವು ಮಾಡುತ್ತದೆ ಎನ್ನುವ ವಿಶ್ವಾಸವೂ ಸಹ ನನಗಿದೆ. ತಪ್ಪಿತಸ್ಥರು ಯಾರೇ ಆಗಿರಬಹುದು, ನನ್ನ ಕುಟುಂಬದವರು ಅಥವಾ ನನ್ನ ಮಕ್ಕಳೇ ಆಗಿರಬಹುದು, ಯಾವುದೇ ಸಂಘಟನೆಯಾಗಿರಬಹುದು, ಖಂಡಿತವಾಗಿಯೂ ಸಹ ಅಂತಹ ರಾಕ್ಷಸರಿಗೆ ಈ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಶಿಕ್ಷೆಯಾಗಬೇಕು. ಆಡಳಿತ ಪಕ್ಷದಲ್ಲಿದ್ದಾಗ ಒಂದು ರೀತಿಯಾಗಿ ಮತ್ತು ವಿರೋಧ ಪಕ್ಷದಲ್ಲಿದ್ದಾಗ ಮತ್ತೊಂದು ರೀತಿಯಾಗಿ ಮಾತನಾಡುವುದಕ್ಕೆ ನನಗೆ ಬರುವುದಿಲ್ಲ. ನಾನು ಎಲ್ಲಿ ಇದ್ದರೂ ಸಹ ನನ್ನ ಮಾತು ಒಂದೇ ರೀತಿಯಾಗಿರುತ್ತದೆ ಮತ್ತು ಅದು ನ್ಯಾಯಪರವಾಗಿ ಇರುವ ಮಾತಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಸಂದರ್ಭದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜನ್ನು ತಟ್ಟುವುದರ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾಗರೀಕ ಸಮಾಜ ಅತ್ಯಂತ ಸಂಕೋಚ ಮತ್ತು ಅವಮಾನದಿಂದ ತಲೆ ತಗ್ಗಿಸುವಂತಹ ಪ್ರಕರಣ ಇದಾಗಿದೆ. ನಮ್ಮ ಸ್ನೇಹಿತರಾದ ಶ್ರೀ ನಾರಾಯಣಸ್ವಾಮಿಯವರು ಹೇಳಿದಂತೆ, ಶೃಂಗೇರಿಯಂತಹ ಮಲೆನಾಡಿನ ಪ್ರದೇಶದಲ್ಲಿ, ಬಹಳ ಸುರಕ್ಷಿತವಾದ ವಾತಾವರಣವಿದ್ದು, ಒಂಟಿ ಮನೆಗಳಿರುತ್ತವೆ. ಅಲ್ಲಿ ಅಪರಿಚಿತರು ಬಂದರೂ ಸಹ ಅವರನ್ನು ಅನುಮಾನಿಸದೇ, ಕರೆದು ನೀರು-ಉಪಹಾರಗಳನ್ನು ಕೊಡುವಂತಹ ಸಂಸ್ಕೃತಿ ಇರುವ ಜಾಗವಾಗಿದೆ. ಆ ರೀತಿಯ ಸಂಸ್ಕೃತಿ ಇರುವ ಜಾಗದಲ್ಲಿ ಇಂತಹ ಘಟನೆ ನಡೆದಿರುವುದರಿಂದ ಯಾರೂ ಕೂಡ ನೆಮ್ಮದಿಯಿಂದ ಇರಲಿಕ್ಕೆ ಸಾಧ್ಯವಿಲ್ಲ. ಬಹಳಷ್ಟು ವಿಚಾರಗಳನ್ನು ಸದಸ್ಯರುಗಳು ಸವಿಸ್ತಾರವಾಗಿ ಮಾತನಾಡಿದ್ದಾರೆ. ಆದರೆ, ಈ ಚರ್ಚೆಯೊಳಗೆ ನನಗೆ ಎರಡು-ಮೂರು ಅಂಶಗಳು ಕಾಣಿಸುತ್ತಿವೆ.

ಮೊದಲನೆಯದಾಗಿ ಕೂಲಿ ಮತ್ತು ಹೊಟ್ಟೆಪಾಡಿಗಾಗಿ ಅಲ್ಲಿಗೆ ಬಂದ ಹುಡುಗಿ ಅವಳಾಗಿದ್ದಾಳೆ. ಒಂದು ಹೊತ್ತಿನ ತುತ್ತಿನ ಚೀಲ ತುಂಬುವುದಕ್ಕಾಗಿ ಬಂದಾಗ ಈ ಅಮಾನವೀಯ ಅತ್ಯಾಚಾರ ಘಟನೆ ನಡೆದಿದೆ. ಇದನ್ನು ಯಾರೂ ಕೂಡ ಸಹಿಸುವ ಮತ್ತು ಬೆಂಬಲಿಸುವ ಪ್ರಶ್ನೆಯೇ ಇಲ್ಲ. ತಾಯಿ ಸತ್ತು ತಬ್ಬಲಿಯಾಗಿರುವ ಆ ಮಗುವನ್ನು ಸಾಕಬೇಕಾದ ಹಾಗೂ ತಾಯಿಯ ಸ್ಥಾನದಲ್ಲಿದ್ದ ಅವಳ ಚಿಕ್ಕಮ್ಮನೇ ಈ ಅತ್ಯಾಚಾರ ಕೃತ್ಯಕ್ಕೆ ಬೆಂಬಲವನ್ನು ನೀಡಿದರೆ, ಆ ಮಗು ಯಾರ ರಕ್ಷಣೆಗೆ ಹೋಗಬೇಕು? ಆ ಹೆಂಗಸನ್ನು ನಂಬಿ ಸದರಿ ಹುಡುಗಿಯು ಬಹಳ ದೂರದಿಂದ ಹೊಟ್ಟೆಪಾಡಿಗಾಗಿ ಅಲ್ಲಿಗೆ ಬಂದಿದೆ. ತಾಯಿಯ ಸ್ಥಾನದಲ್ಲಿದ್ದು ಕಾಪಾಡಬೇಕಾದ ಹೆಣ್ಣೇ ಆ ಮಗುವಿನ ಮೇಲೆ ಅತ್ಯಾಚಾರ ಮಾಡುವುದಕ್ಕೆ ಬಿಟ್ಟರೆ ಅಥವಾ ಇನ್ನೊಂದು ಅರ್ಥದಲ್ಲಿ ವ್ಯಭಿಚಾರಕ್ಕೆ ದೂಡಿದರೆ, ಆ ಮಹಿಳೆಯೂ ಕೂಡ ಅತ್ಯಂತ ಅಪರಾಧಿಯಾಗುತ್ತಾಳೆ ಮತ್ತು ಅವಳನ್ನೂ ಸಹ ಬಂಧಿಸಬೇಕು. ಮಗುವಿನ ಮೇಲೆ ಅತ್ಯಾಚಾರ ಮಾಡುವುದಕ್ಕೆ ಬೇರೆಯವರಿಗೆ ಆಹ್ವಾನವನ್ನು ನೀಡಿದ ಆಕೆ ಅತ್ಯಂತ ಕ್ರೂರಿಯಾಗುತ್ತಾಳೆ. ಅತ್ಯಾಚಾರ ಮಾಡಿದವರು ಎಷ್ಟು ಕ್ರೂರಿಗಳೋ ತಾಯಿಯ ಸ್ಥಾನದಲ್ಲಿದ್ದು ಆ ಮಗುವನ್ನು ದುರ್ಬಳಕೆ ಮಾಡಿಕೊಂಡವಳು ಸಹ ಬಹಳ ದೊಡ್ಡ ಅಪರಾಧಿಯಾಗುತ್ತಾಳೆ.

ಮತ್ತೊಂದು ಅಂಶವೇನೆಂದರೆ, Child Labour(Prohibition and Regulation) Act ಇದೆ. ಸಂಬಂಧಪಟ್ಟ ಇಲಾಖೆಗಳು ಏನು ಮಾಡುತ್ತಿವೆ? ಈ ಬಗ್ಗೆ ಇರುವ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಾಕಿ ವಿವರಗಳನ್ನು ಎಲ್ಲಾ ಸದಸ್ಯರು ಮಾತನಾಡಿದ್ದಾರೆ. ಗ್ಯಾರೇಜ್ ಮತ್ತು ಹೋಟೇಲ್‌ಗಳಲ್ಲಿ ಸಣ್ಣ-ಸಣ್ಣ ಮಕ್ಕಳು ಕೆಲಸ ಮಾಡುತ್ತಿರುತ್ತಾರೆ, ಅದನ್ನು ಇಲಾಖೆಯು ನೋಡುವುದಿಲ್ಲ. ಊರಿನೊಳಗೇ ಇರುವ ಇಂತಹ ಸಂಗತಿಗಳನ್ನು ಇಲಾಖೆಯವರು ನೋಡುವುದಿಲ್ಲವೆಂದಾದರೆ, ಇನ್ನು ಕ್ರಷರ್‌ಗಳಲ್ಲಿ ಹೋಗಿ ನೋಡುತ್ತಾರೆಯೇ? ಇಲಾಖೆಯ ಅಧಿಕಾರಿಗಳಿಗೆ ಒಂದು ಹುದ್ದೆ, ಸ್ಥಾನ-ಮಾನಗಳಿದ್ದು, ಅದಕ್ಕೆ ಪೂರಕವಾಗಿ ಸಂಬಳ-ಸಾರಿಗೆಗಳಿವೆ. ಆದರೆ ಅವರುಗಳಿಗೆ ಕರ್ತವ್ಯದಲ್ಲಿ ಮಾತ್ರ ಜವಾಬ್ದಾರಿಯೇ ಇಲ್ಲ. ಸದರಿ child labour ಅನ್ನು ಕೆಲಸ ಮಾಡಲು ಬಿಟ್ಟಂತಹ ಅಧಿಕಾರಿಗಳೂ ಸಹ ಸರ್ಕಾರದ ಕಾನೂನಿನ ವ್ಯವಸ್ಥೆಯೊಳಗೆ ಶಿಕ್ಷೆಗೊಳಗಾಗಬೇಕು ಮತ್ತು ಅವರ ವಿರುದ್ಧ ತನಿಖೆಯಾಗಬೇಕು. ಇಂತಹ ಘಟನೆಗಳನ್ನು ತಡೆಯುವುದಕ್ಕೋಸ್ಕರವೇ ಸರ್ಕಾರಿ ವ್ಯವಸ್ಥೆ ಮತ್ತು ಸಮಿತಿಗಳಿವೆ. ಆದರೆ ಅವರುಗಳು ಏನು ಮಾಡಿದ್ದಾರೆ? ಹೀಗಾಗಿ ಅವರುಗಳ ಮೇಲೂ ಸಹ ಕ್ರಮವಾಗಬೇಕು. ಒಟ್ಟಾರೆಯಾಗಿ ಅತ್ಯಾಚಾರಿ, ಮಗುವಿನ ತಾಯಿ, ಕಾರ್ಮಿಕ ಇಲಾಖೆ ಇವರುಗಳ ಮೇಲೆ ಕ್ರಮವಾಗಬೇಕು. ಮುಂದುವರೆದು, ಹಿರಿಯ ಸದಸ್ಯರು ಪ್ರಸ್ತಾಪಿಸಿದಂತೆ, ಸದರಿ ಪ್ರಕರಣವು ಬೆಳಕಿಗೆ ಬಂದ ಮೇಲೂ ಸಹ ಪ್ರಕರಣದ ಆರೋಪಿತರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ಹಿಂದು-ಮುಂದು ನೋಡಿದ ಯಾವುದೇ ಪೋಲೀಸ್ ಅಧಿಕಾರಿ ಇರಲಿ, ಆ ನಿರ್ಲಕ್ಷ್ಯತನವನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಕ್ಕೆ ಸಾಧ್ಯವೇ ಇಲ್ಲ. ಆ ಅಧಿಕಾರಿಗಳು ಬಾಲಕಿಯ ರಕ್ಷಣೆಗೆ ತಕ್ಷಣವೇ ಹೋಗಬೇಕಾಗಿತ್ತು. ಈ ಸಂಗತಿಯನ್ನು ಗೃಹ ಮಂತ್ರಿಗಳು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಅಂತಹ ಅಧಿಕಾರಗಳ ಮೇಲೂ ಸಹ ಕ್ರಮ ತೆಗೆದುಕೊಳ್ಳಬೇಕು.

ಈ ಅತ್ಯಾಚಾರಿಗಳ ಕೃತ್ಯವು ಕೇವಲ ಒಂದು ದಿನಕ್ಕೆ ನಿಲ್ಲುವುದಿಲ್ಲ. ಯುಗ-ಯುಗ ಮತ್ತು ಶತ-ಶತಮಾನಗಳಿಂದ ಅತ್ಯಾಚಾರ ಕೃತ್ಯವು ವ್ಯವಸ್ಥೆಯ ನಡುವೆ ನಡೆಯುತ್ತಿರುತ್ತದೆ ಹಾಗೂ ಇದೊಂದು ಮಾನಸಿಕ ಕಾಯಿಲೆಯಾಗಿದೆ. ಎಲ್ಲರಿಗೂ ಅತ್ಯಾಚಾರ ಮಾಡುವುದಕ್ಕಾಗುವುದಿಲ್ಲ. ಇಂತಹ ಕೃತ್ಯಗಳನ್ನು ಎಸಗುವ ಕಡಿಗೇಡಿಗಳು ಬೆಳೆದುಬಂದ ವಾತಾವರಣ, ಅವರ ಸಹವಾಸಗಳು ಇಂತಹದ್ದನ್ನೂ ಸಹ ಸಮಾಜವು ತಿದ್ದಬೇಕು. ಪ್ರಸ್ತುತ ಪ್ರಕರಣವು ಇವತ್ತಿನ ದಿವಸ ಮುಗಿದು ಹೋಗುತ್ತದೆ. ದೆಹಲಿಯ ನಿರ್ಭಯಾ ಇರಬಹುದು ಅಥವಾ ನಮ್ಮೂರಿನ ಈ ಹೆಣ್ಣುಮಗಳಿರಬಹುದು ಅಥವಾ ಬೆಂಗಳೂರಿನಲ್ಲಿ ಇನ್ನಾರದ್ದೋ ಪ್ರಕರಣವಾಗಿರಬಹುದು; ನಮ್ಮ ಮನೆಯ ಹೆಣ್ಣುಮಕ್ಕಳಿಗೆ ಈ ರೀತಿಯಾಗುವವರೆಗೆ ನಾವು ಮತ್ತು ಸಮಾಜ ಕಾಯಬಾರದಷ್ಟೇ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕರಣವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಇದರಲ್ಲಿ ರಾಜಕೀಯ ಭಾಷೆಯ ಅವಶ್ಯಕತೆಯಿಲ್ಲ. ಆ ಹೆಣ್ಣಿನ ಆಕ್ರಂದನ, ನೋವು, ಅಸಾಯಕತೆ; ತಾನು ನಂಬಿ ಬಂದ ತಾಯಿಯೇ ತನ್ನ ಮೇಲೆ ಇಂತಹ ಅಮಾನವೀಯವಾದ ಘಟನೆಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಕಾಶ ಮಾಡಿಕೊಟ್ಟಾಗ ಆ ಮಗು ಯಾರ ಹತ್ತಿರ ಹೋಗಬೇಕು? ಆ ಹೆಣ್ಣು ಮಗುವಿನ ಅಸಹಾಯಕತೆಯನ್ನು ನಾವು ಅರ್ಥಮಾಡಿಕೊಳ್ಳಬೇಕೇ ವಿನಃ ಇದರಲ್ಲಿ ನಮ್ಮ ರಾಜಕೀಯ ಪಾಂಡಿತ್ಯದ ಅವಶ್ಯಕತೆಯಿಲ್ಲ; ರಾಜಕೀಯದ ಕೆಸರಾಟವೂ ಸಹ ಇದರಲ್ಲಿ ಅವಶ್ಯಕತೆ ಇಲ್ಲ. ಸ್ವತಃ ನನ್ನ ಮಗನೇ ಈ ಕೃತ್ಯವನ್ನು ಮಾಡಿದ್ದರೂ ಸಹ ಅವನು ಶಿಕ್ಷೆಗೊಳಗಾಗಬೇಕು. ಈ ವಿಚಾರದಲ್ಲಿ ನಾವು ಯಾವುದೇ ಸಂಘಟನೆಯನ್ನು ದೂಷಿಸುವುದಿಲ್ಲ. ನಾಳೆಯ ದಿನ ಮತ್ತೆ ಇನ್ನಾವುದೇ ಘಟನೆ ನಡೆದು ಅದು ಹೇಳುವವರ ಸಂಘಟನೆಗೆ ಸೇರಿದರೆ, ಅದಕ್ಕೆ ಅವರುಗಳೆಲ್ಲಾ ಹೊಣೆಗಾರರಾಗುತ್ತಾರೆಯೇ? ಇದಕ್ಕೆ ಯಾರಾದರೂ ಖಾತರಿ ಕೊಡುವುದಕ್ಕೆ ಸಾಧ್ಯವಿದೆಯೇ? ಹೀಗಾಗಿ ಯಾವುದೋ ಒಂದು ವ್ಯಕ್ತಿಗತವಾದಂತಹ ಆ ತಪ್ಪುಗಳನ್ನು ಒಂದು ಸಂಘಟನೆ, ಸಮೂಹ, ಜಾತಿ ಅಥವಾ ಜನಾಂಗಕ್ಕೆ ದೂಷಿಸಬಾರದು. ನಾವುಗಳೆಲ್ಲರೂ ಒಕ್ಕೊರಲಿನಿಂದ ಇದನ್ನು ಖಂಡಿಸಿದ್ದೇವೆ. ದಯಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳಲು ವಿಫಲವಾದ ಎಲ್ಲಾ ಇಲಾಖೆಯ ಅಧಿಕಾರಿಗಳ ಮೇಲೆ ಅದರಲ್ಲೂ ವಿಶೇಷವಾಗಿ ತಡವಾಗಿ ಪ್ರವೇಶಿಸಿದ ಪೊಲೀಸ್ ಇಲಾಖೆಯ ಮೇಲೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಅತ್ಯಾಚಾರ ಪ್ರಕರಣವನ್ನು ಇಂದು ಸದನ ಮತ್ತು ಸಮಾಜ ಎಲ್ಲವೂ ಖಂಡಿಸುವಂತಾಗಿದೆ. ಈಗಾಗಲೇ ಎಲ್ಲಾ ಸದಸ್ಯರು ಈ ವಿಷಯದಲ್ಲಿ ಸಾಕಷ್ಟು ಚರ್ಚೆಯನ್ನು ಮಾಡಿದ್ದಾರೆ. ಕೂಲಿಗಾಗಿ ಬಂದ ಈ ಅಪ್ರಾಪ್ತ ವಯಸ್ಸಿನ ಹೆಣ್ಣು ಮಗುವಿನ ಮೇಲೆ ಅತ್ಯಾಚಾರ ನಡೆದಿರುವುದರಿಂದ ಮೊದಲು ಆ ಹೆಣ್ಣು ಮಗುವಿಗೆ ಆರೋಗ್ಯ ಮತ್ತು ಸಂಪೂರ್ಣ ರಕ್ಷಣೆಯನ್ನು ಸರ್ಕಾರವು ಒದಗಿಸಬೇಕೆಂದು ನಾನು ಸರ್ಕಾರ ಹಾಗೂ ಗೃಹ ಸಚಿವರಲ್ಲಿ ವಿನಂತಿಸುತ್ತೇನೆ. ಆ ಹೆಣ್ಣು ಮಗುವಿನ ಚಿಕ್ಕಮ್ಮನೇ ಇಂತಹ ಕೃತ್ಯಕ್ಕೆ ಪ್ರಚೋದನೆ ನೀಡಿದ್ದಾಳೆಂದು ಈಗಷ್ಟೇ ಸದನದ ಹಿರಿಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್‌ರವರು ಪ್ರಸ್ತಾಪಿಸಿದರು. ಹೀಗಾಗಿ ಇದು ಬಹಳ ನತದೃಷ್ಟ ಮಗುವಾಗಿದೆ. ಈ ಪ್ರಕರಣದಿಂದಾಗಿ ಮಗು ಮತ್ತು ಅವರ ಸಂಬಂಧಿಕರ ಬದುಕಿನಲ್ಲಿ ಎಲ್ಲವೂ ಶೂನ್ಯವಾಗಿದೆ. ಈ ಕಾರಣಕ್ಕಾಗಿ ಮಗುವಿನ ಆರೋಗ್ಯ ಮತ್ತು ಅವಶ್ಯಕವಾದ ರಕ್ಷಣೆಯ ಕಡೆಗೆ ಗಮನವಹಿಸಬೇಕು. ಏಕೆಂದರೆ, ಈ ಪ್ರಕರಣದಲ್ಲಿ 17 ಆರೋಪಿತರುಗಳು ತಿಂಗಳಾನುಗಟ್ಟಲೆ ಅಮಾನವೀಯ ಕೃತ್ಯವನ್ನು ಎಸಗಿದ್ದಾರೆ. ಇದನ್ನು ಹೊರ ಪ್ರಪಂಚಕ್ಕೆ ತಿಳಿಸದಂತೆ ಅಂದರೆ ಯಾರ ಬಳಿಯೂ ಸಹ ಇದನ್ನು ವ್ಯಕ್ತಪಡಿಸದ ರೀತಿಯಲ್ಲಿ ಬಂಧನದಲ್ಲಿ ಸದರಿ ಮಗು ಇತ್ತು ಎಂದು ನಾನು ಭಾವಿಸುತ್ತೇನೆ. ಇದರಲ್ಲಿ ಯಾವುದೇ ರೀತಿಯಾದ ಬೆದರಿಕೆ ಅಥವಾ ಮತ್ತೊಂದು ಇರಬಹುದು. ಒಟ್ಟಾರೆಯಾಗಿ ಆ ಮಗು ಈ ಕೃತ್ಯದ ಬಗ್ಗೆ ಯಾರ ಹತ್ತಿರವೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಹೇಳಿಕೊಳ್ಳಬಾರದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಪತ್ರಿಕಾ ವರದಿಯ ಮೂಲಕ ಬೆಳಕಿಗೆ ಬಂದಿರುವ ಈ ಪ್ರಕರಣವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ದೂರು ದಾಖಲಾಗಿದೆ. ಇದರರ್ಥ ಆ ಮಗುವಿನ ಮೇಲೆ ಅಷ್ಟೊಂದು ಮಟ್ಟದ ಒತ್ತಡ ಅಥವಾ ಬಲವಂತವಿರಬಹುದು. ಆ ಮಗು ಎಲ್ಲಿಯೂ ಸಹ ಈ ಕೃತ್ಯದ ಬಗ್ಗೆ ತನ್ನ ಬಾಯಿಯನ್ನು ಬಿಡಬಾರದು ಮತ್ತು ಯಾರಿಗೂ ಹೇಳಬಾರದು; ಮುಂದುವರೆದು ಯಾರನ್ನೂ ಸಹ ಗುರ್ತಿಸಬಾರದು ಎಂಬುದಾಗಿ ತಿಳಿಸಲಾಗಿತ್ತು. ಈ ದಿಸೆಯಲ್ಲಿ ಮಗುವಿಗೆ ಸೂಕ್ತವಾದ ರಕ್ಷಣೆಯನ್ನು ನೀಡಬೇಕು. ಅದೇ ರೀತಿಯಾಗಿ ಮಗುವಿನ ಆರೋಗ್ಯವೂ ಸಹ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಸರ್ಕಾರವು ಪರಿಗಣಿಸಬೇಕು. ಪೊಲೀಸ್ ಠಾಣೆಗೆ ಪ್ರಸ್ತುತ ಪ್ರಕರಣದ ದೂರು ಬಂದ ತಕ್ಷಣವೇ ಯಾವ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದು-ಮುಂದು ನೋಡಿದ್ದರೋ, ಅಂತಹ ಅಧಿಕಾರಿಗಳ ಮೇಲೆ ತತ್‌ಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಯಾವ ಅಧಿಕಾರಿಯು ವಿಳಂಬ ನೀತಿಯನ್ನು ಅನುಸರಿಸಿದ್ದಾರೆ; ಎಚ್ಚರಿಕೆಯನ್ನು ವಹಿಸಲಿಲ್ಲ ಮತ್ತು ತಕ್ಷಣವೇ ಕ್ರಮ ತೆಗೆದುಕೊಂಡಿಲ್ಲ ಅಂತಹ ಅಧಿಕಾರಿಗಳು ಪ್ರಕರಣದ ತನಿಖೆಯನ್ನು ನಡೆಸಬಾರದು.

**(ಮುಂದು)**

(176)04-02-2021(07-00)ಬಿಎಸ್‌ಡಿ-ಎಂಡಿ

**ಶ್ರೀ ಮರಿತಿಬ್ಬೇಗೌಡ (ಮುಂದು)**

ದಯಮಾಡಿ investigation ಗೆ ವಿಶೇಷವಾದ ದಳವನ್ನು ರೂಪಿಸಬೇಕು, ಇಂತಹ ಪ್ರಕರಣಗಳನ್ನು ನಾವೆಲ್ಲರೂ ವಿಮರ್ಶೆ ಮಾಡಿಕೊಳ್ಳಬೇಕು. ಇದಕ್ಕೆ ವಿಶೇಷ ತನಿಖಾ ತಂಡವನ್ನು ನೇಮಕ ಮಾಡಬೇಕು. ಇಲ್ಲಿರುವ ಸ್ಥಳೀಯ ಪೊಲೀಸ್ ಅಧಿಕಾರಿಗಳನ್ನು ತನಿಖಾ ದಳದ ವ್ಯಾಪ್ತಿಯಿಂದ ಹೊರತೆಗೆದು, ಅವರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು. ಈ ಅತ್ಯಾಚಾರ ಪ್ರಕರಣಕ್ಕೆ ಸುಮಾರು ಕಲಂಗಳನ್ನು ಕೊಟ್ಟಿದ್ದಾರೆ, ಯಾವ ಯಾವ section ಗಳು ಎಂದು ಹೇಳಿದ್ದಾರೆ. ಆದರೆ ಈ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳು ಯಾವುದಾದರೂ section ಬಿಟ್ಟಿದ್ದರೆ ಆ ಎಲ್ಲಾ section ಗಳನ್ನು ತನಿಖೆಯ charge sheet ನಲ್ಲಿ include ಮಾಡಬಹುದು. ಯಾವುದಾದರೂ section ಬಿಟ್ಟಿದ್ದರೆ ಅವುಗಳನ್ನು ಮತ್ತೆ ಸೇರ್ಪಡೆಯಾಗುವಂತೆ ಮಾಡಬೇಕು. ಆ ಮಗುಗೆ ಸೂಕ್ತವಾದ ರಕ್ಷಣೆ ಕೊಟ್ಟು, ಕೆಟ್ಟ ಪೊಲೀಸ್ ಅಧಿಕಾರಿಗಳ ವಿರುದ್ಧ ಕೂಡಲೇ ಕ್ರಮ ಕೈಗೊಂಡು, ನಿಷ್ಪಕ್ಷಪಾತವಾದ ತನಿಖೆಯಾಗಿ ಎಲ್ಲಾ ಆರೋಪಿಗಳಿಗೆ ಶಿಕ್ಷೆಯಾಗಬೇಕು. ಈಗಾಗಲೇ ಅತ್ಯಾಚಾರಿಗಳಿಗೆ ಭಾರತ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶದಲ್ಲಿ ಏನೊಂದು ಶಿಕ್ಷೆಯಾಗಿದೆಯೋ, ಅದೇ ಮಾದರಿಯ ಶಿಕ್ಷೆ ಈ ಪ್ರಕರಣದ ಆರೋಪಿಗಳಿಗೂ ಆಗಬೇಕು. ಆ ರೀತಿ ಕಠಿಣವಾದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಗೃಹ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಪಿ.ಆರ್. ರಮೇಶ್**:- ಮಾನ್ಯ ಸಭಾಪತಿಯವರೇ,......

**ಉಪ ಸಭಾಪತಿಯವರುಃ-** ಈ ಚರ್ಚೆ ನಿಯಮ 68ರಡಿಯಲ್ಲಿ 5-38ಕ್ಕೆ ಪ್ರಾರಂಭವಾಗಿದ್ದು, ನಿಯಮದಲ್ಲಿ ಒಂದು ಗಂಟೆಗಿಂತ ಮೀರದಂತೆ ಅವಕಾಶವನ್ನು ಕೊಡುವಂತೆ ಇಲ್ಲ. ಹಾಗಾಗಿ ಎಲ್ಲರೂ ಹಿರಿಯರಿದ್ದು, ಮಾನ್ಯ ಗೃಹ ಮಂತ್ರಿಗಳು ಮಾತನಾಡಲು ಬಿಡಿ, ಸಾಕು, ಎಲ್ಲಾ ವಿಷಯ ಪ್ರಸ್ತಾಪವಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಆಗಬೇಕಾಗಿದ್ದು, ಅದಕ್ಕಿಂತ ಮುಖ್ಯವಲ್ಲ. ಅದನ್ನು ಪ್ರಾರಂಭ ಮಾಡಲೇಬೇಕು, ದಯವಿಟ್ಟು ಸಹಕಾರ ಕೊಡಿ, ದಯಮಾಡಿ ಅರ್ಥಮಾಡಿಕೊಳ್ಳಬೇಕು.

**ಶ್ರೀ ಪಿ.ಆರ್. ರಮೇಶ್**:- ನಾನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ.

**ಉಪ ಸಭಾಪತಿಯವರುಃ-** ಎರಡು ನಿಮಿಷಗಳಲ್ಲಿ ಮುಕ್ತಾಯ ಮಾಡಿ.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು. ನಾನು ಪೀಠಿಕೆ ಹಾಕದೇ ತಮ್ಮ ಮಾತಿಗೆ ಗೌರವ ಕೊಟ್ಟು ನೇರವಾಗಿ ವಿಷಯಕ್ಕೆ ಬರುತ್ತೇನೆ. ಅಲ್ಲಿ 15 ಜನ ಮಾತ್ರವಲ್ಲದೇ ಇನ್ನೂ ಹೆಚ್ಚು ಜನ ಅತ್ಯಾಚಾರ ಮಾಡಿದ್ದಾರೆ ಎಂದು ಆ ಹುಡುಗಿ ಪೋಲೀಸರ ಬಳಿ ಹೇಳಿದ್ದಾಳೆ. ಆದರೆ ಪೋಲೀಸರು ಆ ಹುಡುಗಿಯಿಂದ complaint ಅನ್ನು ತೆಗೆದುಕೊಂಡಿಲ್ಲ. Basically complaint ಅನ್ನು ಆ ಹುಡುಗಿ ಕೊಡಬೇಕಾಗಿತ್ತು. ಇದನ್ನು ಗಟ್ಟಿ ಮಾಡುವುದಕ್ಕೆ ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ಮಾಡಬೇಕು. 'Nirbhaya Safe City Project' ಎಂದು ಬೆಂಗಳೂರಿನಲ್ಲಿ ಮಾಡಿದ್ದು, ಅದೇ ರೀತಿ 'Nirbhaya Safe Karnataka' ಎಂದು ಏಕೆ ಮಾಡಬಾರದು? It is very important. ಇವತ್ತು ನಮ್ಮ ಕರ್ನಾಟಕವಾಗಿ ನಿರ್ಭಯವಾಗಿ ಇರಬೇಕು. ಕೇಂದ್ರ ಸರ್ಕಾರದ ಸ್ವಾಭಿಮಾನ ಅಥವಾ ಆತ್ಮಾ ನಿರ್ಭರ್ ಯೋಜನೆ ಎಂದು ಹೇಳುತ್ತೇವೆ. ನಾವು ಅದನ್ನು ಅನುಸರಿಸಬೇಕಾದರೆ ನಮ್ಮ ಜನ ಸಂರಕ್ಷಣೆಯಿಂದ ಇರಲು ಕ್ರಮ ತೆಗೆದುಕೊಳ್ಳಬೇಕು. ದಯವಿಟ್ಟು Police Department ನಿಂದ ಈ ಕೆಲಸ ಮಾಡಬೇಕು. ಶಾರದೆ ಇರುವಲ್ಲಿ ಹೆಣ್ಣು ಮಕ್ಕಳ ಶ್ರಾದ್ಧ ಮಾಡುವುದಕ್ಕೆ ಹೋಗಬಾರದು. ಇದು ಒಳ್ಳೆಯದಲ್ಲ! ಶೃಂಗೇರಿ ಶಾರದಮ್ಮ ಇರುವ ನೆಲೆ. ಅಲ್ಲಿ ಶ್ರಾದ್ಧಕ್ಕೆ ಅವಕಾಶ ಕೊಡಬಾರದು. ಈಗಾಗಲೇ ಅಲ್ಲಿ 2016ರಲ್ಲಿ ಒಂದು ಪ್ರಕರಣ ಆಗಿದೆ. ದಯವಿಟ್ಟು ಇದಕ್ಕೆ ಅವಕಾಶ ಕೊಡುವ ರೀತಿಯಲ್ಲಿ ಮಾಡದೇ, ಇದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಂಭೀರವಾಗಿ ತೆಗೆದುಕೊಂಡು ಮಾನ್ಯ ಮರಿತಿಬ್ಬೇಗೌಡರು section ಗಳ ಬಗ್ಗೆ ಹೇಳಿಬಿಟ್ಟಿದ್ದಾರೆ. ಆ section ಗಳನ್ನು re-examine ಮಾಡಿ. Corrigendum ಅಥವಾ inclusion ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಎಸ್.ಆರ್. ಪಾಟೀಲ್**:- ಆ ಹೆಣ್ಣು ಮಗಳಿಗೆ 18 ವರ್ಷ ತುಂಬಿಲ್ಲದ ಕಾರಣ ಸರ್ಕಾರಿ ನೌಕರಿ ಕೊಡಬೇಕು ಮತ್ತು ರಕ್ಷಣೆ ಕೊಟ್ಟು, rehabilitate ಅನ್ನು ಸರ್ಕಾರ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ನನ್ನ ವಿಚಾರ different ಆಗಿದ್ದು, ತನಿಖೆಯ ಕ್ರಮ ಆಯಿತು, ಆ ಮಗುವಿಗೆ ಯಾವ ಪರಿಹಾರ ಕೊಡುತ್ತಾರೆ? ಭವಿಷ್ಯದ ಬದ್ಧತೆಯಾಗಿ ಏನು ಕೊಡುತ್ತಾರೆ ಎಂದು ಹೇಳಬೇಕು.

**ಶ್ರೀ ಎಸ್.ಆರ್. ಪಾಟೀಲ್**:- ಆ ಮಗುವಿಗೆ rehabilitate ಮಾಡಬೇಕು, ಚಿಜಿಣಜಿ attaining the age of majority ಒಂದು ಸರ್ಕಾರಿ ನೌಕರಿ ಕೊಡುವ ವ್ಯವಸ್ಥೆ ಮಾಡಬೇಕು, ಸಮಾಜದಿಂದ ರಕ್ಷಣೆ ಮಾಡುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು.

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಸಚಿವರು)**:- ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಗ್ರಾಮದಲ್ಲಿ 15 ವರ್ಷದ ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಹಲವಾರು ದಿವಸಗಳಿಂದ ನಡೆದಿದ್ದು, ಅದನ್ನು ಮುಚ್ಚಿಡುವ ಪ್ರಯತ್ನ ನಡೆದು, ಅವರ ಚಿಕ್ಕಮ್ಮನವರು ಇದರಲ್ಲಿ ಭಾಗಿಯಾಗಿರುವುದು, ತದನಂತರ ವಿವಿಧ ಹಂತದಲ್ಲಿ ಸಂಶಯ ಬಂದು ಆ ಗ್ರಾಮಗಳಲ್ಲಿ ಗುಸುಗುಸು ಸುದ್ದಿ ಪ್ರಾರಂಭವಾಯಿತು. ಇದು ಪ್ರಾರಂಭವಾದ ಹಿನ್ನೆಲೆಯಲ್ಲಿ ಆ ಮಗುವನ್ನು ಪಡೆದು ಅಲ್ಲಿನ ಸ್ವಾಂತನ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಎರಡು ದಿವಸ ಕೂಲಂಕಷವಾಗಿ ಚರ್ಚೆ ಮಾಡಿ police complaint ಆಯಿತು. ಆದರೆ ಈ ಘಟನೆಗೆ ಬಹಳ ದೊಡ್ಡ ಗಾಂಭೀರ್ಯತೆ ಇದೆ. ಇಲ್ಲಿ ಕೇವಲ ಒಂದು ಅತ್ಯಾಚಾರ-ಅನಾಚಾರದ ವಿಷಯ ಅಲ್ಲ, it is an organized crime. ಒಂದು ಸಂಘಟಿತವಾದ, ವ್ಯವಸ್ಥಿತವಾದ ಹೇಯ ಕೃತ್ಯ ನಡೆದಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಇಷ್ಟು ದಿವಸ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅತ್ಯಾಚಾರ ಮಾಡಿದ್ದಾರೆ ಎಂದರೆ ನಾವೆಲ್ಲರೂ ತಲೆ ತಗ್ಗಿಸಬೇಕಾಗಿದೆ. ಸಾಮಾಜಿಕ ವ್ಯವಸ್ಥೆ ಮತ್ತು ಆಡಳಿತದಲ್ಲಿ ಕೆಳಹಂತದ ಅಧಿಕಾರಿಗಳಿಂದ ಲೋಪವಾಗಿದೆ, ಇದರಲ್ಲಿ ಎರಡು ಮಾತಿಲ್ಲ. ನನಗೆ ಬಹಳಷ್ಟು ನೋವಾಗಿದೆ. ಮಾನ್ಯ ಸದಸ್ಯರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿಯೊಂದು ಮಾತುಗಳು ನನ್ನ ಹೃದಯಕ್ಕೆ ಮುಟ್ಟಿವೆ. ನಾನು ಇದನ್ನು ಬಹಳ ನೋವಿನಿಂದ ತೆಗೆದುಕೊಂಡಿದ್ದೇನೆ. ನಾನು ಜೀವನದಲ್ಲಿ ವಿಶೇಷವಾಗಿ ಗೃಹ ಸಚಿವನಾಗಿ ಇದು ಅತ್ಯಂತ ಕರಾಳ ದಿನ ಎಂದುಕೊಂಡಿದ್ದೇನೆ. ಇದರಲ್ಲಿ ಕೇವಲ ಸರ್ಕಾರ, ಮಂತ್ರಿಗಳು, ರಾಜಕಾರಣಿಗಳ ಪ್ರಶ್ನೆ ಅಲ್ಲ. 15 ವರ್ಷದ ಬಾಲಕಿ ಉಂಡಿರುವ ನೋವಿನ ಬಗ್ಗೆ ನಾವು ಪ್ರಾಮಾಣಿಕವಾಗಿ ಯೋಚನೆ ಮಾಡಿದರೆ ನಾವೆಲ್ಲರೂ ನಮ್ಮ ನೈತಿಕತೆಯನ್ನು ಎಲ್ಲಿ ಕಳೆದುಕೊಂಡಿದ್ದೇವೆ ಎಂಬ ಚಿಂತನೆ ಪ್ರಾರಂಭವಾಗುತ್ತದೆ. ಬಡತನ, ಅಸಹಾಯಕತೆ, ಕೆಲಸಕ್ಕಾಗಿ ಸಣ್ಣ ವಯಸ್ಸಿನಲ್ಲಿ ಕುಟುಂಬ ಸಮಸ್ಯೆ ಬೇರೆ ಬೇರೆ ಊರಿಗೆ ಹೋಗುವುದು, ನಮ್ಮ ಊರು, ನಮ್ಮ ಮನೆ ಮತ್ತು ನಮ್ಮ ಸುರಕ್ಷತೆಯನ್ನು ಬಿಟ್ಟು ಯಾವುದೇ ರೀತಿಯ ರಕ್ಷಣೆ ಇಲ್ಲದಿರುವ ಸ್ಥಳಗಳಿಗೆ ಹೋಗಿ ಕೆಲಸ ಮಾಡುವುದು, ಆ ಕುಟುಂಬದವರು ಸಣ್ಣ ಸಣ್ಣ ಮಕ್ಕಳನ್ನು ಅವರು ಗಂಡಾಗಿರಲಿ ಅಥವಾ ಹೆಣ್ಣಾಗಿರಲೀ, ಆ ಕೆಲಸ ಮಾಡುವ ಜಾಗದ ಬಯಲಿನಲ್ಲಿ ಬಿಟ್ಟು, ಬಿಸಿಲನ್ನು ಲೆಕ್ಕಿಸದೇ ಕೆಲಸವನ್ನು ಮಾಡಿ ಹೊಟ್ಟೆ ತುಂಬಿಕೊಳ್ಳುವ ಬಡತನದ ಪರಿಸ್ಥಿತಿಯು ಅಸಹಾಯಕತೆಯನ್ನು ಹುಟ್ಟಿ ಹಾಕುತ್ತದೆ.

ಮುಂದು)

**(177)/04.02.2021/7.10/ಹೆಚ್‌ವಿಃಎಕೆ**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದುವರಿದದ್ದು):**

ಸನ್ಮಾನ್ಯ ಸಭಾಪತಿಯವರೇ, ಆ ಅಸಹಾಯಕತೆಯೇ ಇವತ್ತು ದುಷ್ಕರ್ಮಿಗಳಿಗೆ ಆಹಾರವಾಗಿದೆ. ಇಂತಹ ಹಲವಾರು ಪ್ರಕರಣಗಳು ನಡೆದಂತಹ ಸಂದರ್ಭದಲ್ಲಿ ಅವು ತಾರ್ಕಿಕ ಹಂತಕ್ಕೆ ಹೋಗದೇ ಇರುವುದರಿಂದ ಇಂತಹ ಶಕ್ತಿಗಳಿಗೆ ಪ್ರೋತ್ಸಾಹ ದೊರೆಯುತ್ತಿದೆ. ಸಮಾಜ ಹಾಗೂ ಜನ ಪ್ರತಿನಿಧಿಗಳಾದ ನಾವುಗಳು ಇದರ ಬಗ್ಗೆ ಸೂಕ್ಷ್ಮತೆಯನ್ನು ಪ್ರದರ್ಶನ ಮಾಡದೇ ಹೋದರೆ, ನಾವು ಕರ್ತವ್ಯ ಲೋಪ ಎಸಗಿದಂತಾಗುತ್ತದೆ. ಇಂತಹ ಘಟನೆ ನಡೆದಾಗ ವಿಧಾನ ಮಂಡಲದಲ್ಲಿ ಈ ರೀತಿಯಾದ ಚರ್ಚೆ ನಡೆದಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆಯೆಂದು ನಾನು ಭಾವಿಸುತ್ತೇನೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ನಾನು ಮಾನ್ಯ ಸದಸ್ಯರುಗಳ ಟೀಕೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುತ್ತಿದ್ದೇನೆ. ಮಾನ್ಯ ಸದಸ್ಯರುಗಳು ಹಲವಾರು ವಿಚಾರಗಳ ಬಗ್ಗೆ ಈ ದಿನ ಬೆಳಕು ಚೆಲ್ಲಿದ್ದಾರೆ. ಅವರೆಲ್ಲರ ವಿಚಾರಧಾರೆಯನ್ನು ಈ ಸ್ಥಾನದಲ್ಲಿ ಕುಳಿತುಕೊಂಡು ಕೇಳಿಸಿಕೊಳ್ಳುತ್ತಿದ್ದಾಗಲೇ ನಾನು ನಿರ್ಧಾರ ಮಾಡಿದೆ, 'ಈ ಚರ್ಚೆಯನ್ನು ನಾನು ಸಕಾರಾತ್ಮಕವಾಗಿ ತೆಗೆದುಕೊಂಡು, ಇಂತಹ ಹೇಯಕೃತ್ಯ ಎಸಗಿದವರು ಯಾರೇ ಇರಲಿ ಅವರನ್ನು ಇವತ್ತಿನ ಅತ್ಯಂತ ಕಠಿಣ ಶಿಕ್ಷೆಯಾಗಿರುವ ಗಲ್ಲು ಶಿಕ್ಷೆಗೆ ಒಳಪಡಿಸುವುದಕ್ಕೆ ಬೇಕಾಗಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ' ಎನ್ನುವ ದೃಢ ನಿರ್ಧಾರವನ್ನು ನಾನು ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಪಕ್ಷಾತೀತವಾಗಿ ಪ್ರತಿಯೊಬ್ಬ ಸದಸ್ಯರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅವರಿಂದ ಒಂದೊಂದು ಮಾರ್ಗದರ್ಶನದ ಅಂಶಗಳನ್ನು ನಾನು ಪಡೆದುಕೊಂಡಿದ್ದೇನೆ. ಪ್ರತಿಯೊಬ್ಬ ಸದಸ್ಯರು ಒಂದೇ ವಿಚಾರವನ್ನು ಬೇರೆಬೇರೆ ರೀತಿಯಲ್ಲಿ ಹೇಳಿದಂತಹ ಸಂದರ್ಭದಲ್ಲಿ ಈ ನಿಟ್ಟಿನಲ್ಲಿ ಯಾವ ಕ್ರಮ ತೆಗೆದುಕೊಳ್ಳಬಹುದು ಎನ್ನುವ ಹೊಸ ಚಿಂತನೆ ಮಾಡುವುದಕ್ಕೆ ನಾನು ಪ್ರಾರಂಭಿಸಿದ್ದೇನೆ. ಕೆಳಮನೆಯಲ್ಲಿ ಈ ವಿಚಾರದ ಬಗ್ಗೆ ಉತ್ತರವನ್ನು ಕೊಡುತ್ತಿದ್ದ ಸಂದರ್ಭದಲ್ಲಿ ತಪ್ಪಿತಸ್ಥರು ಯಾರೇ ಇರಲಿ ಅವರನ್ನು ಉಗ್ರ ಶಿಕ್ಷೆಗೆ ಒಳಪಡಿಸುತ್ತೇವೆ, ಅವರ ಮೇಲೆ ಕಠಿಣ ಕ್ರಮವನ್ನು ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ. ಈ ವಿಚಾರ ಕೆಳಮನೆಯಲ್ಲಿ ಪ್ರಸ್ತಾಪವಾಗುವುದಕ್ಕೂ ಮುಂಚೆ ಈ ಘಟನೆಯ ಬಗ್ಗೆ ವರದಿಯನ್ನು ಕೇಳಿದ್ದೆ; ಇದರ ಜೊತೆಗೆ ನಮ್ಮ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎನ್ನುವುದರ ಬಗ್ಗೆ ವರದಿಯನ್ನು ಕೇಳಿದ್ದೆ. ಈಗ ನಡೆದಿರುವ ಚರ್ಚೆಯ ಹಿನ್ನೆಲೆಯಲ್ಲಿ ನಾವು ತೆಗೆದುಕೊಳ್ಳುವಂತಹ ನಿರ್ಣಯ ಇಡೀ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಅಬಲೆಯವರಿಗೂ ಈ ಸದನದ ಮೂಲಕ ಒಂದು ಸಂದೇಶವನ್ನು ಕಳುಹಿಸಿಕೊಡಬೇಕಾಗಿದೆ. ನಾವೆಲ್ಲರೂ ಅಬಲೆಯರ ರಕ್ಷಣೆಗಾಗಿ ಇದ್ದೇವೆ. ಯಾರಾದರೂ ಅನಾಚಾರ ಅತ್ಯಾಚಾರ ಮಾಡಿದರೆ, ಈ ಸಮಾಜ ಈ ಸರ್ಕಾರ, ಈ ವ್ಯವಸ್ಥೆ, ಈ ಜನಪ್ರತಿನಿಧಿಗಳು ಸುಮ್ಮನೆ ಬಿಡುವುದಿಲ್ಲ. ಪ್ರಜಾಪ್ರಭುತ್ವವೆಂದರೆ, ತಮಗೆ ಬೇಕಾದ ರೀತಿ ಸ್ವೇಚ್ಛಾಚಾರದಿಂದ ವರ್ತಿಸುವಂತಿಲ್ಲ, ಅತ್ಯಾಚಾರ ಮಾಡುವಂತಿಲ್ಲ ಎನ್ನುವಂತಹ ಸಂದೇಶವನ್ನು ನಾವು ಈ ಸದನದಿಂದ ಕಳುಹಿಸಬೇಕಾಗಿದೆ. ಆ ದೃಷ್ಟಿಯಿಂದ ಈ ಚರ್ಚೆಯ ಅಂತಿಮ ನಿರ್ಣಯವಾಗಬೇಕೆನ್ನುವ ತೀರ್ಮಾನಕ್ಕೆ ನಾನು ಬಂದಿದ್ದೇನೆ. ನೈತಿಕತೆಯ ವಿಚಾರದಲ್ಲಿಯೂ ಸಹ ನಾನು ಸಾಕಷ್ಟು ಚಿಂತನೆಗಳನ್ನು ಮಾಡಿದ್ದೇನೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ನನ್ನ ನೈತಿಕತೆಯ ಬಗ್ಗೆ ಮಾತನಾಡಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು.)**

ಸನ್ಮಾನ್ಯ ಸಭಾಪತಿಯವರೇ, ಜನರ ಮಾನ, ಪ್ರಾಣಗಳನ್ನು ರಕ್ಷಣೆ ಮಾಡುವಂತಹ ಹೊಣೆಗಾರಿಕೆಯನ್ನು ನಾವು ಹೊತ್ತಿದ್ದೇವೆ. ಈ ಹೊಣೆಗಾರಿಕೆಯಲ್ಲಿ ಎಲ್ಲಿಯೂ ಕೂಡ ಕೊರತೆಯುಂಟಾಗಬಾರದು. ಒಂದು ವೇಳೆ ಇದರಲ್ಲಿ ಕೊರತೆಯುಂಟಾಗಿದ್ದರೆ, ಏನು ಮಾಡಬೇಕು ಎನ್ನುವುದರ ಬಗ್ಗೆ ನಾನು ಚಿಂತನೆ ಮಾಡುವುದಕ್ಕೆ ಪ್ರಾರಂಭಿಸಿದ್ದೇನೆ. ನಾನು ಈ ಮೊದಲೇ ಹೇಳಿದಂತೆ ಅಪರಾಧಿಗಳನ್ನು ಗಲ್ಲಿಗೇರಿಸುವವರೆವಿಗೂ ನಾವು ವಿಶ್ರಮಿಸುವುದಿಲ್ಲ ಎನ್ನುವುದನ್ನು ಪಾಲನೆ ಮಾಡಬೇಕೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಈ ಜವಾಬ್ದಾರಿಯಿಂದ ವಿಮುಕ್ತವಾಗಬೇಕೇ ಎನ್ನುವ ದ್ವಂದ್ವದಲ್ಲಿ ನಾನಿದ್ದೇನೆ. ನಾನು ಅವತ್ತಿನ ಘಟನೆಯನ್ನು ಅವತ್ತಿನ ಗೃಹ ಸಚಿವರನ್ನು, ಅವತ್ತಿನ ಮುಖ್ಯಮಂತ್ರಿಗಳನ್ನು ಮತ್ತು ಅವತ್ತಿನ ವಿರೋಧ ಪಕ್ಷದ ಸದಸ್ಯರುಗಳನ್ನು ಸ್ಮರಿಸುತ್ತೇನೆ. ಅತ್ಯಂತ ಉನ್ನತ ಮಟ್ಟದ ನೈತಿಕತೆಯನ್ನು ಅವರುಗಳು ಬಿಟ್ಟು ಹೋಗಿದ್ದಾರೆ. ಕಾಲ ಬಹಳ ಬದಲಾವಣೆಯಾಗಿದೆ. ಮೌಲ್ಯಗಳು ಬದಲಾವಣೆಯಾಗಿವೆ. ಸಮಾಜದಲ್ಲಿ ಸ್ಥಾನಗಳಲ್ಲಿಯೂ ಮಹತ್ವದ ಬದಲಾವಣೆಗಳಾಗಿವೆ. ಇದೆಲ್ಲದರ ಮಧ್ಯೆ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿವೆ. ಬಹಳ ಹಿಂದೆ ಅಲ್ಲೊಂದು ಇಲ್ಲೊಂದು ನಡೆಯುತ್ತಿದ್ದ ವಿರಳ ಘಟನೆಗಳಿಗೆ ಹಿಂದಿನವರು ಅಷ್ಟೊಂದು ಸೂಕ್ಷ್ಮತೆಯನ್ನು ಪ್ರದರ್ಶನ ಮಾಡಿದ್ದರು. ಇವತ್ತು ದೇಶದ ತುಂಬಾ ಅರಾಜಕತೆ ಮತ್ತು ಅನಾಗರೀಕತೆಗಳಿಂದಾಗಿ ಎಷ್ಟು ಪ್ರಮಾಣದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿವೆ ಎನ್ನುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ ಮತ್ತು ಈ ವಿಚಾರವನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ದಿನನಿತ್ಯ ಪತ್ರಿಕೆಗಳಲ್ಲಿ ಇಡೀ ಒಂದು ಪುಟ ಅಪರಾಧ ಸುದ್ದಿಗಳಿಂದ ತುಂಬಿರುತ್ತದೆ. ನಾನು ಮೊದಲು ಪತ್ರಿಕೆಯನ್ನು ಓದುವಾಗ ಮುಖಪುಟವನ್ನು ಓದುತ್ತಿದ್ದೆ, ಗೃಹ ಸಚಿವನಾದ ಮೇಲೆ ಕ್ರೈಮ್ ಪುಟವನ್ನು ಓದುತ್ತಿದ್ದೇನೆ. ಅಪರಾಧಗಳ ವೈಭವೀಕರಣವಾಗುತ್ತಿದೆ. ಇದರ ಮಧ್ಯೆ ನಮ್ಮ ಕರ್ತವ್ಯವನ್ನು ನಿಭಾಯಿಸುವ ನಿಟ್ಟಿನಲ್ಲಿ ನೈತಿಕತೆಯನ್ನು ಇಟ್ಟುಕೊಳ್ಳುವುದು ನಮ್ಮನಿಮ್ಮೆಲ್ಲರ ಕರ್ತವ್ಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸದರಿ ಪ್ರಕರಣದಲ್ಲಿ ಅತ್ಯಾಚಾರ ಎಸಗಿದಂತಹ 20–30 ಜನರು ಯಾರಿದ್ದಾರೆ ಅವರನ್ನು ದಸ್ತಗಿರಿ ಮಾಡಿ, ಕಠಿಣವಾಗಿರುವ ಸೆಕ್ಷನ್‌ಗಳನ್ನು ಹಾಕುವುದಕ್ಕೆ ಈಗಾಗಲೇ ನಾಲ್ಕು ತಂಡಗಳನ್ನು ರಚನೆ ಮಾಡಿದ್ದೇವೆ. ತಪ್ಪಿತಸ್ಥರನ್ನು ಅತೀ ಶೀಘ್ರವಾಗಿ ಬಂಧಿಸಲಾಗುತ್ತದೆ. ಈ ಪ್ರಕರಣದ ಸಂಪೂರ್ಣ ತನಿಖೆಯ ಹೊಣೆಗಾರಿಕೆಯನ್ನು ಎಸ್.ಪಿ. ಅವರಿಗೆ ವಹಿಸಲಾಗಿದೆ. ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಕೊಟ್ಟಿಲ್ಲ. Under the supervision of S.P., ಒಬ್ಬ ಒಳ್ಳೆಯ ಆಫೀಸರ್ ಇದ್ದಾರೆ ಅವರ ಕೈಗೆ ತನಿಖೆಗಾಗಿ ಈ ಪ್ರಕರಣವನ್ನು ಕೊಟ್ಟಿದ್ದೇನೆ. ಅವರು ಮತ್ತು ಐ.ಜಿ. ಅವರಿಂದ ರಿಪೋರ್ಟ್ ಪಡೆದುಕೊಳ್ಳಲಾಗುತ್ತದೆ. ನಾನು ಜಿಲ್ಲೆಯ ವರಿಷ್ಠಾಧಿಕಾರಿಯವರನ್ನು ಈ ಬಗ್ಗೆ ಟೆಸ್ಟ್ ಮಾಡಿದ್ದೇನೆ. ನಾನು ಒಂದು ವರದಿಯನ್ನು ಕೇಳಿದಾಗ, ಪ್ರಾಮಾಣಿಕತೆಯಿಂದ ವರದಿಯನ್ನು ಕೊಡುತ್ತಾರೆಯೇ ಅಥವಾ ಯಾರನ್ನಾದರೂ ರಕ್ಷಣೆ ಮಾಡುತ್ತಾರೆಯೇ ಎಂದು ಅವರನ್ನು ಸಹ ಟೆಸ್ಟ್ ಮಾಡಿದ್ದೇನೆ. ಅವರು ಕೊಟ್ಟ ರಿಪೋರ್ಟ್ ಮೇಲೆ ನನಗೆ ವಿಶ್ವಾಸವಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಇತರರನ್ನು ಸಹ ಅತೀ ಶೀಘ್ರವಾಗಿ ಅರೆಸ್ಟ್ ಮಾಡುವುದಲ್ಲದೇ ಸರಿಯಾದಂತಹ ಕಾನೂನು ಕ್ರಮವನ್ನು ಕೈಗೊಳ್ಳಲಾಗುತ್ತದೆ. ಎರಡನೆಯದಾಗಿ ಗೃಹ ಇಲಾಖೆಯ ಲೋಪದ ಬಗ್ಗೆ ಅವರ ವರದಿಯಲ್ಲಿ ಕೆಲವು ಅಂಶಗಳನ್ನು ಹೇಳಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ನಾನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಸಂಬಂಧಪಟ್ಟ ಪೊಲೀಸ್ ಠಾಣೆಯ ಎಸ್.ಹೆಚ್.ಓ. ಅವರನ್ನು ಈ ಕೂಡಲೇ ಸಸ್ಪೆಂಡ್ ಮಾಡಬೇಕೆನ್ನುವ ಆಜ್ಞೆಯನ್ನು ನಾನು ಈ ಸದನದ ಮೂಲಕ ನೀಡುತ್ತಿದ್ದೇನೆ. ಅಷ್ಟೇ ಅಲ್ಲ, ಈ ಪ್ರಕರಣದಲ್ಲಿ ಮತ್ತ್ಯಾರಾದರು ಭಾಗಿಯಾಗಿದ್ದರೆ, those who have connived if at all they have connived, ಅವರ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆಯನ್ನು ಕೊಡುತ್ತೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ತನಿಖೆ ಮುಗಿಯುವವರೆಗೂ ಸಂಬಂಧಪಟ್ಟ ಎಸ್.ಪಿ.ಯವರು ಇದರ ಮೇಲೆ ನಿಯಂತ್ರಣ ಇಡಬೇಕೆಂದು ಹೇಳಿದ್ದೇನೆ. ಐ.ಜಿ.ಯವರಿಂದ ನಮ್ಮ ಅಧಿಕಾರಿಗಳ ಲೋಪದ ಬಗ್ಗೆ ತನಿಖೆ ಮಾಡುವುದಕ್ಕೆ ಸೂಚನೆಯನ್ನು ಕೊಡುತ್ತೇನೆ ಕಾರ್ಮಿಕ ಇಲಾಖೆಯಾಗಿರಬಹುದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಾಗಿರಬಹುದು ಹಾಗೂ ಸಂಬಂಧಪಟ್ಟಂತ ಇನ್ನಿತರೆ ಇಲಾಖೆಗಳಲ್ಲಿ ಯಾರಾದರು ಅಧಿಕಾರಿಗಳು ಲೋಪವೆಸಗಿದ್ದರೆ, ಅದರ ಬಗ್ಗೆಯೂ ವಾಸ್ತವಾಂಶದ ಬಗ್ಗೆ ಇಲಾಖಾ ತನಿಖೆ ಮಾಡಿಸಿ, ಆ ಅಧಿಕಾರಿಗಳ ಮೇಲೂ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದಲ್ಲದೇ, ಆ ಮಗುವಿಗೆ ಏನೆಲ್ಲ ಪರಿಹಾರ ಕೊಡುವುದಕ್ಕೆ ಸಾಧ್ಯವಿದೆ ಅಂದರೆ, ಹಣಕಾಸಿನ ನೆರವು, ಮನೆ ಕೊಡುವುದು ಅವರ ಕುಟುಂಬಕ್ಕೆ..........

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಒಂದು 'ಡಿ' ಗ್ರೂಪ್ ನೌಕರಿ ಕೊಡಬೇಕು. ಇಲ್ಲದಿದ್ದರೆ ಅವರು ಬದುಕುವುದು ಕಷ್ಟವಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾನು ಗಂಭೀರವಾಗಿ ತೆಗೆದುಕೊಂಡು ಮಾತನಾಡುತ್ತಿರುವಾಗ, ಅವರು ಮಧ್ಯೆ ಎದ್ದು ನಿಂತು ಮಾತನಾಡಿದರೆ ಹೇಗೆ? ಅವರು ಪಾಠ ಮಾಡುವಂತಹ ಸಂದರ್ಭದಲ್ಲಿ ಮಧ್ಯದಲ್ಲಿ ಒಬ್ಬ ವಿದ್ಯಾರ್ಥಿ ಎದ್ದು ನಿಂತು ಮಾತನಾಡಿದರೆ ಸರಿ ಹೋಗುತ್ತದೆಯೇ? ಆ ಸ್ಥಾನಕ್ಕೆ ಅವರು ಹೋಗುವುದು ಬೇಡ. ಹೀಗೆ ಅವರು ಮಧ್ಯೆ ಎದ್ದು ನಿಂತು ಮಾತನಾಡಿದರೆ, ನನ್ನ ಯೋಚನಾ ಲಹರಿ ಕಡಿತಗೊಳ್ಳುತ್ತದೆ.

(ಮುಂದುವರಿದಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(178) 4.2.2021 7.20 ಪಿಕೆ:ಎಕೆ

**ಶ್ರೀ ಬಸವರಾಜ ಬೊಮ್ಮಾಯಿ(ಮುಂದುವರೆದಿದೆ)**

ಮಾನ್ಯ ಸಭಾಪತಿಯವರೇ, ಆ ಬಾಲಕಿ ಪ್ರಾಪ್ತ ವಯಸ್ಸಿಗೆ ಬಂದಾಗ, ಮತ್ತೆ ಕೂಲಿಗೆ ಹೋಗದಂತೆ, ಸರ್ಕಾರದಿಂದ ಒಂದು ಉದ್ಯೋಗ ಕೊಡುವ ನಿಟ್ಟಿನಲ್ಲಿ ಏನು ಮಾಡಬೇಕು ಆ ಕ್ರಮವನ್ನು ಜರುಗಿಸುತ್ತೇವೆ. ನನ್ನ ನೈತಿಕತೆ ಪ್ರಶ್ನೆ ಬಂದಾಗ ನಾನು ಯೋಚನೆ ಮಾಡಿದೆ. ಇವತ್ತು ನಾನು ಈ ಹೊಣೆಗಾರಿಕೆಯನ್ನು ಬಿಟ್ಟು ಹೋದರೆ ಆ ಬಾಲಕಿಗೆ ಸರಿಯಾದ ನ್ಯಾಯ ಸಿಗುತ್ತದೆಯೋ ಇಲ್ಲವೋ ಗೊತ್ತಿಲ್ಲ, ಇನ್ನು ಮುಂದೆ ನಡೆಯುವಂತಹ ಪ್ರಕರಣಗಳಿಗೆ ಒಂದು ದಿಟ್ಟ ಕ್ರಮ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ನೈತಿಕತೆ ಅಷ್ಟೇ ಅಲ್ಲ, ನೈತಿಕ ಹೊಣೆಗಾರಿಕೆ, ನೈತಿಕ ಜವಾಬ್ದಾರಿಯನ್ನು ನೆನಪು ಮಾಡಿಕೊಂಡೆ. It is not only the morality, but it is also a moral responsibility. ಆದ್ದರಿಂದ ಈ moral responsibility ಏನಿದೆ, ಅದನ್ನು ಪೂರ್ಣ ಮಾಡುವ ಸಲುವಾಗಿ ನಾನು ಈ ಕರ್ತವ್ಯದಲ್ಲಿ, ಈ ದಿಕ್ಕಿನಲ್ಲಿ, ಈ ದಿಸೆಯಲ್ಲಿ ಕೆಲಸ ಮಾಡುತ್ತೇನೆ, ನನ್ನ ನೈತಿಕ ಜವಾಬ್ದಾರಿ ಎಲ್ಲಿಗೆ ಮುಗಿಯುತ್ತದೆ ಎಂದರೆ, ಯಾವ ನೀಚರು ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ್ದಾರೋ ಅವರನ್ನು ಗಲ್ಲಿಗೇರಿಸುವಂತಹ ಶಿಕ್ಷೆಗೆ ಪ್ರಯತ್ನ ಮಾಡುತ್ತೇನೆ, ನ್ಯಾಯಾಂಗದ ಮೂಲಕ ನಿಜವಾಗಲೂ ಕೂಡ ಆ ಮಗುವಿನ ಅತ್ಯಾಚಾರಿಗಳಿಗೆ ಶಿಕ್ಷೆ ಕೊಡುವ ಮುಖಾಂತರ ನ್ಯಾಯವನ್ನು ಒದಗಿಸುತ್ತೇನೆ. ಅಲ್ಲಿಯವರೆಗೆ ನನ್ನ ಕರ್ತವ್ಯ ಮುಗಿಯುವುದಿಲ್ಲ, ನಾನು ವಿಶ್ರಮಿಸುವುದಿಲ್ಲ. I will go by my moral responsibility. ಇದೆಲ್ಲಕ್ಕೂ ಈ ಕಡೆ ಆ ಕಡೆಯವರ ಸಹಕಾರ ಬೇಕು. ಇದೊಂದು ಮಾದರಿ ಶಾಕ್ ಆಗಬೇಕು. ಆವತ್ತು ನಿರ್ಭಯಾ ಪ್ರಕರಣವಾಯಿತು, ಇವತ್ತು ಈ ಪ್ರಕರಣವಾಯಿತು ಎಂದು, ಮತ್ತು ನಾಳೆ ಇನ್ನೊಂದು ಬಂದಾಗ ಮತ್ತೆ ಚರ್ಚೆ ಆಗುವುದು ಬೇಡ. ಇವತ್ತು ನಾವಿದ್ದೇವೆ, ನಾವು ಜೀವಂತವಾಗಿದ್ದೇವೆ ಎಂದು ತೋರಿಸಬೇಕಿದೆ. ನಾವು ಕೇವಲ ಉಸಿರಾಡಿದರೆ ಜೀವಂತವಾಗಿದ್ದೇವೆ ಎಂದು ತಿಳಿದುಕೊಳ್ಳಬಾರದು, ಇಂತಹ ಸಂದರ್ಭಗಳಲ್ಲಿ ನಾವು ಯಾವರೀತಿ ನಡೆದುಕೊಳ್ಳುತ್ತೇವೆ, ನಮ್ಮ ಜವಾಬ್ದಾರಿಯನ್ನು ಯಾವರೀತಿ ನಿರ್ವಹಿಸುತ್ತೇವೆ, ನೈತಿಕ ಹೊಣೆಗಾರಿಕೆಯನ್ನು ಯಾವರೀತಿ ಹೊರುತ್ತೇವೆ ಎಂದು ತೋರಿಸುವ ಅವಶ್ಯಕತೆ ಇದೆ. ನಾನು ಯಾವ ಕ್ಷಣ ನನ್ನ ನೈತಿಕ ಹೊಣೆಗಾರಿಕೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಆ ಕ್ಷಣ ಈ ಸ್ಥಾನದಲ್ಲಿ ಇರುವುದಿಲ್ಲ ಎನ್ನುವ ಮಾತನ್ನು ಹೇಳಿ, ಆ ನೈತಿಕ ಹೊಣೆಗಾರಿಕೆಯನ್ನು ಹೊರುತ್ತೇನೆ ಎಂದು ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದ ಮುಖಾಂತರ ಕನ್ನಡ ಜನತೆಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಬಲೆಯವರಿಗೆ ಈ ವಿಶ್ವಾಸವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಚಿವರ ನಿಲುವನ್ನು ಸ್ವಾಗತ್ತಿಸುತ್ತೇವೆ. ಈ ಕೇಸ್ ವೇಗವಾಗಿ ಆಗಬೇಕು ಎಂದರೆ Fast Track Court ಮಾಡಿದರೆ continuous ಆಗಿ ನ್ಯಾಯ ಸಿಗುವುದಕ್ಕೆ ಅನುಕೂಲವಾಗುತ್ತದೆ ಎಂದು ಸಲಹೆ ಕೊಡಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, POCSO Court ಮಾಡಿದ್ದೇವೆ, Special Lawyers ನೇಮಿಸಿದ್ದೇವೆ. ಅದನ್ನು ಹೇಳಿದರೆ ವಿಷಯ ಡೈಲ್ಯೂಟ್ ಆಗುತ್ತದೆ, ವ್ಯವಸ್ಥೆಯಲ್ಲೇನಿದೆಯೋ ಅದನ್ನು ಮಾಡುತ್ತೇವೆ.

**ಶ್ರೀ ಪಿ.ಆರ್.ರಮೇಶ್:-** ಬೆಂಗಳೂರು ಸಿಟಿಗೆ 'ನಿರ್ಭಯಾ ಸೇಫ್ ಸಿಟಿ' ಎಂದು ಏನು ಪ್ರಾಜೆಕ್ಟ್ ಕೊಟ್ಟಿದ್ದೀರೋ ಅದೇರೀತಿ ಕರ್ನಾಟಕಕ್ಕೆ ಕೊಡುವುದಕ್ಕೆ ವ್ಯವಸ್ಥೆ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಅಪ್ರಾಪ್ತ ಬಾಲಕಿಯ ಮೇಲೆ ಆದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆ ಕಡೆಯವರು ಮತ್ತು ಈ ಕಡೆಯವರು ಎಲ್ಲರೂ ಅತ್ಯುತ್ತಮವಾದ ವಿಚಾರಗಳನ್ನು, ಪ್ರಖರವಾದ ವಿಚಾರಗಳನ್ನು ವ್ಯಕ್ತ ಮಾಡಿದಾಗ ಸರ್ಕಾರದ ಪರವಾಗಿ ಗೃಹ ಮಂತ್ರಿಗಳು ಬಹಳ ತೃಪ್ತಿಕರವಾದ ವಿಚಾರಗಳನ್ನು ವ್ಯಕ್ತ ಮಾಡಿದರು. ನಾವು ಇದನ್ನು ಸ್ವಾಗತ ಮಾಡುತ್ತೇವೆ. ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತಿದೆ. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ದೇಶಕ್ಕೆ ಸ್ವಾತಂತ್ರ್ಯ ಬಂದಾಗ್ಗ, ಈ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಯಾವಾಗ ಬರುತ್ತದೆ ಎಂದರೆ, ಮಧ್ಯ ರಾತ್ರಿ 12 ಗಂಟೆಗೆ ಒಬ್ಬ ಹೆಣ್ಣು ಮಗಳು ಸುರಕ್ಷಿತವಾಗಿ ಬಂದು ಮನೆ ತಲುಪಿದರೆ ಆಗ ಈ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಸಾರ್ಥಕವಾಗುತ್ತದೆ ಎಂದು ಹೇಳಿದ್ದರು. ಮಾನ್ಯ ಸಚಿವರು, ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ತಪ್ಪಿತಸ್ಥರನ್ನು ಗಲ್ಲು ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ ಹಿಂದೇಟು ಹಾಕುವುದಿಲ್ಲ. ಇಲಾಖೆಯಿಂದ ಏನು ಆಚಾತುರ್ಯವಾಗಿದೆಯೋ ಅವರ ಮೇಲೆ ಕೂಡ ಕ್ರಮ ಜರುಗಿಸುತ್ತೇವೆ SHO ಅವರನ್ನು ತತಕ್ಷಣ ಸಸ್ಪೆಂಡ್ ಮಾಡುವುದರ ಜೊತೆಗೆ, ಅವರ ಜೊತೆ ಶಾಮೀಲಾಗಿರುವವರ ಮೇಲೆಯೂ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆ ಮಗುವಿಗೆ ನ್ಯಾಯ ದೊರಕಿಸುವ ದಿಸೆಯಲ್ಲಿ ದಿಟ್ಟ ಉತ್ತರ ಕೊಡುವುದರ ಜೊತೆಗೆ you will not shirk from the moral responsibility, ನೈತಿಕ ಜವಾಬ್ದಾರಿ, ನೈತಿಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದಿಲ್ಲ, ಎಲ್ಲಿಯವರೆಗೆ ಆರೋಪಿಗಳಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಕ್ಷೇ ಆಗುವುದಿಲ್ಲವೋ ಅಲ್ಲಿಯವರೆಗೆ ನ್ಯಾಯಸಮ್ಮತವಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಏನು ಗಂಭೀರವಾಗಿ ಚರ್ಚೆಯಾಗಿತ್ತೋ ಅದಕ್ಕೆ ಮಾನ್ಯ ಗೃಹ ಸಚಿವರು ಕೊಟ್ಟ ಉತ್ತರವನ್ನು ನಾವು ಸ್ವಾಗತ ಮಾಡುತ್ತೇವೆ. ಅವರಲ್ಲಿರುವ ಕಾಳಜಿ, ಯಾವರೀತಿ ತನಿಖೆ ಮಾಡಿಸುತ್ತೇನೆ, ತಪ್ಪಿತಸ್ಥರಿಗೆ ಯಾವರೀತಿ ಶಿಕ್ಷೆ ಆಗುತ್ತದೆ, ಅವರಿಗೆ ಶಿಕ್ಷೆ ಆಗುವ ತನಕ ನಾನು ನಿರ್ಗಮಿಸುವುದಿಲ್ಲ, ನಾನು ನಿದ್ದೆ ಮಾಡುವುದಿಲ್ಲ, ನಾನು ನಡೆದುಕೊಳ್ಳುವಂತಹ ರೀತಿಯ ಮೂಲಕ ಈ ರಾಜ್ಯದ ಅಬಲೆಯರಿಗೆ ಸೂಕ್ತ ಸಂದೇಶ ಕೊಡುತ್ತೇನೆ ಎಂದು ತಿಳಿಸಿದ ಮಾನ್ಯ ಗೃಹ ಸಚಿವರಿಗೆ ಧನ್ಯವಾದಗಳನ್ನು ಹೇಳಿ ಸ್ವಾಗತ ಮಾಡುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಇಂತಹ ಕ್ರೈಮ್‌ಗೆ ಸಪೋರ್ಟ್ ಮಾಡಿದವರನ್ನು ಕೇವಲ ಸಸ್ಪೆಂಡ್ ಮಾಡಿದರೆ ಸಾಲದು, ಅವರ ಮೇಲೆ ಎಫ್‌ಐಆರ್ ಹಾಕಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**6) ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

ವಿಷಯ: ಕೋಲಾರ ಜಿಲ್ಲೆಯ ಕೆ.ಜಿ.ಎಫ್. ನಗರ ಸಭೆಯ ವ್ಯಾಪ್ತಿಯಲ್ಲಿ ಸುಮಾರು 30-40 ವರ್ಷಗಳಿಂದ ಮಳಿಗೆಗಳನ್ನು ನಿರ್ಮಾಣ ಮಾಡಿ ವ್ಯಾಪಾರ ಮಾಡಿಕೊಂಡು ಬಂದಿರುವ ವ್ಯಾಪಾರಸ್ಥರಿಗೆ ಖಾಯಂ ಆಗಿ ಮಳಿಗೆಗಳನ್ನು ಹಂಚಿಕೆ ಮಾಡುವ ಕುರಿತು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಕೋಲಾರ ಗೋಲ್ಡ್ ಫೀಲ್ಡ್ ವಿಶೇಷ ಪ್ರದೇಶ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮಹಾತ್ಮ ಗಾಂಧಿ ಮಾರ್ಕೆಟ್‌ನಲ್ಲಿ ಸುಮಾರು 1800 ಮಳಿಗೆಗಳು ಇವೆ. 1920ರಲ್ಲಿ ಬ್ರಿಟಿಷರ ಕಾಲದ ಜಾನ್ ಟೇಲರ್ & ಕಂಪನಿಯವರು ಅಲಾಟ್ ಮಾಡಿರುವಂಥ ಜಾಗ ಅದಾಗಿದೆ. ಆ ಜಾಗದಲ್ಲಿ ಕೆಲವರು ಅಂಗಡಿಗಳನ್ನು ಕಟ್ಟಿಕೊಂಡಿದ್ದಾರೆ. ಈ ಸದನದ ಗಮನಕ್ಕೆ ಒಂದು ವಿಷಯವನ್ನು ತರುತ್ತೇವೆ. ಅಲ್ಲಿರುವ ಅಂಗಡಿಗಳ ವಿಸ್ತೀರ್ಣ ಹೇಳುವುದಾದರೆ, 25 ಚದರ ಅಡಿಗಿಂತಲೂ ಕಡಿಮೆ ವಿಸ್ತೀರ್ಣ ಹೊಂದಿರುವ ಅಂಗಡಿಗಳ ಸಂಖ್ಯೆ: 20, 25 ರಿಂದ 50 ಚದರ ಅಡಿಗಿಂತಲೂ ಕಡಿಮೆ ವಿಸ್ತೀರ್ಣ ಹೊಂದಿರುವ ಅಂಗಡಿಗಳ ಸಂಖ್ಯೆ: 150, 50 ರಿಂದ 100 ಚದರ ಅಡಿಗಿಂತಲೂ ಕಡಿಮೆ ವಿಸ್ತೀರ್ಣ ಹೊಂದಿರುವ ಅಂಗಡಿಗಳ ಸಂಖ್ಯೆ: 250, 150 ರಿಂದ 200 ಚದರ ಅಡಿಗಿಂತಲೂ ಕಡಿಮೆ ವಿಸ್ತೀರ್ಣ ಹೊಂದಿರುವ ಅಂಗಡಿಗಳ ಸಂಖ್ಯೆ: 350, 200 ರಿಂದ 250 ಚದರ ಅಡಿಗಿಂತಲೂ ಕಡಿಮೆ ವಿಸ್ತೀರ್ಣ ಹೊಂದಿರುವ ಅಂಗಡಿಗಳ ಸಂಖ್ಯೆ: 400. ಒಟ್ಟು 1800 ಅಂಗಡಿಗಳಲ್ಲಿ 1200 ಅಂಗಡಿಗಳು 250 ಚದರ ಅಡಿಗಿಂತಲೂ ಕಡಿಮೆ ವಿಸ್ತೀರ್ಣತೆಯನ್ನು ಹೊಂದಿದೆ. ನೀವು ಇದನ್ನು ಗಮನಿಸಿಯೇ, ಅಲ್ಲಿ ವ್ಯವಹಾರ ಮಾಡುವ ವರ್ತಕರು ಎಂಥವರು ಎಂದು ಅರ್ಥ ಮಾಡಿಕೊಳ್ಳಬಹುದು. ಅಲ್ಲಿನ ಶೇಕಡ 90ರಷ್ಟು ಜನ ನಾರ್ತ್ ಆರ್ಕಾಟ್‌ನಿಂದ ಬಂದಿರುವ ಪರಿಶಿಷ್ಟ ಜಾತಿಗೆ ಸೇರಿರುವಂಥವರಾಗಿದ್ದಾರೆ. ಅವರು ಮೈನಿಂಗ್‌ನಲ್ಲಿ ಕೆಲಸ ಮಾಡಿಕೊಂಡು ಇದ್ದಂಥವರು. ಒಂದು ಕಾಲದಲ್ಲಿ 30 ಸಾವಿರ ಜನ ಬಿಜಿಎಂಎಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಈಗ ಬಿಜಿಎಂಎಲ್ ಮುಚ್ಚಿದೆ. ಒಂದು ಕಾಲದಲ್ಲಿ 8 ಸಾವಿರ ಜನ ಬಿಇಎಂಎಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅದನ್ನು ಕಡಿಮೆ ಮಾಡುತ್ತಾ ಇವತ್ತಿನ ದಿವಸ ಕೇವಲ 3500 ಜನ ಮಾತ್ರ ಇದ್ದಾರೆ. 1947ರಲ್ಲಿ ಸ್ಯಾನಿಟರಿ ಬೋರ್ಡ್ ಬಂದಾಗ ಕೇವಲ ಅವರು 32 ಅಂಗಡಿಗಳನ್ನು ಕಟ್ಟಿದ್ದರು. ಈಗ ಸರ್ಕಾರ 'e-procurement' ಎಂದು ಅದನ್ನು auction ಮಾಡುವುದಕ್ಕೆ ಹೊರಟ್ಟಿದ್ದಾರೆ. ನಾನು ಮಂತ್ರಿಗಳಿಗೆ ಕೇಳುವುದೇನೆಂದರೆ, ತಾವು ದಯವಿಟ್ಟು ಆ ಸ್ಥಳಕ್ಕೆ ಒಂದು ಸಲ ಭೇಟಿ ಕೊಡಿ. 1920ನೇ ಇಸವಿಯ ಈ ಫೋಟೋ ನೋಡಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸದಸ್ಯರು ತಮ್ಮ ಬಳಿ ಇದ್ದ ಹಳೆಯ ಭಾವಚಿತ್ರವನ್ನು ಸದನಕ್ಕೆ ತೋರಿಸಿದರು)**

ಇದು ಬ್ರಿಟಿಷರ ಕಾಲದ ಫೋಟೋ ಆಗಿದೆ. ಮಾನ್ಯ ಸಭಾಪತಿಯವರೇ, ತಮಗೂ ಈ ಭಾವಚಿತ್ರವನ್ನು ಕಳುಹಿಸಿಕೊಡುತ್ತೇನೆ, ದಯವಿಟ್ಟು ನೋಡಿ. ಈ ಫೋಟೋ ನೋಡಿದರೆ ಎಂತಹ ಜನ ಅಲ್ಲಿ ವಾಸ ಮಾಡುತ್ತಿದ್ದರು; ಎಂತಹ ಅಂಗಡಿಗಳು ಇತ್ತು ಎನ್ನುವುದು ಗೊತ್ತಾಗುತ್ತದೆ. ಹಾಗಾಗಿ ಮಾನ್ಯ ಮಂತ್ರಿಗಳು ಅಲ್ಲಿಗೆ ಭೇಟಿ ಕೊಟ್ಟು ಒಂದು ತೀರ್ಮಾನ ಮಾಡಬೇಕು. Director of Municipal Administration, Deputy Commissioner, Chief Officer, Municipality President, ಎಲ್ಲಾ ಅಧಿಕಾರಿಗಳು, ಶಾಸಕರು, ಸಂಸತ್ತಿನ ಸದಸ್ಯರನ್ನು ಕರೆಸಿ ಮೀಟಿಂಗ್ ಮಾಡಿ. ದಯವಿಟ್ಟು ಇದರ ಬಗ್ಗೆ ಒಂದು ತೀರ್ಮಾನ ಮಾಡಿ, ಆ ವರ್ತಕರಿಗೆ ಸಹಾಯ ಮಾಡಬೇಕು. ಅವರು ಸುಮಾರು 4 ವರ್ಷದಿಂದ ಆತಂಕದಲ್ಲಿದ್ದಾರೆ. ಈ ವಿಚಾರವಾಗಿ ತಾವು ಒಂದು ತೀರ್ಮಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು . . .)

(179)04-02-2021/7.30/ಡಿಎಸ್-ಆರ್‌ಎನ್

**ಶ್ರೀ ಎನ್.ನಾಗರಾಜು (ಎಂಟಿಬಿ) (ಪೌರಾಡಳಿತ ಮತ್ತು ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ನಸೀರ್ ಅಹಮದ್‌ರವರು ಬಹಳ ಗಂಭೀರವಾದಂತಹ ವಿಷಯವನ್ನು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ.

**(ಹೇಳಿಕೆಯ ಪ್ರತಿಯನ್ನು ಲಗ್ತೀಕರಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರದಲ್ಲಿ ವಿವರಣೆಯನ್ನು ಕೊಟ್ಟಿದ್ದೇನೆ. 1708 ಮಳಿಗೆಗಳ ಪೈಕಿ 1655 ಮಳಿಗೆಗಳು ಸುಮಾರು 40 ರಿಂದ 50 ವರ್ಷಗಳ ಹಿಂದೆ ನಿರ್ಮಾಣಗೊಂಡಿರುತ್ತವೆ. ಅದು ಬ್ರಿಟಿಷರ ಆಡಳಿತದಲ್ಲಿ ಅಲ್ಲಿರತಕ್ಕಂಥ ಸರ್ಕಾರಿ ಜಮೀನು, ಅಲ್ಲಿ ಆಗಾಗ್ಗೆ ಕೆ.ಜಿ.ಎಫ್. ಗೋಲ್ಡ್ ಮೈನ್ಸ್ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರು ಅಂದಿನ ದಿನಗಳಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿ ವ್ಯಾಪಾರ ವಹಿವಾಟಗಾಗಿ, ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಕಾರ್ಮಿಕರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಅಂಗಡಿಗಳನ್ನು ನಿರ್ಮಾಣ ಮಾಡುವುದಕ್ಕೆ ಖಾಲಿ ನಿವೇಶನಗಳನ್ನು ಅವರಿಗೆ ಉಚಿತವಾಗಿ ಕೊಟ್ಟಿದ್ದಾರೆ. ಅಲ್ಲಿ 5-10 ಅಡಿ ಗುಡಿಸಲುಗಳನ್ನು ನಿರ್ಮಾಣ ಮಾಡಿಕೊಂಡು ಅಂದಿನ ದಿನಗಳಲ್ಲೇ ಅಂಗಡಿಗಳನ್ನು ಪ್ರಾರಂಭ ಮಾಡಿದ್ದಾರೆ. ಇದು ವಾಸ್ತವ ಸ್ಥಿತಿ. ಗುಡಿಸಲುಗಳನ್ನು ನಿರ್ಮಾಣ ಮಾಡಿ ಅದರಲ್ಲೇ ತರಕಾರಿ, ಹಣ್ಣು-ಹಂಪಲು, ಹೂವು ಈ ರೀತಿ ಅವರು ಸಣ್ಣಪುಟ್ಟ ವ್ಯಾಪಾರ ಮಾಡಿಕೊಳ್ಳುತ್ತಿದ್ದರು. ಇದು ವಾಸ್ತವಾಂಶ. ಇದೆಲ್ಲಾ ಆದಮೇಲೆ ಅಲ್ಲಿ 1946 ರಲ್ಲಿ ಮೊಟ್ಟ ಮೊದಲನೆಯದಾಗಿ ಸ್ಯಾನಿಟರಿ ಬೋರ್ಡ್ ಪ್ರಾರಂಭವಾಯಿತು. ಅಂದಿನಿಂದಲೂ ಸುಮಾರು 1708 ಸಣ್ಣ ವ್ಯಾಪಾರಿಗಳು ಮಳಿಗೆಗಳಲ್ಲಿ ವ್ಯಾಪಾರ ಮಾಡುತ್ತಾ ಬಂದಿದ್ದಾರೆ. ಈಗ ಅಲ್ಲಿ ಕೆಲವು ಮಧ್ಯವರ್ತಿಗಳು ಆ ಬಡವರನ್ನು ದಾರಿ ತಪ್ಪಿಸುವ ಕೆಲಸವನ್ನು ಮಾಡಿದ್ದಾರೆನ್ನುವ ಮಾಹಿತಿಗಳು ನಮಗೆ ಬಂದಿದೆ. ಕೆ.ಜಿ.ಎಫ್. ನಗರಸಭೆಯಲ್ಲಿ ರಾಬರ್ಟ್‌ಸನ್ ಪೇಟೆಯ ಮಹಾತ್ಮಗಾಂಧಿ ಮಾರುಕಟ್ಟೆಯಲ್ಲಿ 1451 ವಾಣಿಜ್ಯ ಮಳಿಗೆಗಳು, ಅಂಡ್ರಸನ್ ಪೇಟೆಯ ಎಂ.ಜಿ. ಮಾರುಕಟ್ಟೆಯಲ್ಲಿ 208 ಮಳಿಗೆಗಳು, ಸ್ಯಾನಿಟರಿ ಬೋರ್ಡ್ ಬಳಿ 27 ಮಳಿಗೆಗಳು ಮತ್ತು ನಗರಸಭಾ ಮೈದಾನದಲ್ಲಿ 22 ಮಳಿಗೆಗಳು ಇದ್ದು ಒಟ್ಟು 1708 ಮಳಿಗೆಗಳು ಇರುತ್ತವೆ. ಇದರಲ್ಲಿ ಸ್ಯಾನಿಟರಿ ಬೋರ್ಡ್‌ನವರು ಅಂದಿನ ದಿನಗಳಲ್ಲಿ 27 ಕಟ್ಟಡಗಳನ್ನು ಅವರೇ ನಿರ್ಮಾಣ ಮಾಡಿ ಕೊಟ್ಟಿದ್ದಾರೆ. ಉಳಿದವುಗಳು ಸ್ಥಳೀಯರು ಆ ಮಳಿಗೆಗಳಲ್ಲಿ ವ್ಯಾಪಾರ ಮಾಡತಕ್ಕಂಥವರು ಸ್ವಂತವಾಗಿ ನಿರ್ಮಾಣ ಮಾಡಿದ್ದಾರೆ. ಈಗಲೂ ಕೂಡ tarpaulin sheet, zinc sheet ಹೆಂಚಿನ ಕಟ್ಟಡಗಳು, ಕೆಲವು ಗುಡಿಸಲು ಕೂಡ ಇವೆ. ಅಂತಹ ಪರಿಸ್ಥಿತಿಯಲ್ಲೂ ಕೂಡ ಆ ವ್ಯಾಪಾರಿಗಳು ಅಲ್ಲಿ ವ್ಯಾಪಾರ ಮಾಡುತ್ತಾ ಬಂದಿದ್ದಾರೆ. ಈ ಮಳಿಗೆಗಳನ್ನು ಬಾಡಿಗೆ ಆಧಾರದ ಮೇರೆಗೆ ನೀಡಿರುತ್ತಾರೆ. ಶಾಶ್ವತವಾಗಿ ಮಳಿಗೆಗಳನ್ನು ಬಾಡಿಗೆದಾರರಿಗೆ ನೀಡಲು ಅವಕಾಶವಿಲ್ಲ. ಬಾಡಿಗೆದಾರರಿಗೆ ಶಾಶ್ವತವಾಗಿ ಮಳಿಗೆಗಳ ಮಂಜೂರಾತಿ ಕುರಿತು ಅರ್ಜಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲೂ ಕೂಡ ವಜಾಗೊಳಿಸಿದೆ. ಸರ್ಕಾರಿ ಸುತ್ತೋಲೆಯಂತೆ 12 ವರ್ಷ ಕಾಲಾವಧಿಗೆ ಭದ್ರತಾ ಠೇವಣಿ ಮತ್ತು ಬಾಡಿಗೆ ಆಧಾರದ ಮೇರೆಗೆ ಬಹಿರಂಗ ಹರಾಜು ಪ್ರಕ್ರಿಯೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜರುಗಿಸಿ ಬಾಡಿಗೆ ಆಧಾರದ ಮೇರೆಗೆ ವಿಲೇವಾರಿ ಮಾಡಿರುತ್ತಾರೆ. ವಿಲೇವಾರಿ ಮಾಡುವಾಗ ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು ಮೊದಲು ಸಾಮಾನ್ಯ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಥವಾ Right of First Refusal ಯಾವುದಾದರು ಒಂದನ್ನು ಆಯ್ಕೆ ಮಾಡಿಕೊಂಡು ಈ ಬಗ್ಗೆ ಲಿಖಿತವಾಗಿ ಹರಾಜು ದಿನಾಂಕಕ್ಕೆ ಒಂದು ವಾರ ಮುಂಚಿತವಾಗಿ ತಿಳಿಯಪಡಿಸತಕ್ಕದ್ದು. ಒಂದು ವೇಳೆ ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು Right of First Refusal ಅನ್ನು ಆಯ್ಕೆ ಮಾಡಿಕೊಂಡಲ್ಲಿ ಸಂದರ್ಭ-03 ರನ್ವಯ ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವಾಗ ಅಂತಹ ಬಾಡಿಗೆದಾರರಿಗೆ ಸಾಮಾನ್ಯ ಹರಾಜು ಪ್ರಕ್ರಿಯೆಯಲ್ಲಿನ ಅಂತಿಮ ಬಿಡ್ ಮೊತ್ತಕ್ಕೆ ಶೇಕಡ .5 ರಷ್ಟು ಹೆಚ್ಚಿಗೆ ನಿಗದಿಪಡಿಸಿ ಮಳಿಗೆ ಬಾಡಿಗೆಗೆ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ. e-Procurement ಟೆಂಡರ್‌ನ್ನು ಈಗಾಗಲೇ ಜಿಲ್ಲಾಧಿಕಾರಿಗಳು ಕರೆದಿದ್ದಾರೆ. ಅವರಿಗೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಇದು ಪಾರದರ್ಶಕ ರೀತಿಯಲ್ಲಿ ಹತ್ತಾರು ವರ್ಷಗಳಿಂದ ಅಲ್ಲಿ ವ್ಯಾಪಾರ ಮಾಡುತ್ತಿರುವವರು ಬಹಳ ಕಡು ಬಡವರು. ಕೂಲಿನಾಲಿ ಮಾಡಿ ಜೀವನ ಮಾಡುವಂಥವರು ಎನ್ನುವ ಮಾಹಿತಿ ಬಂದಿದೆ. ಅಲ್ಲಿಗೆ ಭೇಟಿ ನೀಡಬೇಕು, ಪರಿಶೀಲನೆ ಮಾಡಬೇಕು, ಅಲ್ಲಿರುವಂತಹ ಎಲ್ಲಾ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಜೊತೆಯಲ್ಲಿ ಸಭೆ ಮಾಡಬೇಕು, ಆ ಸಭೆ ಮೂಲಕ ಚರ್ಚೆಯಾಗಿ ಅಂತಿಮ ತೀರ್ಮಾನವಾಗಬೇಕೆನ್ನುವ ಸಲಹೆಯನ್ನು ಈಗಾಗಲೇ ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪಿದ್ದೇನೆ. ನಾನು ಐದನೇ ತಾರೀಖು ಅಧಿವೇಶನ ಮುಗಿದ ಮೇಲೆ ಸಭೆಯನ್ನು ನಿಗದಿ ಮಾಡುವುದಕ್ಕೆ ಅಧಿಕಾರಿಗಳ ಮೂಲಕ ಅಲ್ಲಿರುವಂತಹ ಸ್ಥಳೀಯ ಜನಪ್ರತಿನಿಧಿಗಳ ಮೂಲಕ ಸಭೆ ಮಾಡುವುದಕ್ಕೆ ತಮ್ಮ ಮುಖಾಂತರ ಇವತ್ತು ನಾನು ಒಪ್ಪಿದ್ದೇನೆ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ಅಲ್ಲಿಯವರೆಗೆ e-auction ಪ್ರಕ್ರಿಯೆ ನಿಲ್ಲಿಸುವುದಕ್ಕೆ ಆದೇಶವನ್ನು ಕೊಡಬೇಕು. ಸರ್ಕಾರದ್ದೇ ವ್ಯವಸ್ಥೆ ಇದೆ. 30 ವರ್ಷ ಯಾರಾದರೂ ಸರ್ಕಾರಿ ಜಾಗದಲ್ಲಿದ್ದರೆ adverse possession, ಅವರೇ ಮಾಲೀಕರು ಎಂದು ಸರ್ಕಾರದ ಆದೇಶ ಇದೆ. ಅವರು ಅಲ್ಲಿ ಸುಮಾರು 40-50 ವರ್ಷಗಳಿಂದ ಇದ್ದಾರೆ. ಬೇರೆ ನಗರಸಭೆಗೂ ಈ ನಗರಸಭೆಗೂ ಹೊಂದಾಣಿಕೆ ಮಾಡುವುದಕ್ಕಾಗುವುದಿಲ್ಲ. ಆ ಕಾರಣದಿಂದ ಈ ಪ್ರಕ್ರಿಯೆ ಏನು ನಡೆಯುತ್ತಿದೆ ಅದನ್ನು ನಿಲ್ಲಿಸಲಿ. ದಯವಿಟ್ಟು ಮಾನ್ಯ ಸಚಿವರು ಅಲ್ಲಿಗೆ ಬರಬೇಕು. ಅಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಭಾರತಿಶೆಟ್ಟಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅಲ್ಲಿ 1708 ಮಳಿಗೆಗಳಿವೆ. ಅದನ್ನೆಲ್ಲಾ ಬಾಡಿಗೆ ಮುಖಾಂತರ ಅವರು ಪಡೆದುಕೊಂಡಿರುವಂಥದ್ದು. ಸರ್ಕಾರ ಏನಾದರೂ ಅದನ್ನು ಹರಾಜು ಮಾಡಿದರೆ ಆ ಮಳಿಗೆ ಅವರಿಗೆ ಸಿಗುವುದಿಲ್ಲ. ಬೇರೆಯವರಿಗೆ ಹೋಗುತ್ತದೆ. ಯಾರಿಗೂ ಕೂಡ ಸಿಗುವುದಿಲ್ಲ. ಆದ್ದರಿಂದ ಅಲ್ಲಿರುವಂತಹ ಬಡವರಿಗೆ, ಕೂಲಿ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕಾದರೆ, ರಾಣೇಬೆನ್ನೂರಿನಲ್ಲಿ ಇದೇ ಪ್ರಕರಣ ಆಗಿದೆ. ರಾಣೇಬೆನ್ನೂರು ನಗರಸಭೆಯಲ್ಲಿ ಅವರಿಗೆ 12-13 ವರ್ಷ ಲೀಸ್ ಕೊಟ್ಟಿದ್ದಾರೆ. ಆ ಲೀಸ್ ಮುಖಾಂತರ ಕೊಟ್ಟರೆ ಅವರಿಗೆ ನ್ಯಾಯ ಒದಗಿಸಿದಂತೆ ಆಗುತ್ತದೆ. ಈ ಹರಾಜು ಪ್ರಕ್ರಿಯೆಯನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಅವರಿಗೆ ನ್ಯಾಯ ಸಿಗುವುದಿಲ್ಲ.

**ಶ್ರೀ ಎನ್.ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೇ, ಅಲ್ಲಿರುವಂತಹ ಬಾಡಿಗೆದಾರರು ಕೂಡ ನ್ಯಾಯಾಲಯದ ಮೊರೆ ಹೋಗಿದ್ದಾರೆ. ನ್ಯಾಯಾಲಯದಲ್ಲೂ ಕೂಡ ಆದೇಶವಾಗಿದೆ. ಅವರು ತಡೆಯಾಜ್ಞೆಯನ್ನು ಕೇಳಿದ್ದಾರೆ. ನ್ಯಾಯಾಲಯ ಅದನ್ನು ತಿರಸ್ಕಾರ ಮಾಡಿದೆ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನ್ಯಾಯಾಲಯದಲ್ಲಿ ಏನು ಹೇಳಿದ್ದಾರೆಂದರೆ, ಮಾಲೀಕರಿಗೆ ನೋಟಿಸ್ ಕೊಟ್ಟು according to law process ಮಾಡಿ ಎಂದು ಆದೇಶ ಕೊಟ್ಟಿರುವಂಥದ್ದು.

**ಶ್ರೀ ಎನ್.ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೇ, ಸದರಿ ಅಂಗಡಿ ಮಳಿಗೆಗಳನ್ನು ತಮ್ಮ ಹೆಸರಿನಲ್ಲಿಯೇ ಮುಂದುವರೆಸಲು ಮನವಿ ಮಾಡಿರುತ್ತಾರೆ. ಗೌರವಾನ್ವಿತ ಉಚ್ಛ ನ್ಯಾಯಾಲಯವು ಸದರಿ ದಾವೆಯನ್ನು ದಿನಾಂಕ:20-12-2020 ರಂದು ವಜಾಗೊಳಿಸಿರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಇ-ಟೆಂಡರ್ ಮುಖಾಂತರ ಮಾಡಿದರೆ ಅಲ್ಲಿದ್ದವರಿಗೆ ಹೇಗೆ ಸಿಗುತ್ತದೆ?

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇದು 25,000 ಜನರ ಬದುಕಿನ ಪ್ರಶ್ನೆಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿಶೆಟ್ಟಿಯವರು ಹೇಳುತ್ತಿರುವುದರಲ್ಲಿ ಅರ್ಥವಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎನ್.ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೇ, 1708 ಮಳಿಗೆಗಳೇನಿವೆ ಅದರಲ್ಲಿ ಬಾಡಿಗೆ ಬರುವಂಥದ್ದು ಕೇವಲ ಎರಡು ಲಕ್ಷದ ನಲವತ್ತು ಅಥವಾ ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಅವರು 50 ವರ್ಷಗಳಿಂದ ಅಲ್ಲಿದ್ದಾರೆ.

**ಶ್ರೀಮತಿ ಭಾರತಿಶೆಟ್ಟಿ:-** ಬಾಡಿಗೆ ಜಾಸ್ತಿ ಮಾಡಿ ಅವರಿಗೆ ಕೊಡಿ. ನಗರಸಭೆಯವರಿಗೆ ಹೆಚ್ಚು ಆದಾಯ ಬರುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಚಿವರೇ, ತಾವು ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ. ಇ-ಟೆಂಡರ್‌ನ್ನು ಒಂದೆರಡು ದಿನ ನಿಲ್ಲಿಸಿ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಚಿವರೇ, ಲೋಕೋಪಯೋಗಿ ಇಲಾಖೆಯವರು ಏನು ಬಾಡಿಗೆ ನಿಗದಿ ಮಾಡುತ್ತಾರೆಯೋ ಅಷ್ಟು ಬಾಡಿಗೆಯನ್ನು ಅವರು ಕೊಡುತ್ತಾರೆ.

**ಶ್ರೀ ಎನ್.ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೇ, ಈಗ ಅಲ್ಲಿಗೆ ಭೇಟಿ ಕೊಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಎಲ್ಲಾ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡೋಣ. ಎಲ್ಲರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿ ತೀರ್ಮಾನ ಮಾಡೋಣ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಮಾನ್ಯ ಸಚಿವರೇ, ನಿಮ್ಮ ಮನೆಗೆ ಬಹಳ ಹತ್ತಿರವಿರುವಂತಹ ಜಾಗ ಅದು.

(ಮುಂದು)

(180) 04-02-2021/7.40/ಬಿ.ಕೆ.ಪಿ-ಆರ್‌ಎನ್

**ಶ್ರೀ ಎಂ.ನಾರಾಯಣಸ್ವಾಮಿ:-** ಮುಂದು )

ಬ್ರಿಟಿಷರ ಕಾಲದಲ್ಲಿ 1920ರಲ್ಲಿ ಅಲ್ಲಿ ಏನು ಕಾರ್ಮಿಕರು ಬಂದಿದ್ದರು. ಆ ಕಾರ್ಮಿಕರಿಗೆ ದಿನವೂ ದವಸ-ಧಾನ್ಯ ಸಿಗಲಿ, ಹಣ್ಣು-ಹಂಪಲು ಸಿಗಲಿ ಎಂದು ಮಳಿಗೆಗಳನ್ನು ಮಾಡಿಕೊಳ್ಳಲೆಂದು ಅಂದಿನ ಬ್ರಿಟಿಷ್ ಸರ್ಕಾರ ಕೊಟ್ಟಿರುವಂಥದ್ದು. ಅದಾದ ಮೇಲೆ ಕೆಲವನ್ನು ಪುರಸಭೆಯವರು ಕಟ್ಟಿಕೊಟ್ಟಿದ್ದಾರೆ. ಇಷ್ಟೂ ಮಳಿಗೆಗಳನ್ನು ಕೂಡಾ ನೀವು, ಅಲ್ಲಿ ಕಾರ್ಖಾನೆ ಮುಚ್ಚಿಹೋಯ್ತು, ಎಲ್ಲಾ ಮುಚ್ಚಿ ಹೋಯ್ತು. ಏನೋ ಸಣ್ಣ-ಪುಟ್ಟ ಕೆಲಸಮಾಡಿಕೊಂಡು ಬದುಕುತ್ತಿರುವ ಜನ ಅವರು ಆದ್ದರಿಂದ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸದಸ್ಯರುಗಳಾದ ಭಾರತೀ ಶೆಟ್ಟಿ ಮತ್ತು ನಸೀರ್ ಅಹಮದ್‌ರವರು ಹೇಳಿದಹಾಗೆ auction ಮಾಡಿದರೆ, ಯಾರು ಫಲಾನುಭವಿಗಳಿದ್ದಾರೋ ಅವರುಗಳಿಗೆ ಸಿಗುವುದಿಲ್ಲ. ಯಾರು ಅತೀ ಹೆಚ್ಚು ದರಕ್ಕೆ ಬಿಡ್ ಮಾಡುತ್ತಾರೋ ಅವರ ಪಾಲಾಗುತ್ತವೆ. ಯಾರು ಇಷ್ಟು ವರ್ಷ ತಲಾತಲಾಂತರದಿಂದ ಅಲ್ಲಿ ಇದ್ದಾರೋ, ತಾತ, ತಂದೆ, ಈಗ ಮಕ್ಕಳು-ಮೊಮ್ಮಕ್ಕಳು ವ್ಯಾಪಾರ ಮಾಡಿಕೊಂಡು ಹೋಗುತ್ತಿದ್ದಾರೋ ಅವರಿಗೆ ಸಿಗುತ್ತಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಚಿವರು ಸಮಸ್ಯೆಯನ್ನು ಪರಿಹಾರ ಮಾಡಲು ಒಪ್ಪಿಕೊಂಡಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಚಿವರು ತಕ್ಷಣ ಟೆಂಡರ್ ಪ್ರಕ್ರಿಯೆಯನ್ನು ನಿಲ್ಲಿಸಲು ಒಪ್ಪಿಕೊಂಡಿದ್ದಾರೆಯೇ?

**ಶ್ರೀ ಯು.ಬಿ.ವೆಂಕಟೇಶ್:-** ಹೌದು. ಒಪ್ಪಿಕೊಂಡಿದ್ದಾರೆ. ಪ್ರಕ್ರಿಯೆಯನ್ನು ನಿಲ್ಲಿಸಲು ಹೇಳುತ್ತೇನೆಂದು ಹೇಳಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಎಲ್ಲರ ಸಲಹೆ-ಸೂಚನೆ ಪಡೆದು ಅವರ ಸಮಸ್ಯೆ ಪರಿಹರಿಸುತ್ತೇನೆಂದು ಸಚಿವರು ಹೆಳಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಅವರು ಪ್ರಕ್ರಿಯೆ ನಿಲ್ಲಿಸುವ ಬಗ್ಗೆ ಹೇಳಿಲ್ಲ. ಸಭೆ ನಡೆಸುತ್ತೇನೆಂದು ಹೇಳಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಎಲ್ಲರ ಸಲಹೆ-ಸೂಚನೆ ಪಡೆದು ಅವರ ಪರವಾಗಿ ಮಾಡುತ್ತೇನೆಂದು ಸಚಿವರು ಒಳ್ಳೆಯ ಉತ್ತರ ಕೊಟ್ಟಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಭೆ ಮಾಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ :-** ಮಾನ್ಯ ಸಚಿವರೇ, ಬಹಳ ಒಳ್ಳೆಯ ಉತ್ತರ ಕೊಟ್ಟಿದ್ದೀರಿ. ಸಭೆ ನಡೆಸುವವರೆಗೂ ಟೆಂಡರ್ ಪ್ರಕ್ರಿಯೆ ನಿಲ್ಲಿಸುತ್ತೇನೆಂದು ಹೇಳಿಬಿಡಿ.

**ಶ್ರೀ ಎನ್.ನಾಗರಾಜು (ಎಂಟಿಬಿ)(ಪೌರಾಡಳಿತ ಮತ್ತು ಸಕ್ಕರೆ ಸಚಿವರು):-** ಈಗಾಗಲೇ ಟೆಂಡರ್ ಪ್ರಾರಂಭ ಆಗಿದೆ. ಪ್ರಕ್ರಿಯೆ ನಡೆಯುತ್ತಿದೆ. ನಾನು ಅಲ್ಲಿಗೆ ಭೇಟಿಕೊಡುತ್ತೇನೆ. ಎಲ್ಲಾ ಜನಪ್ರತಿನಿಧಿಗಳನ್ನು ಭೇಟಿಮಾಡಿ, ಅವರೊಂದಿಗೆ ಮತ್ತು ಅಧಿಕಾರಿಗಳೊಂದಿಗೆ ಸಭೆಯನ್ನು ಮಾಡೋಣ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಚವರೆ, ಸರ್ಕಾರದಿಂದ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡಿದ್ದೇನೆಂದು ಹೇಳಿ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಚಿವರೇ, ಜಿಲ್ಲಾಧಿಕಾರಿಯವರಿಗೆ ಫೋನ್ ಮಾಡಿ ಪ್ರಕ್ರಿಯೆ ನಿಲ್ಲಿಸುವಂತೆ ಆದೇಶ ಮಾಡಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೆ, ಟೆಂಡರನ್ನು ಮುಂದೂಡಿ ಅಷ್ಟೆ.

**ಶ್ರೀ ಎನ್.ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೆ, ಅಲ್ಲಿ ಹತ್ತಾರು ವರ್ಷಗಳಿಂದ ವ್ಯಾಪಾರಮಾಡಿಕೊಂಡು ಇರುವವರಿಗೆ, ಬಡವರಿಗೆ ಅನ್ಯಾಯವಾಗಬಾರದು, ಅವರಿಗೆ ಸಾಮಾಜಿಕ ನ್ಯಾಯ ಸಿಗಬೇಕೆಂದು ನನ್ನ ಕಳಕಳಿ ಸಹ ಇದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೆ, ಟೆಂಡರನ್ನು postpone ಮಾಡಿ ಅಷ್ಟೆ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಚಿವರೇ, ಅದನ್ನು ನಿಲ್ಲಿಸದಿದ್ದರೆ ನಾವೆಲ್ಲಾ ಧರಣಿ ಮಾಡಬೇಕಾಗುತ್ತದೆ. ಅಲ್ಲಿ ಹತ್ತಾರು ವರ್ಷಗಳಿಂದ ಇರುವ ಜನರಿಗೆ ಅನ್ಯಾಯವಾಗುತ್ತಿದೆ.

**(ಗೊಂದಲ)**

**ಶ್ರೀ ಎನ್.ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೆ, ಈ ರೀತಿ ತಕ್ಷಣವೇ ಪ್ರಕ್ರಿಯೆ ನಿಲ್ಲಿಸುವಂತೆ ಆಶ್ವಾಸನೆ ನೀಡುವುದಕ್ಕಾಗುತ್ತದೆಯೇ? ಅದು ಜಿಲ್ಲಾಧಿಕಾರಿಯವರು ಮಾಡಿರುವ ಆದೇಶ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೆ, ತಾವು ಇಲಾಖಾ ಮುಖ್ಯಸ್ಥರು. ಜಿಲ್ಲಾಧಿಕಾರಿಯವರಿಗಿಂತ ಮೇಲಿನವರು. ನೀವು ಅವರಿಗೆ ಆದೇಶ ನೀಡಿ. ಅವರು ಅದನ್ನು ಅನುಸರಿಸುತ್ತಾರೆ. ಇದು ಸಭೆಯಲ್ಲಿರುವವರೆಲ್ಲರ ಒಕ್ಕೊರಲಿನ ಒತ್ತಾಯ.

**ಶ್ರೀ ಎನ್.ನಾಗರಾಜು (ಎಂಟಿಬಿ):-** ಮಾನ್ಯ ಸಭಾಪತಿಯವರೆ, ನಾನು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸುವವರೆಗೂ ಟೆಂಡರ್ ಪ್ರಕ್ರಿಯೆ ನಿಲ್ಲಿಸಲು ಆದೇಶ ಮಾಡುತ್ತೇನೆ.

**ಸಭಾಪತಿಯವರು:-** ಈಗ ಶಂಖದಿಂದ ತೀರ್ಥ ಬಿದ್ದಂತಾಯಿತು. ಈಗ ಒಂದು ಪ್ರಕಟಣೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7) ಸಭಾಪತಿ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿರವರಿಂದ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಪ್ರಕಟಣೆ**

**ಸಭಾಪತಿಯವರು:- ಗೌರವಾನ್ವಿತ ವಿಧಾನ ಪರಿಷತ್ತಿನ ಸದಸ್ಯರೆ,**

ನಾವೆಲ್ಲರೂ ಅತ್ಯುನ್ನತ ಸ್ಥಾನದಲ್ಲಿರಿಸಿ ಗೌರವಿಸುವ ದೇಶದ ಸಂವಿಧಾನದ ಕರ್ತೃ ಡಾಃ ಬಿ.ಆರ್. ಅಂಬೇಡ್ಕರ್ ಅವರು ಸಾಂವಿಧಾನಿಕ ವ್ಯವಸ್ಥೆ ಬಗ್ಗೆ ಹೇಳಿದ ಮಾತೊಂದನ್ನು ನೆನಪಿಸಿಕೊಳ್ಳುತ್ತಿದ್ದೇನೆ.

**"However good a Constitution may be, if those who are implementing it are not good, it will prove to be bad. However bad a Constitution may be, if those implementing it are good, it will prove to be good."**

**- Dr. B R Ambedkar**

ಅಂದರೆ,

" ಒಂದು ಸಂವಿಧಾನ ಎಷ್ಟೇ ಚೆನ್ನಾಗಿರಲಿ, ಅದರ ಅನುಷ್ಠಾನ ಮಾಡುವವರು ಚೆನ್ನಾಗಿಲ್ಲದಿದ್ದರೆ, ಆ ಸಂವಿಧಾನ ಕೆಟ್ಟದಾಗಿರುತ್ತದೆ. ಅದೇ ರೀತಿ, ಒಂದು ಸಂವಿಧಾನ ಎಷ್ಟೇ ಕೆಟ್ಟದಾಗಿದ್ದರೂ, ಅದನ್ನು ಅನುಷ್ಠಾನ ಮಾಡುವ ಹೊಣೆ ಹೊತ್ತವರು ಒಳ್ಳೆಯವರಾಗಿದ್ದರೆ, ಆ ಸಂವಿಧಾನವೂ ಒಳ್ಳೆಯದಾಗಿರುತ್ತದೆ.

"113 ವರ್ಷಗಳ ಭವ್ಯ ಇತಿಹಾಸ ಹೊಂದಿರುವ ಕರ್ನಾಟಕ ವಿಧಾನ ಪರಿಷತ್ತಿಗೆ ದೇಶದಲ್ಲೇ ಅತ್ಯಂತ ಗೌರವಯುತವಾದ ಸ್ಥಾನವಿದೆ. ನ್ಯಾಯ ವಿಧಾಯಕ ಸಭೆಯಾಗಿ, ಪ್ರಜಾಪ್ರತಿನಿಧಿ ಸಭೆಯಾಗಿ ಸ್ಥಾಪನೆಗೊಂಡ ಈ ವಿಧಾನಪರಿಷತ್ತನ್ನು, ಆಡಳಿತ ವ್ಯವಸ್ಥೆಗೆ ನೆರವಾಗುವ ಚಿಂತಕರ ಚಾವಡಿ, ಹಿರಿಯರ ಮನೆ ಎಂದೇ ಜನ ಗುರುತಿಸುತ್ತಾರೆ. ಹೀಗೆ ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ನಡೆದ ಬಂದ ಚರಿತ್ರೆಯನ್ನು ಈ ಸದನ ಹೊಂದಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ವಿಧಾನ ಪರಿಷತ್ತಿನ ಅಧ್ಯಕ್ಷಾಧಿಕಾರಿಯಾಗಿರುವ ಈ ಸಭಾಪತಿ ಪೀಠವು ಅತ್ಯಂತ ಗೌರವಯುತವಾದ ಮತ್ತು ಅತ್ಯಂತ ಜವಾಬ್ದಾರಿಯುತವಾದ ಸ್ಥಾನವಾಗಿದ್ದು, ಸಂವಿಧಾನದ ಆಶಯಗಳ ರಕ್ಷಣೆಯ ಗುರುತರವಾದ ಜವಾಬ್ದಾರಿ ಹೊಂದಿರುವ ಪೀಠವಾಗಿದೆ. ಈ ಸದನದ ಸದಸ್ಯರಾಗಿ ನಾವೆಲ್ಲರೂ ಕೂಡ ನಾಡಿನ ಜನತೆಯ ಪ್ರತಿನಿಧಿಗಳಾಗಿ ಈ ಸದನದಲ್ಲಿ ಕುಳಿತಿದ್ದೇವೆ. ನಮ್ಮ ವಿಭಿನ್ನವಾದ ರಾಜಕೀಯ ಹಿನ್ನೆಲೆಗಳು, ಪಕ್ಷಗಳು, ಸಿದ್ಧಾಂತಗಳು ಎಲ್ಲವೂ ಕೂಡ ಈ ಸದನದ ಒಳಗೆ ಈ ನಾಡಿನ ಜನತೆಯ ಆಶೋತ್ತರಗಳನ್ನು. ಎತ್ತಿ ಹಿಡಿಯಬೇಕಾಗಿದೆ.

ಈ ಸದನದಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಯ ಅಂತಿಮ ಗುರಿ ನಾಡಿನ ಜನತೆಯ ಆಶೋತ್ತರವೇ ಆಗಿರಬೇಕಾಗುತ್ತದೆ. ಅದರಲ್ಲಿ ನಮಗೆ ಯಾವ ಸಂಶಯವೂ ಇರಬಾರದು.

ಕಳೆದ 37 ವರ್ಷಗಳಿಂದ ಜನ ಪ್ರತಿನಿಧಿಯಾಗಿ ಸಾರ್ವಜನಿಕ ಜೀವನದಲ್ಲಿ ಇರುವವನು ನಾನು. ನಡೆ-ನುಡಿಗಳಲ್ಲಿ ವ್ಯತ್ಯಾಸ ಮಾಡದೆ, ಪಾರದರ್ಶಕತೆಯಲ್ಲಿ ನಂಬಿಕೆ ಇಟ್ಟುಕೊಂಡು ಈವತ್ತಿನ ತನಕ ನಡೆದುಬಂದಿದ್ದೇನೆ. ರಾಜಕಾರಣದಲ್ಲಿ ಮೌಲ್ಯಗಳು ಬದಲಾಗುತ್ತಾ ಸಾಗಿರುವುದನ್ನು ನಿಮ್ಮೆಲ್ಲರಂತೆ ನಾನು ಕೂಡ ಗಮನಿಸುವ ಅವಕಾಶ ಪಡೆದುಕೊಂಡಿದ್ದೇನೆ. ಬರಬರುತ್ತಾ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರ ನಂಬಿಕೆ ಕಡಿಮೆ ಆಗುವಂತಹ ವಾತಾವರಣ ನಿರ್ಮಾಣ ಆಗುತ್ತಿರುವುದನ್ನು ನಿಮ್ಮಂತೆಯೇ ನಾನೂ ಕೂಡ ಗಮನಿಸುತ್ತಿದ್ದೇನೆ.

ವೈಯಕ್ತಿಕವಾಗಿ ನಾವೆಲ್ಲರೂ ಒಳ್ಳೆಯವರೇ, ಆದರೆ ನಮ್ಮ ನೈತಿಕ ಮೌಲ್ಯಗಳು, ಪಕ್ಷ ರಾಜಕಾರಣ, ಹಿತಾಸಕ್ತಿಗಳು ಮತ್ತು ಅನಿವಾರ್ಯತೆಗಳು ಹಲವು ಬಾರಿ ನಮ್ಮನ್ನು ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳುವುದಕ್ಕೆ ಅಡ್ಡಿ ಮಾಡುತ್ತವೆ. ಇದನ್ನು ಮೀರಿ, ಒಟ್ಟು ಸಾರ್ವಜನಿಕ ಹಿತಕ್ಕಾಗಿ ಮತ್ತು ನಮ್ಮೆಲ್ಲರಿಗೆ ಮೇಲ್ಪಂಕ್ತಿಯಾಗಿರುವ ಜಗತ್ತಿನಲ್ಲೇ ಅತ್ಯುತ್ಕೃಷ್ಟ ಎಂದು ಪರಿಗಣಿತವಾಗಿರುವ-ಜೀವಂತ ಸಂವಿಧಾನ ಎಂದು ಕರೆಯಲಾಗುವ ಸಂವಿಧಾನಗಳಲ್ಲಿ ಒಂದಾದ ಈ ದೇಶದ ಸಂವಿಧಾನದ ಘನತೆಯನ್ನು ಎತ್ತಿ ಹಿಡಿಯುವುದು ನಮ್ಮೆಲ್ಲರ ಪರಮ ಕರ್ತವ್ಯ. ಈ ಸದನದ ಗೌರವಯುತವಾದ ಸಭಾಪತಿ ಪೀಠದಲ್ಲಿ ಕುಳಿತುಕೊಳ್ಳುವ ಸದಾವಕಾಶ ದೊರೆತಿರುವ ನಾನು, ನನ್ನ ಅವಧಿಯಲ್ಲಿ ನನ್ನ ಕರ್ತವ್ಯವನ್ನು ಕಾಯ-ವಾಚಾ-ಮನಸಾ ನಿರ್ವಹಿಸಿರುವ ಬಗ್ಗೆ ನನಗೆ ಆತ್ಮತೃಪ್ತಿ ಇದೆ.

ದಿನಾಂಕ: 12-12-2018ರಂದು ಬೆಳಗಾವಿ ಅಧಿವೇಶನದಲ್ಲಿ ನನ್ನನ್ನು ಸಭಾಪತಿ ಪೀಠಕ್ಕೆ ಆಯ್ಕೆ ಮಾಡಿದ ತಾವೆಲ್ಲ ನನ್ನ ಕುರಿತು ಆಗ ಏನು ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ ಎಂಬುದು ಸದನದ ದಾಖಲೆಗಳಲ್ಲಿ ಶಾಶ್ವತವಾಗಿದೆ. ತಮ್ಮ ಆ ಅಭಿಮತಗಳಿಗೆ ವ್ಯತಿರಿಕ್ತವಾಗಿ ನಾನು ಯಾವತ್ತೂ ನಡೆದುಕೊಂಡಿಲ್ಲ ಎಂಬ ಆತ್ಮವಿಶ್ವಾಸ ನನ್ನಲ್ಲಿದೆ. ಈ ಎರಡು ವರ್ಷಗಳ ಅವಧಿಯಲ್ಲಿ ತಮ್ಮೆಲ್ಲರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರೀಕ್ಷೆಗಳಿಗೆ ಅನುಗುಣವಾಗಿ ಮತ್ತು ನಾಡಿನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಸಂವಿಧಾನದ ಆಶಯಗಳ ರಕ್ಷಣೆಯ ಪರಮೋಚ್ಛ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿದ್ದೇನೆ. ಈ ಪೀಠದ ಘನತೆಯನ್ನು ಎತ್ತಿ ಹಿಡಿಯುವಲ್ಲಿ ನನ್ನ ಕಿಂಚಿತ್ ಸೇವೆಯನ್ನು ನಾನು ಯಾವುದೇ ಅಪಚಾರ ಆಗದಂತೆ ಬಹಳ ಎಚ್ಚರದಿಂದ ಸಲ್ಲಿಸಿದ್ದೇನೆ.

ನಮ್ಮ ಈವತ್ತಿನ ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಅಧ್ಯಕ್ಷಾಧಿಕಾರಿ ಪೀಠಗಳು ಕತ್ತರಿಯ ಅಲುಗಿನ ಮೇಲೆ ನಡೆಯುವ ಸ್ಥಿತಿ ಇದೆ. ಪಕ್ಷ ಬಲಾಬಲ-ಸಂಖ್ಯೆಗಳನ್ನು ಆಧರಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುವಂತಹ ರಾಜಕೀಯ ವ್ಯವಸ್ಥೆಯ ವಾಸ್ತವದ ನಡುವೆ, ಜನಸಾಮಾನ್ಯರ ಹಿತವನ್ನು ಕಾಪಾಡುವುದು ಮತ್ತು ಆ ಮೂಲಕ ಸಂವಿಧಾನದ ಆಶಯಗಳ ರಕ್ಷಣೆಗೆ ಪ್ರಯತ್ನಿಸುವುದು ಯಾವುದೇ ಅಧ್ಯಕ್ಷಾಧಿಕಾರಿಗೆ ಪ್ರತಿಜ್ಞಾಪೂರ್ವಕ ಕರ್ತವ್ಯವಾಗಿರುತ್ತದೆ. ಜನಹಿತದ ಸಂಗತಿಗಳು ಸದನದ ಮುಂದೆ ಬಂದಾಗ ಅವುಗಳನ್ನು ಕೇವಲ ಬಲಾಬಲದ ಆಧಾರದಲ್ಲಿ ತೀರ್ಮಾನಿಸುವ ಬದಲು, ಅವುಗಳನ್ನು ಚರ್ಚೆಗೆ ಒಡ್ಡುವ ಮೂಲಕ ಅದರಲ್ಲಿರುವ ಕಾಳು-ಜಳ್ಳುಗಳನ್ನು ನಾಡಿನ ಜನತೆಯ ಗಮನಕ್ಕೆ ತರುವುದು ಈ ಹಿರಿಯರ ಸದನದ ಜವಾಬ್ದಾರಿ ಮತ್ತು ಅಂತಹದನ್ನು ಕಳೆದ ಶತಮಾನದ ಉದ್ದಕ್ಕೂ ಮಾಡುತ್ತಾ ಬಂದ ಶ್ರೀಮಂತ ಪರಂಪರೆ ಈ ಮೇಲ್ಮನೆಗೆ ಇದೆ.

ಈ ರೀತಿಯ ಸಭಾಪತಿ ಪೀಠದ ನಿಷ್ಪಕ್ಷಪಾತ ತೀರ್ಮಾನಗಳು ಕೆಲವೊಮ್ಮೆ ಆಳುವ ಪಕ್ಷಕ್ಕೆ ಅಥವಾ ವಿರೋಧ ಪಕ್ಷಕ್ಕೆ ಇರುಸು ಮುರುಸು ಉಂಟು ಮಾಡಿರಬಹುದು. ಇವೆಲ್ಲವೂ ಉದ್ದೇಶಪೂರ್ವಕ ಖಂಡಿತಾ ಅಲ್ಲ. ಈ ಸಾಂವಿಧಾನಿಕ ಪೀಠದ ಜವಾಬ್ದಾರಿ ಅದು. ಈ ಸವಾಲನ್ನು ನಾನು ನನ್ನ ಶಕ್ತಿ ಮೀರಿ ನಿಭಾಯಿಸಿದ್ದೇನೆ. ಇಂತಹ ಕೆಲವು ಕಲಾಪದ ಘಟನೆಗಳು ಏಕಾಏಕಿ ನನ್ನ ಮೇಲಿರುವ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿವೆ ಎಂದರೆ, ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಹೀಗೆ ಅಭಿಪ್ರಾಯವನ್ನು ಬದಲಾಯಿಸಿ ಕೊಂಡವರು ಈ ಸದನದ ನನ್ನದೇ ಗೆಳೆಯರು, ಈ ಸದನದ ನನ್ನ ಹಲವಾರು ವರ್ಷಗಳ ಸಹವರ್ತಿಗಳು ನನ್ನನ್ನು ಚೆನ್ನಾಗಿ ಹತ್ತಿರದಿಂದ ತಿಳಿದವರು.

ಹೆಚ್ಚಿನಾಂಶ ಅವರ ಈ ಅಭಿಪ್ರಾಯಗಳು ಯಾವುವೂ ವೈಯಕ್ತಿಕವಾದುದಲ್ಲ. ನಾವೆಲ್ಲರೂ ಈ ವ್ಯವಸ್ಥೆಯ ಒತ್ತಡದ ಶಿಶುಗಳೇ. ನನಗೆ ಇಂತಹದೊಂದು ಸನ್ನಿವೇಶ ಎದುರಾಗಿರುವ ಬಗ್ಗೆ ಯಾವುದೇ ನೋವಿಲ್ಲ. ಇವೆಲ್ಲವೂ ಈವತ್ತಿನ ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿ ಎಂದೇ ನಾನು ಭಾವಿಸಿದ್ದೇನೆ.

(ಮುಂದು...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(181) 04.02.2021 07.50 ಎಸ್‌ವಿ-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು (ಮುಂದು):-**

ಈ ಸದನದ ನನ್ನ ಹಲವಾರು ವರ್ಷಗಳ ಸಹವರ್ತಿಗಳು ನನ್ನನ್ನು ಚೆನ್ನಾಗಿ ಹತ್ತಿರದಿಂದ ತಿಳಿದವರು.

ಹೆಚ್ಚಿನಾಂಶ ಅವರ ಈ ಅಭಿಪ್ರಾಯಗಳು ಯಾವುವೂ ವೈಯಕ್ತಿಕವಾದುದಲ್ಲ. ನಾವೆಲ್ಲರೂ ಈ ವ್ಯವಸ್ಥೆಯ ಒತ್ತಡದ ಶಿಶುಗಳೇ. ನನಗೆ ಇಂತಹದೊಂದು ಸನ್ನಿವೇಶ ಎದುರಾಗಿರುವ ಬಗ್ಗೆ ಯಾವುದೇ ನೋವಿಲ್ಲ. ಇವೆಲ್ಲವೂ ಇಂದಿನ ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿ ಎಂದೇ ನಾನು ಭಾವಿಸಿದ್ದೇನೆ.

ಪ್ರಜಾಪ್ರಭುತ್ವ ವ್ಯವಸ್ಥೆ ಸಂಖ್ಯಾಬಲದಲ್ಲೇ ನಡೆಯಬೇಕಾಗಿರುವುದು ವಾಸ್ತವವಾದರೂ, ಸದನ ತೆಗೆದುಕೊಳ್ಳುವ ತೀರ್ಮಾನಗಳು ಈ ದೇಶದ ಬಹುಸಂಖ್ಯಾತರಾಗಿರುವ ರೈತರು, ದೀನ ದಲಿತರ, ತಳ ಸಮುದಾಯಗಳ, ಮಹಿಳೆಯರ ಪರವಾಗಿರುವುದು ಬಹಳ ಮುಖ್ಯ. ಈ ಪೀಠದಿಂದ ನಾನು ನೀಡಿರುವ ಎಲ್ಲ ತೀರ್ಮಾನಗಳು ಅವರ ಪರವಾಗಿದ್ದವು ಎಂದು ನಾನು ಆತ್ಮವಿಶ್ವಾಸದಿಂದ ಎದೆತಟ್ಟಿ ಹೇಳಬಲ್ಲೆ.

ಆದರೆ ದುರದೃಷ್ಟವಶಾತ್, ಇಂತಹ ತೀರ್ಮಾನಗಳ ಕಾರಣಕ್ಕಾಗಿ ನಾನು ಕುಳಿತಿರುವ ಸಾಂವಿಧಾನಿಕ ಪೀಠದ ವಿಶ್ವಾಸಾರ್ಹತೆಯ ಪ್ರಶ್ನೆ ಎದ್ದಿತು ಎಂಬ ನೋವು ಖಂಡಿತಾ ನನಗಿದೆ.

ಈ ಪೀಠದಲ್ಲಿ ಕುಳಿತುಕೊಳ್ಳುವ ವ್ಯಕ್ತಿ ಯಾರೆಂಬುದು ಸದನದ ಬಲಾಬಲದ ಆಧಾರದಲ್ಲಿ ತೀರ್ಮಾನ ಆಗಬಹುದು. ಆದರೆ ಈ ಪೀಠದ ಘನತೆ ಆ ಬಲಾಬಲಗಳ ಆಧಾರದಲ್ಲಿ ನಿರ್ಧಾರ ಆಗುವಂತಹದಲ್ಲ. ಇದ್ದು ಪವಿತ್ರವಾದ ಜಾಗ. ಆ ಕಾರಣಕ್ಕಾಗಿ ನಾನು ಪೀಠದ ಘನತೆಯ ರಕ್ಷಣೆಗಾಗಿ ಕಟಿಬದ್ಧನಾಗಬೇಕಾಯಿತು. ಪ್ರತಿ ಬಾರಿ ಅಂಕಿ-ಸಂಖ್ಯೆಗಳ ಆಧಾರದಲ್ಲಿ ಸಭಾಪತಿ ಪೀಠ ಬದಲಾಗುತ್ತಾ ಹೋಗುವುದಿದ್ದರೆ, ಸದ್ಯದ ರಾಜಕೀಯ ವ್ಯವಸ್ಥೆಯಲ್ಲಿ ಸದನ ಸುಸೂತ್ರ ನಡೆಯುವುದೇ ಕಷ್ಟವೆನಿಸುವ ಪರಿಸ್ಥಿತಿ ಬಂದೀತು. ಸಭಾಪತಿ ಪೀಠ ಒಂದು ಸಾಂವಿಧಾನಿಕ ಹುದ್ದೆ. ಅದರ ಗೌರವವನ್ನು ಪಕ್ಷ, ರಾಜಕೀಯ ಭೇದಭಾವಗಳನ್ನು ಮರೆತು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ನಂಬಿಕೊಂಡು ಬಂದವನು ನಾನು.

ಅಂಕಿ-ಸಂಖ್ಯೆಗಳ ಆಧಾರದಲ್ಲಿ ನಡೆದ ಮೇಲಾಟದ ಕಾರಣಕ್ಕಾಗಿ ನನ್ನ ಅವಧಿಯಲ್ಲಿ ಈ ಸದನದಲ್ಲಿ ಅಹಿತಕರ ಘಟನೆಯೊಂದು ನಡೆಯಿತು ಎಂಬುದು ನನಗೆ ಅತ್ಯಂತ ನೋವಿನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಗತಿಯಾಗಿದೆ. ಕಳೆದ 37 ವರ್ಷಗಳಿಂದ ಯಾವತ್ತೂ ಅಧಿಕಾರಕ್ಕೆ ಆಸೆ ಪಡದೆ ರಾಜಕೀಯ ಜೀವನದಲ್ಲಿ ಪ್ರಾಮಾಣಿಕತೆ, ನ್ಯಾಯ, ನಿಷ್ಠೆಗಳಿಂದ ನಡೆದುಬಂದವ ನಾನು. ಆದರೆ ಸಭಾಪತಿ ಪೀಠದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವಂತಹ ಘಟನೆ ನಡೆದಾಗ ಅದನ್ನು ಕಾನೂನುಬದ್ಧವಾಗಿಯೇ ಎದುರಿಸುವುದು ನನ್ನ ರಾಜಧರ್ಮವಾಗಿತ್ತು. ಅದನ್ನು ನಾನು ನನ್ನ ಶಕ್ತಿ ಮೀರಿ ಮಾಡಿದ್ದೇನೆ,

ಇಂದು ನಮಗೆಲ್ಲಾ ನಡೆದು ಹೋಗಿರುವ ಅಚಾತುರ್ಯದ ಅರಿವಾಗಿದೆ. ನಾಡಿನ ಜನತೆಯ ಎದುರು ತಲೆ ತಗ್ಗಿಸುವಂತಹ ಸ್ಥಿತಿ ಬಂದಿದೆ. ಅದಕ್ಕಾಗಿ ನಾನು ಈ ಅಧ್ಯಕ್ಷ ಪೀಠದಿಂದ ನಾಡಿನ ಜನತೆಯ ಕ್ಷಮೆಯನ್ನು ಯಾಚಿಸುತ್ತೇನೆ. ಈ ಸದನದ ಘನತೆ–ಗೌರವಗಳಿಗೆ ಚ್ಯುತಿ ಬಾರದಂತೆ ನಡೆದುಕೊಳ್ಳುವ ಹೊಣೆ ಈ ಸದನದ ಸದಸ್ಯರಾಗಿ ನಮ್ಮೆಲ್ಲರಿಗೂ ಇದೆ. ಹಾಗಾಗಿ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಂಡು, ಸಂಯಮದಿಂದ ವರ್ತಿಸೋಣ. ಇಂತಹದ್ದೊಂದು ಸನ್ನಿವೇಶ ಈ ಸದನದಲ್ಲಿ ಮುಂದೆಂದೂ ಪುನರಾವರ್ತನೆ ಆಗದಿರಲಿ ಎಂದು ಆಶಿಸೋಣ.

ದಿನಾಂಕ 07.12.2020ರಿಂದ 10.12.2020ರ ನಡುವೆ ಚಳಿಗಾಲದ ಅಧಿವೇಶನದಲ್ಲಿ ನಡೆದ ಘಟನೆಗಳು ಮತ್ತು ದಿನಾಂಕ 15.12.2020ರಂದು ಸದನದಲ್ಲಿ ನಡೆದ ಘಟನೆಗಳು ಹಾಗೂ ಆ ಬಳಿಕದ ಎಲ್ಲಾ ಬೆಳವಣಿಗೆಗಳ ಬಗ್ಗೆ ಈ ರಾಜ್ಯದ ಕಸ್ಟೋಡಿಯನ್ ಆಗಿರುವ ಗೌರವಾನ್ವಿತ ರಾಜ್ಯಪಾಲರಿಗೆ ಲಿಖಿತವಾಗಿ ಮಾಹಿತಿ ನೀಡಿದ್ದೇನೆ. ಈ ಬೆಳವಣಿಗೆಗಳ ಬಗ್ಗೆ ಗೌರವಾನ್ವಿತ ರಾಜ್ಯಪಾಲರು ಸೂಕ್ತ ಕ್ರಮಗಳನ್ನು ತಮ್ಮ ವ್ಯಾಪ್ತಿಯಲ್ಲಿ ಕೈಗೊಂಡಿರಬಹುದು ಎಂಬ ಭಾವನೆ ನನ್ನದು.

ದಿನಾಂಕ 15.12.2020ರ ಅಹಿತಕರ ಘಟನೆಯ ಹಿನ್ನೆಲೆಯಲ್ಲಿ ಸದನ ಸಮಿತಿ ರಚನೆ ಮತ್ತು ಆ ಸಮಿತಿಯ ಮಧ್ಯಂತರ ವರದಿ ಸ್ವೀಕಾರ, ಅಂತಿಮ ವರದಿ ಸಲ್ಲಿಕೆಗೆ ಮೂರು ತಿಂಗಳ ಅವಧಿ ವಿಸ್ತರಣೆ ಮತ್ತು ಸದನದಲ್ಲಿ ವರದಿ ಮಂಡನೆ ಹಾಗೂ ಸದನದ ಉಪಸಭಾಪತಿಗಳ ಚುನಾವಣೆಯಂತಹ ಕಲಾಪಗಳು ಅನಿವಾರ್ಯವಾದ ಹಿನ್ನೆಲೆಯಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗದಂತೆ ಈ ಸ್ಥಾನದಲ್ಲಿ ಇಲ್ಲಿಯ ತನಕ ಮುಂದುವರೆಯುವುದು ಅನಿವಾರ್ಯವಾಗಿತ್ತು.

ಈಗ ನನ್ನ ಜವಾಬ್ದಾರಿ ಮುಗಿದಿದೆ. ನಾನು ನಿರಾಳವಾಗಿದ್ದೇನೆ. ಸದನದ ಬಲಾಬಲಗಳು ಬದಲಾಗಿರುವುದು ನನ್ನ ಗಮನಕ್ಕೆ ಬಂದಿದೆ. ತಾಂತ್ರಿಕವಾಗಿ ಬಹುಮತ ಸಾಬೀತು ಮಾಡುವುದಕ್ಕೆ ನನಗೆ ಮುಂದಿನ ಅಧಿವೇಶನದ ತನಕವೂ ಸಮಯಾವಕಾಶ ಇದೆ. ಆದರೆ ನನ್ನ ಬದುಕಿನಲ್ಲಿ ನೈತಿಕತೆಗೆ ಅಪಾರವಾದ ಬೆಲೆ ಕೊಡುತ್ತಾ ಬಂದವನು ನಾನು. ಈ ಹಿನ್ನೆಲೆಯಲ್ಲಿ ಅನವಶ್ಯಕವಾದ ಚರ್ಚೆಗೆ ಆಸ್ಪದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡದೆ, ಸಭಾಪತಿ ಸ್ಥಾನಕ್ಕೆ ನಾನು ನನ್ನ ರಾಜೀನಾಮೆಯನ್ನು ಸದನದ ನಿಯಮದಂತೆ ಸನ್ಮಾನ್ಯ ಉಪಸಭಾಪತಿಗಳಿಗೆ ಕಲಾಪ ಮುಗಿದ ತಕ್ಷಣ ಸಲ್ಲಿಸುತ್ತಿದ್ದೇನೆ ಮತ್ತು ಪೀಠತ್ಯಾಗ ಮಾಡುತ್ತಿದ್ದೇನೆ.

ಈ ಕ್ಷಣದ ತನಕ ನನಗೆ ಮತ್ತು ಈ ಪೀಠಕ್ಕೆ ಎಲ್ಲಾ ಸಹಕಾರಗಳನ್ನು ನೀಡುತ್ತಾ ಬಂದಿರುವ ಪ್ರತಿಯೊಬ್ಬರಿಗೂ ನನ್ನ ಕೃತಜ್ಞತೆಗಳು. ಸದನದ ಸಭಾನಾಯಕರು, ಪ್ರತಿಪಕ್ಷದ ನಾಯಕರು, ಸದನದ ಸಿಬ್ಬಂದಿಗಳು ಎಲ್ಲರ ಸಹಕಾರವನ್ನು ನೆನೆಯುತ್ತಾ ಮುಂದಿನ ದಿನಗಳಲ್ಲಿ ಬರಲಿರುವ ವ್ಯವಸ್ಥೆಗೂ ತಮ್ಮೆಲ್ಲರ ಸಹಕಾರ ಸಿಗಲಿ ಎಂದು ಆಶಿಸುತ್ತೇನೆ. ನಮಸ್ಕಾರ.

ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯ ತನಕ ಮುಂದೂಡಿದ್ದೇನೆ.

**(ಸದನವು ರಾತ್ರಿ 7 ಗಂಟೆ 54 ನಿಮಿಷಗಳಿಗೆ ಮುಂದೂಡಲ್ಪಟ್ಟಿತು. ಪುನಃ ದಿನಾಂಕ 5ನೇ ಫೆಬ್ರವರಿ ಮಾಹೆ 2021ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು